ಮಂಗಳವಾರ, ಡಿಸೆಂಬರ್ 12, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 342 | ಪುಟ 14

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ

ನಮ್ಮೊಳಗಿರುವ ಭಯವನ್ನು ಆಳವಾಗಿ ಅರ್ಥಮಾಡಿಕೊಂಡಷ್ಟೂ ನಮ್ಮ ಧೈರ್ಯಕ್ಕೆ ಇನ್ನಷ್ಟು ಧೈರ್ಯ ಬರುತ್ತದೆ

ಆಳ-ಅಗಲ ಜಮ್ಮು-ಕಾಶ್ಮೀರ ವಿಶೇಷ ಸ್ಥಾನದ ಹಿನ್ನೆಲೆ-ಮುನ್ನೆಲೆ

‘ನಾಯಕತ್ವ ಒದಗಿಸಲು ಯುವ ಪೀಳಿಗೆ ಸಿದ್ಧವಾಗಲಿ’ 11

7,151 ಜನವಸತಿಯಲ್ಲಿ ಜಲಕ್ಷಾಮ ಸಾಧ್ಯತೆ 7

ಸೆನ್ಸೆಕ್ಸ್	ನಿಫ್ಟಿ	₹/$
69,928	20,997	83.37

ಜಮ್ಮು–ಕಾಶ್ಮೀರ: ಕೇಂದ್ರದ ನಿರ್ಧಾರ ಸರಿ– ಸುಪ್ರೀಂ ಕೋರ್ಟ್ ಸಂವಿಧಾನ ಪೀಠದ ತೀರ್ಪು

ಸ್ಥಾನ ರದ್ದತಿಗೆ ‘ಸುಪ್ರೀಂ’ ಮುದ್ರೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ನೀಡಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆಯುವ ಕೇಂದ್ರ ಸರ್ಕಾರದ ತೀರ್ಮಾನವನ್ನು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠವು ಸೋಮವಾರ ಸರ್ವಾನುಮತ-ದಿಂದ ಎತ್ತಿಹಿಡಿದಿದೆ.

ಇದು ನರೇಂದ್ರ ಮೋದಿ ನೇತೃತ್ವದ ಸರ್ಕಾರ ಕೈಗೊಂಡ ತೀರ್ಮಾನಕ್ಕೆ ಸಿಕ್ಕ ಜಯ ಎಂದು ವಿಶ್ಲೇಷಿಸಲಾಗಿದೆ. ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನವನ್ನು ‘ಆದಷ್ಟು ಬೇಗ ಮರಳಿಸಬೇಕು’ ಎಂದು ಕೋರ್ಟ್ ತಾಕೀತು ಮಾಡಿದೆ. ಅಲ್ಲದೆ, 2024ರ ಸೆ.30ಕ್ಕೆ ಮೊದಲು ಅಲ್ಲಿ ವಿಧಾನಸಭಾ ಚುನಾವಣೆ ನಡೆಸಬೇಕು ಎಂದು ಹೇಳಿದೆ. ಜಮ್ಮು ಮತ್ತು ಕಾಶ್ಮೀರವು 1947ರಲ್ಲಿ ಭಾರತ ಒಕ್ಕೂಟವನ್ನು ಸೇರಿದ ನಂತರದಲ್ಲಿ 370ನೆಯ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನ ಪಡೆದಿತ್ತು. ಈ ವಿಧಿಯ ಸ್ವರೂಪದ ಕುರಿತು ದಶಕಗಳಿಂದ ನಡೆದುಬಂದ ಚರ್ಚೆಗೆ ಈ ತೀರ್ಪು ನಿರ್ಣಾಯಕ ಉತ್ತರ ನೀಡಿದೆ.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಸೂರ್ಯಕಾಂತ್ ಅವರ ಪರವಾಗಿ ತೀರ್ಪು ಬರೆದಿರುವ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು, 370ನೆಯ ವಿಧಿಯ ಅಡಿಯಲ್ಲಿನ ವಿಶೇಷ ಸ್ಥಾನಮಾನವು ಶಾಶ್ವತವಾಗಿ ಇರುವಂಥದ್ದಾಗಿರಲಿಲ್ಲ, ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ರಚನಾ ಸಭೆಯ ಅನುಪಸ್ಥಿತಿಯಲ್ಲಿ ವಿಶೇಷ ಸ್ಥಾನವನ್ನು ಹಿಂಪಡೆಯುವ ಅಧಿಕಾರವು ರಾಷ್ಟ್ರಪತಿಗೆ ಇದೆ ಎಂದಿದ್ದಾರೆ.

‘370ನೆಯ ವಿಧಿ ಹಾಗೂ 1ನೆಯ ವಿಧಿಯನ್ನು ಒಟ್ಟಾಗಿ ಓದಿದಾಗ, ಜಮ್ಮು ಮತ್ತು ಕಾಶ್ಮೀರವನ್ನು ದೇಶದ ಭಾಗವನ್ನಾಗಿ ವಿಲೀನಗೊಳಿಸಿದ್ದು ಪರಿಪೂರ್ಣವಾಗಿತ್ತು ಎಂಬುದರಲ್ಲಿ ಯಾವ ಅನುಮಾನವೂ ಉಳಿಯುವುದಿಲ್ಲ ಎಂದು ಸಿಜೆಐ ಹೇಳಿದ್ದಾರೆ.

11ನೇ ಪುಟ ನೋಡಿ

ಸಾಮರಸ್ಯ ಆಯೋಗ ರಚಿಸಿ: ‘ಸುಪ್ರೀಂ’

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರದಲ್ಲಿ 1980ರ ನಂತರದಲ್ಲಿ ಸರ್ಕಾರದ ಕಡೆಯಿಂದ ಹಾಗೂ ಸರ್ಕಾರೇತರ ಶಕ್ತಿಗಳಿಂದ ನಡೆದಿರುವ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ತನಿಖೆಗೆ ನಿಷ್ಪಕ್ಷಪಾತಿಯಾದ ‘ಸತ್ಯಶೋಧನೆ ಮತ್ತು ಸಾಮರಸ್ಯ ಆಯೋಗ’ ರಚಿಸಬೇಕು ಎಂದು ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರು ತಮ್ಮ ಪ್ರತ್ಯೇಕ ತೀರ್ಪಿನಲ್ಲಿ ಶಿಫಾರಸು ಮಾಡಿದ್ದಾರೆ.

ನ್ಯಾಯಮೂರ್ತಿ ಕೌಲ್ ಅವರು ಪ್ರತ್ಯೇಕ ತೀರ್ಪು ಬರೆದಿದ್ದರೂ ವಿಶೇಷ ಸ್ಥಾನಮಾನ-ವನ್ನು ಹಿಂಪಡೆದ ಕೇಂದ್ರದ ತೀರ್ಮಾನ ಸರಿ ಎಂದು ಹೇಳಿದ್ದಾರೆ. ಕೌಲ್ ಅವರು ಜಮ್ಮು ಮತ್ತು ಕಾಶ್ಮೀರದವರು. ಹಿಂಸಾಚಾರಗಳಿಗೆ ಅಲ್ಲಿನ ಜನ ಭಾರಿ ಬೆಲೆ ತೆತ್ತಿದ್ದಾರೆ ಎಂದು ಅವರು ಹೇಳಿದ್ದಾರೆ.

‘ಈ ಪ್ರದೇಶದ ಜನ ಅನುಭವಿಸಿದ್ದನ್ನು ಕಂಡು ನನಗೆ ನೋವಾಗುತ್ತದೆ. ಹೀಗಾಗಿ ನಾನು ಈ ಉಪಸಂಹಾರವನ್ನು ಬರೆಯಬೇಕಾಗಿದೆ’ ಎಂದು ತಮ್ಮ ತೀರ್ಪಿನ ಕೊನೆಯಲ್ಲಿ ಹೇಳಿದ್ದಾರೆ.

11ನೇ ಪುಟ ನೋಡಿ

ಏಕತೆಯ ಭಾರತ ನಿರ್ಮಾಣಕ್ಕೆ ನಾವು ಕೈಗೊಂಡಿರುವ ಸಾಮೂಹಿಕ ಪ್ರಯತ್ನವನ್ನು ಈ ತೀರ್ಪು ರುಜುವಾತು ಮಾಡಿದೆ.
ನರೇಂದ್ರ ಮೋದಿ, ಪ್ರಧಾನಿ

ವಿಶೇಷ ಸ್ಥಾನಮಾನ ರದ್ದುಪಡಿಸಲು ನಾವು ತೆಗೆದುಕೊಂಡ ನಿರ್ಧಾರ ಸಂಪೂರ್ಣವಾಗಿ ಸಾಂವಿಧಾನಿಕ ಎಂಬುದು ಸಾಬೀತಾಗಿದೆ
ಅಮಿತ್ ಶಾ, ಗೃಹ ಸಚಿವ

ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಗಲ್ಲು ಶಿಕ್ಷೆಗಿಂತ ಕಡಿಮೆಯದ್ದಲ್ಲ. ಇದು ಭಾರತದ ಪರಿಕಲ್ಪನೆಗೆ ಆಗಿರುವ ಸೋಲು
ಮೆಹಬೂಬಾ ಮುಫ್ತಿ, ಪಿಡಿಪಿ ಅಧ್ಯಕ್ಷೆ

ತೀರ್ಪಿನಿಂದ ನಿರಾಸೆಯಾಗಿದೆ, ಆದರೆ ಹತಾಶೆಗೊಂಡಿಲ್ಲ. ಜಮ್ಮು ಮತ್ತು ಕಾಶ್ಮೀರದ ಜನರಿಗಾಗಿ ನಮ್ಮ ಹೋರಾಟ ಮುಂದುವರಿಯಲಿದೆ
ಒಮರ್ ಅಬ್ದುಲ್ಲಾ, ನ್ಯಾಷನಲ್ ಕಾನ್ಫರೆನ್ಸ್ ಉಪಾಧ್ಯಕ್ಷ

ತೀರ್ಪಿನ ಪ್ರಮುಖ ಅಂಶಗಳು...

- **ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂದು ಹೇಳುವ ಸಾಂವಿಧಾನಿಕ ಆದೇಶ–272 (ಸಿಒ272) ಸಿಂಧುವಾಗಿದೆಯೇ?**
ಈ ಪ್ರಶ್ನೆಯನ್ನು ಸಂವಿಧಾನ ಪೀಠವು ಪರಿಶೀಲನೆಗೆ ಒಳಪಡಿಸಿದೆ. ‘ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂಬ ಆದೇಶ ಹೊರಡಿಸಲು ರಾಷ್ಟ್ರಪತಿಯವರಿಗೆ ರಾಜ್ಯ ಸರ್ಕಾರದ ಸಹಮತ ಪಡೆಯುವ ಅಗತ್ಯ ಇಲ್ಲ. ರಾಷ್ಟ್ರಪತಿಯವರು ಇಂತಹ ಆದೇಶ (ಸಿಒ272) ಹೊರಡಿಸಿದ್ದು ಯಾವುದೇ ಕೆಟ್ಟ ಉದ್ದೇಶದಿಂದ ಅಲ್ಲ. ಹೀಗಾಗಿ, ದೇಶದ ಸಂವಿಧಾನವು ಜಮ್ಮು ಮತ್ತು ಕಾಶ್ಮೀರಕ್ಕೆ ಪರಿಪೂರ್ಣವಾಗಿ ಅನ್ವಯವಾಗುತ್ತದೆ ಎಂದು ಹೇಳುವಷ್ಟರಮಟ್ಟಿಗೆ ಅವರ ಆದೇಶವು ಸಿಂಧುವಾಗಿದೆ’ ಎಂದು ಕೋರ್ಟ್ ಹೇಳಿದೆ.

- **ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿ ರಾಷ್ಟ್ರಪತಿ ಹೊರಡಿಸಿದ ಆದೇಶವು (ಸಿಒ273) ಸಿಂಧುವಾಗುತ್ತದೆಯೇ?**
ಈ ಪ್ರಶ್ನೆಗೆ ಉತ್ತರ ನೀಡಿರುವ ಪೀಠವು, ‘ರಾಷ್ಟ್ರಪತಿ ಹೊರಡಿಸಿದ ಈ ಆದೇಶವು, ಜಮ್ಮು ಮತ್ತು ಕಾಶ್ಮೀರವನ್ನು ದೇಶದಲ್ಲಿ ವಿಲೀನಗೊಳಿಸುವ ಪ್ರಕ್ರಿಯೆಯ ಅಂತಿಮ ಹಂತದ ರೂಪದಲ್ಲಿದೆ. ಹೀಗಾಗಿ, ಈ ಆದೇಶವು ಸಿಂಧುವಾಗುತ್ತದೆ’ ಎಂದು ಸಾರಿದೆ.
- ಹಿಂದಿನ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಸಂವಿಧಾನ ರಚನಾ ಸಭೆಯ ಸಹಮತ ಇಲ್ಲದೆ, 370ನೆಯ ವಿಧಿಗೆ ತಿದ್ದುಪಡಿ ತರಲು ಅವಕಾಶ ಇಲ್ಲ ಎಂದು ಕೇಂದ್ರದ ಕ್ರಮವನ್ನು ಪ್ರಶ್ನಿಸಿದ ಅರ್ಜಿದಾರರು ವಾದಿಸಿದ್ದರು. ಸಂವಿಧಾನ ರಚನಾ ಸಭೆಯು 1957ರಲ್ಲಿಯೇ ಅಂತ್ಯ ಕಂಡಿದೆ. ಸಂವಿಧಾನ ರಚನಾ ಸಭೆಯೇ ಇಲ್ಲದಿದ್ದ ಸಂದರ್ಭದಲ್ಲಿ, 370ನೆಯ ವಿಧಿಯು ಶಾಶ್ವತವಾಗುತ್ತದೆ ಎಂದು ಅವರು ವಾದಿಸಿದ್ದರು.
‘ಸಂವಿಧಾನದ 370ನೆಯ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನಮಾನವನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ಐತಿಹಾಸಿಕ ಸಂದರ್ಭವನ್ನು ಪರಿಗಣಿಸಿದರೆ, ಅದು ತಾತ್ಕಾಲಿಕ ಅವಧಿಗೆ ಮಾತ್ರವೇ ಆಗಿತ್ತು ಎಂಬ ನಿರ್ಣಯಕ್ಕೆ ನಾವು ಬಂದಿದ್ದೇವೆ’ ಎಂದು ಸಿಜೆಐ ಬರೆದ ತೀರ್ಪಿನಲ್ಲಿ ಹೇಳಲಾಗಿದೆ. 370ನೆಯ ವಿಧಿಯನ್ನು ಯಥಾವತ್ತಾಗಿ ಓದಿದಾಗ ಕೂಡ ಅದು ತಾತ್ಕಾಲಿಕ ಉದ್ದೇಶಕ್ಕಾಗಿ ಜಾರಿಯಾಗಿತ್ತು ಎಂಬುದು ಗೊತ್ತಾಗುತ್ತದೆ. ಈ ವಿಧಿಯನ್ನು ಸಂವಿಧಾನದಲ್ಲಿನ, ತಾತ್ಕಾಲಿಕ ಹಾಗೂ ಪರಿವರ್ತನೆಯ ಅವಧಿಯ ಕೆಲವು ಉದ್ದೇಶಗಳಿಗೆ ಸಂಬಂಧಿಸಿದ ಭಾಗದಲ್ಲಿ ಸೇರಿಸಲಾಗಿದೆ. 370ನೆಯ ವಿಧಿಯ ಬದಿಯಲ್ಲಿ ನೀಡಿರುವ ಟಿಪ್ಪಣಿ ಕೂಡ, ಇದು ‘ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಸಂಬಂಧಿಸಿದ ತಾತ್ಕಾಲಿಕ ಉದ್ದೇಶದ್ದು’ ಎಂಬುದನ್ನು ಹೇಳುತ್ತದೆ ಎಂದು ಪೀಠ ವಿವರಿಸಿದೆ. ಪ್ರತ್ಯೇಕವಾದ ತೀರ್ಪು ಬರೆದಿರುವ ನ್ಯಾಯಮೂರ್ತಿ ಸಂಜಯ್ ಕಿಶನ್ ಕೌಲ್ ಅವರು ಈ ವಿಚಾರವಾಗಿ, 370ನೆಯ ವಿಧಿಯ ಉದ್ದೇಶವು ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ನಿಧಾನವಾಗಿ ಇತರ ರಾಜ್ಯಗಳಿಗೆ ಸರಿಸಮನಾಗಿಸುವುದು ಎಂದು ಹೇಳಿದ್ದಾರೆ.

ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ ಮಹುವಾ

ಮಹುವಾ ಮೊಯಿತ್ರಾ

ನವದೆಹಲಿ (ಪಿಟಿಐ): ತಮ್ಮನ್ನು ಲೋಕಸಭೆಯಿಂದ ಉಚ್ಚಾಟಿಸಿರು-ವುದನ್ನು ಪ್ರಶ್ನಿಸಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಸಂಸದೆ ಮಹುವಾ ಮೊಯಿತ್ರಾ ಅವರು ಸುಪ್ರೀಂ ಕೋರ್ಟ್‌ನಲ್ಲಿ ಸೋಮವಾರ ಅರ್ಜಿ ಸಲ್ಲಿಸಿದ್ದಾರೆ.

ಮಹುವಾ ಅವರು ಉದ್ಯಮಿ ದರ್ಶನ್ ಹೀರಾನಂದಾನಿ ಅವರ ಜೊತೆ ತಮ್ಮ ಲೋಕಸಭಾ ಪೋರ್ಟಲ್‌ನ ಲಾಗಿನ್ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ ಎಂದು ಸಂಸತ್ತಿನ ನೀತಿ ಸಮಿತಿಯು ನೀಡಿದ್ದ ವರದಿಯನ್ನು ಅಂಗೀಕರಿಸಿದ್ದ ಲೋಕಸಭೆಯು, ‘ಅನೈತಿಕ ನಡವಳಿಕೆ’ ಕಾರಣ ನೀಡಿ ಅವರನ್ನು ಲೋಕಸಭೆಯಿಂದ ಉಚ್ಚಾಟಿಸಿದೆ.

ಮಧ್ಯಪ್ರದೇಶ: ಮೋಹನ್ ಯಾದವ್ ಸಿ.ಎಂ

ಭೋಪಾಲ್(ಪಿಟಿಐ): ಅಚ್ಚರಿಯ ನಡೆಯಲ್ಲಿ, ಮಧ್ಯಪ್ರದೇಶ ನೂತನ ಮುಖ್ಯಮಂತ್ರಿ ಸ್ಥಾನಕ್ಕೆ ಒಬಿಸಿ ನಾಯಕ ಹಾಗೂ ಉಜ್ಜೈನಿ ಶಾಸಕ ಮೋಹನ್ ಯಾದವ್ ಅವರನ್ನು ಬಿಜೆಪಿ ಸೋಮವಾರ ಆಯ್ಕೆ ಮಾಡಿದೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಳಗಾವಿ ಜಿಲ್ಲಾಸ್ಪತ್ರೆಗೆ ಸೋಮವಾರ ಭೇಟಿ ನೀಡಿದ ಸಚಿವೆ ಲಕ್ಷ್ಮೀ ಹೆಬ್ಬಾಳಕರ, ಹಲ್ಲೆಗೊಳಗಾದ ಮಹಿಳೆಯ ಸಂಬಂಧಿಕರಿಗೆ ಸಮಾಧಾನ ಹೇಳಿದರು

ಓಡಿಹೋದ ಪ್ರೇಮಿಗಳು ಮಹಿಳೆ ಬೆತ್ತಲೆಗೊಳಿಸಿ ಥಳಿತ

ಪ್ರಜಾವಾಣಿ ವಾರ್ತೆ

ಬೆಳಗಾವಿ: ತಾಲ್ಲೂಕಿನ ಹೊಸ ವಂಟಮೂರಿ ಗ್ರಾಮದಲ್ಲಿ ಮಹಿಳೆ ಒಬ್ಬರನ್ನು ಬೆತ್ತಲೆಗೊಳಿಸಿ, ಬೀದಿಯಲ್ಲಿ ಓಡಾಡಿಸಿ, ಕಂಬಕ್ಕೆ ಕಟ್ಟಿ ಥಳಿಸಿದ ಘಟನೆ ಭಾನುವಾರ ರಾತ್ರಿ ನಡೆದಿದೆ.

‘ಮಹಿಳೆಯ ಪುತ್ರ, ಯುವತಿಯನ್ನು ಪ್ರೀತಿಸಿ ಆಕೆಯೊಂದಿಗೆ ಓಡಿಹೋದ ಕಾರಣ ಆಕೆಯ ಪಾಲಕರು ಹಲ್ಲೆ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಆರೋಪಿಗಳನ್ನು ಬಂಧಿಸಲಾಗಿದ್ದು, ಇನ್ನೂ ಐವರಿಗಾಗಿ ಹುಡುಕಾಟ ನಡೆದಿದೆ’ ಎಂದು ಕಾಕತಿ ಠಾಣೆಯ ಪೊಲೀಸರು ತಿಳಿಸಿದ್ದಾರೆ.

ಯುವತಿಯ ತಂದೆ, ತಾಯಿ, ಅಜ್ಜಿ ಮತ್ತು ನಾಲ್ವರು ಸಂಬಂಧಿಕರನ್ನು ಪೊಲೀಸರು ಬಂಧಿಸಿದ್ದಾರೆ.

ಆರೋಪಿಗಳ ಮೇಲೆ ಮಾನಭಂಗ, ಕೊಲೆ ಯತ್ನ, ಹಲ್ಲೆ, ದೊಂಬಿ, ನಿಂದನೆ, ಕಾನೂನು ಸುವ್ಯವಸ್ಥೆಗೆ ಧಕ್ಕೆ, ಜೀವ ಬೆದರಿಕೆ ಸೇರಿ ವಿವಿಧ ಪ್ರಕರಣಗಳನ್ನು ದಾಖಲಿಸಲಾಗಿದೆ.

ತಲೆ ತಗ್ಗಿಸುವಂಥ ಘಟನೆ: ಸಿ.ಎಂ

‘ಮಹಿಳೆಯೊಬ್ಬರನ್ನು ಬೆತ್ತಲೆಗೊಳಿಸಿ, ಕಂಬಕ್ಕೆ ಕಟ್ಟಿಹಾಕಿ ಹಲ್ಲೆ ನಡೆಸಿದ್ದು ಅತ್ಯಂತ ಅಮಾನವೀಯ. ಇದರಿಂದ ಇಡೀ ಸಮಾಜವೇ ತಲೆತಗ್ಗಿಸುವಂತಾ-ಗಿದೆ. ಇಂತಹ ಹೀನ ಕೃತ್ಯಗಳನ್ನು ನಮ್ಮ ಸರ್ಕಾರ ಯಾವುದೇ ಕಾರಣಕ್ಕೂ ಸಹಿಸಲ್ಲ. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗುವಂತೆ ಕ್ರಮ ವಹಿಸುವ ಮೂಲಕ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸುವ ಸಂಪೂರ್ಣ ಹೊಣೆ ನಮ್ಮದು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ‘ಎಕ್ಸ್’ನಲ್ಲಿ ಬರೆದುಕೊಂಡಿದ್ದಾರೆ.

5ನೇ ಪುಟ ನೋಡಿ

ರಾಷ್ಟ್ರಪತಿ ಪದಕಕ್ಕೆ 32 ಪೊಲೀಸರ ಹೆಸರು ಶಿಫಾರಸು

ಆರೋಪ ಇದ್ದರೂ ಅಲೋಕ್ ಸೇರ್ಪಡೆ

ಪ್ರಜಾವಾಣಿ ವಾರ್ತೆ


ಅಲೋಕ್ ಕುಮಾರ್

ಕೆ. ರಾಮಚಂದ್ರ ರಾವ್

ಪಿ. ಹರಿ ಶೇಖರನ್

ಬೆಂಗಳೂರು: ಡಿಜಿಪಿ ಕೆ. ರಾಮಚಂದ್ರ ರಾವ್, ಎಡಿಜಿಪಿಗಳಾದ ಅಲೋಕ್ ಕುಮಾರ್, ಪಿ. ಹರಿಶೇಖರನ್ ಹಾಗೂ ಸೌಮೇಂದು ಮುಖರ್ಜಿ ಸೇರಿ 32 ಪೊಲೀಸರ ಹೆಸರುಗಳನ್ನು 2024ನೇ ಸಾಲಿನ ರಾಷ್ಟ್ರಪತಿ ಪದಕಕ್ಕೆ ರಾಜ್ಯ ಸರ್ಕಾರ ಶಿಫಾರಸು ಮಾಡಿದೆ. ಫೋನ್ ಕದ್ದಾಲಿಕೆ, ಮಹಿಳೆ ಮೇಲೆ ಹಲ್ಲೆ, ₹1 ಕೋಟಿ ಲಂಚಕ್ಕೆ ಬೇಡಿಕೆ ಆರೋಪದ ಪ್ರಕರಣಗಳ ವಿಚಾರಣೆ ಬಾಕಿ ಇರುವಾಗಲೇ ಪೊಲೀಸ್ ತರಬೇತಿ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಹೆಸರನ್ನು ಶಿಫಾರಸು ಮಾಡಲಾಗಿದೆ.

ಪ್ರತಿ ವರ್ಷ ಗಣರಾಜ್ಯೋತ್ಸವ ದಿನದಂದು ರಾಷ್ಟ್ರಪತಿ ಪದಕ ಪ್ರದಾನ ಸಮಾರಂಭ ಆಯೋಜಿಸಲಾಗುತ್ತದೆ. ಅತ್ಯುತ್ತಮ ಸೇವೆ ಸಲ್ಲಿಸಿದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪದಕ ಪ್ರದಾನ ಮಾಡಲಾಗುತ್ತದೆ.

2024ನೇ ಸಾಲಿನ ಪದಕಕ್ಕೆ ಅರ್ಹರಿರುವ ರಾಜ್ಯದ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಪಟ್ಟಿಯನ್ನು ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಕೇಂದ್ರ ಗೃಹ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿಗೆ ಕಳುಹಿಸಿದ್ದಾರೆ.

ತಮ್ಮ ವಿರುದ್ಧದ ಆರೋಪಗಳ ಬಗ್ಗೆ ಪ್ರತಿಕ್ರಿಯೆ ಪಡೆಯಲು ಅಲೋಕ್ ಕುಮಾರ್ ಲಭ್ಯರಾ-ಗಲಿಲ್ಲ.

ಅಲೋಕ್ ಮೇಲಿನ ಪ್ರಕರಣಗಳು:

- **ಮಹಿಳೆ ಮೇಲೆ ಹಲ್ಲೆ:** 2019ರಲ್ಲಿ ಅಲೋಕ್‌ಕುಮಾರ್ ಅವರು ಬೆಂಗಳೂರು ನಗರ ಹೆಚ್ಚುವರಿ ಪೊಲೀಸ್ ಕಮಿಷನರ್ ಆಗಿದ್ದರು. ಈ ಸಂದರ್ಭದಲ್ಲಿ 50 ವರ್ಷದ ಮಹಿಳೆಯೊಬ್ಬರು ಕಚೇರಿಗೆ ಬಂದಿದ್ದರು. ‘ಸ್ವಯಂಸೇವಾ ಸಂಘಟನೆಯೊಂದರ ಮೇಲೆ ದೂರು ನೀಡಿದರೂ ಪೊಲೀಸರು ಪ್ರಕರಣ ದಾಖಲಿಸಿಕೊಂಡಿಲ್ಲ’ ಎಂದು ಆರೋಪಿಸಿದ್ದರು. ತಮ್ಮ ಮೇಲೆ ಅಲೋಕ್‌ಕುಮಾರ್ ಹಲ್ಲೆ ಮಾಡಿ ಪ್ರಕರಣ ಹಿಂಪಡೆಯಲು ಜೀವ ಬೆದರಿಕೆಯೊಡ್ಡಿದ್ದರೆಂಬ ಆರೋಪದಡಿ ಮಹಿಳೆಯು 39ನೇ ಎಸಿಎಂಎಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡಿದ್ದರು.

‘2019ರ ಫೆಬ್ರುವರಿ 11ರಂದು ಅಲೋಕ್‌ಕುಮಾರ್ ಕಚೇರಿಗೆ ಭೇಟಿ ನೀಡಿದ್ದೆ. ಇದೇ ಸಂದರ್ಭದಲ್ಲಿ ನನ್ನ ಮುಖ ಹಾಗೂ ಕಣ್ಣಿಗೆ ಅಲೋಕ್‌ಕುಮಾರ್ ಗುದ್ದಿದ್ದರು. ವಿಕ್ಟೋರಿಯಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿದ್ದೆ. ಅಂದಿನ ಪೊಲೀಸ್ ಕಮಿಷನರ್ ಸುನೀಲ್‌ಕುಮಾರ್ ಹಾಗೂ ಗೃಹ ಸಚಿವರಿಗೆ ದೂರು ನೀಡಿದ್ದೆ. ಅವರು ಕ್ರಮ ಕೈಗೊಂಡಿರಲಿಲ್ಲ.

5ನೇ ಪುಟ ನೋಡಿ

ಪೂರೈಕೆ ಕೊರತೆ; ₹400 ಮುಟ್ಟಿದ ನಾಟಿ ಬೆಳ್ಳುಳ್ಳಿ ಧಾರಣೆ

ಬೆಳ್ಳುಳ್ಳಿ ಬಲು ದುಬಾರಿ: ಗ್ರಾಹಕರು ಗಾಬರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಚಿಕ್ಕಬಳ್ಳಾಪುರ/ಹುಬ್ಬಳ್ಳಿ: ರಾಜ್ಯದ ವಿವಿಧೆಡೆ ಚಿಲ್ಲರೆ ಮಾರುಕಟ್ಟೆ-ಯಲ್ಲಿ ನಾಟಿ ಬೆಳ್ಳುಳ್ಳಿಯ ದರ ಒಂದು ಕೆ.ಜಿಗೆ ₹400 ಇದ್ದರೆ, ಹೈಬ್ರೀಡ್ ಬೆಳ್ಳುಳ್ಳಿ ಧಾರಣೆಯು ₹300 ದಾಟಿದ್ದು, ಗ್ರಾಹಕರ ಜೇಬಿಗೆ ಕತ್ತರಿ ಬಿದ್ದಿದೆ.

ಎರಡು ದಿನಗಳ ಹಿಂದೆ ಬೆಂಗಳೂರಿನ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ ‘ಎ’ ದರ್ಜೆಯ ಹೈಬ್ರಿಡ್ ಬೆಳ್ಳುಳ್ಳಿ ಧಾರಣೆಯು ₹260 ಇತ್ತು. ದಿಢೀರ್ ಏರಿಕೆ ಕಂಡಿರುವುದರಿಂದ ಗ್ರಾಹಕರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಯಶವಂತಪುರ ಮಾರುಕಟ್ಟೆಗೆ ಮಧ್ಯಪ್ರದೇಶ ಮತ್ತು ಗುಜರಾತ್‌ನಿಂದ ಪ್ರತಿದಿನ ಮೂರು ಸಾವಿರದಿಂದ ನಾಲ್ಕು ಸಾವಿರ ಚೀಲದಷ್ಟು ಬೆಳ್ಳುಳ್ಳಿ ಆವಕವಾಗುತ್ತದೆ. ಬೆಂಗಳೂರು ನಗರ ಸೇರಿದಂತೆ ಬೆಂಗಳೂರು ಗ್ರಾಮಾಂತರ, ತುಮಕೂರು, ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಮಂಡ್ಯ ಜಿಲ್ಲೆಗಳಿಗೆ ಇಲ್ಲಿಂದ ಪೂರೈಕೆಯಾಗುತ್ತದೆ.

ಆದರೆ, ಈ ಬಾರಿ ಮಧ್ಯಪ್ರದೇಶ ಮತ್ತು ಗುಜರಾತ್‌ನಲ್ಲಿ ಮಳೆ ಕೊರತೆಯಾಗಿದೆ. ಇದು ಬೆಳ್ಳುಳ್ಳಿ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ. ಪೂರೈಕೆ ಕಡಿಮೆಯಾಗಿ-ರುವುದೇ ದರ ಹೆಚ್ಚಳಕ್ಕೆ ಮೂಲ ಕಾರಣವಾಗಿದೆ. ಚಿಲ್ಲರೆ ಮಾರುಕಟ್ಟೆ-ಯಲ್ಲಿ ಬೆಲೆ ಮತ್ತಷ್ಟು ಹೆಚ್ಚಳವಾಗುವ ಸಾಧ್ಯತೆಯೂ ಇದೆ ಎಂದು ಎಪಿಎಂಸಿ ಅಧಿಕಾರಿಗಳು ಹೇಳುತ್ತಾರೆ.

10ನೇ ಪುಟ ನೋಡಿ

ರೈತನಿಗೆ ಆದಾಯ ಮರೀಚಿಕೆ

ಚಾಮರಾಜನಗರ: ಜಿಲ್ಲೆಯಲ್ಲಿ ಹನೂರು ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ರೈತರು ಬೆಳ್ಳುಳ್ಳಿ ಬೆಳೆಯುತ್ತಾರೆ. ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿಯೇ ಕಟಾವು ಆಗಿದೆ. ಈಗ ಹಲವು ರೈತರು ಬಿತ್ತನೆ ಬೀಜದ ಉದ್ದೇಶಕ್ಕಾಗಿ ಬೆಳ್ಳುಳ್ಳಿ ಬಿತ್ತನೆ ಮಾಡಿದ್ದಾರೆ.

‘ಎರಡು ತಿಂಗಳ ಹಿಂದೆಯೇ ತಾಲ್ಲೂಕಿನ ಬೆಳೆಗಾರರು ಮಾರಾಟ ಮಾಡಿದ್ದಾರೆ. ಆರಂಭದಲ್ಲಿ ಒಂದು ಕೆ.ಜಿಗೆ ₹250 ದರ ಇತ್ತು. ಆದರೆ, ಮಾರುಕಟ್ಟೆಗೆ ಆವಕ ಹೆಚ್ಚಿದ್ದರಿಂದ ಧಾರಣೆಯು ಕೆ.ಜಿಗೆ ₹130ಕ್ಕೆ ಕುಸಿಯಿತು. ಹಾಗಾಗಿ, ರೈತರು ನಷ್ಟ ಅನು-ಭವಿಸುವಂತಾಯಿತು’ ಎಂದು ಗುಂಡ್ಲುಪೇಟೆ ತಾಲ್ಲೂಕಿನ ಕಲ್ಲಿಗೌಡನಹಳ್ಳಿಯ ಶ್ರೀನಿವಾಸ್ ತಿಳಿಸಿದರು. ‘ಮಳೆಗಾಲದಲ್ಲಿ ಹೆಚ್ಚಾಗಿ ಬೆಳ್ಳುಳ್ಳಿ ಬೆಳೆಯುತ್ತೇವೆ. ಈಗ ಮಳೆ ಇಲ್ಲದಿರುವುದರಿಂದ ಬೇರೆ ಫಸಲಿನ ಜತೆಗೆ ಕೆಲವು ಜಮೀನುಗಳಲ್ಲಿ ಬೆಳ್ಳುಳ್ಳಿ ಬೆಳೆದಿದ್ದಾರೆ. ಈ ಬೆಳ್ಳುಳ್ಳಿಗೂ ಮಾರುಕಟ್ಟೆಯಲ್ಲಿ ಕೆ.ಜಿಗೆ ₹250 ದರ ಇದೆ’ ಎಂದು ಪಿ.ಜಿ. ಪಾಳ್ಯದ ರೈತ ಸಿದ್ದರಾಜು ಹೇಳಿದರು.

ಸಗಟು ಧಾರಣೆಯೂ ಹೆಚ್ಚಳ

ಮಂಗಳೂರು: ಇಲ್ಲಿನ ಸಗಟು ಮಾರುಕಟ್ಟೆಯಲ್ಲಿ ಬೆಳ್ಳುಳ್ಳಿ ಬೆಲೆ 3 ತಿಂಗಳಲ್ಲಿ ಗರಿಷ್ಠ ₹100 ಹೆಚ್ಚಳವಾಗಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ದರ ಸರಾಸರಿ ₹300 ಇದ್ದು, ಉತ್ತಮ ಗುಣಮಟ್ಟದ ಬೆಳ್ಳುಳ್ಳಿಗೆ ₹330ರ ವರೆಗೂ ಇದೆ.

ಪ್ರತಿವರ್ಷ ಡಿಸೆಂಬರ್ ಕೊನೆ ಅಥವಾ ಜನವರಿ ಆರಂಭದಲ್ಲಿ ಹೊಸ ಸರಕು ಬರುತ್ತದೆ. ನವೆಂಬರ್ ಕೊನೆಯಿಂದ ಈರುಳ್ಳಿಯ ಗುಣಮಟ್ಟ ಕಡಿಮೆಯಾಗುತ್ತ ಸಾಗುತ್ತದೆ. ಸಾಮಾನ್ಯವಾಗಿ ಈ ಸಂದರ್ಭದಲ್ಲಿ ದರ ತೀರಾ ಕಡಿಮೆ ಇರುತ್ತದೆ. ಆದರೆ, ಈ ಬಾರಿ ಪರಿಸ್ಥಿತಿ ವ್ಯತಿರಿಕ್ತವಾಗಿದೆ ಎನ್ನುತ್ತಾರೆ ವ್ಯಾಪಾರಿಗಳು. ‘ಮಾರುಕಟ್ಟೆಗೆ ಹೊಸ ಸರಕು ಬರುವ ಸಂದರ್ಭದಲ್ಲಿ ಬೆಳ್ಳುಳ್ಳಿ ದರ ₹100ರ ಹತ್ತಿರ ಇರುತ್ತದೆ. ಕೃತಕ ಅಭಾವ ಸೃಷ್ಟಿಸಿದ್ದಾರೆ ಎಂದು ಹೇಳುವುದಕ್ಕೂ ಆಗುವುದಿಲ್ಲ. ಯಾಕೆಂದರೆ ಬೆಳ್ಳುಳ್ಳಿ ಸಂಗ್ರಹಿಸಿಟ್ಟರೆ ಹಾಳಾಗುತ್ತದೆ’ ಎನ್ನುತ್ತಾರೆ ಚಿಲ್ಲರೆ ಅಂಗಡಿಯೊಂದರ ಕೆಲಸಗಾರ ವಿನಾಯಕ.

ಜಯೇಶ್ ಇನ್ಫೊಸಿಸ್ ನೂತನ ಸಿಎಫ್‌ಒ

ನವದೆಹಲಿ (ಪಿಟಿಐ): ಇನ್ಫೊಸಿಸ್ ಸಂಸ್ಥೆಯು ಜಯೇಶ್ ಸಂಗ್‌ರಾಜ್ಕಾ ಅವರಿಗೆ ಬಡ್ತಿ ನೀಡಿ ಮುಖ್ಯ ಹಣಕಾಸು ಅಧಿಕಾರಿಯಾಗಿ (ಸಿಎಫ್‌ಒ) ನೇಮಿಸಿದೆ.

ಏ. 1, 2024ರಿಂದ ಅನ್ವಯಿಸುವಂತೆ ನೇಮಕ ಜಾರಿಗೆ ಬರಲಿದೆ ಎಂದು ಕಂಪನಿ ಸೋಮವಾರ ಪ್ರಕಟಿಸಿದೆ.

ಹಾಲಿ ಮುಖ್ಯ ಹಣಕಾಸು ಅಧಿಕಾರಿಯಾಗಿರುವ ನೀಲಾಂಜನ್ ರಾಯ್ ಅವರ ಅಧಿಕಾರವಧಿ ಮಾರ್ಚ್ 31, 2024ಕ್ಕೆ ಅಂತ್ಯವಾಗಲಿದ್ದು, ತೆರವಾದ ಸ್ಥಾನದಲ್ಲಿ ಜಯೇಶ್ ಅಧಿಕಾರ ವಹಿಸಿಕೊಳ್ಳುವರು.

ಜಯೇಶ್ 18 ವರ್ಷಕ್ಕೂ ಹೆಚ್ಚು ಕಾಲದಿಂದ ಇನ್ಫೊಸಿಸ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಸದ್ಯ, ಇವರು ಕಾರ್ಯನಿರ್ವಾಹಕ ಉಪಾಧ್ಯಕ್ಷ ಮತ್ತು ಉಪ ಮುಖ್ಯ ಹಣಕಾಸು ಅಧಿಕಾರಿ ಆಗಿದ್ದಾರೆ.

ಜಯೇಶ್ ಅವರು ಮೊದಲು 2000–07ರ ಅವಧಿಯಲ್ಲಿ ಇನ್ಫೊಸಿಸ್‌ನಲ್ಲಿ ಕಾರ್ಯನಿರ್ವಹಿಸಿದ್ದರು. ಬಳಿಕ ಸಂಸ್ಥೆಯನ್ನು ತೊರೆದಿದ್ದು, ಮತ್ತೆ ಡಿಸೆಂಬರ್ 2012ರಲ್ಲಿ ಸೇರ್ಪಡೆಗೊಂಡಿದ್ದರು.

ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಎರಡು ದಿನಗಳ ಜಾತ್ರೆಗೆ ತೆರೆ

‘ನಮ್ಮ ಜಾತ್ರೆ’ಗೆ ಪ್ರೇಕ್ಷಕರ ಕೊರತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಂಸ್ಕೃತಿ ಇಲಾಖೆ ವತಿಯಿಂದ ಕರ್ನಾಟಕ ಸಂಭ್ರಮ–50ರ ಅಂಗವಾಗಿ ಅನ್‌ಬಾಕ್ಸಿಂಗ್ ಬೆಂಗಳೂರು ಭಾಗವಾಗಿ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಎರಡು ದಿನ ಆಯೋಜಿಸಿದ್ದ ‘ನಮ್ಮ ಜಾತ್ರೆ’ಗೆ ಸೋಮವಾರ ಸಂಜೆ ತೆರೆಬಿತ್ತು.

ಕಲಾತಂಡಗಳ ಮೆರವಣಿಗೆಯೊಂದಿಗೆ ಭಾನುವಾರ ವಿಧಾನಸೌಧ ಎದುರಿನ ಮೆಟ್ಟಿಲು ಬಳಿ ‘ನಮ್ಮ ಜಾತ್ರೆ’ಗೆ ಚಾಲನೆ ನೀಡಲಾಗಿತ್ತು. ಎರಡನೇ ದಿನವೂ ಕಲಾತಂಡಗಳು ಪ್ರದರ್ಶನ ನೀಡಿದವು. ಆದರೆ, ಕಲಾತಂಡಗಳು ನೀಡಿದ ಪ್ರದರ್ಶನ ಸವಿಯಲು ಪ್ರೇಕ್ಷಕರ ಕೊರತೆಯಿತ್ತು. ಪ್ರೇಕ್ಷಕರ ಕೊರತೆಯಿಂದ ನಮ್ಮ ಜಾತ್ರೆ ಸೊರಗಿತ್ತು.

ಕಲಾಕ್ಷೇತ್ರದ ಆವರಣದಲ್ಲೇ ಕಲಾತಂಡಗಳ ಪ್ರದರ್ಶನ ಹಾಗೂ ಆಹಾರ–ಕರಕುಶಲ ವಸ್ತುಗಳ ಮಾರಾಟ ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಸ್ಥಳಾವಕಾಶದ ಕೊರತೆ ಕಾರಣಕ್ಕೆ ಆವರಣಕ್ಕೆ ವಾಹನ ಪ್ರವೇಶ ನಿರ್ಬಂಧಿಸಲಾಗಿತ್ತು.

ಹುಲಿ ಕುಣಿತ ಗಮನ ಸೆಳೆಯಿತು ಪ್ರಜಾವಾಣಿ ಚಿತ್ರ: ಎಂ.ಎಸ್‌.ಮಂಜುನಾಥ್

‘ರವೀಂದ್ರ ಕಲಾಕ್ಷೇತ್ರದ ಸುತ್ತಮುತ್ತಲ ರಸ್ತೆಗಳಲ್ಲಿ ವಾಹನಗಳಿಗೆ ನಿಲುಗಡೆ ವ್ಯವಸ್ಥೆ ಇಲ್ಲ. ಜೆ.ಸಿ.ರಸ್ತೆ, ಪೂರ್ಣಿಮಾ ಚಿತ್ರಮಂದಿರ ರಸ್ತೆ, ಪುರಭವನದ ಎದುರು ವಾಹನ ನಿಲುಗಡೆಗೆ ಅವಕಾಶ ಇಲ್ಲ. ಇದೇ ಕಾರಣಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರೇಕ್ಷಕರು ಕಲಾಕ್ಷೇತ್ರದತ್ತ ಬರಲಿಲ್ಲ. ಮೊದಲ ದಿನವಾದರೂ ಸ್ವಲ್ಪ ಜನರಿದ್ದರು. ಸೋಮವಾರ ಹಗಲು ವೇಳೆ ಜನರು ಕಲಾಕ್ಷೇತ್ರದತ್ತ ಬರಲಿಲ್ಲ. ನಿರೀಕ್ಷಿಸಿದಷ್ಟು ವ್ಯಾಪಾರ ನಡೆಯಲಿಲ್ಲ’ ಎಂದು ಮಳಿಗೆಯೊಂದರ ಸಿಬ್ಬಂದಿ ಹೇಳಿದರು.

‘ನಮ್ಮ ಜಾತ್ರೆ’ ನಡೆದ ರವೀಂದ್ರ ಕಲಾಕ್ಷೇತ್ರದ ಆವರಣವು ಸೋಮವಾರ ಪ್ರೇಕ್ಷಕರಿಲ್ಲದೆ ಭಣಗುಡುತ್ತಿತ್ತು

‘ನಮ್ಮ ಜಾತ್ರೆ ಸುಂದರ ಕಾರ್ಯಕ್ರಮ. ಹುಲಿ ವೇಷ ಕುಣಿತ, ಲಂಬಾಣಿ ನೃತ್ಯ ಪ್ರದರ್ಶನವು ಆಕರ್ಷಕವಾಗಿತ್ತು. ಇದೇ ಕಾರ್ಯಕ್ರಮವನ್ನು ಸೂಕ್ತ ಸ್ಥಳದಲ್ಲಿ ಆಯೋಜಿಸಿದ್ದರೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಲಾ ಪ್ರದರ್ಶನ ವೀಕ್ಷಿಸಲು ಸಾಧ್ಯವಾಗುತ್ತಿತ್ತು. ಇನ್ನು ಮುಂದೆ ನಡೆಯುವ ಕಾರ್ಯಕ್ರಮವನ್ನು ಪಾರ್ಕಿಂಗ್ ವ್ಯವಸ್ಥೆಯಿರುವ ಕಡೆ ಆಯೋಜಿಸಿ’ ಎಂದು ಆಗ್ರಹಿಸಿದರು.

ಏನೇನು ಪ್ರದರ್ಶನ: ಎತ್ತಿನ ಬಂಡಿ, ಮರಗಾಲು ಕುಣಿತ, ಕೀಲು ಕುದುರೆ, ಪೂಜಾ ಕುಣಿತ ಸೇರಿದಂತೆ ಹಲವು ತಂಡಗಳು ಪ್ರದರ್ಶನ ನೀಡಿದವು.

ಸುದ್ದಿ 2 ನಿಮಿಷ

ಬಾಲಕಿಯರ ವಸತಿನಿಲಯ ಕಟ್ಟಡಕ್ಕೆ ಶಂಕುಸ್ಥಾಪನೆ

ಯಲಹಂಕ: ಸಮಾಜ ಕಲ್ಯಾಣ ಇಲಾಖೆಯಿಂದ ಉಪನಗರದಲ್ಲಿ ₹ 1 ಕೋಟಿ ವೆಚ್ಚದಲ್ಲಿ ಹಿಂದುಳಿದ ವರ್ಗದ ಬಾಲಕಿಯರ ವಸತಿನಿಲಯ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಎಸ್.ಆರ್. ವಿಶ್ವನಾಥ್ ಭೂಮಿಪೂಜೆ ನೆರವೇರಿಸಿದರು.

ಈ ವಿದ್ಯಾರ್ಥಿನಿಲಯದಲ್ಲಿ ಹೊರಜಿಲ್ಲೆಗಳಿಂದ ಬಂದಿರುವ ವಿದ್ಯಾರ್ಥಿನಿಯರೇ ಹೆಚ್ಚಿನ ಸಂಖ್ಯೆಯಲಿದ್ದು, ಅವರ ಸಂಖ್ಯೆಗೆ ಅನುಗುಣವಾಗಿ ಕೊಠಡಿಗಳಿಲ್ಲದೆ ಸಮಸ್ಯೆಯಾಗಿತ್ತು.

ನೂತನ ಕಟ್ಟಡ ನಿರ್ಮಿಸಬೇಕೆಂಬ ಹಲವು ದಿನಗಳ ಬೇಡಿಕೆಯಂತೆ ಸಮಾಜಕಲ್ಯಾಣ ಇಲಾಖೆಯಿಂದ ಕಟ್ಟಡ ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ. ಆರು ತಿಂಗಳ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ. ಬಡಮಕ್ಕಳಿಗೆ ಅನುಕೂಲವಾಗಲಿದೆ ಎಂದು ಶಾಸಕರು ತಿಳಿಸಿದರು.

ಗರಡಿ ಮನೆ ಉದ್ಘಾಟನೆ: ಬಿಬಿಎಂಪಿ ವತಿಯಿಂದ ಉಪನಗರ 4ನೇ ಹಂತದ ವಿವೇಕಾನಂದ ಉದ್ಯಾನದ ಪಕ್ಕದಲ್ಲಿ ₹ 75 ಲಕ್ಷ ವೆಚ್ಚದಲ್ಲಿ ನೂತನವಾಗಿ ನಿರ್ಮಿಸಿರುವ ಗರಡಿ ಮನೆಯಲ್ಲಿ ಮಟ್ಟಿ ಕುಸ್ತಿ ಹಾಗೂ ಮ್ಯಾಟ್ ಕುಸ್ತಿ ತರಬೇತಿಗಾಗಿ ನಿರ್ಮಿಸಿರುವ ಕೊಠಡಿಗಳನ್ನು ಉದ್ಘಾಟಿಸಲಾಯಿತು.

ಬಿಬಿಎಂಪಿ ಮಾಜಿ ಸದಸ್ಯರಾದ ಎಂ. ಸತೀಶ್, ಎಂ. ಮುನಿರಾಜು, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಲಕ್ಷ್ಮಣ ರೆಡ್ಡಿ, ಬಿಬಿಎಂಪಿ ಕಾರ್ಯನಿರ್ವಾಹಕ ಎಂಜಿನಿಯರ್ ಸುಧಾಕರ ರೆಡ್ಡಿ, ಬೆಂಗಳೂರು ಉತ್ತರ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಡಿ.ಒ. ರಮೇಶ್, ಉಸ್ತಾದ್ ಪೈಲ್ವಾನ್ ಆರ್. ಆನಂದ್ ಭಾಗವಹಿಸಿದ್ದರು.

ಕೊಳವೆ ಬಾವಿ ನೀರು ಕಲುಷಿತ ಅಧಿಕಾರಿಗಳಿಂದ ಪರಿಶೀಲನೆ

ದಾಬಸ್ ಪೇಟೆ: ಸೋಂಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಡೇಹಳ್ಳಿಯಲ್ಲಿ ಕೊರೆಯಲಾದ ಕೊಳವೆಬಾವಿಯಲ್ಲಿ ಕಲುಷಿತ ನೀರು ಬರುತ್ತಿದೆ ಎಂಬ ದೂರು ಬಂದ ಹಿನ್ನೆಲೆಯಲ್ಲಿ, ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕುಡಿಯುವ ನೀರು ಪೂರೈಸಲು ಐದಾರು ದಿನದ ಹಿಂದೆ ಗ್ರಾಮದಲ್ಲಿ ಕೊಳವೆಬಾವಿ ಕೊರೆಯಲಾಗಿತ್ತು.

ನೆಲಮಂಗಲ ತಾಲ್ಲೂಕು ಪಂಚಾಯಿತಿ ಕಾರ್ಯ ನಿರ್ವಾಹಕ ಅಧಿಕಾರಿ ಮಧು, ಸೋಂಪುರ ಪಂಚಾಯಿತಿ ಪಿಡಿಒ ರವಿಶಂಕರ್ ಹಾಗೂ ಸದಸ್ಯರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ನಗರದಲ್ಲಿ ಇಂದು

‘ಮಕ್ಕಳ ಕೇಂದ್ರಿತ ಕಾಯ್ದೆಗಳ ಕುರಿತು ರಾಜ್ಯಮಟ್ಟದ ಕಾರ್ಯಾಗಾರ’: ಉದ್ಘಾಟನೆ: ಜೈಶಂಕರ್, ಅಧ್ಯಕ್ಷತೆ: ಕೆ. ನಾಗಣ್ಣಗೌಡ, ಪ್ರಸ್ತುತಿ: ವಾಸುದೇವ ಶರ್ಮಾ, ಅತಿಥಿಗಳು: ರಾಘವೇಂದ್ರ ಶೆಟ್ಟಿಗಾರ್, ತಂಗಪೆರುಮಾಳ್ ಪೋನ್ಪಾಂಡಿ, ಆ್ಯನಿಪ್ರಿಯಾ, ರಾಮಾಂಜನೇಯ ಟಿ., ಆಯೋಜನೆ: ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಚಿಲ್ಡ್ರನ್ ಆಫ್ ಇಂಡಿಯಾ ಫೌಂಡೇಷನ್, ವಿದ್ಯಾನಿಕೇತನ, ಸ್ಥಳ: ಹೋಟೆಲ್ ಪರಾಗ್, ಬೆಳಿಗ್ಗೆ 10.30

ಎಂ.ಎಸ್. ರಾಮಯ್ಯ ಅವರ ಆತ್ಮಕಥೆ ‘ರಾಮಯ್ಯಾನಮ್’ ಬಿಡುಗಡೆ: ನಿತಿನ್ ಗಡ್ಕರಿ, ಅತಿಥಿ: ಎನ್. ಸಂತೋಷ್ ಹೆಗ್ಡೆ, ಆಯೋಜನೆ: ಕೋದಂಡರಾಮ ರಾಮಯ್ಯ, ಸ್ಥಳ: ದಿ ಲೀಲಾ ಪ್ಯಾಲೆಸ್, ಸಂಜೆ 4.30

ಎಂ.ಎಸ್. ರಾಮಯ್ಯ

ಪ್ರಶಸ್ತಿ ಪ್ರದಾನ, ಉತ್ತಮ ಸರ್ಕಾರಿ ಶಾಲೆಗೆ ಬಹುಮಾನ: ಟಿ.ಎಸ್. ನಾಗಾಭರಣ, ಅತಿಥಿ: ಆರ್. ಶೇಷಶಾಸ್ತ್ರಿ, ಅಧ್ಯಕ್ಷತೆ: ದೊಡ್ಡರಂಗೇಗೌಡ, ಪ್ರಶಸ್ತಿ ಪುರಸ್ಕೃತರು: ಎನ್.ಎಸ್. ತಾರಾನಾಥ, ಆರ್. ದೊಡ್ಡೇಗೌಡ, ನ. ನಾಗರಾಜಯ್ಯ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ಕಾರ್ಮಿಕಲೋಕ, ಸ್ಥಳ: ನಯನ ಸಭಾಂಗಣ, ಜೆ.ಸಿ. ರಸ್ತೆ, ಸಂಜೆ 5.30

ಶಾಲಾ–ಕಾಲೇಜು ವಾರ್ಷಿಕೋತ್ಸವ: ಉದ್ಘಾಟನೆ: ತೇಜಸ್ವಿ ಸೂರ್ಯ, ಅಧ್ಯಕ್ಷತೆ: ಎಲ್.ಎ. ರವಿಸುಬ್ರಮಣ್ಯ, ವಿದ್ಯಾರ್ಥಿಗಳಿಗೆ ಅಭಿನಂದನೆ: ಯು.ಬಿ. ವೆಂಕಟೇಶ್, ಆಯೋಜನೆ: ವಿನಾಯಕ ಕನ್ನಡ ಮತ್ತು ಆಂಗ್ಲ ಮಾಧ್ಯಮ ಶಾಲೆ, ವಿ.ಎಸ್. ಕೃಷ್ಣಯ್ಯರ್ ಸಂಯುಕ್ತ ಪದವಿ ಪೂರ್ವ ಕಾಲೇಜು, ಶ್ರೀನಿವಾಸನಗರ, ಸ್ಥಳ: ಕೆಂಪೇಗೌಡ ಆಟದ ಮೈದಾನ, ಶಂಕರನಾಗ ವೃತ್ತ, ಸಂಜೆ 6.30

‘ಪಂಚಮ ಪದ’ ನಾಟಕ ಪ್ರದರ್ಶನ: ನಿರ್ದೇಶನ: ಜಂಗಮ ಕಲೆಕ್ಟಿವ್, ಆಯೋಜನೆ: ನಾಟಕ ಬೆಂಗ್ಳೂರು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಬಾಣಸವಾಡಿ: ಬಿಡಿಎ ಸ್ವತ್ತು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿದ್ದ ಜಾಗದಲ್ಲಿ ನಿರ್ಮಾಣವಾಗುತ್ತಿದ್ದ ವಾಣಿಜ್ಯ ಕಟ್ಟಡವನ್ನು ತೆರವುಗೊಳಿಸಿ, ಆ ಜಾಗವನ್ನು ಬಿಡಿಎ ವಶಕ್ಕೆ ತೆಗೆದುಕೊಂಡಿದೆ.

ಬಿಡಿಎ ಆಯುಕ್ತ ಎನ್. ಜಯರಾಮ್ ಅವರ ಆದೇಶದಂತೆ ಬಿಡಿಎ ಎಂಜಿನಿಯರಿಂಗ್ ವಿಭಾಗ ಹಾಗೂ ಬಿಡಿಎ ಎಸ್ಪಿ ನಂಜುಂಡೇಗೌಡ ಅವರ ಸಿಬ್ಬಂದಿ ಸೋಮವಾರ ಬೆಳಿಗ್ಗೆ ಕಾರ್ಯಾಚರಣೆ ನಡೆಸಿದರು. ನಿರ್ಮಾಣ ಹಂತದಲ್ಲಿದ್ದ ವಾಣಿಜ್ಯ ಕಟ್ಟಡವನ್ನು ತೆರವುಗೊಳಿಸಿ, ಅಲ್ಲಿದ್ದ ಸಾಮಗ್ರಿಗಳನ್ನು ವಶಕ್ಕೆ ಪಡೆದುಕೊಂಡು, ಆ ಜಾಗದಲ್ಲಿ ‘ಬಿಡಿಎ ಸ್ವತ್ತು’ ಎಂದು ಫಲಕ ಅಳವಡಿಸಲಾಗಿದೆ.

1980ರಲ್ಲಿ ಎಚ್‌ಆರ್‌ಬಿಆರ್ ಬಡಾವಣೆ ನಿರ್ಮಾಣಕ್ಕಾಗಿ ಬಾಣಸವಾಡಿ ಗ್ರಾಮದ ಸರ್ವೆ ನಂ. 261ರ 1 ಎಕರೆ 32 ಗುಂಟೆ ಪೂರ್ಣ ಜಮೀನನ್ನು ಬಿಡಿಎ ಸ್ವಾಧೀನಪಡಿಸಿಕೊಂಡಿತ್ತು. ಅದರಲ್ಲಿ 6.5 ಗುಂಟೆ ಜಮೀನನ್ನು ಮಾರಾಟ ಮಾಡಿ, ಖಾತೆ, ಪಹಣಿ ಪಡೆದುಕೊಳ್ಳಲಾಗಿತ್ತು. ಬಿಡಿಎ ಭೂಸ್ವಾಧೀನಾಧಿಕಾರಿ, ‘ಸ್ವಾಧೀನ ಪ್ರಕ್ರಿಯೆಯಿಂದ ಭೂಮಿಯನ್ನು ಕೈಬಿಟ್ಟಿಲ್ಲ’ ಎಂಬ ಸ್ಪಷ್ಟ ಮಾಹಿತಿ ನೀಡಿದ್ದರೂ, ಇಂದಿಗೂ ಬಿಡಿಎ ಜಮೀನನ್ನು ತನ್ನ ವಶಕ್ಕೆ ತೆಗೆದುಕೊಂಡಿರಲಿಲ್ಲ.

ಬಾಣಸವಾಡಿಯಲ್ಲಿ ಬಿಡಿಎ ಸ್ವಾಧೀನಪಡಿಸಿಕೊಂಡಿದ್ದ ಜಾಗದಲ್ಲಿ ನಿರ್ಮಾಣವಾಗುತ್ತಿದ್ದ ವಾಣಿಜ್ಯ ಕಟ್ಟಡವನ್ನು ಸೋಮವಾರ ತೆರವುಗೊಳಿಸಿದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಫಲಕ ಅಳವಡಿಸಿದೆ

ಈ ಬಗ್ಗೆ ‘ಪ್ರಜಾವಾಣಿ’ ಡಿ.8ರ ಶುಕ್ರವಾರ ‘ಬಿಡಿಎ ಜಾಗ ಖಾಸಗಿಯವರಿಗೆ ಮಾರಾಟ!’ ಶೀರ್ಷಿಕೆಯಡಿ ವರದಿ ಪ್ರಕಟಿಸಿತ್ತು. ಆಯುಕ್ತ ಜಯರಾಮ್ ಸುಮಾರು 7 ಸಾವಿರ ಚದರ ಅಡಿ ಭೂಮಿ ವಶಕ್ಕೆ ಪಡೆದುಕೊಳ್ಳುವುದಾಗಿ ಹೇಳಿದ್ದರು. ಅದರಂತೆ, ಸೋಮವಾರ ಕಾರ್ಯಾಚರಣೆ ನಡೆದಿದೆ. ‘ಭೂಸ್ವಾಧೀನವಾಗಿಲ್ಲ ಎಂದು ಹಿಂಬರಹ ನೀಡಿದ, ಖಾತಾ, ಪಹಣಿ ಒದಗಿಸಿದ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳಲೂ ಆಯುಕ್ತರು ಸೂಚಿಸಿದ್ದಾರೆ. ಇದಕ್ಕೆ ಕಾರಣವಾಗಿರುವ ಅಧಿಕಾರಿಗಳ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ’ ಎಂದು ಬಿಡಿಎ ಅಧಿಕಾರಿಗಳು ಹೇಳಿದರು.

ಮುಖ್ಯಾಂಶಗಳು

- ವಾಣಿಜ್ಯ ಕಟ್ಟಡ ತೆರವುಗೊಳಿಸಿ ಸ್ವಾಧೀನ ಪಡಿಸಿಕೊಂಡ ಬಿಡಿಎ
- ನಿರ್ಮಾಣ ಹಂತದಲ್ಲಿದ್ದ ವಾಣಿಜ್ಯ ಕಟ್ಟಡ
- ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಸೂಚನೆ

ವರದಿ ಪರಿಣಾಮ

ಕಾಮಗಾರಿ ಅಕ್ರಮ ಆರೋಪಗಳ ಕುರಿತ ತನಿಖೆ

ಬಿಬಿಎಂಪಿ: ಎಸ್‌ಐಟಿ ರಚನೆ ಆದೇಶಕ್ಕೆ ಹೈಕೋರ್ಟ್ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವ್ಯಾಪ್ತಿಯಲ್ಲಿ 2019ರಿಂದ 2023ರ ಮೇ ತಿಂಗಳ ಅವಧಿಯಲ್ಲಿ ನಡೆದಿರುವ ವಿವಿಧ ಕಾಮಗಾರಿಗಳಲ್ಲಿ ಅಕ್ರಮ ನಡೆದಿದೆ’ ಎಂಬ ಆರೋಪಗಳ ಕುರಿತಂತೆ ತನಿಖೆ ನಡೆಸಲು ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಸರ್ಕಾರದ ಆದೇಶ ಪ್ರಶ್ನಿಸಿ, ‘ಮೆಸರ್ಸ್ ನಿಕ್ಷೇಪ ಇನ್ಫ್ರಾ ಪ್ರಾಜೆಕ್ಟ್ಸ್’ ಸೇರಿದಂತೆ 17 ಗುತ್ತಿಗೆ ಕಂಪನಿಗಳು ಮತ್ತು 28 ಮಂದಿ ಗುತ್ತಿಗೆದಾರರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಹೊಸ ಸರ್ಕಾರವು ಈ ಹಿಂದಿನ ಸರ್ಕಾರದ ನಿಲುವಿಗಿಂತಲೂ ಭಿನ್ನವಾದ ನಿಲುವು ಕೈಗೊಂಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ರಾಜ್ಯ ಸರ್ಕಾರ ತನ್ನ ಕ್ರಮದ ಕುರಿತು ಸಮರ್ಥನೆ

ನೀಡಬೇಕಿದೆ. ಅದಕ್ಕಾಗಿ ತನಿಖಾ ತಂಡ ಮತ್ತು ಏಕವ್ಯಕ್ತಿ ತನಿಖಾ ಆಯೋಗ ರಚನೆ ಮಾಡಿರುವ ಸರ್ಕಾರದ ಆದೇಶ, ಅದಕ್ಕೆ ಸಂಬಂಧಿಸಿದ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ತಡೆ ನೀಡಲಾಗಿದೆ’ ಎಂದು ಆದೇಶದಲ್ಲಿ ವಿವರಿಸಲಾಗಿದೆ.

ಪ್ರಕರಣವೇನು?: ಬಿಬಿಎಂಪಿ ವ್ಯಾಪ್ತಿಯಲ್ಲಿ 2019ರಿಂದ 2023ರ ಮೇ ತಿಂಗಳ ಅವಧಿಯಲ್ಲಿ 15ನೇ ಹಣಕಾಸು ಆಯೋಗದ ಅನುದಾನ, ನಗರೋತ್ಥಾನ ಅನುದಾನ ಮತ್ತು ಬಿಬಿಎಂಪಿ ಅನುದಾನಗಳ ಅಡಿಯಲ್ಲಿ ಹಲವು ಕಾಮಗಾರಿ ನಡೆದಿದ್ದವು. ಕಾಮಗಾರಿಗಳ ಸಂಬಂಧ ಟೆಂಡರ್ ಪ್ರಕ್ರಿಯೆಯಲ್ಲಿ ನಿಯಮಗಳ ಉಲ್ಲಂಘನೆ, ನಿರ್ದಿಷ್ಟ ಗುತ್ತಿಗೆದಾರರನ್ನು ಬಿಟ್ಟು ನಕಲಿ ಗುತ್ತಿಗೆದಾರರಿಗೆ ಹಣ ಪಾವತಿ, ನಕಲಿ ಬಿಲ್ ಸೃಷ್ಟಿ, ಕಾಮಗಾರಿ ನಡೆಸದೆಯೇ ಬಿಲ್ ಪಾವತಿ, ಕಳಪೆ ಗುಣಮಟ್ಟದ ಕಾಮಗಾರಿ ನಡೆಸಿರುವುದೂ ಸೇರಿದಂತೆ ಹಲವು ಆರೋಪಗಳು ಕೇಳಿ ಬಂದಿದ್ದವು. ಈ ಕುರಿತು ತನಿಖೆ ನಡೆಸಲು ರಾಜ್ಯ ನಗರಾಭಿವೃದ್ಧಿ ಇಲಾಖೆಯು ಹಿರಿಯ ಅಧಿಕಾರಿಗಳ ನೇತೃತ್ವದಲ್ಲಿ ಪ್ರತ್ಯೇಕ ನಾಲ್ಕು ಸಮಿತಿಗಳನ್ನು ರಚಿಸಲಾಗಿತ್ತು.

ಉಜ್ವಲ್‌ಕುಮಾರ್ ಘೋಷ್ ನೇತೃತ್ವದಲ್ಲಿ ನಾಲ್ವರು ಸದಸ್ಯರನ್ನು ಒಳಗೊಂಡ ಘನತ್ಯಾಜ್ಯ ನಿರ್ವಹಣೆ ಕಾಮಗಾರಿ ತನಿಖಾ ಸಮಿತಿ, ಅಮ್ಲಾನ್ ಆದಿತ್ಯ ಬಿಸ್ವಾಸ್ ನೇತೃತ್ವದಲ್ಲಿ ಆರು ಸದಸ್ಯರನ್ನು ಒಳಗೊಂಡ ರಸ್ತೆ ಅಭಿವೃದ್ಧಿ ಕಾಮಗಾರಿ ಹಾಗೂ ಒಎಫ್‌ಸಿ ಕೇಬಲ್ ಅಳವಡಿಕೆಯ ಅಕ್ರಮ ತನಿಖಾ ಸಮಿತಿ, ಪಿ.ಸಿ.ಜಾಫರ್ ನೇತೃತ್ವದಲ್ಲಿ ನಾಲ್ವರು ಸದಸ್ಯರ ಬೃಹತ್ ನೀರುಗಾಲುವೆ, ಸ್ವಾಧೀನಾನುಭವ (ಒಸಿ) ನೀಡುವ ಅಕ್ರಮದ ತನಿಖಾ ಸಮಿತಿ ಮತ್ತು ಡಾ. ವಿಶಾಲ್ ನೇತೃತ್ವದಲ್ಲಿ ಆರು ಸದಸ್ಯರ ಕೆರೆ ಅಭಿವೃದ್ಧಿ, ಸ್ಮಾರ್ಟ್ ಸಿಟಿ ಹಾಗೂ ವಾರ್ಡ್ ಮಟ್ಟದ ಕಾಮಗಾರಿಗಳ ತನಿಖಾ ತಂಡವನ್ನು ರಚಿಸಿ ಸರ್ಕಾರ ಆದೇಶ ಹೊರಡಿಸಿತ್ತು.

ಮುದ್ದಿರೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವ

ಪ್ರಜಾವಾಣಿ ವಾರ್ತೆ

ದಾಬಸ್‌ಪೇಟೆ: ಶಿವಗಂಗೆಯ ಮುದ್ದಿರೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವು ಕಡೆ ಕಾರ್ತಿಕ ಸೋಮವಾರ ವಿಜೃಂಭಣೆಯಿಂದ ನಡೆಯಿತು.

ಗಂಗಾಪೂಜೆ, ಗಣಪತಿ ಹೋಮ, ನಾಗದೇವತಾ ಪೂಜೆ, ರುದ್ರ ಕಳಶ ಸ್ಥಾಪನೆ, ಶತರುದ್ರಾಭಿಷೇಕ ನಂತರ ಹೂಗಳಿಂದ ದೇವರಿಗೆ ಅಲಂಕಾರ ಮಾಡಲಾಗಿತ್ತು. ಮುದ್ದಿರೇಶ್ವರ ಸ್ವಾಮಿಯನ್ನು ಪಲ್ಲಕ್ಕಿಯಲ್ಲಿ ಡೊಳ್ಳು, ನಾದಸ್ವರ, ಕರಡಿಕುಣಿತಗಳೊಂದಿಗೆ ಮೆರವಣಿಗೆ ಮಾಡಲಾಯಿತು. ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಭಾಗವಹಿಸಿದ್ದರು. ಜಾತ್ರೆಗೆ ಬಂದ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು.

ಮುದ್ದಿರೇಶ್ವರ ಸ್ವಾಮಿ ಪಲ್ಲಕ್ಕಿ

ವಿದ್ಯುತ್ ವ್ಯತ್ಯಯ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಬಿ.ಐ ವಿದ್ಯುತ್ ನಿರ್ವಹಣಾ ಕೇಂದ್ರದಲ್ಲಿ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಇದೇ 13ರಂದು ನಗರದ ವಿವಿಧ ಸ್ಥಳಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಆರ್.ಬಿ.ಐ ಲೇಔಟ್, ಕೊತ್ತನೂರು, ಜೆ.ಪಿ. ನಗರ 5ನೇ ಹಂತ, ಶ್ರೇಯಸ್ ಕಾಲೊನಿ, ಗೌರವ್ ನಗರ, ನಟರಾಜ ಲೇಔಟ್, ನೃಪತುಂಗ ನಗರ, ಜಂಬು ಸವಾರಿ ದಿನ್ನೆ, ಚುಂಚಘಟ್ಟ, ಬ್ರಿಗೇಡ್ ಮಿಲೇನಿಯಮ್ ಮತ್ತು ಬ್ರಿಗೇಡ್ ಗಾರ್ಡೇನಿಯಾ ಅಪಾರ್ಟ್‌ಮೆಂಟ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಅಧಿಕಾರಿಗಳು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಇಂದಿರಾ ಕ್ಯಾಂಟೀನ್‌ನಲ್ಲಿ ಮುದ್ದೆ ಊಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾ ಕ್ಯಾಂಟೀನ್‌ಗಳಲ್ಲಿ ನೀಡುತ್ತಿದ್ದ ಆಹಾರದ ಮೆನುವಿನಲ್ಲಿ ಬದಲಾವಣೆ ಮಾಡಲಾಗಿದ್ದು ಜನವರಿಯಿಂದ ಬೆಂಗಳೂರಿನ ಗ್ರಾಹಕರು ರಾಗಿ ಮುದ್ದೆ ಊಟ ಸವಿಯಬಹುದು.

ಇಂದಿರಾ ಕ್ಯಾಂಟೀನ್ ಮೆನುವಿನಲ್ಲಿ ವೈವಿಧ್ಯ ಹೆಚ್ಚಿಸಲು ರಾಜ್ಯ ಸರ್ಕಾರ ನಿರ್ಧಾರ ಕೈಗೊಂಡಿತ್ತು. ಆಯಾ ಪ್ರದೇಶದ ಊಟವನ್ನು ಸೇರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿತ್ತು.

ಬೆಂಗಳೂರು ನಗರ ವ್ಯಾಪ್ತಿಯಲ್ಲಿ 169 ಇಂದಿರಾ ಕ್ಯಾಂಟೀನ್‌ಗಳಿದ್ದು, ಜನವರಿ ತಿಂಗಳಿನಿಂದ ನಿತ್ಯ ಗ್ರಾಹಕರಿಗೆ

ಮಧ್ಯಾಹ್ನ ಹಾಗೂ ರಾತ್ರಿ ಮುದ್ದೆ ಊಟ ಲಭ್ಯವಾಗಲಿದೆ. ಈವರೆಗೆ ಊಟದಲ್ಲಿ ರೈಸ್‌ಬಾತ್, ಇಡ್ಲಿ, ಉಪ್ಪಿಟ್ಟು, ಅನ್ನ, ಸಾಂಬಾರ್ ಮಾತ್ರ ಇರುತ್ತಿತ್ತು. ಆ ಮೆನುವಿಗೆ ಹೊಸದಾಗಿ ರಾಗಿ ಮುದ್ದೆಯನ್ನು ಸೇರಿಸಲಾಗುತ್ತಿದೆ.

‘ಸ್ಥಳೀಯ ಖಾದ್ಯಗಳನ್ನು ನೀಡುವಂತೆ ಸರ್ಕಾರ ಸೂಚಿಸಿತ್ತು. ಟೆಂಡರ್ ಪ್ರಕ್ರಿಯೆಗಳು ನಡೆಯುತ್ತಿವೆ. ಊಟದ ದರದಲ್ಲಿ ಯಾವುದೇ ಬದಲಾವಣೆ ಇಲ್ಲ. ಹಳೇ ದರದಂತೆ ಬೆಳಿಗ್ಗೆ ತಿಂಡಿಗೆ ₹5 ಹಾಗೂ ಊಟ ₹10ಕ್ಕೆ ಲಭ್ಯವಾಗಲಿದೆ. ಜನವರಿ ಮೊದಲ ವಾರದಿಂದಲೇ ಹೊಸ ಮೆನುವಿನಂತೆ ಆಹಾರ ಪೂರೈಸಲು ಪ್ರಯತ್ನಿಸಲಾಗುತ್ತಿದೆ. ಅದು ಸಾಧ್ಯವಾಗದಿದ್ದರೆ ಜನವರಿ 26ರಿಂದ ಖಂಡಿತಾ ಹೊಸ ಮೆನು ಜಾರಿಗೊಳ್ಳಲಿದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕೊಕ್ಕೊ: ವಿಜಯನಗರ ಎಫ್‌ಜಿಸಿ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಕೆಂಗೇರಿ: ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಪುರುಷರ ಕೊಕ್ಕೊ ಪಂದ್ಯಾವಳಿಯಲ್ಲಿ ವಿಜಯನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು (ಎಫ್‌ಜಿಸಿ) ತಂಡವು ಚಾಂಪಿಯನ್ ಆಗಿದೆ.

2023–24ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾಲಯದ ಅಂತರ್ ಕಾಲೇಜು ಪುರುಷರ ಕೊಕ್ಕೊ ಪಂದ್ಯಾವಳಿಯನ್ನು ಯುಸಿಪಿಇ ಕಾಲೇಜಿನ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಪಂದ್ಯಾವಳಿಯಲ್ಲಿ 28 ಪದವಿ ಕಾಲೇಜುಗಳ ತಂಡಗಳು ಭಾಗವಹಿಸಿದ್ದವು.

ವಿಜಯನಗರ ಕಾಲೇಜು ತಂಡವು ಸೆಮಿಫೈನಲ್ ಪಂದ್ಯದಲ್ಲಿ ಬಿಪಿಎಡ್ ಕಾಲೇಜು ತಂಡದ ವಿರುದ್ಧ ಜಯಗಳಿಸಿತ್ತು. ಅಂತಿಮ ಪಂದ್ಯದಲ್ಲಿ ನೆಲಮಂಗಲ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಾಲೇಜು ತಂಡದ ವಿರುದ್ಧ 15 ಅಂಕ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿತು

ಬೆಂಗಳೂರು ವಿಶ್ವವಿದ್ಯಾಲಯದ ಅಂತರ ಕಾಲೇಜು ಕೊಕ್ಕೊ ಚಾಂಪಿಯನ್ ಶಿಪ್‌ನಲ್ಲಿ ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ತಂಡವು ವಿಜಯಗಳಿಸಿತು

ಬೆಂಗಳೂರು ವಿಶ್ವ ವಿದ್ಯಾಲಯದ ರಾಮಕೃಷ್ಣಯ್ಯ, ಅಮರನಾಥ್, ಪಿ.ಸಿ. ಕೃಷ್ಣಸ್ವಾಮಿ ವಿಜೇತ ತಂಡಗಳಿಗೆ ಪದಕ ಮತ್ತು ಟ್ರೋಫಿಯನ್ನು ನೀಡಿ ಗೌರವಿಸಿದರು. ವಿಜಯನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ದೈಹಿಕ ಶಿಕ್ಷಣ ನಿರ್ದೇಶಕ ಈಶ್ವರ್ ನಾಯ್ಕ್ ಮತ್ತು ಶ್ರೀನಿವಾಸ್ ಭಾಗವಹಿಸಿದ್ದರು.

ದಾಸನಪುರದ ಎಪಿಎಂಸಿ ಮಾರುಕಟ್ಟೆ ಪ್ರಾಂಗಣದಿಂದ ಮತ್ತಷ್ಟು ವರ್ತಕರು ಖಾಲಿ

ಮಾರುಕಟ್ಟೆ ವಹಿವಾಟು ಬಹುತೇಕ ಸ್ಥಗಿತ

• ಆದಿತ್ಯ ಕೆ.ಎ.

ಖಾಲಿ ಖಾಲಿಯಾಗಿರುವ ದಾಸನಪುರ ಎಪಿಎಂಸಿ ಪ್ರಾಂಗಣ.

ಬೆಂಗಳೂರು: ಕೋಟ್ಯಂತರ ರೂಪಾಯಿ ವ್ಯಯಿಸಿ ನಿರ್ಮಾಣ ಮಾಡಿದ್ದ ನೆಲಮಂಗಲ ಸಮೀಪದ ದಾಸನಪುರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ(ಎಪಿಎಂಸಿ) ಮಾರುಕಟ್ಟೆಗೆ ಹಿಡಿದಿರುವ ಗ್ರಹಣ ಸದ್ಯಕ್ಕೆ ಬಿಡುಗಡೆ ಆಗುವಂತೆ ಕಾಣಿಸುತ್ತಿಲ್ಲ.

ಕೆಲವು ತಿಂಗಳಿಂದ ವರ್ತಕರು, ಗ್ರಾಹಕರು, ರೈತರಿಲ್ಲದೇ ಸೊರಗಿದ್ದ ಮಾರುಕಟ್ಟೆಯಲ್ಲಿ ಈಗ ವಹಿವಾಟು ಬಹುತೇಕ ಸ್ಥಗಿತಗೊಳ್ಳುವ ಹಂತವನ್ನು ತಲುಪಿದೆ.

ನಷ್ಟದ ನಡುವೆ ಕಳೆದ ಎರಡು ವರ್ಷಗಳಿಂದ ವಹಿವಾಟು ನಡೆಸುತ್ತಿದ್ದ 20 ವರ್ತಕರಲ್ಲಿ ಅರ್ಧದಷ್ಟು ಮಂದಿ ಕೆಲವು ದಿನಗಳ ಹಿಂದೆ ಯಶವಂತಪುರಕ್ಕೆ ಮರಳಿದ್ದಾರೆ. ಹೀಗಾಗಿ, ₹400 ಕೋಟಿ ಖರ್ಚು ಮಾಡಿ ನಿರ್ಮಾಣ ಮಾಡಲಾಗಿದ್ದ ಮಾರುಕಟ್ಟೆ ವ್ಯರ್ಥವಾಗುತ್ತಿದೆ.

ನಿರ್ವಹಣೆಯಿಲ್ಲದ ಕಾರಣಕ್ಕೆ ಕೆಲವು ಮಳಿಗೆಗಳ ಕಬ್ಬಿಣದ ಬಾಗಿಲುಗಳು ತುಕ್ಕು ಹಿಡಿಯುತ್ತಿವೆ. ಕಾವಲುಗಾರರೂ ಇಲ್ಲದೆ ಕಳವು ಪ್ರಕರಣಗಳು ಹೆಚ್ಚುತ್ತಿವೆ ಎಂದು ವರ್ತಕರು ಹೇಳುತ್ತಾರೆ.

ಸದ್ಯ, 10 ವರ್ತಕರಷ್ಟೇ ಈರುಳ್ಳಿ, ಬೆಳ್ಳುಳ್ಳಿ, ಶುಂಠಿ ಹಾಗೂ ಆಲೂಗಡ್ಡೆ (ನಾಲ್ಕು ಪದಾರ್ಥ) ವ್ಯಾಪಾರ ನಡೆಸುತ್ತಿದ್ದಾರೆ. ಆ ಮಳಿಗೆಗಳತ್ತಲೂ ಗ್ರಾಹಕರ ಸುಳಿವಿಲ್ಲ. ಪಕ್ಕದಲ್ಲೇ ನಿರ್ಮಿಸಿರುವ ಸೊಪ್ಪು, ತರಕಾರಿ, ಹಣ್ಣು ಮಾರುಕಟ್ಟೆ ಮಾತ್ರ ಸುವ್ಯವಸ್ಥಿತವಾಗಿ ನಡೆಯುತ್ತಿದೆ. ಪಕ್ಕದ ಮಾರುಕಟ್ಟೆ ಪ್ರಾಂಗಣ ಮಾತ್ರ ಖಾಲಿ ಖಾಲಿಯಾಗಿದೆ.

ಹೋಟೆಲ್, ಅಂಗಡಿ ಬಂದ್: ದಾಸನಪುರಕ್ಕೆ ಮಾರುಕಟ್ಟೆ ಸ್ಥಳಾಂತರಗೊಳ್ಳುವ ಆಸೆಯಿಂದ ಹೋಟೆಲ್, ಅಂಗಡಿಗಳು ಈ ಭಾಗದಲ್ಲಿ ತಲೆಯೆತ್ತಿದ್ದವು. ಈಗ ಅವುಗಳೂ ಬಂದ್ ಆಗುತ್ತಿವೆ. ರಸ್ತೆಯ ಉದ್ದಕ್ಕೂ ಹತ್ತಾರು ಮಳಿಗೆಗಳೂ ಬಂದ್ ಆಗಿರುವ ದೃಶ್ಯ ಸಿಗುತ್ತದೆ.

ಒಟ್ಟು 212 ಸುಸಜ್ಜಿತ ಮಳಿಗೆ ನಿರ್ಮಿಸಲಾಗಿತ್ತು. ವಿದ್ಯುತ್ ಸಂಪರ್ಕ, ಕುಡಿಯುವ ನೀರು, ಮಳಿಗೆ ಎದುರು ವಿಶಾಲವಾದ ಪ್ರಾಂಗಣ, ಗೇಟ್ ವ್ಯವಸ್ಥೆ ಕಲ್ಪಿಸಲಾಗಿದೆ. 158 ಮಳಿಗೆಗಳನ್ನು ಈರುಳ್ಳಿ, ಆಲೂಗಡ್ಡೆ, ಬೆಳ್ಳುಳ್ಳಿ ವರ್ತಕರಿಗೆ ಮೀಸಲಿಡಲಾಗಿದೆ. ಉಳಿದ ಮಳಿಗೆಗಳನ್ನು ಬೇಳೆ- ಕಾಳು ವರ್ತಕರಿಗೆಂದು ನಿರ್ಮಿಸಲಾಗಿದೆ.

ಆರು ವರ್ಷದಿಂದ ಹಗ್ಗಜಗ್ಗಾಟ: ನಾಲ್ಕು ಪದಾರ್ಥಗಳ ವಹಿವಾಟು ನಡೆಸುವ ಎಲ್ಲ ವರ್ತಕರು ದಾಸನಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಪ್ರಾಂಗಣಕ್ಕೆ ಸ್ಥಳಾಂತರವಾಗುವಂತೆ 2017ರಲ್ಲಿ ರಾಜ್ಯ ಸರ್ಕಾರ ಆದೇಶಿಸಿತ್ತು. ಯಶವಂತಪುರದಲ್ಲಿ ಮಳಿಗೆಯಿಲ್ಲದ ವರ್ತಕರು ಅದೇ ವರ್ಷ ದಾಸನಪುರದಲ್ಲಿ ವಹಿವಾಟು ಆರಂಭಿಸಿದ್ದರು. ಉಳಿದವರು ಯಶವಂತಪುರದಲ್ಲೇ ಉಳಿದಿದ್ದರು. ಕೋವಿಡ್ ವೇಳೆ ಅನಿವಾರ್ಯವಾಗಿ ಅವರೂ ಸ್ಥಳಾಂತರಗೊಂಡಿದ್ದರು. ಲಾಕ್‌ಡೌನ್ ತೆರವಾದ ಮೇಲೆ ಮತ್ತೆ ಯಶವಂತಪುರಕ್ಕೆ ಬಂದವರು ಅಲ್ಲಿಗೆ ತೆರಳುತ್ತಿಲ್ಲ. ಇದು ಸಮಸ್ಯೆಗೆ ಕಾರಣವಾಗಿದೆ.

ತುಮಕೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಿತ್ಯ ಸಾವಿರಾರು ಲಾರಿಗಳು ಅವಕ ಹೊತ್ತು ಯಶವಂತಪುರದತ್ತ ಬರುತ್ತಿವೆ. ಇದರಿಂದ ವಾಹನ ದಟ್ಟಣೆ ಸಮಸ್ಯೆ ತೀವ್ರವಾಗಿದೆ.

ಇಲ್ಲಿ ಬಂದ್, ಅಲ್ಲಿ ವ್ಯಾಪಾರ: ದಾಸನಪುರದಲ್ಲಿ ಮಳಿಗೆ ಪಡೆದುಕೊಂಡು 150 ವರ್ತಕರು ಯಶವಂತಪುರದಲ್ಲಿ ಬೇರೊಬ್ಬರ ಮಳಿಗೆಯನ್ನು ಬಾಡಿಗೆ ಪಡೆದು, ವ್ಯಾಪಾರ ನಡೆಸುತ್ತಿದ್ದಾರೆ. ಇದಕ್ಕೆ ಅವಕಾಶವಿಲ್ಲ. ಮಳಿಗೆ ಪಡೆದವರು ಮರಳಿದರೂ ದಾಸನಪುರದ ಮಾರುಕಟ್ಟೆಗೆ ಬಂದರೆ ಜೀವಕಳೆ ಬರುತ್ತದೆ ಎಂದು ವರ್ತಕರು ಹೇಳುತ್ತಾರೆ.

‘ಎಪಿಎಂಸಿ ನಿರ್ದೇಶಕರು ಹಾಗೂ ಕಾರ್ಯದರ್ಶಿಗಳು ಗಮನ ಹರಿಸುತ್ತಿಲ್ಲ. ಏಕಾಏಕಿ ನಮ್ಮನ್ನು ಸ್ಥಳಾಂತರಿಸಿ ನಡು ನೀರಿನಲ್ಲಿ ಕೈಬಿಟ್ಟಿದ್ದಾರೆ. 10 ವರ್ತಕರು ಅತಂತ್ರ ಸ್ಥಿತಿಯಲ್ಲಿ ಇದ್ದೇವೆ. ನಿತ್ಯದ ವಹಿವಾಟು ನಡೆಯದೇ ಸಾಲ ಮಾಡಿಕೊಂಡು ಜೀವನ ನಡೆಸುವ ಸ್ಥಿತಿಯಿದೆ’ ಎಂದು ವರ್ತಕರೊಬ್ಬರು ಕಣ್ಣೀರಿಟ್ಟರು.

> **ಮಳಿಗೆಗಳನ್ನು ಮರುಹಂಚಿಕೆ ಮಾಡಿದರೆ ದಾಸನಪುರದ ವರ್ತಕರು ಮಳಿಗೆಯನ್ನೇ ಕಳೆದುಕೊಳ್ಳುವ ಪರಿಸ್ಥಿತಿ ಬರಬಹುದು.**
> **ಜಿಕೆಟಿ ಗೌಡ,**
> ಕಾರ್ಯದರ್ಶಿ, ದಾಸನಪುರ ವರ್ತಕರ ಸಂಘ

> **ಅಧಿಕಾರಿಗಳ ಭರವಸೆಯ ಮಾತು ನಂಬಿ ಸ್ಥಳಾಂತರಗೊಂಡಿದ್ದೆವು. ಈಗ ಪ್ರತಿನಿತ್ಯ ಸಂಕಟ ಪಡುವಂತಾಗಿದೆ.**
> **ಬಿ.ಆರ್.ಶ್ರೀರಾಮರೆಡ್ಡಿ**
> ಅಧ್ಯಕ್ಷ, ಎಪಿಎಂಸಿ ವರ್ತಕರ ಸಂಘ

‘ಶೀಘ್ರ ಅಂತಿಮ ತೀರ್ಮಾನ’

‘ಯಶವಂತಪುರದ ಬಹುತೇಕ ವರ್ತಕರು ಸ್ಥಳಾಂತರಕ್ಕೆ ಒಪ್ಪುತ್ತಿಲ್ಲ. ಈ ವಿಚಾರವಾಗಿ, ಎಪಿಎಂಸಿ ಅಧಿಕಾರಿಗಳ ಜೊತೆಗೂ ಚರ್ಚಿಸಿದ್ದೇವೆ. ಕೆಲವು ದಿನ ಕಾಯುವಂತೆ ಮನವಿ ಮಾಡಿದ್ದಾರೆ. ಅಧಿಕಾರಿಗಳ ಅಂತಿಮ ತೀರ್ಮಾನ ಗಮನಿಸಿ ತೀರ್ಮಾನ ತೆಗೆದುಕೊಳ್ಳುತ್ತೇವೆ’ ಎಂದು ದಾಸನಪುರ ಎಪಿಎಂಸಿ ವರ್ತಕರ ಸಂಘದ ಪದಾಧಿಕಾರಿಗಳು ಹೇಳಿದರು.

ಸುದ್ದಿ 2 ನಿಮಿಷ

ಎರಡು ದಿನ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ಮಲೆನಾಡು, ದಕ್ಷಿಣ ಒಳನಾಡು ಹಾಗೂ ಕರಾವಳಿ ವ್ಯಾಪ್ತಿಯ ಜಿಲ್ಲೆಗಳಲ್ಲಿ ಮಂಗಳವಾರ ಮತ್ತು ಬುಧವಾರ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು ವ್ಯಾಪ್ತಿಯ ಜಿಲ್ಲೆಗಳಲ್ಲಿ ಒಣಹವೆ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ಸುತ್ತಮುತ್ತಲ ಪ್ರದೇಶದಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಕರಾವಳಿ, ಮಲೆನಾಡು ಪ್ರದೇಶದ ಜಿಲ್ಲೆಗಳಲ್ಲಿ ಶನಿವಾರದಿಂದಲೂ ರಾತ್ರಿ ವೇಳೆ ಧಾರಾಕಾರ ಮಳೆಯಾಗಿದ್ದು, ಕೃಷಿಕರು ತೊಂದರೆಗೆ ಒಳಗಾಗಿದ್ದಾರೆ. ಕಾಫಿ ಕೊಯ್ಲು, ಭತ್ತ ಹಾಗೂ ರಾಗಿ ಪೈರಿನ ಕಟಾವಿಗೂ ಸಮಸ್ಯೆಯಾಗಿದೆ. ಕಣದಲ್ಲಿ ಒಣಗಲು ಹಾಕಿದ್ದ ಕಾಫಿ ಮಳೆಯಲ್ಲಿ ತೊಯ್ದು ಹೋಗಿದೆ ಎಂದು ಕೃಷಿಕರು ಅಳಲು ತೋಡಿಕೊಂಡಿದ್ದಾರೆ.

ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಯಾದಂತೆ ಕಳೆದ 24 ಗಂಟೆ ಅವಧಿಯಲ್ಲಿ, ಧರ್ಮಸ್ಥಳದಲ್ಲಿ 10 ಸೆಂ.ಮೀ, ಬೆಳ್ತಂಗಡಿಯಲ್ಲಿ 4, ಪಣಂಬೂರು, ಚಿಕ್ಕಮಗಳೂರಿನಲ್ಲಿ 3, ಮಂಗಳೂರು, ಉಡುಪಿಯ ಸಿದ್ದಾಪುರದಲ್ಲಿ 2, ಚಾಮರಾಜನಗರದ ಕೆ.ವಿ.ಕೆ ವ್ಯಾಪ್ತಿ ಹಾಗೂ ಕೊಡಗಿನ ಕುಶಾಲನಗರದಲ್ಲಿ 1 ಸೆಂ.ಮೀ ಮಳೆ ಸುರಿದಿದೆ.

ಎನ್‌ಎಚ್‌ಆರ್‌ಸಿಗೆ ತುರ್ತು ನೋಟಿಸ್

ಬೆಂಗಳೂರು: ‘ಜೀತ ಪದ್ಧತಿ ನಿರ್ಮೂಲನೆ ಕಾಯ್ದೆ-1976 ಅನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು’ ಎಂದು ಕೋರಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ (ಎನ್‌ಎಚ್‌ಆರ್‌ಸಿ) ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ, ‘ಜೀತ ವಿಮುಕ್ತಿ-ಕರ್ನಾಟಕ’ದ ಸಂಯೋಜಕ ಡಾ. ಕಿರಣ ಕಮಲ ಪ್ರಸಾದ್ ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಸೋಮವಾರ ವಿಚಾರಣೆ ನಡೆಸಿತು.

ಈ ಹಿಂದಿನ ವಿಚಾರಣೆ ವೇಳೆ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಜಾರಿಗೊಳಿಸಲು ಆದೇಶಿಸಲಾಗಿದ್ದ ನೋಟಿಸ್ ತಲುಪದೇ ಇದ್ದ ಹಿನ್ನೆಲೆಯಲ್ಲಿ ನ್ಯಾಯಪೀಠವು ಮತ್ತೊಂದು ಬಾರಿ ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆ ಮುಂದೂಡಿತು. ‘ಜೀತದಾಳುಗಳ ಗುರುತಿಸುವಿಕೆ, ಅವರ ರಕ್ಷಣೆ ಹಾಗೂ ಜೀತಕ್ಕೆ ದುಡಿಸಿಕೊಂಡವರ ವಿರುದ್ಧ ಕ್ರಮ ಕೈಗೊಳ್ಳುವ ಸಂಬಂಧ ಸೂಚಿಸಲಾದ ಮಾರ್ಗಸೂಚಿಗಳನ್ನು ರದ್ದುಪಡಿಸಬೇಕು. ಜೀತದಾಳುಗಳ ಕಲ್ಯಾಣ ಮತ್ತು ಅವರ ಆರ್ಥಿಕ ಹಿತಾಸಕ್ತಿ ಕಾಪಾಡಲು ಜಾರಿಗೆ ತಂದಿರುವ ಜೀತ ಪದ್ಧತಿ (ನಿರ್ಮೂಲನೆ) ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಕೇಂದ್ರ-ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಬೇಕು‘ ಎಂದು ಅರ್ಜಿಯಲ್ಲಿ ಕೋರಲಾಗಿದೆ.

ಸೃಜನಶೀಲ ಬರವಣಿಗೆ ಬಗ್ಗೆ ಡೆಕ್ಕನ್ ಹೆರಾಲ್ಡ್ ನ್ಯೂಸ್ ಪೇಪರ್ ಇನ್ ಎಜುಕೇಶನ್ (ಡಿಎಚ್‌ಐಇ) ಹಮ್ಮಿಕೊಂಡಿದ್ದ ಅಂತರ್‌ಶಾಲಾ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಸೌಂದರ್ಯ ಶಾಲೆಯ ತೇಜಸ್ವಿನಿ ಎಲ್(ಪ್ರಥಮ), ಅವರ್ ಲೇಡಿ ಆಫ್ ಫಾತಿಮಾ ಪ್ರೌಢಶಾಲೆಯ ಖುಷಿ ಶರ್ಮಾ(ದ್ವಿತೀಯ), ಹೋಲಿ ಸ್ಪಿರಿಟ್ ಸ್ಕೂಲ್ ಸಿಐಎಸ್‌ಸಿಯ ಸಹನಾ ಜಿ.ಜೆ(ತೃತೀಯ), ಅವರ್ ಲೇಡಿ ಆಫ್ ಫಾತಿಮಾ ಪ್ರೌಢಶಾಲೆಯ ಜ್ಞಾನೇಶ್ವರ ಎಲ್(ಚತುರ್ಥ). ಜೂನಿಯರ್ಸ್ ವಿಭಾಗದಲ್ಲಿ ಎಂಇಎಸ್‌ಕೆಕೆಪಿಎಸ್ ವಿದ್ಯಾ ಸಂಸ್ಥೆಯ ಧನ್ಯಾ ವಿ.ಎಸ್(ಪ್ರಥಮ), ಸಿಲಿಕಾನ್ ಸಿಟಿ ಅಕಾಡೆಮಿಯ ನಂದನ ಆರ್(ದ್ವಿತೀಯ), ಕಿಡ್ಸ್ ಗ್ಲೋಬಲ್‌ನ ಪಿ. ಲಹರಿ(ಚತುರ್ಥ) ಬಹುಮಾನ ಪಡೆದರು. (ತೃತೀಯ ಬಹುಮಾನ ಪಡೆದಿರುವ ಜ್ಞಾನಾಕ್ಷಿ ವಿದ್ಯಾನಿಕೇತನದ ಸಿಂಚನಾ ಶರ್ಮಾ ಆರ್ ಕಾರ್ಯಕ್ರಮದಲ್ಲಿ ಭಾಗವಹಿಸಿರಲಿಲ್ಲ)

ಸಲುಗೆ ನಿರಾಕರಿಸಿದ್ದಕ್ಕೆ ಮಹಿಳೆ ಕೊಲೆ; ಬಂಧನ

ಬೆಂಗಳೂರು: ತನ್ನ ಜೊತೆ ಸಲುಗೆಯಿಂದ ಇರಲು ಒಪ್ಪಲಿಲ್ಲವೆಂದು ಪರ್ವೀನ್ (33) ಅವರನ್ನು ಕೊಲೆ ಮಾಡಿದ್ದ ಆರೋಪದಡಿ ಸಂಬಂಧಿ ಮೊಹಮ್ಮದ್ ಜುನೈದ್ (26) ಅವರನ್ನು ಜಗಜೀವನ್‌ರಾಮ್ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪರ್ವೀನ್ ಅವರನ್ನು ಭಾನುವಾರ (ಡಿ. 10) ಸಂಜೆ ಕೊಲೆ ಮಾಡಲಾಗಿತ್ತು. ಕೃತ್ಯದ ನಂತರ ಪರಾರಿಯಾಗಿದ್ದ ಜುನೈದ್‌ನನ್ನು ಸೋಮವಾರ ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪತ್ನಿಯಿಂದ ದೂರವಾಗಿದ್ದ: ‘ವಿವಾಹಿತ ಜುನೈದ್, ಪತ್ನಿ ಜೊತೆ ಜಗಳ ಮಾಡುತ್ತಿದ್ದ. ಇವರಿಬ್ಬರ ಜಗಳ ಠಾಣೆ ಮೆಟ್ಟಿಲೇರಿತ್ತು. ಪೊಲೀಸರು ಇಬ್ಬರಿಗೂ ಬುದ್ಧಿವಾದ ಹೇಳಿದ್ದರು. ನಂತರ, ಪತ್ನಿಯಿಂದ ಜುನೈದ್ ದೂರವಾಗಿದ್ದ. ಸಂಬಂಧಿಯಾಗಿದ್ದ ಪರ್ವೀನ್ ಜೊತೆ ಮಾತನಾಡಲಾರಂಭಿಸಿದ್ದ’ ಎಂದು ಮೂಲಗಳು ತಿಳಿಸಿವೆ.

‘ವಿವಾಹಿತರಾಗಿದ್ದ ಪರ್ವೀನ್, ಸಂಬಂಧಿ ಎಂಬ ಕಾರಣಕ್ಕೆ ಮಾತನಾಡುತ್ತಿದ್ದರು. ಅದನ್ನೇ ದುರುಪಯೋಗಪಡಿಸಿಕೊಂಡಿದ್ದ ಜುನೈದ್, ತನ್ನೊಂದಿಗೆ ಸಲುಗೆಯಿಂದ ಇರುವಂತೆ ಒತ್ತಾಯಿಸಲಾರಂಭಿಸಿದ್ದ. ಅದನ್ನು ನಿರಾಕರಿಸಿದ್ದ ಪರ್ವೀನ್, ಆತನ ಜೊತೆ ಮಾತನಾಡುವುದನ್ನು ನಿಲ್ಲಿಸಿದ್ದರು’ ಎಂದಿವೆ.

‘ಸಿಟ್ಟಾಗಿದ್ದ ಆರೋಪಿ ಜುನೈದ್, ಏಕಾಏಕಿ ಮನೆಗೆ ನುಗ್ಗಿ ಚಾಕುವಿನಿಂದ ಇರಿದು ಪರ್ವೀನ್ ಅವರನ್ನು ಕೊಲೆ ಮಾಡಿದ್ದ. ಮೃತದೇಹ ನೋಡಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು. ವಿಶೇಷ ತಂಡ ರಚಿಸಿ ಕೆಲವೇ ಗಂಟೆಗಳಲ್ಲಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಚಾಲಕ ಕೊಲೆ: 11 ಬಂಧನ

ಬೆಂಗಳೂರು: ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಆಟೊ ಚಾಲಕ ಅರುಣ್ (24) ಕೊಲೆ ಪ್ರಕರಣದಲ್ಲಿ 11 ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಟಿಂಬರ್ ಯಾರ್ಡ್ ಬಡಾವಣೆ ನಿವಾಸಿ ಅರುಣ್ ಅವರನ್ನು ಡಿ. 5ರಂದು ರಾತ್ರಿ ಕೊಲೆ ಮಾಡಲಾಗಿತ್ತು. ಹಳೇ ವೈಷಮ್ಯವೇ ಕೊಲೆ ಕಾರಣ ಎಂಬುದು ತನಿಖೆಯಿಂದ ಗೊತ್ತಾಗಿದೆ. ಸ್ಥಳೀಯ ನಿವಾಸಿಗಳಾದ ಹರೀಶ್, ಮಧುಸೂದನ್, ಪ್ರಶಾಂತ್, ಅಭಿ, ದಿಲೀಪ್‌ಕುಮಾರ್, ಶ್ಯಾಮ್, ವಸಂತ್‌ಕುಮಾರ್, ಕೆ. ಕಾರ್ತಿಕ್ ಸೇರಿ 11 ಮಂದಿಯನ್ನು ಸೆರೆ ಹಿಡಿಯಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪಾದಚಾರಿ ಸಾವು

ಬೆಂಗಳೂರು: ಯಶವಂತಪುರ ಬಸ್ ನಿಲ್ದಾಣ ಬಳಿ ಬೈಕ್ ಗುದ್ದಿ ಸೋಮಶೇಖರ್ ರಾವ್ (64) ಅವರು ಮೃತಪಟ್ಟಿದ್ದು, ಸವಾರನನ್ನು ಪೊಲೀಸರು ಬಂಧಿಸಿದ್ದಾರೆ.

‘ಸ್ಥಳೀಯ ನಿವಾಸಿ ಸೋಮಶೇಖರ್ ಅವರು ಭಾನುವಾರ ರಾತ್ರಿ ರಸ್ತೆ ದಾಟುತ್ತಿದ್ದ ವೇಳೆ ಈ ಅವಘಡ ಸಂಭವಿಸಿದೆ’ ಎಂದು ಯಶವಂತಪುರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ಆರೋಪಿ ಸವಾರ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬೈಕ್ ಚಲಾಯಿಸಿದ್ದ. ಬೈಕ್ ಸವಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಬಂಧಿಸಲಾಗಿದೆ’ ಎಂದರು.

ವಕೀಲ ಈರಣ್ಣ ಹತ್ಯೆ: ಹೈಕೋರ್ಟ್ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿಯಲ್ಲಿ ಇತ್ತೀಚೆಗೆ ನಡೆದ ವಕೀಲ ಈರಣ್ಣಗೌಡ ಪೊಲೀಸ್ ಪಾಟೀಲ ಅವರ ಹತ್ಯೆಯನ್ನು ಔಪಚಾರಿಕವಾಗಿ ಪ್ರಸ್ತಾಪಿಸಿರುವ ಹೈಕೋರ್ಟ್, ‘ಇಂತಹ ಘಟನೆಗಳನ್ನು ಗಂಭೀರವಾಗಿ ಪರಿಗಣಿಸದೇ ಹೋದರೆ ಕೊಲೆಗಡುಕರು ಮುಂದೊಂದು ದಿನ ಶ್ರೀಸಾಮಾನ್ಯರನ್ನು ಬೆದರಿಸಿ ಸಿವಿಲ್ ವ್ಯಾಜ್ಯಗಳನ್ನು ತಾವೇ ಇತ್ಯರ್ಥ ಮಾಡಿಕೊಳ್ಳುತ್ತಾರೆ‘ ಎಂದು ಆತಂಕ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಏಕಸದಸ್ಯ ನ್ಯಾಯಪೀಠ ಸೋಮವಾರ ಸಿವಿಲ್ ವ್ಯಾಜ್ಯವೊಂದಕ್ಕೆ ಸಂಬಂಧಿಸಿದ ಪ್ರಕರಣದ ವಿಚಾರಣೆ ವೇಳೆ ಈ ಕುರಿತಂತೆ ಮೌಖಿಕವಾಗಿ ತೀವ್ರ ಬೇಸರ ವ್ಯಕ್ತಪಡಿಸಿತು. ‘20 ಎಕರೆ ಜಾಗದ ಹಕ್ಕುದಾರಿಕೆಗಾಗಿ ವಕೀಲ ಈರಣ್ಣ ಅವರನ್ನು ಕೊಲೆ ಮಾಡಲಾಗಿದೆ ಎನ್ನಲಾಗಿದೆ.

ಇಂತಹ ಘಟನೆಗಳನ್ನು ಹೀಗೆಯೇ ಬಿಟ್ಟರೆ ಮುಂದಿನ 20 ವರ್ಷಗಳ ನಂತರ ಸಿವಿಲ್ ವ್ಯಾಜ್ಯಗಳು ಕೋರ್ಟ್‌ಗೆ ದಾಖಲಾಗುವ ಬಗ್ಗೆಯೇ ಅನುಮಾನಗಳನ್ನು ಹುಟ್ಟಿಸುತ್ತದೆ. ಇಂತಹ ಹೇಯ ಕೃತ್ಯಗಳು ನಿಜಕ್ಕೂ ವ್ಯವಸ್ಥೆಗೆ ಒದಗಿರುವ ಅಪಾಯ‘ ಎಂದು ನ್ಯಾಯಪೀಠ ಹೇಳಿತು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

AUTOMOTIVE

Four Wheelers Selling

Benz

SINGLE OWNER DOCTORS CAR 9722 KMS ONLY IMMACULATE CONDITION GLA 200 SUV 200D BENZ REGISTRATION 2019. BROKERS EXCUSE. GENUINE BUYERS ONLY CONTACT: 9342819739.

BUSINESS

Business to Business

Services

PLASTIC JERRY_CANS & CONTAINERS AVAILABLE from 50ML to 10LITER Containers/CANS for Packing Phenyl, Pharmaceuticals Products & Chemicals. BRC-IOP Certified 5LITER Can Virgin Plastic 23.50 Per Piece. Screen Printing on Can (Facility Available) Contact: M/S.Blow Moulders India,Magadi Road Banglalore-560091 Mr.Anjan 9900708057 Mr.Bharat 9845037887

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

CONNECT ಕ್ಲಾಸಿಫೈಡ್ಸ್

Grand Flea Market Presents
ಇಂಡಿಯನ್ ಆರ್ಟಿಸನ್ ಬಜಾರ್
Indian Artisan Bazaar
Arts, Crafts, Handlooms & Lifestyle Exhibition
Exclusively for Christmas & New Year 2024

Date: 8th December 2023 to 17th December 2023
10 Days Exhibition
Timings: 11 am to 7 pm
Karnataka Chitrakala Parishath
Kumara Krupa Road, Bengaluru

Karaoke Live Performance | 16th Dec 2023 5.00 PM - 7.00 PM
Fire Show Live Performance | 17th Dec 2023 5.30 PM - 6.30 PM

Grand Flea Market
10 DAYS EXHIBITION | 100+ STALLS | Live PERFORMANCE | Entry FREE
For Details Contact: 6364685716 / 9036658774

PERSONAL

Change of Name

CHANGE OF NAME
I, **KANNAN SUNDARAVELU,** Jawahar Navodaya Vidyalaya, Bagaluru, Bengaluru- 562149, have changed my name to **KANNAN SUNDARAVEL** vide affidavit dt:04-12-2023, before Notary Prakasha C, Bangalore. Henceforth I shall be called **KANNAN SUNDARAVEL** only.

I,GURAYYA VEERAYYA Hiremath S/o Late Veerayya Hiremath R/a No.265(12) 53'E'Cross,17th'D'Main Road,Rajajinagar 3rd Block,Bengaluru-560 010 have changed my name from GURAYYA VEERAYYA NIMBALAGUNDI to GURAYYA VEERAYYA HIREMATH vide affidavit dated 11-12-2023 Sworn before Notary K.P.Ramesh,Bangalore.

CHANGE OF NAME
I, **ROSHITHA BAI O.T,** W/o V.Karna, R/at No. 44/1, 1st Main, Sriramnagar, Geleyarabalaga, Mahalakshmipuram, Bangalore-86, have changed my name to **ROSHITHA O.T.** vide affidavit dt:09-12-2023, before Notary D.G.Shanthappa, Bangalore. Henceforth I shall be called **ROSHITHA O.T.** only.

WE, S. Madhukar and Geetha. G, R/o. #699, 1st Main Road, 2nd Cross, Kamalanagar, Basaveshwara Nagar, Bangalore-79, have changed our son's name from NISCHAY to NISHVIK. M affidavit dated 11/12/2023 notary L. Gopalakrishna Bangalore.

CHANGE OF NAME
I, **GANESH AALE,** R/at No. 70, Chilani Goan, Salani Gaon, Assam-784101, have changed my name to **GANESH THAPA** vide affidavit dt:11-12-2023, before Notary S.I. Balaguru, Bangalore. Henceforth I shall be called **GANESH THAPA** only.

I,GEETA GURAYYA Hiremath W/o Gurayya Veerayya Hiremath R/a No.265(12) 53'E'Cross,17th'D'Main Road,Rajajinagar 3rd Block,Bengaluru-560 010 have changed my name from GEETA GURAYYA NIMBALAGUNDI to GEETA GURAYYA HIREMATH vide affidavit dated 11-12-2023 Sworn before Notary K.P.Ramesh,Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds
More value, more impact
ಪ್ರಜಾವಾಣಿ
JOB HUNT
JOB
Get your HIRING NEEDS answered
Get the right people for your company...Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಕರ್ನಾಟಕ ಸರ್ಕಾರ
ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ
ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಆರ್.ವಿ.ಕಾಲೇಜ್ ಅಂಚೆ, ಮೈಸೂರು ರಸ್ತೆ, ಬೆಂಗಳೂರು–560059 ಫೋನ್ : 080–28484515/080–28484518

ಅಧಿಸೂಚನೆ ಸಂಖ್ಯೆ: ಡಿಪಿಎಸ್27ಪಿಯುಆರ್(ಬಿ)2023–24/ಪಿವಿಸಿ ದಿನಾಂಕ: 08–12–2023

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ ಅಲ್ಪಾವಧಿ ಟೆಂಡರ್
(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಪಿವಿಸಿ ಜ್ಯಾಕೆಟ್ಸ್ ಫಾರ್ ಡೈರೀಸ್‌ಗಳ ಸಂಗ್ರಹಣೆಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.12.50 ಲಕ್ಷಗಳು. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ: 16–12–2023. ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ನಿರ್ದೇಶಕರು

ವಾ.ಸಾ.ಸಂ.ಇ/ವಾಪ್ರ/2504/ಆಕಾರ್/2023–24

ರಾಮನಗರ ಜಿಲ್ಲಾ ಪಂಚಾಯತ್
ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ, ಬಿ.ಎಂ. ರಸ್ತೆ, ರಾಮನಗರ ಜಿಲ್ಲೆ, ರಾಮನಗರ
ದೂರವಾಣಿ: 080–27274655, ಇ–ಮೇಲ್: rnagarayss@gmail.com

ಸಂಖ್ಯೆ: ಸನಿ/ಯುಸಕ್ರೀಇ/ರಾಜಿ/ಬಿ.ಗ್ರ/2023–24 ದಿನಾಂಕ: 11–12–2023

ಅಲ್ಪಾವಧಿ ಟೆಂಡರ್ ಪ್ರಕಟಣೆ

2023–24ನೇ ಸಾಲಿನಲ್ಲಿ ಸಹಾಯಕ ನಿರ್ದೇಶಕರ ಕಛೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ರಾಮನಗರ ಜಿಲ್ಲೆ ಇವರಿಂದ **ಗ್ರಾಮ ಪಂಚಾಯತಿಗಳಲ್ಲಿ ಬಿಕನ್ ಗ್ರಂಥಾಲಯಗಳನ್ನು ಅಳವಡಿಸಲು** ಅಲ್ಪಾವಧಿ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದ್ದು, ಬಿಕನ್ ಗ್ರಂಥಾಲಯವನ್ನು ಅಳವಡಿಸಲು ಈ ಕಛೇರಿಯಲ್ಲಿ ಅರ್ಜಿಗಳನ್ನು ಪಡೆಯಬಹುದಾಗಿದೆ. ಟೆಂಡರ್ ಅರ್ಜಿಗಳನ್ನು **ದಿನಾಂಕ: 12–12–2023** ರಿಂದ 18–12–2023ರ ವರೆಗೆ ವಿತರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿ ದೂರವಾಣಿ ಸಂಖ್ಯೆ: 080–27274655 ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಸಹಾಯಕ ನಿರ್ದೇಶಕರು,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ,
ರಾಮನಗರ ಜಿಲ್ಲೆ

DIPR/CP/338/Manipal/2023-24

ನಗರಸಭೆ ಕಾರ್ಯಾಲಯ, ಕೋಲಾರ
ಸಂಖ್ಯೆ:ನಸಕೋ/ತಾಂತ್ರಿಕ/ಟೆಂಡರ್/ಸಿಆರ್/08/2023–24 ದಿನಾಂಕ:06.12.2023

ಟೆಂಡರ್ ಪ್ರಕಟಣೆ
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ–ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999–2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೋಲಾರ ನಗರಸಭೆ ವತಿಯಿಂದ ಸ್ವಚ್ಛಭಾರತ್ ಮಿಷನ್ 2.0 ಮತ್ತು ವಿವಿಧ ಯೋಜನೆಗಳಡಿ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಕಾಮಗಾರಿಗಳಿಗೆ, ಸರಕು ಮತ್ತು ಸೇವೆಗಳು ಸೇರಿದಂತೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಒಟ್ಟು 7 ಪ್ಯಾಕೇಜ್‌ಗಳಿಗೆ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು **ಪ್ಯಾಕೇಜ್ ಸಂಖ್ಯೆ:1 & 2 ಕ್ಕೆ ಕೊನೆಯ ದಿನಾಂಕ: 14.12.2023** ಹಾಗೂ **ಪ್ಯಾಕೇಜ್ ಸಂಖ್ಯೆ: 3,4,6,7 ಕ್ಕೆ ದಿನಾಂಕ: 22.12.2023 ಸಂಜೆ 17.30 ಗಂಟೆವರೆಗೆ** ಹಾಗೂ **ಪ್ಯಾಕೇಜ್ ಸಂಖ್ಯೆ: 05 ಕ್ಕೆ ಭಾಗವಹಿಸಲು ದಿನಾಂಕ: 18.12.2023** (ಬಿಡ್ ವಿವರಗಳಿಗೆ ಇ–ಆಕ್ಷನ್ ಟೆಂಡರ್‌ನಲ್ಲಿ ವೀಕ್ಷಿಸತಕ್ಕದ್ದು). (2) ಏಕಲಕೋಟೆ ಪದ್ಧತಿಯ **ಪ್ಯಾಕೇಜ್ ಸಂಖ್ಯೆ: 6** ರ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ: 26.12.2023 ರ ಬೆಳಗ್ಗೆ 11.00 ಗಂಟೆಗೆ.** (3) ದ್ವಿ ಲಕೋಟೆ ಪದ್ಧತಿಯ **ಪ್ಯಾಕೇಜ್ ಸಂಖ್ಯೆ: 1 ಮತ್ತು 2ರ** ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ: 16.12.2023, ಪ್ಯಾಕೇಜ್ ಸಂಖ್ಯೆ: 3,4,7 ಕ್ಕೆ ದಿನಾಂಕ: 26.12.2023 ರ ಬೆಳಗ್ಗೆ 11.00 ಗಂಟೆಗೆ** ಹಾಗೂ ಆರ್ಥಿಕ ಬಿಡ್‌ನ್ನು **ತೆರೆಯುವ ಪ್ಯಾಕೇಜ್ ಸಂಖ್ಯೆ: 1 & 2 ಕ್ಕೆ ದಿನಾಂಕ: 19.12.2023 ಮತ್ತು ಪ್ಯಾಕೇಜ್ ಸಂಖ್ಯೆ: 3,4,7 ಕ್ಕೆ ದಿನಾಂಕ: 28.12.2023 ರ ಬೆಳಗ್ಗೆ: 11.00 ಗಂಟೆಗೆ.** ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.

ಸಹಿ/–ಪೌರಾಯುಕ್ತರು, ನಗರಸಭೆ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:248/ಕೆಎಸ್‌ಎಂಸಿಎ/2023–24

PUBLIC NOTICE

My client proposes to purchase the residential property bearing Municipal No. 57, PID No. 92-1-57, measuring 5,175 square feet of site area together with a residential structure constructed thereon, situated at, Nandidurga Road, Benson Town Post, Bengaluru-560046, new Ward No. 62 Ramaswamypalya (old Ward No. 92 Jayamahal) (the "Property") from the joint owners, **(i) Ms. Anitha Abraham; (ii) Ms. Sunita George; and (iii) Ms. Vinita George** (collectively referred to as the **"Owners").** The Owners represent that they are the joint and absolute owners of the Property, having marketable, right, title and interest therein and that apart from them, there is no other person/s having any right or claim over the Property. The Owners further represent that they have not mortgaged, created any lien or encumbered the Property or parts thereof in any manner and that the Owners have not entered into any other agreement of sale/development agreement/memorandum of understanding/arrangement etc., with any person/s with regard to the said Property. Any person/s having objection/s or claims shall with documentary evidence lodge their objections/claims **within seven (7) days** from the date of this notice with the undersigned, failing which, my client shall proceed with the above-mentioned transaction.

SCHEDULE
Description of the Property

Sl. No.	Property No.	Extent	BOUNDARIES East	West	North	South
1	Municipal No. 57 bearing PID No. 92-1-57.	480.77 square meters i.e., 5,175 square feet	Property belonging to Mr S D Reuben	Nandidurga Road	Municipal drainage	Property of Col. Marcus and property of Major Loriya.

Ms. Savitha K.G., Advocate
The Estate, Level Four, 121 Dickenson Road, Bangalore 560 042
Place: Bengaluru Dated: 12.12.2023

ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ
ಮಾನವ ಬಾಹ್ಯಾಕಾಶ ಹಾರಾಟ ಕೇಂದ್ರ (ಹೆಚ್‌ಎಸ್‌ಎಫ್‌ಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ (ಸಿಎಂಜಿ), ಅಂತರಿಕ್ಷ ಭವನ,
ಬೆಂಗಳೂರು - 560 094. ದೂ: (080) 22172614/2613

ಇ–ಟೆಂಡರ್ ಪ್ರಕಟಣೆ

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರಿಂಗ್ ಮೂಲಕ ಆನ್‌ಲೈನ್ ಐಟಂ ದರದ ಟೆಂಡರುಗಳನ್ನು ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು ಮತ್ತು ಎನ್‌ಐಟಿ ಸಂ.	ದೇವನಹಳ್ಳಿ, ಬೆಂಗಳೂರು ಇಲ್ಲಿರುವ ಇಸಿಎಲ್‌ಎಸ್‌ಎಸ್ ಮತ್ತು ಇತರೆ ಸಂಬಂಧಪಟ್ಟ ಸೌಲಭ್ಯಗಳಿಗೆ 11/0.433ಕೆವಿ ಉಪಕೇಂದ್ರದ ಎಸ್‌ಐಟಿಸಿ (ವಿದ್ಯುತ್ ಕಾಮಗಾರಿ) ಹೆಚ್‌ಎಸ್‌ಎಫ್‌ಸಿ/ಸಿಎಂಜಿ/2(5)/ಇ/92/2023–24 ದಿನಾಂಕ: 11.12.2023
ಟೆಂಡರಿಗಿಟ್ಟಿರುವ ಅಂದಾಜು ಮೊತ್ತ	ರೂ.349.90 ಲಕ್ಷಗಳು
ಪೂರ್ಣಗೊಳಿಸುವ ಅವಧಿ	06 ತಿಂಗಳು
ಟೆಂಡರ್ ದಸ್ತಾವೇಜುಗಳನ್ನು ಡೌನ್ ಲೋಡ್ ಮಾಡಿಕೊಳ್ಳುವ ಅವಧಿ	12.12.2023 ರಂದು 11.00 ಗಂಟೆಯಿಂದ 25.12.2023 ರಂದು 23.30 ಗಂಟೆವರೆಗೆ
ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ ಮತ್ತು ಸಮಯ	28.12.2023 ರಂದು 11.00 ಗಂಟೆ ವರೆಗೆ
ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	28.12.2023 ರಂದು 11.30 ಗಂಟೆಗೆ
ಇಎಂಡಿ ಮೊತ್ತ	ರೂ. 6,99,800/-

ಟೆಂಡರ್ ವಿಜಾರ್ಡ್‌ನಲ್ಲಿ ನೋಂದಣಿ ಮಾಡಿಸಿ ಮತ್ತು ಟೆಂಡರ್ ಪ್ರಕ್ರಿಯಾ ಶುಲ್ಕ ಪಾವತಿ ಮಾಡಿ ಟೆಂಡರ್ ದಸ್ತಾವೇಜುಗಳನ್ನು ವೆಬ್‌ಸೈಟ್ **www.tenderwizard.com/ISRO** ಇಲ್ಲಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ವೆಂಡರ್ ನೋಂದಣಿಯ ಕ್ರಮಾವಳಿಗಳನ್ನು ಮೇಲೆ ತಿಳಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

ಆಸಕ್ತಿಯುಳ್ಳ ಟೆಂಡರುದಾರರು ವೆಬ್‌ಸೈಟ್ **www.isro.gov.in** ಇಲ್ಲಿ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ಪರಿವೀಕ್ಷಿಸಬಹುದು ಮತ್ತು ಹೆಚ್ಚಿನ ವಿವರಗಳಿಗಾಗಿ ಮತ್ತು ಟೆಂಡರ್ ದಸ್ತಾವೇಜುಗಳ ಖರೀದಿಗಾಗಿ **www.tenderwizard.com/ISRO** ಇಲ್ಲಿಗೆ ಭೇಟಿನೀಡಿ.

ಸಹಿ/- ಮುಖ್ಯಸ್ಥರು, ಸಿಎಂಡಿ, ಸಿಎಂಜಿ, ಹೆಚ್‌ಎಸ್‌ಎಫ್‌ಸಿ

ನಗರದ ಬಸವನಗುಡಿಯಲ್ಲಿ ಕಡೆ ಕಾರ್ತಿಕ ಸೋಮವಾರದಂದು ನಡೆಯುವ ಕಡಲೆಕಾಯಿ ಪರಿಷೆ ಅಂಗವಾಗಿ ಕೆಂಪಾಂಬುಧಿ ಕೆರೆಯಲ್ಲಿ ನಂದಿ ವಿಗ್ರಹ ಸಮೇತ ತೆಪ್ಪೋತ್ಸವ ನಡೆಯಿತು

–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್.

ಬಸವನಗುಡಿಯ ಮುಖ್ಯರಸ್ತೆ ಸುತ್ತಮುತ್ತ ಮಳಿಗೆಗಳ ಅಬ್ಬರ

ಪರಿಷೆ: ಸಂಭ್ರಮದ ಜನಜಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಂಕೇನಹಳ್ಳಿ ತನ್ನ ಪಾರಂಪರಿಕ 'ಕಡಲೆಕಾಯಿ ಪರಿಷೆಯ' ಆಚರಣೆಗಾಗಿ ಕಡೆಯ ಕಾರ್ತೀಕ ಸೋಮವಾರದಂದು ಸಿಂಗಾರಗೊಂಡಿತ್ತು. ದೊಡ್ಡ ಬಸವನಿಗೆ ವಿಶೇಷ ಅಲಂಕಾರದ ಜೊತೆಗೆ, ಕಡಲೆಕಾಯಿ ಅಭಿಷೇಕ, ತುಲಾಭಾರವೂ ನಡೆಯಿತು.

ಬಸವನಗುಡಿ ಮುಖ್ಯರಸ್ತೆ ಹಾಗೂ ಸುತ್ತಮುತ್ತಲಿನ ರಸ್ತೆಗಳಲ್ಲಿ 'ಕಡಲೆಕಾಯಿ ಪರಿಷೆಯ' ಸಂಭ್ರಮ ತುಂಬಿತ್ತು. ಶನಿವಾರದಿಂದಲೇ ಜಾತ್ರೆ ಸಡಗರ ಆರಂಭವಾಗಿತ್ತಾದರೂ, ಸೋಮವಾರ ಪರಿಷೆಗೆ ಅಧಿಕೃತ ಚಾಲನೆ ನೀಡಲಾಯಿತು. ಲೋಹದ ಬಸವನ ಮೂರ್ತಿಗೆ ಕಡಲೆಕಾಯಿಂದ ತುಲಾಭಾರ ಮಾಡುವ ಮೂಲಕ ಪರಿಷೆ ವಿದ್ಯುಕ್ತವಾಗಿ ಆರಂಭವಾಯಿತು. ಬೆಳಿಗ್ಗೆ ಆರಂಭವಾದ ಜನಜಾತ್ರೆ ಸಂಜೆಯಾಗುತ್ತಿದ್ದಂತೆ ಮತ್ತಷ್ಟು ರಂಗೇರಿತು.

ದೊಡ್ಡ ಬಸವಣ್ಣನೊಂದಿಗೆ ದೊಡ್ಡ ಗಣಪತಿ, ಕಾರಂಜಿ ಆಂಜನೇಯನ ದರ್ಶನ ಪಡೆದ ಜನರು ಜಾತ್ರೆಯ ಸೊಬಗನ್ನು ಅನುಭವಿಸಿದರು. ಕಾಲಿಡಲೂ ಸಾಧ್ಯವಿಲ್ಲದಂತಹ ಜನದಟ್ಟಣೆ ಬಸವನಗುಡಿ ಮುಖ್ಯ ರಸ್ತೆಯಲ್ಲಿ ಕಂಡುಬಂದಿತು.

ರಸ್ತೆಯ ಎರಡೂ ಬದಿಯ ಜೊತೆಗೆ ಮಧ್ಯಭಾಗದಲ್ಲೂ ಕಡಲೆಕಾಯಿಯನ್ನು ರಾಶಿರಾಶಿ ಹಾಕಿಕೊಂಡು ಮಾರಾಟ ಮಾಡಲಾಗುತ್ತಿತ್ತು. ಹಸಿ, ಒಣ, ಬೇಯಿಸಿದ, ಹುರಿದ ಕಡಲೆಕಾಯಿ ಸೇರು ಲೆಕ್ಕಾಚಾರದಲ್ಲಿ ₹30ರಿಂದ ₹60ರವರೆಗೂ ದರ ನಿಗದಿಯಾಗಿತ್ತು. ನಾಲ್ಕಾರು ಬಗೆಯ ಕಡಲೆಕಾಯಿಯ ಆಕರ್ಷಣೆಯ ಜತೆಗೆ ಬೇಲ್, ಬಜ್ಜಿ, ಮಸಾಲ ಹಪ್ಪಳ, ಆಲೂ ಟ್ವಿಸ್ಟರ್ ಸೇರಿದಂತೆ ವಿವಿಧ ಭಕ್ಷ್ಯಗಳು, ಆಟಿಕೆ, ಜಗಮಗಿಸುವ ಬೆಳಕಿನಲ್ಲಿ ಆಟದ ಮೋಜು ಇಲ್ಲಿತ್ತು.

ಬಸವನಗುಡಿ ಕಡಲೆಕಾಯಿ ಪರಿಷೆಯ ಉದ್ಘಾಟನೆಯಲ್ಲಿ ಮಾಜಿ ಮೇಯರ್ ಕಟ್ಟೆ ಸತ್ಯನಾರಾಯಣ, ಶಾಸಕರಾದ ಉದಯ್ ಬಿ. ಗರುಡಾಚಾರ್, ರವಿ ಸುಬ್ರಮಣ್ಯ, ಶರವಣ, ಸಂಸದ ತೇಜಸ್ವಿ ಸೂರ್ಯ ಭಾಗವಹಿಸಿದ್ದರು

–ಪ್ರಜಾವಾಣಿ ಚಿತ್ರ

'ಕಡಲೆಕಾಯಿ ಪರಿಷೆಗಿಂತ ಹಳ್ಳಿಯ ಜಾತ್ರೆಯ ಸೊಬಗು ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗುತ್ತಿದೆ. ಮೊದಲು ವಿವಿಧ ತಳಿಗಳ ಕಡಲೆಕಾಯಿಗಳನ್ನು ಸವಿಯಲು, ಖರೀದಿಸಲು ಪರಿಷೆಗೆ ಬರುತ್ತಿದ್ದವು. ಇದೀಗ ಜಾತ್ರೆ ಆಟಿಕೆಗಳ ನಡುವೆ ಕಡಲೆಕಾಯಿ ರಾಶಿ ಮರೆಯಾಗಿ ಹೋಗಿದೆ' ಎಂದು ಬಸವನಗುಡಿ ನಿವಾಸಿ ರಾಮಕೃಷ್ಣ ಬೇಸರಿಸಿದರು.

ಪ್ಲಾಸ್ಟಿಕ್ ಮುಕ್ತ: 'ಕಡಲೆಕಾಯಿ ಖರೀದಿಗೆ ಪ್ಲಾಸ್ಟಿಕ್ ಚೀಲ ಕೊಡುವುದಿಲ್ಲ' ಎಂದು ಮಾರಾಟಗಾರರು ಕಟ್ಟುನಿಟ್ಟಾಗಿ ಹೇಳುತ್ತಿದ್ದರು. ಅಕ್ಕಪಕ್ಕದಲ್ಲಿ ಬಟ್ಟೆ ಚೀಲಗಳನ್ನೂ ಮಾರಾಟ ಮಾಡಲಾಗುತ್ತಿತ್ತು. 'ಪ್ಲಾಸ್ಟಿಕ್ ಮುಕ್ತ ಕಡಲೆಕಾಯಿ ಪರಿಷೆ' ಎಂಬ ಫಲಕಗಳೂ ಇದ್ದವು.

'ಇದು ಪರಿಷೆಯಾಗಿ ಉಳಿದಿಲ್ಲ, ಜಾತ್ರೆಯಂತಾಗಿದೆ. ಜಾತ್ರೆ ಎಂದರೆ ಎಲ್ಲವೂ ಸಿಗುವ ತಾಣ. ಸೌಂದರ್ಯ ಸಾಧನಗಳು, ಅಡುಗೆ ಮನೆಗಳ ಸಾಮಗ್ರಿ, ಅಲಂಕಾರಿಕ ವಸ್ತುಗಳು ಸೇರಿದಂತೆ ಮನೆಗೆ ಬೇಕಾದ ಎಲ್ಲ ರೀತಿಯ ವಸ್ತುಗಳ ಮಾರಾಟವೂ ಇಲ್ಲಿದೆ. ಎಲ್ಲ ಧರ್ಮದವರೂ ಇಲ್ಲಿ ವ್ಯಾಪಾರಿಗಳಾಗಿದ್ದಾರೆ' ಎಂದು ಹನುಮಂತನಗರದ ಜಗನ್ನಾಥ್ ಅವರು ಹೇಳಿದರು.

ಲಕ್ಷಾಂತರ ವಹಿವಾಟು!

ಪರಿಷೆಯಲ್ಲಿ ಕಡಲೆಕಾಯಿ ಮಾರಾಟಕ್ಕೆ ಮಳಿಗೆ ಹಾಕಲು ಧಾರ್ಮಿಕ ಪರಿಷತ್‌ನ ಹರಾಜಿನಲ್ಲಿ ಪಾಲ್ಗೊಳ್ಳಬೇಕು. ಅಲ್ಲಿ ಹಣ ಪಾವತಿಸಿದ ಮೇಲೆ ಮಳಿಗೆಗೆ ಅವಕಾಶವಿದೆ. ಶುಕ್ರವಾರ ದಿಂದಲೇ ಸಾಕಷ್ಟು ಮಂದಿ ಮಳಿಗೆ ಹಾಕಿದ್ದರು.

'ಲಕ್ಷಾಂತರ ರೂಪಾಯಿಗಳ ವಹಿವಾಟು ಪರಿಷೆಯಲ್ಲಿ ನಡೆದಿದೆ' ಎಂದು ವ್ಯಾಪಾರಿ ನರಸಿಂಹನ್ ಹೇಳಿದರು. ಬಿಲ್ ಅಥವಾ ಲೆಕ್ಕಾಚಾರದ ವ್ಯಾಪಾರವಲ್ಲದ್ದರಿಂದ ಇಷ್ಟೇ ವಹಿವಾಟು ನಡೆದಿದೆ ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ ಎಂದರು.

ನಗರದ ಸುತ್ತಮುತ್ತಲಿನ ಜಿಲ್ಲೆ ಹಾಗೂ ರಾಜ್ಯಗಳಿಂದ ಕಡಲೆಕಾಯಿಯನ್ನು ತಂದು ಇಲ್ಲಿ ಮಾರಾಟ ಮಾಡಲಾಗುತ್ತಿದೆ. ರೈತರು ನೇರವಾಗಿ ಬಂದು ಮಾರಾಟ ಮಾಡುತ್ತಿರುವುದು ಕಂಡುಬರಲಿಲ್ಲ. ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಜಿಲ್ಲೆ ಸೇರಿದಂತೆ ತಮಿಳುನಾಡು, ಆಂಧ್ರಪ್ರದೇಶದಿಂದಲೂ ಕಡಲೆಕಾಯಿ ತಂದು ಮಾರಾಟ ಮಾಡಲಾಗುತ್ತಿದೆ.

ಮಾತೃಭಾಷೆ ಜತೆ ಇಂಗ್ಲಿಷ್ ಕಲಿಕೆಗೂ ಒತ್ತು

ವಿಧಾನ ಪರಿಷತ್: ರಾಜ್ಯ ಶಿಕ್ಷಣ ನೀತಿಯಲ್ಲಿ ಮಾತೃಭಾಷಾ ಶಿಕ್ಷಣಕ್ಕೆ ಆದ್ಯತೆ ನೀಡುವ ಜತೆಗೆ, ಇಂಗ್ಲಿಷ್ ಕಲಿಕೆಗೂ ಪ್ರಾಮುಖ್ಯತೆ ಇರಲಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಎನ್‌ಇಪಿ ಕುರಿತು ನಿಯಮ 330ರ ಅಡಿ ನಡೆದ ಮುಂದುವರಿದ ಚರ್ಚೆಯಲ್ಲಿ ಅವರು ಮಾತನಾಡಿದರು.

ಪೂರ್ವಸಿದ್ಧತೆ ಇಲ್ಲದೆ ತರಾತುರಿಯಲ್ಲಿ ಉನ್ನತ ಶಿಕ್ಷಣದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ತಂದಿದ್ದರಿಂದ ಸಾಕಷ್ಟು ಗೊಂದಲವಾಗಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದಲ್ಲಿ ಎನ್‌ಇಪಿ ಜಾರಿಯಾಗಿರಲಿಲ್ಲ. ಕೆಲ ಪಾಠಗಳನ್ನು ಬದಲಿಸಿದ್ದರಿಂದ ಸೃಷ್ಟಿಯಾಗಿದ್ದ ಗೊಂದಲ ನಿವಾರಿಸಲು ಹಳೆಯ ಪಾಠಗಳನ್ನೇ ಈ ಶೈಕ್ಷಣಿಕ ವರ್ಷಕ್ಕೂ ಮುಂದುವರಿಸಲಾಗಿದೆ. ರಾಜ್ಯ ಶಿಕ್ಷಣ ನೀತಿ ರೂಪುಗೊಂಡ ನಂತರ ಹೊಸ ಪಠ್ಯಚೌಕಟ್ಟು ಸಿದ್ಧವಾಗಲಿದೆ ಎಂದರು. ಎಸ್‌ಎಸ್‌ಎಲ್‌ಸಿ, ಪಿಯುಸಿಗೆ ಮೂರು ಪರೀಕ್ಷೆಗಳನ್ನು ನಡೆಸುವ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡ ಅವರು, ಇದರಿಂದ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.

ಕ್ಯಾಪಿಟಲ್ ಶಾಲೆಯ ಅಧ್ಯಕ್ಷ ರಮೇಶ್ ಅವರು ಶಾಲಾ ಮಕ್ಕಳಿಗೆ ಕ್ರೀಡಾಜ್ಯೋತಿ ನೀಡುವ ಮೂಲಕ ಕ್ರೀಡಾಕೂಟಕ್ಕೆ ಚಾಲನೆ ನೀಡಿದರು

'ದೇಶಿಯ ಕ್ರೀಡೆಗಳಿಗೆ ಒತ್ತು ಅಗತ್ಯ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೇಶಿಯ ಕ್ರೀಡೆಗಳಿಗೆ ಹೆಚ್ಚಿನ ಒತ್ತು ನೀಡಬೇಕು ಕ್ಯಾಪಿಟಲ್ ಶಾಲೆಯ ಅಧ್ಯಕ್ಷ ರಮೇಶ್ ಹೇಳಿದರು.

ಕೆ.ಆರ್.ಪುರದ ಎ. ನಾರಾಯಣಪುರದ ಕ್ಯಾಪಿಟಲ್ ಶಾಲೆಯ ವಾರ್ಷಿಕ ಕ್ರೀಡಾಕೂಟ ಉದ್ಘಾಟಿಸಿ ಮಾತನಾಡಿದರು.

ಕೊಕ್ಕೊ, ಕಬಡ್ಡಿ, ಕುಸ್ತಿ ಸೇರಿದಂತೆ ಹಲವು ದೇಶಿ ಕ್ರೀಡೆಗಳು ಮಕ್ಕಳ ಸದೃಢ ಆರೋಗ್ಯಕ್ಕೆ ಪೂರಕ. ಜೊತೆಗೆ ಆತ್ಮವಿಶ್ವಾಸವನ್ನು ಇಮ್ಮಡಿಗೊಳಿಸುತ್ತದೆ ಎಂದರು.

ಕಿರಿಯ ವಯಸ್ಸಿನಲ್ಲಿ ಮಾಡುವ ಸಾಧನೆಗಳು ಅವರ ವ್ಯಕ್ತಿತ್ವವನ್ನು ಸುಧಾರಿಸುತ್ತದೆ. ಅದು ಅವರ ಜೀವನದಲ್ಲಿ ಮತ್ತಷ್ಟು ಸಮಾಜಮುಖಿ ಕಾರ್ಯಗಳನ್ನು ನಿರ್ವಹಿಸಲು ಸಹಕಾರಿಯಾಗುತ್ತದೆ ಎಂದು ಪ್ರಾಂಶುಪಾಲ ಪ್ರಿಯವಾಸುದೇವನ್ ತಿಳಿಸಿದರು.

ಶಾಲೆಯ ನಿರ್ದೇಶಕಿ ಸುಷ್ಮಾ ರಮೇಶ್, ದೇಹಿಕ ಶಿಕ್ಷಕ ಕಿರಣ್ ಕುಮಾರ್ ಇದ್ದರು.

ಪ್ರಜಾವಾಣಿ @75
ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಕ್ಕೆ
8147623791
080 45557204
readerservicecell@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ಡಿಜಿ–ಐಜಿಪಿ ಮೂಲಕ ಸರ್ಕಾರಕ್ಕೆ ಪ್ರಸ್ತಾವ

ಸಿಐಡಿ, ಸಿಸಿಬಿಗೆ ಠಾಣೆ ಸ್ಥಾನಮಾನ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶೇಷ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಿಕೊಳ್ಳಲು ಸಿಐಡಿ ಹಾಗೂ ಸಿಸಿಬಿಗೆ 'ಪೊಲೀಸ್ ಠಾಣೆ' ಸ್ಥಾನಮಾನ ನೀಡುವಂತೆ ಕೋರಿ ರಾಜ್ಯ ಪೊಲೀಸ್ ಮಹಾನಿರ್ದೇಶಕರ(ಡಿಜಿ–ಐಜಿಪಿ) ಮೂಲಕ ರಾಜ್ಯ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ.

ಸರ್ಕಾರದ ಆದೇಶದಂತೆ ರಾಜ್ಯದ ಹಲವು ವಿಶೇಷ ಪ್ರಕರಣಗಳ ತನಿಖೆಯನ್ನು ಸಿಐಡಿ ನಡೆಸುತ್ತಿದೆ. ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಮಿಷನರ್ ಸೂಚನೆ ಮೇರೆಗೆ ವಿಶೇಷ ಪ್ರಕರಣಗಳ ಹೊಣೆಯನ್ನು ಸಿಸಿಬಿಗೆ ವಹಿಸಲಾಗುತ್ತಿದೆ. ಆದರೆ, ಎರಡೂ ತನಿಖಾ ಸಂಸ್ಥೆಗಳಿಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಳ್ಳುವ ಪೊಲೀಸ್ ಠಾಣೆ ಸ್ಥಾನಮಾನದ ಅವಕಾಶ ಸದ್ಯಕ್ಕಿಲ್ಲ.

'ರಾಜ್ಯ ಸರ್ಕಾರ ವಿಶೇಷ ಪ್ರಕರಣವೆಂದು ಪರಿಗಣಿಸುವ ಹಾಗೂ ಹಿರಿಯ ಅಧಿಕಾರಿಗಳ ನಿರ್ದೇಶನ ಮೇರೆಗೆ ಕೈಗೆತ್ತಿಕೊಳ್ಳುವ ಪ್ರಕರಣಗಳನ್ನು ಮಾತ್ರ ಸಿಐಡಿ–ಸಿಸಿಬಿ ತನಿಖೆ ನಡೆಸುತ್ತಿವೆ. ವಿಶೇಷ ಅಧಿಸೂಚನೆ ಮೂಲಕ ಜಾರಿಗೆ ಬಂದಿರುವ ಎರಡೂ ತನಿಖಾ ಸಂಸ್ಥೆಗಳು ಹಲವು ನಿಯಮಾವಳಿಗಳಿಗೆ ಒಳಪಟ್ಟಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಎಫ್‌ಐಆರ್ ಅಧಿಕಾರಕ್ಕೆ ಕೋರಿಕೆ: 'ಸಿಐಡಿ ಹಾಗೂ ಸಿಸಿಬಿ ಪ್ರಕರಣದ ತನಿಖೆ ವೇಳೆ ಹಲವು ನೈಜ ಸಂಗತಿಗಳು ಪತ್ತೆಯಾಗುತ್ತವೆ. ಅಂಥ ಸಂದರ್ಭದಲ್ಲಿ ಬೇರೊಂದು ಠಾಣೆಯಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಿಸಬೇಕು. ಇದರಿಂದಾಗಿ, ತನಿಖೆ ಮಾಹಿತಿ ಸೋರಿಕೆಯಾಗುವ ಸಾಧ್ಯತೆ ಇರುತ್ತದೆ. ಇದೇ ಕಾರಣಕ್ಕೆ, ಸ್ವಯಂಪ್ರೇರಿತವಾಗಿ ಎಫ್‌ಐಆರ್ ದಾಖಲಿಸುವ ಠಾಣೆ ಅಧಿಕಾರ ನೀಡುವಂತೆ ಕೋರಿಕೆ ಸಲ್ಲಿಸಲಾಗಿದೆ' ಎಂದು ಅಧಿಕಾರಿ ಮಾಹಿತಿ ನೀಡಿದರು.

'ಸಿಐಡಿ ಹಾಗೂ ಸಿಸಿಬಿಗೆ ವರ್ಗಾವಣೆ ಆಗುವ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಮತ್ತೊಂದು ಎಫ್‌ಐಆರ್ ದಾಖಲಿಸುವ ಅಧಿಕಾರವನ್ನು ಮಾತ್ರ ನೀಡುವಂತೆ ಪ್ರಸ್ತಾವದಲ್ಲಿ ತಿಳಿಸಲಾಗಿದೆ. ಕೆಲವೇ ದಿನಗಳಲ್ಲಿ ಪ್ರಸ್ತಾವಕ್ಕೆ ಒಪ್ಪಿಗೆ ಸಿಗುವ ಸಾಧ್ಯತೆ ಇದೆ. ಅಧಿಸೂಚನೆ ಹೊರಬೀಳುತ್ತಿದ್ದಂತೆ ಸ್ವಯಂಪ್ರೇರಿತ ಪ್ರಕರಣ ದಾಖಲಿಸುವ ಅಧಿಕಾರ ಚಲಾಯಿಸಲಾಗುವುದು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

'ಸಾರ್ವಜನಿಕರ ದೂರಿಗಿಲ್ಲ ಎಫ್‌ಐಆರ್'

'ಸಾರ್ವಜನಿಕರು ನೇರವಾಗಿ ಸಿಐಡಿ ಹಾಗೂ ಸಿಸಿಬಿಗೆ ದೂರು ನೀಡಿದರೆ, ಅಂಥ ದೂರಿನಡಿ ಎಫ್‌ಐಆರ್ ದಾಖಲಿಸಲು ಸಾಧ್ಯವಿಲ್ಲ. ತನಿಖೆಯಲ್ಲಿರುವ ಪ್ರಕರಣಗಳಿಗೆ ಮಾತ್ರ ಎಫ್‌ಐಆರ್ ದಾಖಲಿಸಿ, ಮತ್ತೊಂದು ಆಯಾಮದಲ್ಲಿ ತನಿಖೆ ಮುಂದುವರಿಸಲಾಗುವುದು' ಎಂದು ಪೊಲೀಸ್ ಇಲಾಖೆ ಮೂಲಗಳು ಹೇಳಿವೆ.

'ಠಾಣೆ ಸ್ಥಾನಮಾನಕ್ಕೆ ಬೆಂಗಳೂರು ಸಿಸಿಬಿಯಿಂದ ಮಾತ್ರ ಪ್ರಸ್ತಾವ'

'ಪೊಲೀಸ್ ಠಾಣೆ ಸ್ಥಾನಮಾನ ಕೋರಿ ಬೆಂಗಳೂರು ಸಿಸಿಬಿಯಿಂದ ಮಾತ್ರ ಪ್ರಸ್ತಾವ ಸಲ್ಲಿಸಲಾಗಿದೆ. ಮಂಗಳೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ, ಮೈಸೂರು, ಬೆಳಗಾವಿ ಹಾಗೂ ಇತರೆಡೆಯ ಸಿಸಿಬಿ ಅಧಿಕಾರಿಗಳು ಪ್ರಸ್ತಾವ ಸಲ್ಲಿಸಿಲ್ಲ' ಎಂದು ಮೂಲಗಳು ಹೇಳಿವೆ.

ಕಾರ್ತಿಕ ದೀಪೋತ್ಸವ ಸಂಭ್ರಮ

1. ಮಲ್ಲೇಶ್ವರದ ದಕ್ಷಿಣ ಮುಖ ನಂದಿತೀರ್ಥದಲ್ಲಿ ಕಡೆ ಕಾರ್ತಿಕ ಸೋಮವಾರದಂದು ವಿಶೇಷ ದೀಪೋತ್ಸವ ನಡೆಯಿತು. 2. ಬನಶಂಕರಿ ದೇವಾಲಯದಲ್ಲಿರುವ ಮೃತ್ಯುಂಜಯ ಗುಡಿಯಲ್ಲಿನ ದೀಪಾಲಂಕಾರ ಗಮನಸೆಳೆಯಿತು. 3. ಹಲಸೂರು ಸೋಮೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪೂಜಾ ಕಾರ್ಯಗಳು ನಡೆದವು (ಚಿತ್ರ: ಎಸ್‌.ಕೆ.ದಿನೇಶ್). 4. ಮಲ್ಲೇಶ್ವರದಲ್ಲಿರುವ ಕಾಡು ಮಲ್ಲೇಶ್ವರ ದೇವಸ್ಥಾನದಲ್ಲಿ ದೀಪೋತ್ಸವ ನಡೆಯಿತು (ಚಿತ್ರ: ಬಿ.ಕೆ.ಜನಾರ್ದನ)

ಅಂಗನವಾಡಿ ಕಾರ್ಯಕರ್ತೆಯರು, ಬಿಸಿಯೂಟ ನೌಕರರ ಆಗ್ರಹ

‘ಸಮಾನ ವೇತನ ನೀಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಗನವಾಡಿ, ಬಿಸಿಯೂಟ, ಆಶಾ ಮತ್ತು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (ಎನ್‌ಆರ್‌ಎಲ್‌ಎಂ) ಸೇರಿದಂತೆ ಗುತ್ತಿಗೆ ಪದ್ಧತಿಯಲ್ಲಿ ಕಾರ್ಯನಿರ್ವಹಿಸುವ ಎಲ್ಲ ನೌಕರರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂದು ಸ್ಕೀಮ್ ನೌಕರರ ರಾಜ್ಯ ಸಮಾವೇಶದಲ್ಲಿ ಆಗ್ರಹಿಸಲಾಯಿತು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸೋಮವಾರ ಆಯೋಜಿಸಿದ್ದ ‘ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿರುವ ಕೇಂದ್ರ ಪುರಸ್ಕೃತ ಯೋಜನೆಗಳು–ನೌಕರರ ಪರಿಸ್ಥಿತಿಗಳು’ ಕುರಿತ ವಿಚಾರಸಂಕಿರಣದಲ್ಲಿ ‘ಸರ್ಕಾರಿ ನೌಕರರಿಗೆ ನೀಡುವ ಎಲ್ಲ ಸೌಲಭ್ಯಗಳನ್ನು ನೀಡಬೇಕೆಂದು 2024ರ ಜನವರಿ 20ರವರೆಗೆ ಗಡವು ನೀಡಲಾಯಿತು. ಬೇಡಿಕೆಗಳನ್ನು ಈಡೇರಿಸದಿದ್ದರೆ ಜನವರಿ 23ರಿಂದ ಅಹೋರಾತ್ರಿ ಧರಣಿ ಕೈಗೊಳ್ಳಲಾಗುವುದು’ ಎಂಬ ನಿರ್ಣಯ ಕೈಗೊಳ್ಳಲಾಯಿತು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, ‘ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟ ನೌಕರರು ಸೇರಿದಂತೆ ಹೊರಗುತ್ತಿಗೆಯಲ್ಲಿ ಕಾರ್ಯನಿರ್ವಹಿಸುವ ನೌಕರರಿಗೆ ಕನಿಷ್ಠ ವೇತನ ನೀಡಲಾಗುತ್ತಿದೆ. ಸರ್ಕಾರ ಮತ್ತು ಏಜೆಂಟರ ನಡುವೆ ಹೊರಗುತ್ತಿಗೆ ನೌಕರರು ಸಂಕಷ್ಟದಲ್ಲಿ ಜೀವನ ನಡೆಸುತ್ತಿದ್ದಾರೆ. ಆಹಾರ, ಆರೋಗ್ಯ ಮತ್ತು ಶಿಕ್ಷಣ, ಪ್ರಜಾಪ್ರಭುತ್ವದ ಬೆಳವಣಿಗೆಗೆ ಬೇಕಾಗಿರುವ ಮೂಲಭೂತ ಹಕ್ಕುಗಳಾಗಿದ್ದು, ಇವುಗಳನ್ನು ಪ್ರತಿಯೊಬ್ಬರಿಗೂ ಸಮಾನವಾಗಿ ಹಂಚಿಕೆ ಮಾಡಬೇಕು’ ಎಂದು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ ಸೋಮವಾರ ಆಯೋಜಿಸಿದ್ದ ‘ಆಹಾರ, ಆರೋಗ್ಯ, ಶಿಕ್ಷಣಕ್ಕಾಗಿರುವ ಕೇಂದ್ರ ಪುರಸ್ಕೃತ ಯೋಜನೆಗಳು– ನೌಕರರ ಪರಿಸ್ಥಿತಿಗಳು’ ಕುರಿತು ವಿಚಾರಸಂಕಿರಣದಲ್ಲಿ ಕಾಂತರಾಜು, ಎಸ್‌ಜಿ. ಸಿದ್ಧರಾಮಯ್ಯ, ಎಸ್‌. ವರಲಕ್ಷ್ಮಿ, ಎ.ಆರ್‌. ಸಿಂಧು ಮತ್ತು ಮಾಲಿನಿ ಮೇಸ್ತ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಸಿಐಟಿಯುನ ರಾಷ್ಟ್ರೀಯ ಕಾರ್ಯದರ್ಶಿ ಎ.ಆರ್. ಸಿಂಧು, ‘ಸಮಗ್ರ ಶಿಶು ಅಭಿವೃದ್ಧಿ ಯೋಜನೆ (ಐಸಿಡಿಎಸ್), ಬಿಸಿಯೂಟ ಯೋಜನೆ, ರಾಷ್ಟ್ರೀಯ ಆರೋಗ್ಯ ಅಭಿಯಾನ ಯೋಜನೆ, ನರೇಗಾ ಯೋಜನೆಗಳಿಗೆ ಕೇಂದ್ರದ ಬಜೆಟ್‌ನಲ್ಲಿ ಅನುದಾನವನ್ನು ಕಡಿತಗೊಳಿಸಲಾಗಿದೆ. ಇದರಿಂದ, ರಾಜ್ಯ ಸರ್ಕಾರಕ್ಕೆ ಹೆಚ್ಚಿನ ಹೊರೆಯಾಗಿದೆ. ರಾಜ್ಯದಿಂದ ದೊಡ್ಡ ಪ್ರಮಾಣದಲ್ಲಿ ಸಂಗ್ರಹವಾಗುವ ಜಿಎಸ್‌ಟಿ ಹಣದಲ್ಲಿ ರಾಜ್ಯದ ಪಾಲನ್ನು ಹಂಚಿಕೆ ಮಾಡುತ್ತಿಲ್ಲ’ ಎಂದು ದೂರಿದರು.

‘ದೇಶದಲ್ಲಿರುವ ಶ್ರೀಮಂತರ ಮೇಲೆ ಶೇ 2ರಷ್ಟು ವಿಶೇಷ ತೆರಿಗೆ ವಿಧಿಸಿದರೆ ಸುಮಾರು ₹ 38 ಲಕ್ಷ ಕೋಟಿ ಸಿಗಲಿದೆ. ಇದರಿಂದ ಎಲ್ಲ ಯೋಜನೆಗಳನ್ನು ಕಾಯಂಗೊಳಿಸಬಹುದು. ಜೊತೆಗೆ ದೇಶದ ಜಿಡಿಪಿ ಹೆಚ್ಚಳಕ್ಕೂ ಇದು ಸಹಾಯಕವಾಗಲಿದೆ’ ಎಂದರು.

ಸಿಐಟಿಯು ರಾಜ್ಯ ಸಮಿತಿ ಅಧ್ಯಕ್ಷೆ ಎಸ್. ವರಲಕ್ಷ್ಮಿ ಸಮಾವೇಶದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಬಿಸಿಯೂಟ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಮಾಲಿನಿ ಮೇಸ್ತ, ಐಸಿಪಿಎಸ್ ನೌಕರರ ಸಂಘದ ಕಾಂತರಾಜು ಭಾಗವಹಿಸಿದ್ದರು.

ಬೇಡಿಕೆಗಳು

- ಕೇಂದ್ರ ಪುರಸ್ಕೃತ ಎಲ್ಲ ಯೋಜನೆಗಳನ್ನು ಕಾಯಂಗೊಳಿಸಿ ಅನುದಾನ ಹೆಚ್ಚಿಸಬೇಕು.
- ಕೇಂದ್ರ, ರಾಜ್ಯದ ವೇತನ ಆಯೋಗದಲ್ಲಿ ಯೋಜನಾ ಕಾರ್ಮಿಕರಿಗೆ ಹುದ್ದೆಯ ಪ್ರಕಾರ ಪ್ರತ್ಯೇಕ ವೃಂದ ರಚಿಸಿ ಬಲಗೊಳಿಸಬೇಕು.
- ರಾಜ್ಯದಲ್ಲಿ ಹುದ್ದೆಗಳ ಭರ್ತಿಯಲ್ಲಿ ಸಂದರ್ಭದಲ್ಲಿ ಶೇ 75ರಷ್ಟು ಮೀಸಲಾತಿಯನ್ನು ಈ ನೌಕರರಿಗೆ ನೀಡಬೇಕು.

ಸರ್ಕಾರದ ಬಿಗಿಪಟ್ಟು: ಪ್ರತಿಪಕ್ಷಗಳ ಇಕ್ಕಟ್ಟು

ಪ್ರಜಾವಾಣಿ ವಾರ್ತೆ

ವಿಧಾನಸಭೆ: ವಸತಿ ಸಚಿವ ಜಮೀರ್ ಅಹಮದ್ ಖಾನ್ ಅವರ ರಾಜೀನಾಮೆ ಪಡೆದೇ ಸದನದಿಂದ ಹೊರನಡೆಯುತ್ತೇವೆ ಎಂಬ ಉಮೇದಿನಿಂದ ಬಂದಿದ್ದ ಬಿಜೆಪಿ, ಜೆಡಿಎಸ್ ಸದಸ್ಯರು, ಸರ್ಕಾರದ ಬಿಗಿಪಟ್ಟಿನಿಂದಾಗಿ ಇಕ್ಕಟ್ಟಿಗೆ ಸಿಲುಕಿದ ಪ್ರಸಂಗಕ್ಕೆ ಸೋಮವಾರದ ಕಲಾಪ ಸಾಕ್ಷಿಯಾಯಿತು.

ಕಳೆದ ವಾರ ‘ಸಭಾತ್ಯಾಗ’ದ ನಿರ್ಣಯದಿಂದ ಪಕ್ಷದ ಆಂತರಿಕ ಸಂಘರ್ಷ ಬಯಲಿಗೆ ಬಂದು, ಬಿಜೆಪಿ ನಾಯಕತ್ವ ಮುಜುಗರ ಅನುಭವಿಸಿತ್ತು. ಅದನ್ನು ಮರೆಸಿ, ಪ್ರತಿಪಕ್ಷದ ವೈಭವವನ್ನು ಮೆರೆಸಲು ಮುಂದಾದಂತಿದ್ದ ಸದಸ್ಯರು ಮಧ್ಯಾಹ್ನದ ಹೊತ್ತಿಗೆ ಹೈರಾಣಾದರು.

ಕಲಾಪದಲ್ಲಿ ವಿಷಯ ಪ್ರಸ್ತಾಪಿಸಲು ನೋಟಿಸ್(ಸೂಚನಾ ಪತ್ರ) ನೀಡದೇ, ಏಕಾಏಕಿ ಪ್ರಸ್ತಾಪಿಸಲು ಮುಂದಾದ ಪ್ರತಿಪಕ್ಷದ ಪ್ರಮಾದವನ್ನೇ ಮುಂದಿಟ್ಟ ಸರ್ಕಾರ, ‘ಮೊದಲು ನೋಟಿಸ್ ಕೊಡಿ’ ಎಂದು ಪಟ್ಟು ಹಿಡಿಯಿತು. ‘ಸಚಿವ ಜಮೀರ್ ರಾಜೀನಾಮೆ ನೀಡಬೇಕು, ಇಲ್ಲವೇ ವಜಾ ಮಾಡಬೇಕು’ ಎಂದು ಹಟಕ್ಕೆ ಕುಳಿತ ವಿರೋಧ ಪಕ್ಷದ ನಾಯಕ ಆರ್. ಅಶೋಕ, ತಮ್ಮ ಸದಸ್ಯರನ್ನು ಸಭಾಧ್ಯಕ್ಷರ ಪೀಠದ ಎದುರು ದೂಡಿದರು. ಜೆಡಿಎಸ್ ಸದಸ್ಯರು ಜತೆಯಾದರು. ಈ ಹೊತ್ತಿನಲ್ಲಿ, ಆಡಳಿತ–ವಿರೋಧ ಪಕ್ಷಗಳ ಮಧ್ಯೆ ವಾಕ್ಸಮರ ನಡೆಯಿತು.

ಉತ್ತರ ಕರ್ನಾಟಕದ ಚರ್ಚೆ ಮತ್ತು ಬರದ ಮೇಲಿನ ಚರ್ಚೆಗೆ ಸರ್ಕಾರದ ಉತ್ತರ ಕೇಳಲು ಆಸಕ್ತಿ ಇಲ್ಲ ಎಂದು ಪ್ರತಿಪಕ್ಷ ಸದಸ್ಯರನ್ನು ಹಂಗಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವರಾದ ಎಚ್.ಕೆ. ಪಾಟೀಲ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ ಮೊದಲಾದವರು, ಬಿಜೆಪಿಯನ್ನು ಕಟ್ಟಿಹಾಕಿದರು.

ವಿರೋಧ ಪಕ್ಷದ ಸದಸ್ಯರ ಘೋಷಣೆಗಳ ಅಬ್ಬರದ ಮಧ್ಯೆಯೇ ಸಭಾಧ್ಯಕ್ಷ ಯು.ಟಿ. ಖಾದರ್ ಅವರು, ಪ್ರಶ್ನೋತ್ತರ ಮುಗಿಸಿದರು. ಜತೆಗೆ, ಐದು ಮಸೂದೆಗಳ ಅಂಗೀಕಾರ, ಆರು ಮಸೂದೆಗಳ ಮಂಡನೆ ಮಾಡಿಸಿದರು. ಮಧ್ಯಾಹ್ನದ ಭೋಜನ ವಿರಾಮಕ್ಕೂ ಅವಕಾಶ ಕೊಡದ ವಾತಾವರಣ ನಿರ್ಮಾಣ ಮಾಡಿ ಸಭಾಧ್ಯಕ್ಷರು, ವಿರೋಧ ಪಕ್ಷದ ಸದಸ್ಯರನ್ನು ಕಂಗೆಡಿಸಿದರು. ಮತ್ತೆ ಭೋಜನ ವಿರಾಮಕ್ಕೆ ಅವಕಾಶವನ್ನೂ ಕೊಟ್ಟರು.

ಮತ್ತೆ ಕಲಾಪ ಆರಂಭವಾದಾಗ, ಬರದ ಮೇಲಿನ ಚರ್ಚೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ ನೀಡಲು ಮುಂದಾದಾಗ, ವಿರೋಧಿ ಸದಸ್ಯರು ಮತ್ತೆ ಆರ್ಭಟ ಮುಂದುವರಿಸಿದರು. ಅದನ್ನು ಲೆಕ್ಕಿಸದೇ ಸಚಿವರು ಉತ್ತರ ನೀಡತೊಡಗಿದಾಗ ಬಿಜೆಪಿ, ಜೆಡಿಎಸ್‌ನ ಬಹುತೇಕ ಸದಸ್ಯರು ಮೌನಕ್ಕೆ ಶರಣರಾದರು. ಕೆಲವು ಸದಸ್ಯರು ಹೊರ ನಡೆದರು. ಮತ್ತೆ ಕೆಲವರು, ಸಭಾಧ್ಯಕ್ಷರ ಪೀಠದ ಎದುರಿನ ನೆಲದ ಮೇಲೆ ಕುಳಿತರು. ಮಧ್ಯೆ ಮಧ್ಯೆ ಘೋಷಣೆಗಳನ್ನು ಕೂಗುವುದು ಬಿಟ್ಟರೆ, ಸುಗಮವಾಗಿ ಕಲಾಪ ನಡೆಯಿತು.

ಗಮನ ಸೆಳೆಯುವ ಸೂಚನೆ, ಸಾರ್ವಜನಿಕ ಮಹತ್ವದ ಜರೂರು ವಿಷಯಗಳ ಮೇಲಿನ ಚರ್ಚೆ ಮತ್ತು ಸರ್ಕಾರದ ಉತ್ತರದ ಕಲಾಪ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಸಮ್ಮುಖದಲ್ಲಿ ನಡೆಯಿತು.

ಸಂಜೆ 7ಕ್ಕೆ ಸದನಕ್ಕೆ ಬಂದ ಸಭಾಧ್ಯಕ್ಷ ಖಾದರ್, ‘ವಿರೋಧ ಪಕ್ಷದ ಸದಸ್ಯರು ಇಲ್ಲಿಯವರೆಗೆ ಸಹಕಾರ ಕೊಟ್ಟಿದ್ದೀರಿ. ನಾಳೆಯೂ ಹೀಗೆಯೇ ಕೊಡಿ’ ಎಂದರು.

ಇದರಿಂದ ಸಿಟ್ಟಿಗೆದ್ದಂತಾದ ಆರ್. ಅಶೋಕ, ‘ನಮಗೆ ಅವಮಾನ ಮಾಡಿದ್ದೀರಿ. ನೀವು ಮಾತ್ರ ಊಟ, ತಿಂಡಿ ಎಲ್ಲವನ್ನೂ ಮುಗಿಸಿಕೊಂಡು ಬಂದಿರಿ. ಮಧ್ಯರಾತ್ರಿ 1 ಗಂಟೆಯವರೆಗೂ ಮುಂದುವರಿಸಿ. ನಾವು ಸಿದ್ಧ ಎಂದು ಗುಟುರು ಹಾಕಿದರು’. ಮಧ್ಯಾಹ್ನದವರೆಗಿನ ಅಬ್ಬರ, ಬಳಿಕ ಸಪ್ಪೆಯಾಗಿತ್ತು.

ಚರ್ಚೆಗೆ ಮಂಗಳವಾರ ಅವಕಾಶ ಕೊಡುವುದಾಗಿ ಹೇಳಿದ ಸಭಾಧ್ಯಕ್ಷರು, ಕಲಾಪವನ್ನು ಮುಂದೂಡಿದರು.

ಸೈಕ್ಲೋಥಾನ್ ಮೂಲಕ ಜಾಗೃತಿ

‘40 ಸೆಕೆಂಡ್‌ಗೆ ಒಬ್ಬರಿಗೆ ಪಾರ್ಶ್ವವಾಯು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇಶದಲ್ಲಿ ಪ್ರತಿ 40 ಸೆಕೆಂಡ್‌ಗೆ ಒಬ್ಬರು ಪಾರ್ಶ್ವವಾಯು ಸಮಸ್ಯೆಗೆ ಒಳಗಾಗುತ್ತಿದ್ದಾರೆ. ವಾರ್ಷಿಕ ಸುಮಾರು 1.85 ಲಕ್ಷ ಪಾರ್ಶ್ವವಾಯು ಪ್ರಕರಣಗಳು ವರದಿಯಾಗುತ್ತಿವೆ’ ಎಂದು ಫೋರ್ಟಿಸ್ ಆಸ್ಪತ್ರೆಯ ನರವಿಜ್ಞಾನ ವಿಭಾಗದ ನಿರ್ದೇಶಕ ಡಾ. ಗುರುಪ್ರಸಾದ್ ಹೊಸೂರಕರ್ ಕಳವಳ ವ್ಯಕ್ತಪಡಿಸಿದರು.

ಪಾರ್ಶ್ವವಾಯು ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಲು ಬನ್ನೇರುಘಟ್ಟದ ಫೋರ್ಟಿಸ್ ಆಸ್ಪತ್ರೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಸೈಕ್ಲೋಥಾನ್‌ನಲ್ಲಿ ಭಾಗವಹಿಸಿ, ಮಾತನಾಡಿದರು.

ಫೋರ್ಟಿಸ್ ಆಸ್ಪತ್ರೆ ಸಿಬ್ಬಂದಿ ಸೈಕ್ಲೋಥಾನ್ ಮೂಲಕ ಪಾರ್ಶ್ವವಾಯು ಸಮಸ್ಯೆ ಬಗ್ಗೆ ಜಾಗೃತಿ ಮೂಡಿಸಿದರು

‘ಜೀವಕ್ಕೆ ಅಪಾಯವನ್ನು ತಂದೊಡ್ಡುವ ಪಾರ್ಶ್ವವಾಯು ಸಮಸ್ಯೆ ಬಗ್ಗೆ ಪ್ರತಿಯೊಬ್ಬರೂ ಜಾಗೃತರಾಗಿ ಇರಬೇಕು. ಈ ಸಮಸ್ಯೆಯು ಅಧಿಕ ರಕ್ತದೊತ್ತಡದಂತಹ ಸಮಸ್ಯೆ ಇರುವವರಿಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಧೂಮಪಾನ ಮತ್ತು ಮದ್ಯಪಾನವನ್ನು ತ್ಯಜಿಸುವುದು, ಆರೋಗ್ಯಕರ ಆಹಾರ ಸೇವನೆ, ನಿಯಮಿತ ದೈಹಿಕ ಚಟುವಟಿಕೆ, ಒತ್ತಡ ನಿರ್ವಹಣೆ ಸೇರಿ ವಿವಿಧ ಮುನ್ನೆಚ್ಚರಿಕೆ ಕ್ರಮಗಳಿಂದ ಪಾರ್ಶ್ವವಾಯು ಸಮಸ್ಯೆ ತಡೆಯಬಹುದು’ ಎಂದು ಹೇಳಿದರು.

ಹೃದಯ ಶಸ್ತ್ರಚಿಕಿತ್ಸಕ ಡಾ. ವಿವೇಕ್ ಜವಳಿ, ‘ಹೃದಯಾಘಾತದಂತೆ ಪಾರ್ಶ್ವವಾಯು ಸಮಸ್ಯೆಗೂ ತುರ್ತಾಗಿ ಚಿಕಿತ್ಸೆ ಒದಗಿಸಬೇಕು. ನಿಗದಿತ ಅವಧಿಯಲ್ಲಿ ಚಿಕಿತ್ಸೆ ನೀಡದಿದ್ದರೆ ಅಂಗವಿಕಲರಾಗುವ ಸಾಧ್ಯತೆ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಪಾರ್ಶ್ವವಾಯು ಸಾಮಾನ್ಯವಾಗಿದ್ದು, ಜನರಿಗೆ ಈ ಸಮಸ್ಯೆ ಬಗ್ಗೆ ಅರಿವು ಮೂಡಬೇಕು’ ಎಂದು ತಿಳಿಸಿದರು.

ಓಡಿಹೋದ ಪ್ರೇಮಿಗಳು: ಮಹಿಳೆ ಬೆತ್ತಲೆಗೊಳಿಸಿ ಥಳಿತ

ಒಂದನೇ ಪುಟದಿಂದ...

'ಹೊಸ ವಂಟಮೂರಿಯ 24 ವರ್ಷದ ಯುವಕ ಮತ್ತು 22 ವರ್ಷದ ಯುವತಿ ಪ್ರೀತಿಸುತ್ತಿದ್ದರು. ಆದರೆ, ಇದಕ್ಕೆ ಒಪ್ಪದ ಯುವತಿ ಮನೆಯವರು ಬೇರೊಬ್ಬ ಯುವಕನೊಂದಿಗೆ ನಿಶ್ಚಿತಾರ್ಥ ಮಾಡಿದ್ದರು. ಸೋಮವಾರ (ಡಿಸೆಂಬರ್ 11) ಯುವತಿಗೆ 'ಯಾದಿ ಮೇ ಶಾದಿ' ಪದ್ಧತಿಯಲ್ಲಿ ಮದುವೆ ಮಾಡಲು ಸಿದ್ಧತೆ ನಡೆಸಿದ್ದರು. ಆದರೆ, ಭಾನುವಾರ ರಾತ್ರಿಯೇ ಯುವಕ ಮತ್ತು ಯುವತಿ ಮನೆ ಬಿಟ್ಟು ಓಡಿಹೋದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಘಟನೆಯಿಂದ ಸಿಟ್ಟಿಗೆದ್ದ ಯುವತಿ ಮನೆಯವರು, ಯುವಕನ ತಾಯಿಯನ್ನು ಹಿಗ್ಗಾಮುಗ್ಗಾ ಥಳಿಸಿದರು. ಬೆತ್ತಲೆ ಮಾಡಿ ಊರಿನ ಬೀದಿಯಲ್ಲಿ ಓಡಾಡಿಸಿದರು. ವಿದ್ಯುತ್ ಕಂಬಕ್ಕೆ ಹಗ್ಗದಿಂದ ಕಟ್ಟಿ ಹೊಡೆದರು. ಗ್ರಾಮದ ಹಲವರು ಸೇರಿದ್ದ ಯಾರೂ ಮಹಿಳೆಯ ರಕ್ಷಣೆಗೆ ಮುಂದೆ ಬರಲಿಲ್ಲ. ಮಹಿಳೆಯ ಮನೆಯನ್ನು ಹಾನಿಗೊಳಿಸಿ, ಕೆಲ ಸಾಮಗ್ರಿಗಳಿಗೆ ಬೆಂಕಿ ಹಚ್ಚಿದರು' ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದರು.

ವಿಷಯ ತಿಳಿದ ಕಾಕತಿ ಠಾಣೆಯ ಪೊಲೀಸರು ತಡರಾತ್ರಿ ಗ್ರಾಮಕ್ಕೆ ಬಂದು ಪರಿಸ್ಥಿತಿ ನಿಯಂತ್ರಿಸಿದರು. ಮಹಿಳೆಯನ್ನು ರಕ್ಷಿಸಿ, ಆಂಬುಲೆನ್ಸ್ ಮೂಲಕ ಜಿಲ್ಲಾಸ್ಪತ್ರೆಗೆ ದಾಖಲಿಸಿದರು. 'ಘಟನೆಯ ಮಾಹಿತಿ ಸಿಕ್ಕ ತಕ್ಷಣಕ್ಕೆ ಪೊಲೀಸರು ದೌಡಾಯಿಸಿದ್ದಾರೆ. ಹೆಚ್ಚಿನ ಅನಾಹುತ ತಪ್ಪಿಸಿದ್ದಾರೆ. ಯುವಕನ ಮನೆಯವರ ದೂರು ಮತ್ತು ವಿಡಿಯೊ ದೃಶ್ಯಾವಳಿಗಳ ಆಧಾರದಲ್ಲಿ 12 ಜನರ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗಿದೆ. ಇದರಲ್ಲಿ ಏಳು ಮಂದಿಯನ್ನು ಸೋಮವಾರ ಬೆಳಿಗ್ಗೆ ಬಂಧಿಸಲಾಗಿದ್ದು, ಅವರಲ್ಲಿ ನಾಲ್ವರು ಮಹಿಳೆಯರು ಮತ್ತು ಮೂವರು ಪುರುಷರು ಇದ್ದಾರೆ. ಐವರು ತಲೆಮರೆಸಿಕೊಂಡಿದ್ದಾರೆ' ಎಂದು ನಗರ ಪೊಲೀಸ್ ಕಮಿಷನರ್ ಎಸ್.ಎನ್.ಸಿದ್ರಾಮಪ್ಪ 'ಪ್ರಜಾವಾಣಿ'ಗೆ ತಿಳಿಸಿದರು.

'ಗ್ರಾಮದಲ್ಲಿ ಕೆಎಸ್‌ಆರ್‌ಪಿಯ ಒಂದು ತುಕಡಿಯನ್ನು ಭದ್ರತೆಗೆ ನಿಯೋಜಿಸಲಾಗಿದೆ. ಪ್ರಕರಣ ಭೇದಿಸಲು ಒಬ್ಬ ಡಿಎಸ್‌ಪಿ, ಇಬ್ಬರು ಸಬ್‌ಇನ್‌ಸ್ಪೆಕ್ಟರ್ ಸೇರಿ 35 ಪೊಲೀಸರನ್ನು ಒಳಗೊಂಡ ವಿಶೇಷ ತಂಡವನ್ನು ರಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಬೆಳಗಾವಿ ತಾಲ್ಲೂಕಿನ ಹೊಸ ವಂಟಮೂರಿಗೆ ಭೇಟಿ ನೀಡಿದ ಗೃಹ ಸಚಿವ ಜಿ.ಪರಮೇಶ್ವರ ಅವರಿಗೆ ಸಂತ್ರಸ್ತ ಮಹಿಳೆಯ ಅತ್ತೆ ಆರವ್ವ ಘಟನೆ ವಿವರಿಸಿದರು. ನಗರ ಪೊಲೀಸ್ ಕಮಿಷನರ್ ಎಸ್‌.ಎನ್.ಸಿದ್ರಾಮಪ್ಪ ಅವರೂ ಆಲಿಸಿದರು

ಆರೋಗ್ಯ ವಿಚಾರಿಸಿದ ಗೃಹ ಸಚಿವ

ಬೆಂಗಳೂರಿನಿಂದ ಸೋಮವಾರ ಸಾಂಬ್ರಾ ವಿಮಾನ ನಿಲ್ದಾಣಕ್ಕೆ ಬಂದ ಗೃಹ ಸಚಿವ ಜಿ.ಪರಮೇಶ್ವರ, ಜಿಲ್ಲಾಸ್ಪತ್ರೆಗೆ ತೆರಳಿ ಮಹಿಳೆಯ ಆರೋಗ್ಯ ವಿಚಾರಿಸಿದರು. ಧೈರ್ಯ ತುಂಬಿದರು. ವೈದ್ಯರಿಂದ ಮಾಹಿತಿ ಪಡೆದರು.

ನಂತರ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, 'ಇದು ದುರದೃಷ್ಟಕರ ಘಟನೆ. ಪ್ರೀತಿಸಿದ ಯುವಕ- ಯುವತಿ ಪಾಲಕರ ಎದುರು ಸಮಸ್ಯೆ ತಿಳಿಸಬೇಕಿತ್ತು. ಕುಟುಂಬದ ಹಿರಿಯರು ಅಥವಾ ಊರಿನ ಪ್ರಮುಖರು ಬಗೆಹರಿಸಬಹುದಿತ್ತು. ಪ್ರೇಮಿಗಳು ಪೊಲೀಸರ ಬಳಿ ಬಂದಿದ್ದರೆ ಅನಾಹುತ ತಪ್ಪಿಸಬಹುದಿತ್ತು. ಪ್ರಕರಣವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ' ಎಂದರು.

'ಜೀವಭಯವಿದೆ, ನಮ್ಮನ್ನು ಕಾಪಾಡಿ'

ಹೊಸ ವಂಟಮೂರಿ ಗ್ರಾಮಕ್ಕೆ ಭೇಟಿ ನೀಡಿದ ಜಿ.ಪರಮೇಶ್ವರ ಸ್ಥಳ ಪರಿಶೀಲಿಸಿದರು. ಮನೆ ಮುಂದೆ ಕುಳಿತು ರೋದಿಸುತ್ತಿದ್ದ ಯುವಕನ ಅಜ್ಜಿ ಆರವ್ವ ಅವರಿಗೆ ಧೈರ್ಯ ಹೇಳಿದರು. ಆಗ ಸಚಿವರ ಕಾಲಿಗೆ ಬಿದ್ದ ಅಜ್ಜಿ 'ನಮ್ಮನ್ನು ಕಾಪಾಡಿ' ಎಂದು ಬೇಡಿಕೊಂಡರು.

'ನಮಗೇನೂ ಗೊತ್ತಿಲ್ಲ, ಮೊಮ್ಮಗ ನಿನ್ನೆ ಮನೆಯಲ್ಲೇ ಮಲಗಿದ್ದ. ಯಾವಾಗ ಆ ಹುಡುಗಿ ಕರೆದೊಯ್ದ, ಯಾವಾಗ ಹೋದನೋ ಗೊತ್ತಿಲ್ಲ. ಆಕೆಯ ಮನೆಯವರು ಬಂದು ಏಕಾಏಕಿ ಗಲಾಟೆ ಶುರು ಮಾಡಿದರು. ನನ್ನನ್ನೂ ಹೊಡೆದರು. ನಮಗೆ ಜೀವ ಭಯ ಉಂಟಾಗಿದೆ. ನಮ್ಮನ್ನು ಕಾಪಾಡಿ' ಎಂದು ಆರವ್ವ ಕಣ್ಣೀರು ಹಾಕಿದರು.

ಓಡಿಹೋದ ಪ್ರೇಮಿಗಳಿಗೆ ಹುಡುಕಾಟ ನಡೆದಿದೆ. ಅವರ ರಕ್ಷಣೆಗೂ ಕ್ರಮ ವಹಿಸುತ್ತೇವೆ. ಇಬ್ಬರೂ ಒಂದೇ ಜಾತಿಗೆ ಸೇರಿದವರು. ಪರಿಸ್ಥಿತಿ ಹತೋಟಿಯಲ್ಲಿದೆ
ಎಸ್.ಎನ್.ಸಿದ್ರಾಮಪ್ಪ, ನಗರ ಪೊಲೀಸ್ ಕಮಿಷನರ್, ಬೆಳಗಾವಿ

ಮಾನವಕುಲ ತಲೆತಗ್ಗಿಸುವ ಘಟನೆ ಇದು. ನನ್ನ ತಾಲ್ಲೂಕಿನಲ್ಲಿ ಇಂಥ ಘಟನೆ ನಡೆದಿದ್ದು ನಿಜಕ್ಕೂ ಖೇದಕರ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು
ಲಕ್ಷ್ಮೀ ಹೆಬ್ಬಾಳಕರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ

ಜೆಡಿಎಸ್ ಇಬ್ರಾಹಿಂ ಬಣದ ರಾಷ್ಟ್ರೀಯ ಅಧ್ಯಕ್ಷ ಸಿ.ಕೆ ನಾಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ನ ಸಿ.ಎಂ. ಇಬ್ರಾಹಿಂ ಬಣದ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಕೇರಳದ ಸಿ.ಕೆ. ನಾಣು ಅವರನ್ನು ಆಯ್ಕೆ ಮಾಡಲಾಗಿದೆ.

ಸಿ.ಕೆ. ನಾಣು

ನಗರದ ಕಾಡುಗೊಂಡನಹಳ್ಳಿಯಲ್ಲಿ ಸೋಮವಾರ ನಡೆದ ಇಬ್ರಾಹಿಂ ಬಣದ ರಾಷ್ಟ್ರೀಯ ಸಭೆಯಲ್ಲಿ ನಾಣು ಅವರನ್ನು ನೂತನ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಜೆಡಿಎಸ್ ತೆಲಂಗಾಣ ರಾಜ್ಯ ಘಟಕದ ಅಧ್ಯಕ್ಷ ಸುರಿ ಅವರು, 'ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿ ನಾಣು ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ' ಎಂದು ಪ್ರಕಟಿಸಿದರು. ನಾಣು ಅವರು ಜೆಡಿಎಸ್ ಕೇರಳ ರಾಜ್ಯ ಘಟಕದ ಅಧ್ಯಕ್ಷರಾಗಿದ್ದರು.

'ನಮ್ಮದೇ ನೈಜ ಜೆಡಿಎಸ್'

ಸಿ.ಕೆ. ನಾಣು ಮಾತನಾಡಿ, 'ಹಿಂದಿನ ಸಭೆಗಳಲ್ಲಿ ಎಚ್‌.ಡಿ. ದೇವೇಗೌಡರೊಂದಿಗೆ ನಾವು ಇದ್ದೆವು. ಆದರೆ, ನನ್ನನ್ನು ಅವರು ಉಚ್ಚಾಟಿಸಿದ್ದಾರೆ. ಗಾಂಧೀಜಿಯವರ ಜಾತ್ಯತೀತ ಸಿದ್ಧಾಂತದ ಮೇಲೆ ನಮ್ಮ ಪಕ್ಷ ನಿಂತಿರುವುದು. ಅದಕ್ಕೆ ವಿರುದ್ಧವಾಗಿ ಇರುವವರ ಜತೆ ಸಖ್ಯ ಬೆಳೆಸುವುದು ಸರಿಯೇ ಎಂದು ಅವರನ್ನೇ ಕೇಳಲು ಬಯಸುತ್ತೇನೆ' ಎಂದರು.

'ಸಿದ್ಧಾಂತವನ್ನು ಬಲಿಕೊಟ್ಟು ಬಿಜೆಪಿ ಜತೆ ಮೈತ್ರಿಯ ನಿರ್ಧಾರ ಮಾಡಿರುವ ದೇವೇಗೌಡರ ನಡೆಯನ್ನು ಖಂಡಿಸುತ್ತೇವೆ. ಗಾಂಧೀಜಿಯವರ ಸಿದ್ಧಾಂತವನ್ನು ನಾವು ಬಿಟ್ಟಿಲ್ಲ. ಜಾತ್ಯತೀತ ಸಿದ್ಧಾಂತವೇ ನಮ್ಮ ಪಕ್ಷದ ಆತ್ಮ. ಈಗಾಗಿ ನಮ್ಮದೇ ನೈಜ ಜೆಡಿಎಸ್' ಎಂದು ಹೇಳಿದರು.

ಸಭೆಯಲ್ಲಿ ಮಾತನಾಡಿದ ಇಬ್ರಾಹಿಂ, 'ಸಿ.ಕೆ. ನಾಣು ಅವರನ್ನು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಗಿದೆ. ಈ ಕುರಿತು ನನ್ನ ಅಧಿಕಾರ ಇರುವ ಅರ್ಜಿಯನ್ನು ಆಗಲು, ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಮಂಡಳಿಯ ಸದಸ್ಯರ ಸರ್ವಾನುಮತದ ನಿರ್ಣಯದಂತೆ ನಾಣು ಅವರು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ' ಎಂದರು.

'ಗಾಂಧೀಜಿಯವರ ತತ್ವ, ಸಿದ್ಧಾಂತ ಮತ್ತು ಜಾತ್ಯತೀತ ಸಿದ್ಧಾಂತಗಳಲ್ಲಿ ಜೆಡಿಎಸ್ ನಂಬಿಕೆ ಇಟ್ಟಿದೆ. ಅದಕ್ಕೆ ಪೂರಕವಾಗಿ ಹೊಸ ಅಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ 50 ವರ್ಷ ಅಧಿಕಾರದಲ್ಲಿರಬಹುದು. ಆದರೆ, ಜಾತ್ಯತೀತ ಸಿದ್ಧಾಂತ ಸೂರ್ಯ ಮತ್ತು ಚಂದ್ರ ಇರುವವರೆಗೂ ಅಜರಾಮರವಾಗಿ ಇರಲಿದೆ' ಎಂದರು.

ಶೂದ್ರರು ಎಂದರೆ ವೇಶ್ಯೆಯರ ಮಕ್ಕಳು: ಭಗವಾನ್

ಮಂಡ್ಯ: 'ಮನುಸ್ಮೃತಿ ಪ್ರಕಾರ ಶೂದ್ರರು ಎಂದರೆ ಗುಲಾಮರು, ಸೂಳೆಯರ ಮಕ್ಕಳು. ದೇಶದಲ್ಲಿ ಬ್ರಾಹ್ಮಣರನ್ನು ಹೊರತುಪಡಿಸಿ ಉಳಿದೆಲ್ಲರೂ ಈ ವರ್ಗಕ್ಕೇ ಸೇರುತ್ತಾರೆ' ಎಂದು ಪ್ರೊ. ಕೆ.ಎಸ್. ಭಗವಾನ್ ಹೇಳಿದರು.

ಸೋಮವಾರ ಕರ್ನಾಟಕ ದಲಿತ ಸಂಘರ್ಷ ಸಮಿತಿಯು ಹಮ್ಮಿಕೊಂಡಿದ್ದ, 'ಸಾಮಾಜಿಕ ನ್ಯಾಯ ಜಾರಿಗಾಗಿ ಜನಾಗ್ರಹ ಸಮಾವೇಶ' ಉದ್ಘಾಟಿಸಿ, 'ಮನುಸ್ಮೃತಿಯು ಸಮಾಜದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರೆಂಬ ನಾಲ್ಕು ವರ್ಣಗಳನ್ನು ಗುರುತಿಸಿತ್ತು. ಅದರಲ್ಲಿ ಇವತ್ತು ಬ್ರಾಹ್ಮಣರು ಮತ್ತು ಶೂದ್ರರಷ್ಟೇ ಉಳಿದಿದ್ದಾರೆ. ಯಾರೆಲ್ಲ ಜನಿವಾರ ಹಾಕಿಕೊಳ್ಳುವುದಿಲ್ಲವೋ ಅವರೆಲ್ಲರೂ ಶೂದ್ರರೇ. ಬ್ರಾಹ್ಮಣ ಹೆಂಗಸರು ಜನಿವಾರ ಧರಿಸುವುದಿಲ್ಲ. ಹೀಗಾಗಿ ಅವರೂ ಶೂದ್ರರೇ. ಇದನ್ನು ಹೇಳಲು ಹೋದರೆ ನನ್ನನ್ನು ಕೊಂದೇ ಹಾಕುತ್ತಾರೆ' ಎಂದರು.

ಅಕ್ಕಿ ನಾಪತ್ತೆ ಪ್ರಕರಣ: ನಾಲ್ವರ ಸೆರೆ

ಶಹಾಪುರ (ಯಾದಗಿರಿ ಜಿಲ್ಲೆ): ತಾಲ್ಲೂಕು ಟಿಎಪಿಸಿಎಂಎಸ್‌ನ ಆಹಾರ ಧಾನ್ಯ ಉಗ್ರಾಣದಲ್ಲಿನ ₹2.6 ಕೋಟಿ ಮೌಲ್ಯದ 6 ಸಾವಿರ ಕ್ವಿಂಟಲ್ ಅಕ್ಕಿ ನಾಪತ್ತೆ ಪ್ರಕರಣಕ್ಕೆ ಸಂಬಂಧಿಸಿದಂತೆ ನಾಲ್ವರು ಆರೋಪಿಗಳನ್ನು ಶಹಾಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಟಿಎಪಿಸಿಎಂಎಸ್‌ನ ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಿವರಾಜ ಗುಂಡಪ್ಪ ಹಾಲಗೇರಾ, ಈಗಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಶಿವಪ್ಪ ಮಲ್ಲಪ್ಪ ಸುರಪುರ, ಅಬ್ದುಲ್ ನಬಿ ಮಹಿಮೂದ್ ಬೈರಿ ಶಹಾಪುರ, ಮಲ್ಲಣ್ಣಗೌಡ ವೀರಣ್ಣಗೌಡ ಕೊಳ್ಳೂರ ಬಂಧಿತರು.

ಆರೋಪ ಇದ್ದರೂ ಅಲೋಕ್‌ಗೆ ಸೇರ್ಪಡೆ

ಒಂದನೇ ಪುಟದಿಂದ...

2019ರ ಮಾರ್ಚ್ 25ರಂದು ನನ್ನ ವಿರುದ್ಧವೇ ಅಲೋಕ್ ಕುಮಾರ್ ಪ್ರಕರಣ ದಾಖಲಿಸಿದ್ದರು' ಎಂದು ಮಹಿಳೆ ನ್ಯಾಯಾಲಯದಲ್ಲಿ ಹೇಳಿಕೆ ದಾಖಲಿಸಿದ್ದಾರೆ.

■ **ಲಂಚಕ್ಕೆ ಬೇಡಿಕೆ:** ವೈಯಾಲಿಕಾವಲ್ ಠಾಣೆ ವ್ಯಾಪ್ತಿಯ ಬಾರ್ ಮತ್ತು ರೆಸ್ಟೋರೆಂಟ್‌ವೊಂದರಲ್ಲಿ 2015ರ ಮೇ 30ರಂದು ನಡೆದಿದ್ದ ಗಲಾಟೆ ಪ್ರಕರಣ ಇತ್ಯರ್ಥಪಡಿಸಲು ಪೊಲೀಸ್ ಅಧಿಕಾರಿಗಳ ಮೂಲಕ ₹1 ಕೋಟಿ ಲಂಚಕ್ಕೆ ಬೇಡಿಕೆ ಇರಿಸಿದ್ದ ಆರೋಪ ಅಲೋಕ್‌ಕುಮಾರ್ ಮೇಲಿತ್ತು. ಸಂತ್ರಸ್ತ ಮಲ್ಲಿಕಾರ್ಜುನ್ ಲೋಕಾಯುಕ್ತಕ್ಕೆ ದೂರು ನೀಡಿದ್ದರು. ತನಿಖೆ ನಡೆಸಿದ್ದ ಲೋಕಾಯುಕ್ತ ಪೊಲೀಸರು, ಬಿ-ರಿಪೋರ್ಟ್ ಸಲ್ಲಿಸಿದ್ದರು.

■ **ಫೋನ್ ಕದ್ದಾಲಿಕೆ:** 2019ರ ಆಗಸ್ಟ್ 20ರಂದು ಬೆಂಗಳೂರು ಪೊಲೀಸ್ ಕಮಿಷನರ್ ಅಲೋಕ್ ಕುಮಾರ್ ಅವರನ್ನು ವರ್ಗಾವಣೆ ಮಾಡಿ, ಅವರ ಜಾಗಕ್ಕೆ ಐಪಿಎಸ್ ಅಧಿಕಾರಿಯಾಗಿದ್ದ ಭಾಸ್ಕರ್ ರಾವ್ ಅವರನ್ನು ನಿಯೋಜಿಸಲಾಗಿತ್ತು. ಆಗಸ್ಟ್ 2ರಂದು ಮೊಬೈಲ್ ಸಂಭಾಷಣೆಯ ಆಡಿಯೊ ತುಣುಕುಗಳನ್ನು ಸುದ್ದಿ ವಾಹಿನಿ ಪ್ರಸಾರ ಮಾಡಿತ್ತು.

ಭಾಸ್ಕರ್ ರಾವ್ ಅವರು ಫೋನ್ ಕದ್ದಾಲಿಕೆ ಸಂಬಂಧ ದೂರು ನೀಡಿದ್ದರು. ನಂತರ, ಸಿಬಿಐ ತನಿಖೆ ಆರಂಭವಾಗಿತ್ತು. ಸಿಬಿಐ ಅಧಿಕಾರಿಗಳ ಮೂಲಕ ಅಲೋಕ್ ಕುಮಾರ್ ಫೋನ್ ಕದ್ದಾಲಿಕೆ ಮಾಡಿಸಿದ್ದರೆಂಬ ಆರೋಪವಿತ್ತು.

ಅಲೋಕ್ ಕುಮಾರ್ ವಿರುದ್ಧ ದಾಖಲಾಗಿದ್ದ ಪ್ರಕರಣದಲ್ಲಿ ಸಿಬಿಐ ಬಿ ರಿಪೋರ್ಟ್ ಸಲ್ಲಿಸಿತ್ತು. ಅದನ್ನು ಸಿಬಿಐ ವಿಶೇಷ ನ್ಯಾಯಾಲಯ ತಿರಸ್ಕರಿಸಿತ್ತು. ಪ್ರಕರಣ ಸಂಬಂಧ ತನಿಖೆ ಮುಂದುವರಿಸಲು ನ್ಯಾಯಾಲಯ ಸೂಚಿಸಿದ್ದು, ತನಿಖೆ ಪ್ರಗತಿಯಲ್ಲಿದೆ.

22ರಿಂದ ಛಾಯಾಗ್ರಹಣ ಕಾರ್ಯಾಗಾರ

ಬೆಂಗಳೂರು: ನೀಲಕಂಠೇಶ್ವರ ನಾಟ್ಯಸೇವಾ ಸಂಘದ (ನೀನಾಸಂ) ಸಹಯೋಗದಲ್ಲಿ ಸಾಗರ ಫೋಟೋಗ್ರಫಿಕ್ ಸೊಸೈಟಿಯು ಇದೇ 22ರಿಂದ 25ರವರೆಗೆ ಸಾಗರ ಸಮೀಪದ ಹೆಗ್ಗೋಡಿನಲ್ಲಿರುವ ನೀನಾಸಂ ಥಿಯೇಟರ್ ಇನ್‌ಸ್ಟಿಟ್ಯೂಟ್‌ನಲ್ಲಿ ರಾಜ್ಯಮಟ್ಟದ ಛಾಯಾಗ್ರಹಣ ಕಾರ್ಯಾಗಾರ ಹಮ್ಮಿಕೊಂಡಿದೆ. ಈ ಕಾರ್ಯಾಗಾರ ವಸತಿ ಒಳಗೊಂಡಿದೆ. ಮಹಿಳೆಯರಿಗೆ ಪ್ರತ್ಯೇಕ ಹಾಸ್ಟೆಲ್ ವ್ಯವಸ್ಥೆಯಿದೆ. ಮೊದಲು ಹೆಸರು ನೋಂದಾಯಿಸಿದವರಿಗೆ ಆದ್ಯತೆ. ಆಸಕ್ತರು ವಾಟ್ಸ್ ಆ್ಯಪ್ ಸಂ. 9448627878 ಅಥವಾ 9845931306ಕ್ಕೆ ಸಂಪರ್ಕಿಸಬಹುದು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ: ಹಿಸತೋನಿ/ಮ.ವಲಯ)/ಟೆಂಡರ್/01/2023–24 ದಿನಾಂಕ: 08–12–2023

ಅಲ್ಪಾವಧಿ ಟೆಂಡರ್ ಅಧಿಸೂಚನೆ (ಐಎಫ್‌ಟಿ) (ದ್ವಿ–ಲಕೋಟೆ ಪದ್ಧತಿ) (ಜಟಿಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ – ಕೆಡಬ್ಲ್ಯೂ1, ಕೆಡಬ್ಲ್ಯೂ2, ಕೆಡಬ್ಲ್ಯೂ3 & ಕೆಡಬ್ಲ್ಯೂ4)

ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಮಹದೇವಪುರ), (ಈ ದಾಖಲೆಗಳಲ್ಲಿ ಉದ್ಯೋಗದಾತ ಎಂದು ಉಲ್ಲೇಖಿಸಲಾಗಿದೆ) ಕೆಟಿಪಿಪಿ ನಿಯಮಗಳು 2000 ರ ಅನುಸಾರ ಕಾರ್ಮಿಕ ಇಲಾಖೆಯಲ್ಲಿ ನೋಂದಾಯಿಸಲಾಗಿರುವ ಅರ್ಹ ಮತ್ತು ಅನುಭವಿ ವ್ಯಕ್ತಿಗಳು / ಏಜೆನ್ಸಿಗಳು / ಸಂಸ್ಥೆಗಳಿಂದ (ಈ ದಾಖಲೆಗಳಲ್ಲಿ ಟೆಂಡರ್‌ದಾರರು ಎಂದು ಉಲ್ಲೇಖಿಸಲಾಗಿದೆ) ಇವರಿಂದ ಉದ್ಯಾನವನಗಳ ನಿರ್ವಹಣೆಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ,

ಕ್ರ. ಸಂ.	ಕಾಮಗಾರಿಯ ವಿವರಗಳು / ವರ್ಗ	ಅಂದಾಜು ಮೊತ್ತ (ರೂ.)	ಇಎಂಡಿ ಮೊತ್ತ (ರೂ.)
1	ವಾರ್ಡ್ ಸಂಖ್ಯೆ 86 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	32,80,729/-	65,615/-
2	ವಾರ್ಡ್ ಸಂಖ್ಯೆ 87 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	8,16,667/-	20,417/-
3	ವಾರ್ಡ್ ಸಂಖ್ಯೆ 88 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	22,57,333/-	45,147/-
4	ವಾರ್ಡ್ ಸಂಖ್ಯೆ 89 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಪ.ವರ್ಗ).	4,74,125/-	5,927/-
5	ವಾರ್ಡ್ ಸಂಖ್ಯೆ 90 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	18,87,500/-	47,188/-
6	ವಾರ್ಡ್ ಸಂಖ್ಯೆ 91 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	32,75,000/-	65,500/-
7	ವಾರ್ಡ್ ಸಂಖ್ಯೆ 92 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	10,57,125/-	26,428/-
8	ವಾರ್ಡ್ ಸಂಖ್ಯೆ 93 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	2,75,875/-	6,897/-
9	ವಾರ್ಡ್ ಸಂಖ್ಯೆ 94 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಪ.ಪಂಗಡ).	26,56,917/-	26,569/-
10	ವಾರ್ಡ್ ಸಂಖ್ಯೆ 95 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	19,41,667/-	48,542/-
11	ವಾರ್ಡ್ ಸಂಖ್ಯೆ 96 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	5,29,750/-	13,244/-
12	ವಾರ್ಡ್ ಸಂಖ್ಯೆ 97 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	5,02,604/-	12,565/-
13	ವಾರ್ಡ್ ಸಂಖ್ಯೆ 99 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಪ.ವರ್ಗ).	15,06,875/-	18,836/-
14	ವಾರ್ಡ್ ಸಂಖ್ಯೆ 100 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	19,91,667/-	49,792/-
15	ವಾರ್ಡ್ ಸಂಖ್ಯೆ 101 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	9,68,750/-	24,219/-
16	ವಾರ್ಡ್ ಸಂಖ್ಯೆ 102 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	26,08,958/-	52,179/-
17	ವಾರ್ಡ್ ಸಂಖ್ಯೆ 103 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಪ.ವರ್ಗ).	19,47,604/-	24,345/-
18	ವಾರ್ಡ್ ಸಂಖ್ಯೆ 104 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	8,54,167/-	21,354/-
19	ವಾರ್ಡ್ ಸಂಖ್ಯೆ 105 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಪ.ಪಂಗಡ).	18,78,750/-	23,484/-
20	ವಾರ್ಡ್ ಸಂಖ್ಯೆ 106 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	8,12,500/-	20312.5
21	ವಾರ್ಡ್ ಸಂಖ್ಯೆ 107 ರಲ್ಲಿ ಇರುವ ಉದ್ಯಾನವನಗಳ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳ ನಿರ್ವಹಣೆ ಮಾಡಲು ದರಪಟ್ಟಿ (ಇತರೆ).	55,90,438/-	1,11,809/-
22	ಕೆ.ಆರ್.ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿರುವ ಕೊಳವೆಬಾವಿಗಳ ನಿರ್ವಹಣೆ (ಪ.ವರ್ಗ)	10,00,000/-	12,500-
23	ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿರುವ ಕೊಳವೆಬಾವಿಗಳ ನಿರ್ವಹಣೆ (ಪ.ವರ್ಗ)	10,00,000/-	12,500/-
24	ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಪೂರಕವಾದ ಭದ್ರತಾ ಸೇವೆಗಳನ್ನು ಒದಗಿಸುವುದು. (ಇತರೆ)	34,63,426/-	69,269/-
25	ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಪೂರಕವಾದ ಭದ್ರತಾ ಸೇವೆಗಳನ್ನು ಒದಗಿಸುವುದು. (ಇತರೆ)	34,63,426/-	69,269/-
26	ಮಹದೇವಪುರ ವಿಧಾನಸಭಾ ಕ್ಷೇತ್ರದ ವ್ಯಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿರುವ ಶೌಚಾಲಯಗಳ ನಿರ್ವಹಣೆ. (ಇತರೆ)	6,61,000/-	16,525/-
27	ಕೆ.ಆರ್. ಪುರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಲ್ಲಿರುವ ಶೌಚಾಲಯಗಳ ನಿರ್ವಹಣೆ. (ಇತರೆ)	5,50,000/-	13,750/-
28	ಮಹದೇವಪುರ ವಲಯದಲ್ಲಿ ಬರುವ ಉದ್ಯಾನವನಗಳಲ್ಲಿರುವ ಮಧ್ಯರೇಖೆ, ವೃತ್ತ (ವರ್ತುಲ) ಮತ್ತು ಸಾಲು ಮರಗಳ ವಿಶಾಲ ರಾಜಮಾರ್ಗಗಳಿಗೆ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಮಾಡುವುದು. (ಇತರೆ).	8,82,000/-	22,050/-

ಪೂರ್ಣಗೊಳಿಸುವಿಕೆಯ ನಿಗದಿತ ಅವಧಿ: **ಕ್ರ.ಸಂಖ್ಯೆ 1 ರಿಂದ 21: 10 ತಿಂಗಳುಗಳು ಮತ್ತು 22 ರಿಂದ 28: 12 ತಿಂಗಳುಗಳು.**

ಟೆಂಡರ್ ವೇಳಾಪಟ್ಟಿ: 1) ಅಧಿಸೂಚನೆ ಹೊರಡಿಸಿದ **ದಿನಾಂಕ: 08–12–2023.** 2) ಟೆಂಡರ್ ಅನ್ನು ವೆಬ್‌ಸೈಟ್ **https://kppp.karnataka.gov.in, 13–12–2023** ರಿಂದ ಡೌನ್‌ಲೋಡ್ ಮಾಡಬಹುದು. 3) ಪೂರ್ವ ಬಿಡ್ ಸಭೆ: **21–12–2023 ಬೆಳಗ್ಗೆ 11.30 ಗಂಟೆಗೆ.** 4) ಟೆಂಡರ್ ಮುಕ್ತಾಯ ದಿನಾಂಕ: **28–12–2023 ಸಂಜೆ 4.30 ಗಂಟೆಗೆ.** 5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02–01–2024 ರಿಂದ ಬೆಳಿಗ್ಗೆ 11.30 ಕ್ಕೆ.** 6) ಹಣಕಾಸು ಬಿಡ್ ತೆರೆಯುವ ದಿನಾಂಕ: **ತಾಂತ್ರಿಕ ಬಿಡ್‌ನ ಅನುಮೋದನೆಯ ನಂತರ.**

ಸಹಿ/– ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು, ಮಹದೇವಪುರ ವಲಯ, ಬಿಬಿಎಂಪಿ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರವರ ಕಛೇರಿ, ಕ.ನೀ.ನಿ.ನಿ., ಮ.ಬ.ದ.ಕಾ.ನಿ. ವಿಭಾಗ ನಂ. 1, ನರಗುಂದ ಜಿಲ್ಲೆ : ಗದಗ
Tel No. 08377-244236 E-mail : knnlmrbccdiv1@gmail.com
ಸಂ:ಕನೀನಿನಿ/ಮಬದಕಾನಿ–1/ಪಿಬಿ//2023–24/1764 ದಿನಾಂಕ : 11.12.2023

ತಿದ್ದುಪಡಿ ಪ್ರಕಟಣೆ

ಉಲ್ಲೇಖ : ಈ ಕಛೇರಿ ಪ್ರಕಟಣೆ ಸಂಖ್ಯೆ : 1759 ದಿ : 07–11–2023

ಮೇಲ್ಕಾಣಿಸಿದ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಈ ಕಛೇರಿಯ ಕೋಟೇಶನ್ ಪ್ರಕಟಣೆ ದಿನಾಂಕ : 09–12–2023 ರಂದು ಪ್ರಜಾವಾಣಿ ಮತ್ತು ಕಿತ್ತೂರು ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಸದರಿ ಪ್ರಕಟಣೆಯಲ್ಲಿ ತಾಂತ್ರಿಕ ಕಾರಣಗಳಿಂದ ದಿನಾಂಕ : 16.11.2023 ಪ್ರಕಟವಾಗಿದ್ದು ಅದನ್ನು **16.12.2023** ಎಂದು ಓದಿಕೊಳ್ಳುವುದು

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕನೀನಿನಿ ಮಬದಕಾನಿ ವಿಭಾಗ ನಂ.1 ನರಗುಂದ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/365/2023–24

ಉಪ ನಿರ್ದೇಶಕರು ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು–09
No:. SSK/2023-24/IND00010/CALL-2 Date : 07-12-2023

ಇ–ಟೆಂಡರ್ ಪ್ರಕಟಣೆ

ವಿಷಯ: ಬೆಂಗಳೂರು ಉತ್ತರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗತ್ಯವಿರುವ 3 ಹಾಗೂ 4 ಸೀಟರ್ ಡೆಸ್ಕ್‌ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಟೆಂಡರ್ ಕರೆದಿರುವ ಬಗ್ಗೆ ಪತ್ರಿಕಾ ಪ್ರಕಟಣೆ ನೀಡುವ ಬಗ್ಗೆ.

ಬೆಂಗಳೂರು ಉತ್ತರ ಜಿಲ್ಲೆಯ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಅಗತ್ಯವಿರುವ 3 ಹಾಗೂ 4 ಸೀಟರ್ ಡೆಸ್ಕ್‌ಗಳನ್ನು ಸರಬರಾಜು ಮಾಡುವ ಸಂಬಂಧ ಅರ್ಹ ಬಿಡ್‌ದಾರರಿಂದ E-Procurement ಮೂಲಕ ಇ–ಟೆಂಡರ್ ಆಹ್ವಾನಿಸಿದೆ.

1)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ ಸಮಯ: 21–12–2023 ಸಂಜೆ 17:30 ಗಂಟೆ. 2) ವಿವರಗಳಿಗಾಗಿ http://kppp.karnataka.gov.in ಗಮನಿಸುವುದು. 3) ಇ.ಎಂ.ಡಿ ಮೊತ್ತ ರೂ.49400/–

ಸಹಿ/– ಉಪನಿರ್ದೇಶಕರು (ಆಡಳಿತ) ಬೆಂಗಳೂರು ಉತ್ತರ ಜಿಲ್ಲೆ
ವಾ.ಸಾ.ಸಂ.ಇ/ವಾಪ್ರ/2507/ಆಕಾರ್/2023–24

ಫಾರಂ ನಂ. ಐಎನ್‌ಸಿ–26
[ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ನಿಯಮ 30ರ ಪ್ರಕಾರ]
ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಿಭಾಗ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಇವರ ಸಮ್ಮುಖದಲ್ಲಿ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13ರ ಸಬ್ ಸೆಕ್ಷನ್ (4) ಮತ್ತು ಕಂಪನಿಗಳ (ಇನ್ಕಾರ್ಪೊರೇಶನ್) ನಿಯಮಗಳು, 2014ರ ರೂಲ್ 30ರ ಸಬ್ ರೂಲ್ (5)ರ ಕ್ಲಾಜ್ (ಎ) ವಿಷಯದಲ್ಲಿ

ಇವರ ವಿಷಯದಲ್ಲಿ: **ಇಟ್ರಾನ್ಸ್ ಟಿ4ಯು ಪ್ರೈವೇಟ್ ಲಿಮಿಟೆಡ್,** ಕಂಪನಿಗಳ ಕಾಯ್ದೆ, 1956ರ ಅಡಿಯಲ್ಲಿ ಸ್ಥಾಪಿತ ಒಂದು ಕಂಪನಿ, ನೋಂದಾಯಿತ ಕಚೇರಿ ವಿಳಾಸ ನಂ. 404 & 405, 4ನೇ ಮಹಡಿ, ಹೆಚ್‌ವಿಎಸ್ ಕೋರ್ಟ್, ನಂ. 21, ಕನ್ನಿಂಗ್‌ಹ್ಯಾಮ್ ರೋಡ್, ವಸಂತನಗರ, ಡಾ. ಅಂಬೇಡ್ಕರ್ ಬೀದಿ, ಬೆಂಗಳೂರು, ಕರ್ನಾಟಕ–560001, ಭಾರತ
– ಅರ್ಜಿದಾರ

ನೋಂದಾಯಿತ ಕಚೇರಿಯ ವರ್ಗಾವಣೆ ಕುರಿತಾದ ಆಕ್ಷೇಪಣೆಗಾಗಿ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಕಂಪನಿಯು, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 13(4) ಅಡಿಯಲ್ಲಿ, ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಿಭಾಗ ಇವರಿಗೆ ಅರ್ಜಿ ಸಲ್ಲಿಸಿ, ಕಂಪನಿಯು 3ನೇ ನವೆಂಬರ್, 2023 ರಂದು ಕೈಗೊಂಡಿದ್ದ ತನ್ನ ಅಸಾಧಾರಣ ಮಹಾಸಭೆಯಲ್ಲಿ ಹೊರಡಿಸಲಾದ ವಿಶೇಷ ಠರಾವಿನ ಅನ್ವಯ, ಮೆಮೊರ್ಯಾಂಡಮ್ ಆಫ್ ಅಸೋಸಿಯೇಶನ್‌ನ ಮಾರ್ಪಾಡನ್ನು ಖಚಿತಪಡಿಸಿ, ತನ್ನ ನೋಂದಾಯಿತ ಕಚೇರಿಯನ್ನು **"ಕರ್ನಾಟಕ ರಾಜ್ಯದ"** ಬೆಂಗಳೂರಿನಿಂದ **"ಪಶ್ಚಿಮ ಬಂಗಾಳ ರಾಜ್ಯದ"** ಕೋಲ್ಕತಾಗೆ ವರ್ಗಾಯಿಸಲು ಸಶಕ್ತಗೊಳಿಸಬೇಕೆಂದು ಕೋರಲು ಉದ್ದೇಶಿಸಿರುತ್ತದೆ.

ಕಂಪನಿಯ ಈ ಉದ್ದೇಶಿತ ನೋಂದಾಯಿತ ಕಚೇರಿ ಬದಲಾವಣೆಯಿಂದಾಗಿ ಯಾವುದೇ ವ್ಯಕ್ತಿಯ ಹಿತಾಸಕ್ತಿಗೆ ಧಕ್ಕೆ ಉಂಟಾಗುವಂತಿದ್ದಲ್ಲಿ, ಅಂತಹ ವರು, ಈ ಪ್ರಕಟಣೆಯು ಪ್ರಕಟಗೊಂಡ ದಿನಾಂಕ ದಿಂದ 14 (ಹದಿನಾಲ್ಕು) ದಿನಗಳೊಳಗೆ, ಎಂಸಿಎ–21 ಪೋರ್ಟಲ್‌ನಲ್ಲಿ (**www.mca.gov.in**) ಹೂಡಿಕೆದಾರರ ದೂರು ನಮೂನೆಯನ್ನು ಭರ್ತಿ ಮಾಡುವ ಮೂಲಕವಾಗಲಿ ಅಥವಾ ಕಾಜ್ ಟು ಬಿ ಡೆಲಿವರ್ಡ್ ಅಥವಾ ತಮ್ಮ ಹಿತಾಸಕ್ತಿಯ ಸ್ವರೂಪ ಮತ್ತು ವಿರೋಧದ ಹಿನ್ನಲೆಗಳನ್ನು ಉಲ್ಲೇಖಿಸಿದ ಒಂದು ಪೂರಕ ಅಫಿಡವಿಟ್ ನೋಟಿಸ್ ಮುಖಾಂತರ ತಮ್ಮ ಆಕ್ಷೇಪಣೆಗಳನ್ನು ಪ್ರಾದೇಶಿಕ ನಿರ್ದೇಶಕರು, ಆಗ್ನೇಯ ವಿಭಾಗ, ಕಾರ್ಪೊರೇಟ್ ಭವನ, ಬಂಡ್ಲಗುಡ, ನಾಗೋಳೆ, ತಟ್ಟಿನ್ನರಂ ಗ್ರಾಮ, ಹಯಾತ್‌ನಗರ ಮಂಡಲ, ರಂಗಾರೆಡ್ಡಿ ಜಿಲ್ಲೆ, ಹೈದರಾಬಾದ್–500068, ತೆಲಂಗಾಣ ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು, ಮತ್ತು ತಮ್ಮ ನೋಟಿಸ್‌ನ ಒಂದು ಪ್ರತಿಯನ್ನು, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಯ ನೋಂದಾಯಿತ ಕಛೇರಿ ವಿಳಾಸಕ್ಕೆ ರವಾನಿಸುವುದು.

ಇಟ್ರಾನ್ಸ್ ಟಿ4ಯು ಪ್ರೈವೇಟ್ ಲಿಮಿಟೆಡ್ ಪರವಾಗಿ
ಸಹಿ/– ಸೌಮ್ಯ ಕಾಂತಿ ಆಚಾರ್ಯ (ನಿರ್ದೇಶಕರು)
ದಿನಾಂಕ: 12.12.2023
ಸ್ಥಳ: ಬೆಂಗಳೂರು ಡಿಐಎನ್: 00471171

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ.)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಮುಖ್ಯ ಇಂಜಿನಿಯರ್ (ವಿ) ಬಿಎಂಎಜೆಡ್(ಎನ್), ಬೆಸ್ಕಾಂ, ಬೆಂಗಳೂರು. ಕೆಳಗಿನ ಸಿವಿಲ್ ಎಂಜಿನಿಯರಿಂಗ್ ಕೆಲಸಕ್ಕಾಗಿ ಕೆಪಿಪಿ ಪೋರ್ಟಲ್ ಮೂಲಕ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ. ವಿಚಾರಣೆ ಸಂಖ್ಯೆ: **CEE/BMAZ(N)/EE(Civil)/Enq-11/2023-24 dated 08.12.2023**. ಕೆಲಸದ ಹೆಸರು : **ಬೆಂಗಳೂರಿನ ರಾಚೇನಹಳ್ಳಿಯ ಎಂ.ಸಿ.ಇ.ಸಿ.ಹೆಚ್.ಎಸ್ ಬಡಾವಣೆಯಲ್ಲಿರುವ ಬೆಸ್ಕಾಂ ನ ಸ್ವಂತ ಜಮೀನಿನ ಭಾಗದಲ್ಲಿ ಉದ್ದೇಶಿತ ಉಗ್ರಾಣದ ಸಾಮಾಗ್ರಿಗಳನ್ನು ಶೇಖರಿಸಿಡಲು (ದೊಮ್ಮಲೂರಿನಿಂದ ಸ್ಥಳಾಂತರಿಸಲು) ಚೈನ್ ಲಿಂಕ್ ಮೆಶ್ ಭದ್ರಾತ ಫೆನ್ಸಿಂಗ್ ಅನ್ನು ಅಳವಡಿಸುವುದು.** ಟೆಂಡರ್‌ಗೆ ಹಾಕಲಾದ ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ. (ಅಂದಾಜು): **46.54** ಮಳೆಗಾಲದ ಅವಧಿ ಸೇರಿದಂತೆ ಕೆಲಸ ಪೂರ್ಣಗೊಳಿಸಲು ಸಮಯ ಮಿತಿ : **03 ತಿಂಗಳುಗಳು** ಟೆಂಡರ್ ಪ್ರಶ್ನೆಗಳು/ಸ್ಪಷ್ಟೀಕರಣಗಳಿಗೆ ಕೊನೆಯ ದಿನಾಂಕ ಮತ್ತು ಸಮಯ : **20.12.2023 ರ ಸಂಜೆ 16.00 ಗಂಟೆಗಳವರೆಗೆ.** ಟೆಂಡರ್‌ಗಳ ಸ್ವೀಕೃತಿಯ ಕೊನೆಯ ದಿನಾಂಕ ಮತ್ತು ಸಮಯ : **26.12.2023 ರ ಸಂಜೆ 16.00 ಗಂಟೆಗಳವರೆಗೆ** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ.: **28.12.2023 16.15 ಗಂಟೆಗೆ.** ಬೆಲೆ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ.: **ನಂತರ ತಿಳಿಸಲಾಗುವುದು.** ಟೆಂಡರ್‌ನಲ್ಲಿ ಭಾಗವಹಿಸುವ ಕುರಿತು ವಿವರಗಳನ್ನು ಕೆಪಿಪಿ ಪೋರ್ಟಲ್ ಮೂಲಕ 11.12.2023 ರಂದು ಅಥವಾ ನಂತರ ಪಡೆಯಬಹುದು. ಯಾವುದೇ ಸ್ಪಷ್ಟೀಕರಣಕ್ಕಾಗಿ ಕೆಪಿಪಿ ಸಹಾಯ ಕೇಂದ್ರವನ್ನು ಸಂಪರ್ಕಿಸಿ. **080–23010900/ 23010901** ಅಥವಾ **hphelpdesk.blr@gmail.com** ಗೆ ಇ–ಮೇಲ್ ಮಾಡಿ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆಮಾಡಿ : 1912
"ಬೆಸ್ಕಾಂ ಮಿತ್ರ" Mobile APP ಡೌನ್‌ಲೋಡ್ ಮಾಡಿಕೊಳ್ಳಿ

ಸಹಿ/ ಮುಖ್ಯ ಇಂಜಿನಿಯರ್ (ವಿ) ಬಿಎಂಎಜೆಡ್(ಎನ್), ಬೆಸ್ಕಾಂ

ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ
ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು
ದೂರವಾಣಿ: +91–8431186388, ಇ–ಮೇಲ್: sabvmcri@gmail.com
ಸಂಖ್ಯೆ:ಎಸ್‌ಎಬಿವಿಎಂಸಿಆರ್‌ಐ/ಇ–ಟೆಂಡರ್/ETP-CHR,GOH/04&5/2023–24/Call-2 ದಿನಾಂಕ: 11–12–2023

ಟೆಂಡರ್ ಅಧಿಸೂಚನೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇದರ ಅಧೀನದಲ್ಲಿ ಬರುವ **ಸರ್ಕಾರಿ ಹೆಚ್.ಎಸ್.ಐ.ಎಸ್. ಘೋಷಾ ಆಸ್ಪತ್ರೆ ಮತ್ತು ಚರಕ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಿಗೆ ETP, STP Supply, Installation and Maintenance** ನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಹಾಗೂ ನಿಯಮಗಳು 2000 ರಂತೆ ಮೊಹರಾದ ಇ–ಟೆಂಡರ್‌ಗಳನ್ನು ಅರ್ಹ ಆಸಕ್ತ ಸಂಸ್ಥೆಗಳಿಂದ ಆಹ್ವಾನಿಸಲಾಗಿದೆ.

ಟೆಂಡರ್ ಫಾರಂ, ಇ.ಎಂ.ಡಿ ವಿವರ ಮತ್ತು ಷರತ್ತು ಮುಂತಾದ ವಿವರಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ ವೀಕ್ಷಿಸಿ ಟೆಂಡರ್‌ಗಳನ್ನು ಸಲ್ಲಿಸಬಹುದು ಹಾಗೂ ಹಿಂದಿರುಗಿಸದ ಟೆಂಡರ್ ಪ್ರೋಸೆಸ್ಸಿಂಗ್ ಮೊತ್ತ **ರೂ. 10,000/–** ಗಳ ಡಿ.ಡಿ. ಯನ್ನು **ನಿರ್ದೇಶಕರು ಹಾಗೂ ಡೀನ್, ಶ್ರೀಅಬಿವಾವೈಮಸಂಸಂ, ಬೆಂಗಳೂರು** ಇವರ ಹೆಸರಿನಲ್ಲಿ ಪಡೆದು ಸಲ್ಲಿಸತಕ್ಕದ್ದು ಮತ್ತು ಅದರ ರಸೀದಿಯನ್ನು ಈ ಟೆಂಡರ್‌ನಲ್ಲಿ ಲಗತ್ತಿಸುವುದು. ಆಸಕ್ತಿಯುಳ್ಳ ಟೆಂಡರ್‌ದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸತಕ್ಕದ್ದು. ನೋಂದಾವಣಿಗೆ ಅಗತ್ಯವಾದ ವಿವರಗಳನ್ನು ವೆಬ್‌ಸೈಟ್‌ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ಇ–ಮೇಲ್: **sabvmcri@gmail.com** ಮತ್ತು ದೂರವಾಣಿ ಸಂಖ್ಯೆ: **+91–8431186388** ನ್ನು ಸಂಪರ್ಕಿಸಬಹುದು.

1) ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸುವ ದಿನಾಂಕ: **13–12–2023 ರಿಂದ. 2)** ಟೆಂಡರ್ ಬಗ್ಗೆ ಪ್ರಶ್ನಾವಳಿಗಳಿಗೆ ಕೊನೆಯ ದಿನಾಂಕ: **19–12–2023 ರಂದು ಸಂಜೆ 4.00 ಗಂಟೆವರೆಗೆ. 3)** ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **27–12–2023 ರಂದು ಸಂಜೆ 4.00 ಗಂಟೆವರೆಗೆ. 4)** ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಮೊದಲನೆ ಲಕೋಟೆ): **29–12–2023 ರಂದು ಬೆಳಿಗ್ಗೆ 10.30 ಗಂಟೆಗೆ.**

ಈ ವಿಷಯದಲ್ಲಿ ಯಾವುದೇ ಹೆಚ್ಚಿನ ಮಾಹಿತಿ ಬೇಕಾದ ಪಕ್ಷದಲ್ಲಿ ಕೆಲಸದ ದಿನಗಳಲ್ಲಿ ಈ ಸಂಸ್ಥೆಯ ನಿರ್ದೇಶಕರು ಹಾಗೂ ಡೀನ್ / ಸಹಾಯಕ ಆಡಳಿತಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ನಿರ್ದೇಶಕರು ಹಾಗೂ ಡೀನ್ ಶ್ರೀ.ಅ.ಬಿ.ವಾ.ವೈ.ಮ.ಸಂ.ಸಂ., ಬೆಂಗಳೂರು.
ವಾಸಾಸಂಇ/ವಾ.ಪ್ರ/2487/ಅಡ್ವರ್ಟೋ/2023–24

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017,
ದೂರವಾಣಿ: 9448994705 ಇ–ಮೇಲ್: gmpurc@cescmysore.org ವೆಬ್‌ಸೈಟ್:www.cescmysore.org
ಸಂಖ್ಯೆ:ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ–2)/2023–24/16482 ದಿನಾಂಕ: 05.12.2023

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿ ವತಿಯಿಂದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಸೇವೆಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರಸಂ	ವ್ಯಾಪ್ತಿ	ವಿಚಾರಣೆ ಸಂಖ್ಯೆ/ದಿನಾಂಕ
1.	ಮಡಿಕೇರಿ ಕಾ ಮತ್ತು ಪಾ ವಿಭಾಗ ವ್ಯಾಪ್ತಿಯಲ್ಲಿ 75 ಜನ ಮಾನ್‌ಸೂನ್ ಸಹಾಯಕರನ್ನು ಒದಗಿಸಲು	ಸಿ2–5579/ 27–11–2023
2.	ಚಾವಿಸನಿನಿ., ವ್ಯಾಪ್ತಿಯ ಎಲ್ಲಾ ಕಛೇರಿಗಳಿಗೆ ಅವಶ್ಯವಿರುವ ವಿವಿಧ ಮಾನವ ಸಂಪನ್ಮೂಲ ಸೇವೆಗಳ ಸಿಬ್ಬಂದಿ ಸರಬರಾಜು ಮಾಡಲು	ಸಿ2–5581/ 05–12–2023
3.	ಚಾವಿಸನಿನಿ., ಚಾಮರಾಜನಗರ–ಕೊಡಗು ವೃತ್ತ ವ್ಯಾಪ್ತಿಯಲ್ಲಿ ಮಾಸಿಕ ಬಾಡಿಗೆ ಆಧಾರದಲ್ಲಿ 5 MT ಮತ್ತು ಅದಕ್ಕಿಂತ ಹೆಚ್ಚಿನ ಪೇಲೋಡ್ ಹೊಂದಿರುವ LPT/ ಮಿನಿ ಲಾರಿಗಳನ್ನು ಚಾಲಕ ಸಹಿತ 9 ಮೀ ಆರ್. ಆರ್. ಸಿ ಕಂಬಗಳು ಮತ್ತು ಇತರೆ ಸರಕುಗಳನ್ನು ಸಾಗಿಸಲು ಒದಗಿಸುವುದು.	ಸಿ2–5582/ 05–12–2023

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ:14.12.2023** ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ **ಹೆಲ್ಪ್‌ಲೈನ್ +91–8046010000, +91–8068948777** ಗೆ ಅಥವಾ ಇ–ಮೇಲ್ ವಿಳಾಸ **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ : 1912

ಸಹಿ/– ಪ್ರಧಾನ ವ್ಯವಸ್ಥಾಪಕರು(ಖರೀದಿ) ಚಾ.ವಿ.ಸ.ನಿ.ನಿ, ಮೈಸೂರು
DIPR/MYS/KAVITA/731/2022-23

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಮುಖ್ಯ ಅಭಿಯಂತರವರ ಕಚೇರಿ, ಆರ್‌ಡಿಡಬ್ಲ್ಯು&ಎಸ್ ಇಲಾಖೆ, 1ನೇ ಮಹಡಿ, "ಇ" ಬ್ಲಾಕ್,ಕೆ.ಹೆಚ್.ಬಿ. ಕಾಂಪ್ಲೆಕ್ಸ್, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009
ದೂ.ಸಂ.: 080–22533700, e-mail: cerws14@gmail.com
ಸಂಖ್ಯೆ: ಆರ್‌ಡಬ್ಲ್ಯೂಎಸ್&ಎಸ್‌ಡಿ/ಸಿಇ/ಟೆಕ್/31/2023–24 ದಿನಾಂಕ: 11–12–2023

ಅಲ್ಪಾವಧಿ ಟೆಂಡರ್ ಆಹ್ವಾನ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ **1) ಬೆಳಗಾವಿ ಜಿಲ್ಲೆಗೆ ಪಿಎಂಸಿ – ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0047–ಇಎಂಡಿ: ರೂ.7,03,000.00, 2) ಉತ್ತರ ಕನ್ನಡ ಜಿಲ್ಲೆಗೆ ಪಿಎಂಸಿ – ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0082–ಇಎಂಡಿ: ರೂ.4,97,000.00, 3) ಮೈಸೂರು ಜಿಲ್ಲೆಗೆ ಪಿಎಂಸಿ – ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0091–ಇಎಂಡಿ: ರೂ.6,30,000.00, 4) ಶಿವಮೊಗ್ಗ ಜಿಲ್ಲೆಗೆ ಪಿಎಂಸಿ – ಪ್ಯಾಕೇಜ್–1–ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0120–ಇಎಂಡಿ: ರೂ.4,61,000.00.00 5) ಶಿವಮೊಗ್ಗ ಜಿಲ್ಲೆಗೆ ಪಿಎಂಸಿ–ಪ್ಯಾಕೇಜ್–2–ಆರ್‌ಡಬ್ಲ್ಯೂಎಸ್‌ಎಸ್‌ಡಿ/2023–24/ಎಸ್‌ಇ0118 –ಇಎಂಡಿ: ರೂ.8,40,000.00** ಕಾಮಗಾರಿಗಳಿಗೆ (ತಾಂತ್ರಿಕ ಮತ್ತು ಆರ್ಥಿಕ ಬಿಡ್) ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಅರ್ಹ ಬಿಡ್‌ದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ **(https://kppp.karnataka.gov.in)** ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.
ಇ–ಪೋರ್ಟಲ್ ಮೂಲಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **27.12.2023.**

ಸಹಿ/– ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಗ್ರಾ.ಕು.ನೀ.&ನೈ.ಇಲಾಖೆ, ಬೆಂಗಳೂರು
DIPR/CP/BCPL/2496/2023-24

ಕರ್ನಾಟಕ ಸರ್ಕಾರ
ಜಲ ಸಂಪನ್ಮೂಲ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ನಂ.1, ನೀರಾವರಿ ತನಿಖಾ ವಿಭಾಗ ಕಾವೇರಿ ಭವನ ಸಂಕೀರ್ಣ, ಗೋಕುಲಂ 4ನೇ ಹಂತ, ಮೈಸೂರು–570020
ದೂರವಾಣಿ & ಫ್ಯಾಕ್ಸ್ : 0821-2411420 e-mail : no1eeiid@gmail.com

e-Procuremenet Tender Notification
NATIONAL HYDROLOGY PROJECT
(World Bank Aided)

ಕಾರ್ಯಪಾಲಕ ಇಂಜಿನಿಯರ್, ನಂ. 1, ನೀರಾವರಿ ತನಿಖಾ ವಿಭಾಗ, ಮೈಸೂರು, ಕರ್ನಾಟಕ – 570020. ಇವರು ಎರಡು ಲಕೋಟೆಯಲ್ಲಿ IFB No: KA NHP-SW/07/2023-24 dated : 07-12-2023; ಬಿಡ್ ಅನ್ನು ಕರೆದಿರುತ್ತಾರೆ. ಕಾಮಗಾರಿಯ ಹೆಸರು The Supply Installation, Testing, Commissioning and Maintenance of RTDAS Comprising of 42 Automatic Weather Station (AWS) & 13 Automatic Water Level Recorder (AWLR) with Telemetry System for Reservoirs/Barrages/Rivers in Southern Karnataka and integrate with Data Center located at Bangalore, Karnataka under NHP (WRD/2023-24/OW/WORK_INDENT26) ಬಿಡ್ ವಿವರಗಳನ್ನು e-procurement platform https://kppp.karnataka.gov.in/ ನಲ್ಲಿ ದಿನಾಂಕ : 07–12–2023 ರಿಂದ ಪಡೆಯ ಬಹುದಾಗಿರುತ್ತದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ : 11–01–2024 ಮ. 4.00 ಗಂಟೆವರೆಗೆ, ಬಿಡ್ ತೆರೆಯುವ ದಿನಾಂಕ : 12–01–2024 ಸಂಜೆ 4.30ಗಂಟೆಗೆ ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿದ ಕಚೇರಿಯನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ನಂ.1, ನೀರಾವರಿ ತನಿಖಾ ವಿಭಾಗ, ಮೈಸೂರು

ಆಯುಷ್ ಇಲಾಖೆ
ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಧನ್ವಂತರಿ ರಸ್ತೆ, ಬೆಂಗಳೂರು–560009.
ದೂರವಾಣಿ: 080–22872848/22341261, Email: principalgamc9@gmail.com
ಅಧಿಸೂಚನೆ ಸಂಖ್ಯೆ: ಆವೈಮ/20/ಸರಬ/2023–24, ದಿನಾಂಕ: 11–12–2023

ಟೆಂಡರ್ ಅಧಿಸೂಚನೆ ತಿದ್ದುಪಡಿ

ವಿಷಯ: ಭದ್ರತಾ/ಸ್ವಚ್ಛತಾ ಮತ್ತು ಇತರೆ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆ ಪಡೆಯುವ ಸಲುವಾಗಿ ದರಗುತ್ತಿಗೆ ನಿಗದಿಪಡಿಸಲು ಇ–ಟೆಂಡರ್ ಅಧಿಸೂಚನೆ.

ಉಲ್ಲೇಖ: 1. ಟೆಂಡರ್ ಅಧಿಸೂಚನೆ ಸಂಖ್ಯೆ: ಆವೈಮ/20/ಸರಬ/2023–24, ದಿನಾಂಕ: 27–11–2023. 2. ಪ್ರೀ–ಬಿಡ್ ಮೀಟಿಂಗ್ ಸಭೆಯ ನಡವಳಿ ದಿನಾಂಕ: 06–12–2023

ಉಲ್ಲೇಖ (2) ರ ದಿನಾಂಕದಂದು ನಡೆದ ಪ್ರೀ–ಬಿಡ್ ಮೀಟಿಂಗ್ ಸಭೆಯಲ್ಲಿ ತೀರ್ಮಾನಿಸಿದಂತೆ ಉಲ್ಲೇಖ (1) ರ ಟೆಂಡರ್ ಅಧಿಸೂಚನೆಯ ಡಾಕ್ಯೂಮೆಂಟ್‌ಗೆ ಸೆಕ್ಷನ್–2 ರ ಆರ್ಥಿಕ ಬಿಡ್‌ನ ಕಂಡಿಕೆ–7 ಮತ್ತು ಜನರಲ್ ಕಂಡಿಕೆ–36 ಗಳನ್ನು ಈ ಕೆಳಕಂಡಂತೆ ತಿದ್ದಿ ಓದಿಕೊಳ್ಳಲು ಆದೇಶಿಸಿದೆ.

7. Service Charges should not quote less than 1% ರ ಬದಲಾಗಿ 2% ಎಂದು ತಿದ್ದಿ ಓದಿಕೊಳ್ಳುವುದು.

38. Avoided ಎಂಬ ಪದದ ಬದಲಾಗಿ award ಎಂದು ತಿದ್ದಿ ಓದಿಕೊಳ್ಳುವುದು.

ಸಹಿ/– ಪ್ರಾಚಾರ್ಯರು/ಅಧ್ಯಕ್ಷರು, ಟೆಂಡರ್ ಆಹ್ವಾನಿಸುವ ಪ್ರಾಧಿಕಾರ, ಸಆವೈಮ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/2498/ಆಕಾರ್/2023–24

ಕ್ಷೇಮ ಕುಶಲ

ಆರೋಗ್ಯದ ಗುಟ್ಟು ಆಹಾರದಲ್ಲಿ

ಚೈತ್ರ ಕೆ. ಆಚಾರ್ಯ

'ಆರೋಗ್ಯವೇ ಭಾಗ್ಯ' ಎಂಬ ನಾಣ್ಣುಡಿ ಇದೆ. ಆರೋಗ್ಯದ ಗುಟ್ಟು ಆಹಾರದಲ್ಲಿದೆ. ಇದಕ್ಕೆ ನಮ್ಮ ಪೂರ್ವಜರೇ ಸಾಕ್ಷಿ. ಬದಲಾಗುತ್ತಿರುವ ಜೀವನಶೈಲಿಯಲ್ಲಿ ಕೆಲಸದ ಒತ್ತಡ, ಸಮಯದ ಅಭಾವ, ಹಣ ಸಂಪಾದನೆಯ ಭರದಲ್ಲಿ ನಿಜವಾದ ಸಂಪತ್ತಾಗಿರುವ ಆರೋಗ್ಯದ ಬಗ್ಗೆ ಅರಿವೇ ಇರುವುದಿಲ್ಲ.

ಸರಿಯಾದ ಸಮತೋಲನ ಆಹಾರ ಪದ್ಧತಿಯಿಂದ ಆರೋಗ್ಯ ರಕ್ಷಣೆ ತುಂಬಾ ಸುಲಭ. 'ಆಹಾರ ಪದ್ಧತಿ' ಅಥವಾ 'ಡಯಟ್'ಅನ್ನು ಸರಳವಾಗಿ, ನಿತ್ಯ ಸೇವಿಸುವ ಆಹಾರ ಎನ್ನಬಹುದು. ಡಯಟ್ ಎಂದರೆ ಆಹಾರದ ಪ್ರಮಾಣವನ್ನು ಕಡಿಮೆ ಮಾಡುವುದು ಎಂಬ ತಪ್ಪು ಕಲ್ಪನೆಯು ಕೆಲವರಲ್ಲಿ ಇದೆ. ಮುಖ್ಯವಾಗಿ, 'ದೇಹಕ್ಕೆ ಅಗತ್ಯವಾದ ಎಲ್ಲ ಪೋಷಕಾಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಸರಿಯಾದ ಸಮಯದಲ್ಲಿ ಸೇವಿಸುವುದಾಗಿದೆ.

ಡಯಟ್ ಕೇವಲ ದೇಹದ ತೂಕ ಕಡಿಮೆ ಮಾಡಿಕೊಳ್ಳಲು ಅಲ್ಲದೇ, ದೇಹವು ರೋಗದ ವಿರುದ್ಧ ಹೋರಾಡಲು, ರೋಗ ನಿರೋಧಕಶಕ್ತಿಯನ್ನು ಹೆಚ್ಚಿಸಲು, ದೇಹಕ್ಕೆ ಅಗತ್ಯವಿರುವ ಎಲ್ಲಾ ಪೋಷಕಾಂಶಗಳನ್ನು ಒದಗಿಸಲು, ಸಮತೂಕವನ್ನು ಕಾಪಾಡಲು, ದೇಹದ ಎಲ್ಲಾ ಪ್ರಕ್ರಿಯೆಯನ್ನು ಉತ್ತೇಜಿಸಲು ಅದೇ ರೀತಿ ಮಾನಸಿಕವಾಗಿ ದೇಹವನ್ನು ಅಭಿವೃದ್ಧಿಗೊಳಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

'ಆಹಾರ ಸೇವನೆಯ ಕ್ರಮ ಸರಿ ಇಲ್ಲದೇ ಇದ್ದರೆ ಔಷಧಗಳು ಪ್ರಯೋಜನಕ್ಕೆ ಬಾರವು' ಎಂದು ಆಯುರ್ವೇದ ಗ್ರಂಥ ಚರಕಸಂಹಿತೆಯಲ್ಲೂ ಉಲ್ಲೇಖಿಸಿದ್ದಾರೆ. ಇದು ಔಷಧ ಸೇವನೆಗಿಂತ ಆಹಾರ ಕ್ರಮದ ಪರಿಪಾಲನೆಯ ಮಹತ್ವವನ್ನು ತಿಳಿಸುತ್ತದೆ.

ಭಾರತದಲ್ಲಿ ಆಯಾ ಪ್ರದೇಶಕ್ಕೆ ಅನುಗುಣವಾಗಿ ಆಹಾರ ಪದ್ಧತಿಗಳಿವೆ. ಪೂರ್ವಜರು ನಮ್ಮ ಸಂಸ್ಕೃತಿ, ಭೌಗೋಳಿಕ ವಿಚಾರಗಳಿಗೆ ಅನುಗುಣವಾಗಿ ಇದನ್ನು ರೂಪಿಸಿಕೊಂಡು ಬಂದಿದ್ದಾರೆ. ಕರ್ನಾಟಕ ರಾಜ್ಯದ ವಿವಿಧ ಪ್ರದೇಶಗಳಲ್ಲಿ ಆಯಾ ಸಾಂಪ್ರದಾಯಿಕ ಆಹಾರ ಪದ್ಧತಿ ಇರುವುದೇ ವಿಶೇಷ. ನಾನು ಮೂಲತಃ ಕರಾವಳಿ ಪ್ರದೇಶದವಳು; ಅಲ್ಲಿ ಕುಚ್ಚಲಕ್ಕಿಯಿಂದ ತಯಾರಿಸಿದ ಗಂಜಿ ದೇಹಕ್ಕೆ ತಂಪು.

ಸಾಂಪ್ರದಾಯಿಕ ಆಹಾರ ಪದಾರ್ಥಗಳು, ಅವುಗಳ ಚಿಕಿತ್ಸಾ ಗುಣಗಳು, ತಯಾರಿಸುವ ರೀತಿ, ಆಹಾರ ಸಂಸ್ಕರಣೆ ಮತ್ತು ಶೇಖರಿಸುವ ವಿಧಾನಗಳೆಲ್ಲವೂ ತಲೆಮಾರುಗಳಿಂದ ಬಂದ ಬಳುವಳಿಯಾಗಿವೆ.

ಸಾಂಪ್ರದಾಯಿಕ ಶೈಲಿಯಲ್ಲಿ ಮಾಡುವ ತಿಂಡಿ ತಿನಿಸುಗಳು, ಖಾದ್ಯ, ರಸಾಯನ, ಪಲ್ಯ, ಅಂಬಲಿ, ಕಷಾಯ ಮತ್ತು ಪಾನೀಯಗಳು. ಮಣ್ಣಿನ ಪಾತ್ರೆಯಲ್ಲಿ ತಯಾರಿಸಿ, ಆಹಾರವನ್ನು ಬಾಳೆಎಲೆ ಮೇಲೆ ಬಡಿಸಿ ನೆಲದ ಮೇಲೆ ಕುಳಿತು ಊಟಮಾಡುವ ಪದ್ಧತಿಯಿತ್ತು. ಅದರ ಮಹತ್ವವೇ ಬೇರೆ. ಆದರೆ, ಈಗಿನ ಪೀಳಿಗೆ ಆಧುನಿಕತೆ ಮತ್ತು ಪಾಶ್ಚಾತ್ಯ ಜೀವನ ಶೈಲಿಯ ಪ್ರಭಾವದಿಂದಾಗಿ ನಾಲಿಗೆಯ ರುಚಿಗಷ್ಟೆ ಬೆಲೆಕೊಟ್ಟು ಸಾಂಪ್ರದಾಯಿಕ ಆಹಾರದ ಉಪಯುಕ್ತತೆಯ ಕುರಿತು ಅರಿವೇ ಇಲ್ಲ.

ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯಲ್ಲಿ ಆಹಾರವೇ ಔಷಧಿಯಾಗಿತ್ತು. ಇಂದು ಔಷಧಿಯೇ ಆಹಾರವಾಗಿದೆ!. ಜನರು ರುಚಿಕರ ಆಹಾರದ ಕಡೆಗೆ ಹೆಚ್ಚು ಆಕರ್ಷಿತರಾಗುತ್ತಾರೆ. ಮತ್ತು ಆಹಾರದ ಗುಣಮಟ್ಟದ ಬಗ್ಗೆ ಗಮನಹರಿಸುವುದಿಲ್ಲ. ಜಂಕ್‌ಫುಡ್, ಫಾಸ್ಟ್‌ಫುಡ್‌ಗಳಲ್ಲಿ ಪೋಷಕಾಂಶಗಳಿಗಿಂತ ರುಚಿಗಾಗಿ ಅಥವಾ ಶೇಖರಣೆಗಾಗಿ ಸೇರಿಸುವ ರಾಸಾಯನಿಕ ಪದಾರ್ಥಗಳೇ ಅಧಿಕ. ಅತಿ ಹೆಚ್ಚು ಕ್ಯಾಲೋರಿ, ಸೋಡಿಯಂ, ಆರೋಗ್ಯಕರವಲ್ಲದ ಕೊಬ್ಬು (ಸ್ಯಾಚುರೇಟೆಡ್ ಮತ್ತು ಟ್ರಾನ್ಸ್ ಕೊಬ್ಬು) ಹೊಂದಿರುವುದರಿಂದ ಮಧುಮೇಹ, ಅಧಿಕ ರಕ್ತದೊತ್ತಡ, ಹೃದ್ರೋಗ, ಬೊಜ್ಜಿನ ಸಮಸ್ಯೆಗಳಿಗೆ ಕಾರಣವಾಗುತ್ತದೆ.

ಹುಟ್ಟುವ ಮಗುವಿನಿಂದ ಹಿಡಿದು ವಯಸ್ಸಾದ ವೃದ್ಧರವರೆಗೂ ದೇಹದ ಪ್ರತಿಯೊಂದು ಭಾಗಕ್ಕೂ ಪೋಷಕಾಂಶದ ಅಗತ್ಯವಿದೆ. ದೇಹಕ್ಕೆ ಅಗತ್ಯವಿರುವ ಕಾರ್ಬೋಹೈಡ್ರೇಟ್‌ಗಳು, ನಿತ್ಯ ಸೇವಿಸುವ ಧಾನ್ಯಗಳಲ್ಲಿ ಅಡಕವಾಗಿವೆ. ಇದು ದೇಹಕ್ಕೆ ಶಕ್ತಿ ನೀಡಿ, ಚಟುವಟಿಕೆಯಿಂದಿರಲು ಸಹಾಯ ಮಾಡುತ್ತದೆ. ಅದೇ ರೀತಿ ಶಾರೀರಿಕ ಬೆಳವಣಿಗೆ ಮತ್ತು ವಿಶೇಷವಾಗಿ ಮೂಳೆಗಳು, ಸ್ನಾಯುಗಳು, ಚರ್ಮ, ಹಾರ್ಮೋನುಗಳು, ಕಿಣ್ವಗಳು ಮತ್ತು ರಾಸಾಯನಿಕಗಳನ್ನು ಉತ್ಪಾದಿಸಲು ಪ್ರೊಟೀನ್ ಅತ್ಯಗತ್ಯ.

ಸಸ್ಯ ಮೂಲಗಳಾದ ದ್ವಿದಳ ಧಾನ್ಯಗಳು, ಕಾಳುಗಳಲ್ಲಿ ಅದೇ ರೀತಿ ಪ್ರಾಣಿ ಮೂಲಗಳಾದ ಹಾಲು, ಹಾಲಿನ ಉತ್ಪನ್ನಗಳಲ್ಲಿ, ಮೊಟ್ಟೆ, ಮೀನು, ಕೋಳಿ ಇವುಗಳಲ್ಲಿ ಹೇರಳವಾಗಿದೆ. ಎಲ್ಲಾ ಕೊಬ್ಬು ಕೆಟ್ಟದ್ದಲ್ಲ. ಬೀಜಗಳು, ಸಸ್ಯಜನ್ಯ ಎಣ್ಣೆಗಳು ಹಾಗೂ ಮೀನುಗಳಲ್ಲಿ ಲಭಿಸುವ ಕೊಬ್ಬುಗಳಲ್ಲಿ, ಓಮೆಗಾ 3 ಹಾಗೂ ಓಮೆಗಾ 6 ಎಂಬ ಉತ್ತಮ ಕೊಬ್ಬಿನಾಮ್ಲಗಳನ್ನೊಳಗೊಂಡು, ಇದು ರಕ್ತದಲ್ಲಿನ ಕೆಟ್ಟ ಕೊಲೆಸ್ಟ್ರಾಲ್ ಕಡಿಮೆ ಮಾಡಿ ಹೃದಯದ ಆರೋಗ್ಯವನ್ನು ಕಾಪಾಡುತ್ತದೆ. ಸಮತೋಲನ ಆಹಾರ ಪದ್ಧತಿಯಲ್ಲಿ ಸರಿಯಾದ ಆಹಾರದ ಆಯ್ಕೆ ತುಂಬಾ ಮುಖ್ಯ. ಸಂಸ್ಕರಿಸಿದ ಧಾನ್ಯಗಳು (ಮೈದಾ), ಸಂಸ್ಕರಿಸಿದ ಸಕ್ಕರೆ, ಹುರಿದ ಆಹಾರ ಪದಾರ್ಥಗಳು, ಜಂಕ್‌ಫುಡ್‌ಗಳು, ತ್ವರಿತ ಆಹಾರಗಳು ಸೇರಿ ಇನ್ನಿತರ ಅನಾರೋಗ್ಯಕರ ಆಹಾರಗಳಿಂದ ದೂರವಿರಬೇಕು.

ದೇಹಕ್ಕೆ ಅಗತ್ಯವಾದ ಆಹಾರವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಸರಿಯಾದ ಸಮಯದಲ್ಲಿ ಸೇವಿಸುತ್ತಾ ಹೋಗುವುದು ಕಷ್ಟವಲ್ಲ ಮತ್ತು ದುಬಾರಿಯೂ ಅಲ್ಲ. ಆದರೆ, ಅದರ ಕುರಿತು ಅರಿವು ತುಂಬಾ ಮುಖ್ಯ. ❖

ಭಯವೂ ಇರಲಿ ಧೈರ್ಯವೂ ಬರಲಿ

ಭಯ ಪಡುತ್ತಿರುವವರಿಗೆ 'ಧೈರ್ಯವಾಗಿರು' ಎನ್ನುವ ಮಾತನ್ನೂ ಹೇಳುತ್ತೇವೆ. ಆದರೆ ಧೈರ್ಯ ಹಾಗೆ ಸುಮ್ಮನೆ ಬಂದುಬಿಡುವುದಿಲ್ಲ,

ರಮ್ಯಾ ಶ್ರೀಹರಿ

ನಮಗೆ ಯಾವುದರ ಭಯವೂ ಇಲ್ಲದೆ ಇದ್ದಿದ್ದರೆ ಜೀವನ ಹೇಗಿರುತ್ತಿತ್ತು? ಸ್ವಚ್ಛಂದವಾಗಿ, ನೆಮ್ಮದಿಯಾಗಿ, ಸದಾ ಖುಷಿಯಾಗಿ ಇರುತ್ತಿದ್ದೆವೇನೋ ಎಂದು ಮೇಲ್ನೋಟಕ್ಕೆ ಅನಿಸುತ್ತದೆಯಷ್ಟೇ. ಆಳವಾಗಿ ನೋಡಿದರೆ ಭಯವೇ ಇಲ್ಲದೆ ಬದುಕೇ ಅಸಾಧ್ಯ ಎಂದು ತಿಳಿಯದೇ ಇರದು. ಮೊದಲನೆಯದಾಗಿ ಭಯವಿಲ್ಲದೆ ಇದ್ದಿದ್ದರೆ ಬದುಕುಳಿಯುವುದೇ ಅನುಮಾನ. ಭಯ ಎಲ್ಲ ಪ್ರಾಣಿಗಳಿಗೂ ಜೀವಸಂರಕ್ಷಣೆಯ ಕಲೆಯನ್ನು ಕಲಿಸಿಕೊಡುತ್ತದೆ. ಶತ್ರುಗಳ ಭಯ, ರೋಗ ರುಜಿನದ ಭಯ, ಸಾವಿನ ಭಯ, ನೋವಿನ ಭಯಗಳೊಂದೂ ಇರದಿದ್ದರೆ ಅಂತಹ ವಿಪತ್ತುಗಳೊದಗಿದಾಗ ಯಾವ ಪೂರ್ವತಯಾರಿಯೂ ಇಲ್ಲದ ಕಾರಣ ಅವುಗಳಿಗೆ ಸುಲಭವಾಗಿ ತುತ್ತಾಗುವುದರ ಹೊರತು ಬೇರೆ ದಾರಿಯೇ ಇರುತ್ತಿರಲಿಲ್ಲ. ಭಯವಿಲ್ಲದೆ ಇದ್ದರೆ ಜೀವನಕ್ಕೆ ದಿಕ್ಕು, ದಾರಿ, ಗುರಿಯೂ ಇರುತ್ತಿರಲಿಲ್ಲ. ಒಮ್ಮೆ ಯೋಚಿಸಿ ನೋಡಿ, ನಮ್ಮೆಲ್ಲಾ ಬದುಕಿನ ನಿರ್ಧಾರಗಳ ಹಿಂದೆ ಭಯದ ಪಾತ್ರ ಇದ್ದೇ ಇರುತ್ತದೆ. ಭವಿಷ್ಯದ ಬಗ್ಗೆ ಭಯ, ನಾವು ಸಂಕಲ್ಪಿಸಿದ್ದು ನಡೆಯದೇ ಹೋಗಬಹುದೆನ್ನುವ ಭಯ ಎಲ್ಲವೂ ಒಂದು ಮಿತಿಯಲ್ಲಿರುವುದು ಆರೋಗ್ಯಕರವೇ ಹೌದು, ಹಾಗಿದ್ದಾಗ ಗುರಿಯೆಡೆಗೆ ನಮಗೆ ಎಚ್ಚರವಿರುತ್ತದೆ, ಏನು ಮಾಡಬೇಕು ಏನು ಮಾಡಬಾರದು ಎನ್ನುವ ವಿವೇಕವಿರುತ್ತದೆ.

ಭಯ ಜೀವಿಯ ಆದಿಮ ಭಾವನೆಗಳಲ್ಲೊಂದು, ಅದು ಜೀವನಪೂರ್ತಿ ಒಂದಲ್ಲಾ ಒಂದು ರೂಪದಲ್ಲಿ ನಮಗೆ ಎದುರಾಗುತ್ತಲೇ ಇರುತ್ತದೆ. ಭಯದ ಜೊತೆಗಿನ ನಮ್ಮ ಸಂಬಂಧ ಯಾವ ರೀತಿಯದ್ದು, ಭಯವನ್ನು ಅದಕ್ಕಿರುವ ರಚನಾತ್ಮಕ ಶಕ್ತಿಯನ್ನು ನಾವು ಹೇಗೆ ಬಳಸಿಕೊಳ್ಳಬಲ್ಲೆವು ಎನ್ನುವುದು ಮುಖ್ಯವಾಗಿ ಚರ್ಚಿಸಬೇಕಾದ ವಿಷಯ.

ಮೊದಲನೆಯದಾಗಿ ಭಯದ ಬಗ್ಗೆಯೇ ಭಯಪಡಬೇಕಾಗಿಲ್ಲ, ಭಯ ನಮ್ಮ ರಕ್ಷಣೆಗಾಗಿಯೇ ಇರುವಂತದ್ದು, ಭಯದ ಜೊತೆಗಿನ ನಮ್ಮ ಸಂಬಂಧ ಸ್ನೇಹ, ಕುತೂಹಲಗಳಿಂದ ಕೂಡಿದ್ದರೆ ಭಯವನ್ನೂ ನಮ್ಮ ಯಶಸ್ಸಿಗೆ, ಸೌಖ್ಯಕ್ಕೆ ಬಳಸಿಕೊಳ್ಳಬಹುದು. ಭಯಕ್ಕೂ ನಮ್ಮ ಆಳದ ಬಯಕೆಗಳಿಗೂ ನಿಕಟ ಸಂಬಂಧವಿದೆ. ನಮ್ಮನ್ನು ಅತ್ಯಂತ ಕಾಡುವ ಭಯ ಯಾವುದು; ಏನು ದೊರೆತರೆ, ಏನನ್ನು ಈಗಿರುವ ಜೀವನದಲ್ಲಿ ಬದಲಾಯಿಸಿಕೊಂಡರೆ ಅಂತಹ ಭಯದಿಂದ ಬಿಡುಗಡೆ ಸಾಧ್ಯ ಎನ್ನುವುದಕ್ಕೆ ಉತ್ತರ ಹುಡುಕಿಕೊಳ್ಳುವುದು ಭಯವನ್ನು ಅರಿತುಕೊಳ್ಳಲು ಸಹಾಯಕ.

ನಮ್ಮ ಮೂಲ ಭಯ ನಮ್ಮ ಅಸ್ತಿತ್ವಕ್ಕೆ ಸಂಬಂಧಪಟ್ಟಿದ್ದು. ಸಾವಿನ ಭಯವೇ ಎಲ್ಲ ಭಯದ ಮೂಲ, ಸಾವೆಂದರೆ ಭೌತಿಕವಾಗಿ ಇಲ್ಲವಾಗುವುದು ಎಂದಷ್ಟೇ ಅರ್ಥಮಾಡಿಕೊಳ್ಳದೆ, ಸಾವಿನಷ್ಟೇ ಸಂಕಟ ತರುವ, ಭಾವನಾತ್ಮಕವಾಗಿ ನಮ್ಮ ಅಸ್ತಿತ್ವವನ್ನೇ ಇಲ್ಲವಾಗಿಸಿಬಿಡುವ ತಿರಸ್ಕಾರ, ಒಂಟಿತನ, ಅವಮಾನಗಳೂ ನಮ್ಮ ಮೂಲ ಭಯಗಳೇ ಹೌದು, ಇಂತಹ ಮೂಲ ಭಯಕ್ಕೂ ಮೂಲ ಬಯಕೆಗಳಿಗೂ ಸಂಬಂಧವಿದೆ.

ಭೌತಿಕವಾಗಿ ಜೀವಂತವಾಗಿರಬೇಕೆಂಬುದು ನಮ್ಮ ಮೊದಲ ಆದ್ಯತೆಯಾದರೂ, ಭಾವನಾತ್ಮಕವಾಗಿ ಜೀವಂತವಾಗಿರುವುದೇ ಎಲ್ಲಕ್ಕಿಂತಲೂ ಮಿಗಿಲಾದ ಬಯಕೆ; ಅಂದರೆ 'ಪ್ರೀತಿ' ನಮ್ಮ ಮೂಲ ಬಯಕೆ. ಪ್ರೀತಿಯನ್ನು ಕಳೆದುಕೊಳ್ಳುವ ಅಥವಾ ಪ್ರೀತಿಯನ್ನು ಪಡೆದುಕೊಳ್ಳದೇ ಇರಬಹುದಾದ ಸಾಧ್ಯತೆಯೇ ನಮ್ಮ ಮೂಲ ಭಯ. 'ಪ್ರೀತಿ ಇಲ್ಲದಿರುವುದು' ಎಂದರೆ ಅದು ದುಃಖವೇ ಹೌದು ಎನ್ನುವುದನ್ನು ಅತಿ ಚಿಕ್ಕ ವಯಸ್ಸಿನಲ್ಲೇ ಅನುಭವದಿಂದ ಕಂಡುಕೊಂಡಿರುತ್ತೇವೆ; ಹಾಗಾಗಿ ಭಯದ ತಿರುಳು ದುಃಖವೇ ಹೌದು. ಪ್ರೀತಿ ಇಲ್ಲದಿರುವ ಸಾಧ್ಯತೆ ತರಬಹುದಾದ ದುಃಖವನ್ನು ನಾವು ಹೇಗೆ ಅರ್ಥಮಾಡಿಕೊಳ್ಳುತ್ತೇವೆ, ಆ ದುಃಖವನ್ನು ಹೇಗೆ ಭರಿಸುತ್ತೇವೆ, ಅಂತಹ ದುಃಖಕ್ಕೆ ಉಪಶಮನ ಹೇಗೆ ಕಂಡುಕೊಳ್ಳುತ್ತೇವೆ ಎನ್ನುವುದೇ ಭಯದ ಜೊತೆಗಿನ ನಮ್ಮ ಸಂಬಂಧವನ್ನು ನಿರ್ಧರಿಸುತ್ತದೆ.

ಭಯದಿಂದ, ದುಃಖದಿಂದ ಮುಕ್ತಿ ಹೊಂದಬೇಕೆನ್ನುವುದು ಮನುಷ್ಯ ಜೀವನದ ಪರಮೋನ್ನತ ಗುರಿಗಳಲ್ಲಿ ಒಂದು, ಅಧ್ಯಾತ್ಮ ಸಾಧನೆಯ ಗುರಿಯೂ ಹೌದು. ಪ್ರೀತಿಗೆ ಹೊಸ ವ್ಯಾಖ್ಯೆಯೊಂದನ್ನು ಕಂಡುಕೊಳ್ಳದೆ, ಪ್ರೀತಿಯನ್ನು ಪಡೆಯುವ, ಕೊಡುವ ಅನೇಕ ರೀತಿಗಳನ್ನು ಕಂಡುಕೊಳ್ಳದೇ ದುಃಖದಿಂದ, ಭಯದಿಂದ ಮುಕ್ತಿಯಿಲ್ಲ ಎನ್ನುವುದನ್ನು ಅನೇಕ ಅಧ್ಯಾತ್ಮ ಸಾಧಕರ ಜೀವನ ದರ್ಶನಗಳಲ್ಲಿ ಕಾಣುತ್ತೇವೆ ಕೂಡ.

ನಾವು ಸಾಮಾನ್ಯವಾಗಿ ಭಯಕ್ಕೆ ವಿರುದ್ಧವಾದ ಸ್ಥಿತಿಯೆಂದರೆ ಧೈರ್ಯ ಎಂಬಂತೆ ಮಾತನಾಡುತ್ತೇವೆ, ಭಯ ಪಡುತ್ತಿರುವವರಿಗೆ 'ಧೈರ್ಯವಾಗಿರು' ಎನ್ನುವ ಮಾತನ್ನೂ ಹೇಳುತ್ತೇವೆ. ಆದರೆ ಧೈರ್ಯ ಹಾಗೆ ಸುಮ್ಮನೆ ಬಂದುಬಿಡುವುದಿಲ್ಲ, ಎಷ್ಟೇ ಧೈರ್ಯದ ಮಾತುಗಳನ್ನು ಕೇಳಿಸಿಕೊಂಡರೂ, ನಾವು ಭಯವನ್ನೂ, ಭಯಕ್ಕೆ ಮೂಲವಾಗಿರುವ ದುಃಖವನ್ನೂ ಅರಿತುಕೊಳ್ಳುವುದರಲ್ಲಿ ಸೋತಾಗ ಭಯವನ್ನು ಕೇವಲ ಸಕಾರಾತ್ಮಕ ಆಲೋಚನೆಗಳ ಮೂಲಕ ಧೈರ್ಯವನ್ನಾಗಿ ಪರಿವರ್ತಿಸಲು ಆಗುವುದಿಲ್ಲ. ನಿಜವಾಗಿ ನೋಡಿದರೆ ಭಯಕ್ಕೆ ಮದ್ದು ಧೈರ್ಯವಲ್ಲ, ಭಯಕ್ಕೆ ಮದ್ದು ಪ್ರೀತಿ, ನಂಬಿಕೆ, ಭರವಸೆ.

ಭಯ ನಾವು ಬದುಕನ್ನು ಪ್ರೀತಿಸುವುದರ ಸಂಕೇತ, ನಾವು ಚೆನ್ನಾಗಿ ಬದುಕಬೇಕೆಂಬ ನಮ್ಮ ಬಯಕೆಯ ಸಂಕೇತ, ನಮ್ಮ ಬಳಿ ಅಮೂಲ್ಯವಾದದ್ದೇನೋ ಇದೆ, ಎಚ್ಚರ ವಹಿಸದಿದ್ದರೆ ಅದನ್ನು ಕಳೆದುಕೊಳ್ಳಬಹುದೆಂಬ ಅರಿವಿನ ಸಂಕೇತ. 'ಅಮೂಲ್ಯವಾದದ್ದು' ಎಂದರೆ ಅದು ಯಾವುದಾದರೂ ಆಗಿರಬಹುದು, ಅದು ಬದುಕನ್ನು ಸವಿಯುವ ಅನೇಕ ಸಾಧ್ಯತೆಗಳಿರಬಹುದು, ಕುಟುಂಬವಿರಬಹುದು, ಸಮಯವಿರಬಹುದು ಅಥವಾ ನನ್ನ ಬಳಿಯಿರುವ ಅಮೂಲ್ಯವಸ್ತುವೆಂದರೆ ಅದು ಸಂವೇದನಾಶೀಲ 'ನಾನೇ' ಇರಬಹುದು, ಏಕೆಂದರೆ ನನ್ನನ್ನೇ ನಾನು ಕಳೆದುಕೊಳ್ಳುವ ಸಾಧ್ಯತೆಯೂ ಇದೆಯಲ್ಲ!? 'ನಾನೇ' ಅಂದರೆ ಬದುಕನ್ನು ಕಾಣುವ ಕಣ್ಣು, ಅನುಭವಿಸುವ ಹೃದಯವೇ ಕಳೆದುಹೋದರೆ ಸುಮ್ಮನೆ ಉಸಿರಾಡಿಕೊಂಡಿರುವುದು ಬದುಕೆನಿಸಿಕೊಳ್ಳದು. ಹಾಗಾಗಿ ನಮ್ಮ ಬಳಿಯಿರುವ ಆ 'ಅಮೂಲ್ಯ ವಸ್ತು', ಅದೇನು? ಅದನ್ನು ಕಳೆದುಕೊಳ್ಳದೆ ಇರುವುದು ಹೇಗೆ? ಕಳೆದುಹೋದದ್ದನ್ನು ಮತ್ತೆ ಕಂಡುಕೊಳ್ಳುವುದು ಹೇಗೆ? ಕಳೆದು ಹೋಗುವುದೇ ಅನಿವಾರ್ಯವಾದಾಗ ಏನು ಮಾಡಬೇಕು? ಎನ್ನುವುದೆಲ್ಲಾ ಬಗೆಹರಿಯದೇ ಭಯಕ್ಕೆ ಪರಿಹಾರವಿಲ್ಲ, ಬದುಕಿನ ಸತ್ಯಗಳನ್ನು ಸ್ವೀಕರಿಸುವ ಮನೋಭಾವವೇ ಭಯಕ್ಕೆ ನಿಜವಾದ ಮದ್ದು.

ನಾವು ಭಯವನ್ನು ಎಷ್ಟು ಆಳವಾಗಿ ಅರ್ಥಮಾಡಿಕೊಳ್ಳುತ್ತೇವೋ ನಮ್ಮ ಧೈರ್ಯಕ್ಕೆ ಅಷ್ಟು ಗಟ್ಟಿತನ ಬರುತ್ತದೆ, ಹಾಗಾಗಿ ಧೈರ್ಯವೆಂದರೆ ಸುಮ್ಮನೆ ಯೋಚಿಸದೆ ಮುನ್ನುಗ್ಗುವುದಲ್ಲ, ಹಾಗೆ ಮುನ್ನುಗ್ಗುವುದು ಕೆಲವೊಮ್ಮೆ ಅನರ್ಥಕಾರಿಯೂ ಆಗಬಹುದು. ಭಯವಾದಾಗ ಹೆದರಿ ಓಡಿ ಹೋಗುವುದರಿಂದ, ಭಯದಿಂದ ಅಡಗಿ ಕುಳಿತು ಏನೂ ಮಾಡದೆ ನಿಷ್ಕ್ರಿಯರಾಗಿರುವುದರಿಂದ, ಭಯದ ವಿರುದ್ಧ ಬುದ್ಧಿಯ ಮೂಲಕ ಆಲೋಚನೆಯ ಮೂಲಕ ಸೆಣಸಾಡುವುದರಿಂದ, ಭಯದಲ್ಲೇ ಕುಗ್ಗಿ ಹೋಗುವುದರಿಂದ ಭಯ ನಮ್ಮನ್ನು ಬಿಟ್ಟು ಹೋಗಿಬಿಡುವುದಿಲ್ಲ, ಭಯಕ್ಕೆ ಹೆದರಿ ಬದುಕಿನಿಂದ ದೂರ ಉಳಿದರೆ ಬದುಕಿನ ಸಂತೋಷ ನಮ್ಮನ್ನು ಬಿಟ್ಟುಹೋಗುತ್ತದಷ್ಟೇ. ನಮ್ಮ ಜೀವನದ ದಿಕ್ಕನ್ನು ನಿರ್ಧರಿಸಬೇಕಾದ್ದು ಭಯವೋ ಅಥವಾ ಜೀವನಪ್ರೀತಿಯೋ ಎನ್ನುವ ಆಯ್ಕೆ ನಮ್ಮದು, ಈ ಆಯ್ಕೆಯ ಸ್ವಾತಂತ್ರ್ಯ ನಮಗಿದೆ ಎಂದು ಅರಿವಾಗುವುದು ಭಯಕ್ಕೆ ನಾವು ಪ್ರೀತಿಯಿಂದ ಸ್ಪಂದಿಸುವುದನ್ನು ಕಲಿತಾಗ ಮಾತ್ರ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಅಧ್ಯಾಯ–1

ಸಮಾಂತರ ಶ್ರೇಢಿ

ನಿಮ್ಮ ಅಭ್ಯಾಸಕ್ಕಾಗಿ ಹೆಚ್ಚುವರಿ ಸಮಸ್ಯೆಗಳು

1) ಒಂದು ತ್ರಿಭುಜದ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ. ಅತ್ಯಂತ ಚಿಕ್ಕಕೋನ 50^0 ಇದ್ದರೆ, ಉಳಿದೆರಡು ಕೋನಗಳನ್ನು ಕಂಡುಹಿಡಿಯಿರಿ.

ಉತ್ತರ:– $a = 50^0$ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ ಮತ್ತು ಮೂರು ಕೋನಗಳ ಮೊತ್ತ 180^0

$$\therefore a+(a+d)+(a+2d)=180$$
$$50+(50+d)+(50+2d)=180$$
$$50+50+d+50+2d=180$$
$$150+3d=180$$
$$3d=180-150$$
$$d=\frac{30}{3}=10$$

$\therefore$ ಮೊದಲ ಕೋನ $a = 50$

ಎರಡನೇ ಕೋನ $(a+d) = 50 + 10 = 60$

ಮೂರನೇ ಕೋನ $(a+2d) = 50 + 2\,(10) = 50 + 20 = 70$

2) 56ನೇ ಪದ $\frac{5}{37}$ ಆಗಿರುವ ಸಮಾಂತರ ಶ್ರೇಢಿಯೊಂದರ ಮೊದಲ 111 ಪದಗಳ ಮೊತ್ತವನ್ನು ಕಂಡುಹಿಡಿಯಿರಿ.

ಉತ್ತರ:–
$$S_{111}=\frac{111}{2}[2a(111-1)d]$$
$$=\frac{111}{2}(2a+110d)$$
$$=\frac{111}{\not 2}\times \not 2\ [a+55d]$$
$$=\frac{111}{\not 2}\times T_{56}$$
$$=\frac{111\times 5}{37}$$
$$=\frac{555}{37}$$
$$S_{111}=15$$

3) nಪದಗಳ ಮೊತ್ತ $\frac{1}{2}n(7n-1)$ ಆಗಿರುವ ಒಂದು ಶ್ರೇಣಿಯ ಮೊದಲ ನಾಲ್ಕು ಪದಗಳನ್ನು ಕಂಡುಹಿಡಿಯಿರಿ.

ಉತ್ತರ: $S_n=\frac{1}{2}n(7n-1)$ ಕೊಟ್ಟಿದೆ $n=1$, ಆದಾಗ

$$S_1=\frac{1}{2}(1)(7\text{x}1-1)$$
$$=\frac{1}{2}\text{x}6=3$$
$$S_1=T_1=3$$
$$S_2=\frac{1}{2}(2)(7(2)-1)$$
$$=14-1$$
$$S_2=13$$
$$\Rightarrow T_1+T_2=13$$
$$\Rightarrow 3+T_2=13$$
$$T_2=13-3$$
$$\Rightarrow T_2=10$$
$$S_3=\frac{1}{2}\text{x}3\ (7(3)-1)$$
$$=\frac{1}{2}\text{x}3\text{x}20$$
$$S_3=30$$
$$\Rightarrow T_1+T_2+T_3=30$$
$$3+10+T_3=30$$
$$T_3=30-13\Rightarrow T_3=17$$
$$S_4=\frac{1}{2}\text{x}4\ [7(4)-1]$$
$$=2\text{ x }27=54$$
$$\Rightarrow T_1+T_2+T_3+T_4=54$$
$$3+10+17+T_4=54$$
$$T_4=54-30$$
$$T_4=24$$

$\therefore$ ಮೊದಲ ನಾಲ್ಕು ಪದಗಳು 3, 10, 17, 24 ಆಗಿವೆ.

4) ಮೊತ್ತ 51 ಆಗಲು ಸಮಾಂತರ ಶ್ರೇಢಿ 1, 4, 7..........ಯ ಎಷ್ಟು ಪದಗಳು ಬೇಕಾಗುತ್ತವೆ?

$a=1,\quad d=3,\quad S_n=51,\quad n=?$

$$S_n=\frac{n}{2}[2a+(n-1)d]$$
$$51=\frac{n}{2}[2(1)+(n-1)3]$$
$$51=\frac{n}{2}(2+3n-3)$$
$$51=\frac{n}{2}=(3n-1)$$
$$n(3n-1)=102\Rightarrow n(3n-1)=6\text{ x }17$$
$$n(3n-1)=6\text{ x }[3\text{ x }(6)-1]\Rightarrow n=6$$

5) ಮೊತ್ತ ಮತ್ತು ಗುಣಲಬ್ಧಗಳು ಈ ಕೆಳಕಂಡಂತೆ ಕ್ರಮವಾಗಿ ಇರುವ ಹಾಗೆ ಸಮಾಂತರ ಶ್ರೇಢಿಯಲ್ಲಿನ ಮೂರು ಪದಗಳನ್ನು ಕಂಡುಹಿಡಿಯಿರಿ.

i) 21 ಮತ್ತು 231. ii) 36 ಮತ್ತು 1620

ಉತ್ತರ:– a-d, a, a+d, ಸಮಾಂತರ ಶ್ರೇಢಿಯ ಮೂರು ಪದಗಳಾಗಿರಲಿ ಇವುಗಳ ಮೊತ್ತವು = 21

$$a-\not d+a+a+\not d=21$$
$$3a=21$$
$$\Rightarrow a=\frac{21}{3}\Rightarrow a=7$$

ಈ ಮೂರು ಪದಗಳ ಗುಣಲಬ್ಧವು = 231

$$(a-d)\,(a)\,(a+d)=231$$
$$(7\text{-}d)\,(7)\,(7\text{+}d)=231$$
$$(7^2-d^2)=\frac{231}{7}$$
$$49-d^2=33\Rightarrow 49-33=d^2$$
$$d^2=16$$
$$d^2=\sqrt{16}\Rightarrow d=\pm 4$$

$\therefore$ ಆ ಪದಗಳು a-d, a, a+d ಅಂದರೆ (7-4), (7), (7+4) ಅಥವಾ 7-(-4), (7), (7-4) = 3, 7, 11 ಅಥವಾ 11, 7, 3 ಆಗಿವೆ

ii) 36 ಮತ್ತು 1620

a-d, a, a+d ಗಳು. ಸಮಾಂತರ ಶ್ರೇಢಿಯಲ್ಲಿದ್ದರೆ ಅವುಗಳ ಮೊತ್ತವು = 36

$$a-\not d+a+a+\not d=36$$
$$3a=36$$
$$a=\frac{36}{3}=12$$

ಅವುಗಳ ಗುಣಲಬ್ಧ =1620

II PUC PHYSICS

Chapter – 1

ELECTRIC CHARGES AND FIELDS

2. The electric field intensity at a distance of 4 cm due to infinite line charge is $18\text{x}10^4\ NC^{-1}$. Calculate the linear charge density.

Soln:- Given, electric field $E = 18 \text{ x } 10^4\ NC^{-1}$

Distance r = 4 cm = 0.04 m

But $E=\frac{\lambda}{2\pi\epsilon_0 r}$ (or) $\lambda = E.\,2\pi\epsilon_0\, r$

i.e., $\lambda=\frac{E}{2}(4\pi\epsilon_0)r=\frac{18\text{x}10^4\text{x}0.04}{2\text{x}(9\text{x}10^9)}$ $\left(\therefore\frac{1}{4\pi\epsilon_0}=9\text{x}10^9\ Nm^2\,C^{-2}\right)$

$=4\text{x}10^{-7}\ Cm^{-1}$

3. Metal plates I and II are parallel and close to each other as shown in figure. On their inner faces, the plates have surface charge densities of opposite signs and of magnitude $8.85 \text{ x } 10^{-20}\ Cm^{-2}$. What is the electric field to the left and to the right of the plates as well as between the plates?



Soln:- $\vec{E}$ in region I and III will be zero (Field intensities due to plate 1 and 2 will cancel each other in region I and III due to equal and opposite signs of surface charge densities on plates I and II).

$$E_{II}=\frac{\sigma}{\epsilon_0}=\frac{8.85\text{x}10^{-20}}{8.85\text{x}10^{-12}}=10^{-8}\ NC^{-1}$$

4. A uniformly charged conducting sphere of radius 1.2 m has a surface charge density of 16 μC m^{-2}. Find (a) the charge on the sphere and (b) the total electric flux leaving the surface of the sphere.

Soln:- (a) Given, r = 1.2 m

Surface charge density, $\sigma = 16\mu C\ m^{-2} = 16 \text{ x } 10^{-6}\ C\ m^{-2}$

charge density, $\sigma=\frac{q}{4\pi r^2}\Rightarrow q=\sigma\text{ x }4\pi r^2$

(where, surface area of the sphere $=4\pi r^2$)

$$q=(16\text{x}10^{-6})\text{x}4\text{x}\frac{22}{7}\text{x}(1.2)^2$$
$$=2.9\text{ x}10^{-4}\,C$$

b) Total electric flux, ϕ

$$\frac{q}{\epsilon_0}=\frac{(2.9\text{x}10^{-4})}{8.85\text{x}10^{-12}}=3.28\text{x}10^7\ NC^{-1}\,m^2$$

5. A spherical conductor of radius 10 cm has a charge of $2 \text{ x } 10^{-7}$ C distributed uniformly on its surface. What is the electric field -

(a) inside the sphere

(b) at the surface of the sphere

(c) at a point 20 cm from the centre of the sphere?

Soln:- $q = 2 \text{ x } 10^{-7}$ C, $R = 10\text{ cm} = 10 \text{ x } 10^{-2}$ m

a) The conductor has no charge inside it because the whole charge resides on its outer surface. Therefore, electric field inside the conductor is zero.

b) At the surface of sphere,

$$E=\frac{1}{4\pi\epsilon_0}\left(\frac{q}{R^2}\right)$$
$$=\frac{9\text{x}10^9\text{x}2\text{x}10^{-7}}{(10\text{x}10^{-2})^2}$$
$$=1.8\text{ x }10^5\ NC^{-1}$$

c) At a point 20 cm from the centre of the sphere (i.e., at $r = 20 \text{ x } 10^{-2}$ m)

$$E=\frac{1}{4\pi\epsilon_0}\left(\frac{q}{r^2}\right)$$
$$=\frac{9\text{x}10^9\text{x}2\text{x}10^{-7}}{(20\text{x}10^{-2})^2}$$
$$=4.5\text{ x }10^4\ NC^{-1}$$

6. Two large parallel thin metallic plates are placed close to each other. The plates have surface charge densities of opposite signs and of magnitude $20 \text{ x } 10^{-12}\ C/m^2$. Calculate the electric field intensity –

(i) in the outer region of plates and

(ii) in the interior region between the plates.

Soln:- i) Electric field intensity in the outer region of the plates is zero. This because

$$E=E_1-E_2=\frac{1}{2\epsilon_0}(\sigma-\sigma)=0$$

ii) Electric field intensity in the interior region between the plates,

$$E=\frac{\sigma}{\epsilon_0}=\frac{20\text{ x }10^{-12}}{8.85\text{x}10^{-12}}=2.26\,NC^{-1}$$

7. An early model for an atom considered it to have a positively charged point nucleus of charge *Ze*, surrounded by a uniform density of negative charge upto a radius R. The atom as a whole is neutral. For this model, what is the electric field at a distance r from the nucleus?

Soln:- Charge on nucleus = +Ze



Since atom is neutral, therefore, charge outside the nucleus = -Ze

Now, negative volume charge density,

$$\rho=\frac{\text{negative charge}}{\left(\begin{array}{l}\text{volume of sphere of radius(R)}\\ \text{around the nucleus}\end{array}\right)}$$
$$=\frac{-Ze}{\frac{4}{3}\pi R^3}=-\frac{3Ze}{4\pi R^3}\ ....(i)$$

(i) Now consider a point B at a distance r from the nucleus, such that r > R. Draw a Gaussian surface in the form of a sphere of radius r. The net charge inside the Gaussian surface q = Ze –Ze = 0.

According to Gauss's theorem,

$$\oint\vec{E}.d\vec{s}=\frac{q}{\epsilon_0}$$

Since q = 0, therefore, E = 0 at point B.

(ii) Now consider a point A at a distance r from the nucleus, such that r < R.

Contd/-

ಎಸ್ಸೆಸ್ಸೆಲ್ಸಿ ಸಮಾಜವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸಿದ್ಧತೆ: ಬರದ ಮೇಲಿನ ಚರ್ಚೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಉತ್ತರ

7,151 ಜನವಸತಿಗಳಲ್ಲಿ ಜಲಕ್ಷಾಮ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಕೃಷ್ಣ ಬೈರೇಗೌಡ

ವಿಧಾನಸಭೆ: ರಾಜ್ಯದ 223 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಇದ್ದು, 7,151 ಜನವಸತಿಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗುವ ಸಾಧ್ಯತೆ ಇದೆ. ಪರಿಸ್ಥಿತಿ ಎದುರಿಸಲು ಈಗಿನಿಂದಲೇ ಸಿದ್ಧತೆ ಆರಂಭಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬರ ಪರಿಸ್ಥಿತಿ ಕುರಿತು ನಿಯಮ 69ರ ಅಡಿಯಲ್ಲಿ ನಡೆದ ಚರ್ಚೆಗೆ ಸೋಮವಾರ ಉತ್ತರ ನೀಡಿದ ಸಚಿವರು, 'ಸಮಸ್ಯಾತ್ಮಕ ಜನವಸತಿಗಳನ್ನು ಗುರುತಿಸುವ ಕೆಲಸವನ್ನು ವಿವಿಧ ಇಲಾಖೆಗಳ ಸಹಯೋಗದಲ್ಲಿ ಮಾಡಲಾಗಿದೆ. 6,237 ಹಳ್ಳಿಗಳು ಮತ್ತು ನಗರ ಪ್ರದೇಶಗಳ 914 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಕೊರತೆ ಎದುರಾಗಬಹುದು ಎಂದು ಅಂದಾಜು ಮಾಡಲಾಗಿದೆ. ಈ ಎಲ್ಲ ಜನವಸತಿಗಳಲ್ಲೂ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಸಿದ್ಧತೆ ಆರಂಭಿಸಲಾಗಿದೆ' ಎಂದರು.

ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆದು ಕುಡಿಯುವ ನೀರು ಒದಗಿಸಲು ಸಿದ್ಧತೆ ನಡೆಸಲಾಗಿದೆ. ಇದಕ್ಕಾಗಿ 3,836 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಲಾಗಿದೆ. ವಿಕೋಪ ಪರಿಹಾರ ನಿಧಿ ಅಡಿಯಲ್ಲಿ ಶಾಸಕರ ನೇತೃತ್ವದ ಕಾರ್ಯಪಡೆಗಳಿಗೆ ಒದಗಿಸುವ ಅನುದಾನದಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯಲು ಅವಕಾಶವಿಲ್ಲ. ಅನಿವಾರ್ಯ ಸಂದರ್ಭಗಳಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯುವುದಕ್ಕೂ ಅನುದಾನ ಒದಗಿಸಲಾಗುವುದು ಎಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಸಹಾಯಕ ಎಂಜಿನಿಯರ್ ಮತ್ತು ಗ್ರಾಮಲೆಕ್ಕಿಗರನ್ನು ಒಳಗೊಂಡ ತಂಡವನ್ನು ರಚಿಸಲಾಗುವುದು. ಈ ತಂಡವೇ ನೀರು ಪೂರೈಕೆಯ ಜವಾಬ್ದಾರಿಯನ್ನು ನಿರ್ವಹಿಸಲಿದೆ. ಈ ಅಧಿಕಾರಿಗಳ ತಂಡದ ವರದಿ ಆಧರಿಸಿ 15 ದಿನಗಳಿಗೊಮ್ಮೆ ಬಿಲ್ ಪಾವತಿ ಮಾಡಲಾಗುವುದು ಎಂದರು.

ದೇಶದ ಹಲವು ರಾಜ್ಯಗಳಲ್ಲಿ ಬರಗಾಲ ಇದೆ. ಇತರ ರಾಜ್ಯಗಳಿಗಿಂತ ಮೊದಲು ಕರ್ನಾಟಕದಲ್ಲಿ ಬರಪೀಡಿತ ತಾಲ್ಲೂಕುಗಳನ್ನು ಘೋಷಿಸಲಾಗಿದೆ. ರಾಜ್ಯದಲ್ಲಿ 48 ಲಕ್ಷ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆಹಾನಿ ಸಂಭವಿಸಿದೆ. ಸೆಪ್ಟೆಂಬರ್ 22ರಿಂದ ಮೂರು ಬಾರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ. ರಾಷ್ಟ್ರೀಯ ವಿಕೋಪ ಪರಿಹಾರ ನಿಧಿಯಡಿ (ಎನ್‌ಡಿಆರ್‌ಎಫ್) ₹18,171 ಕೋಟಿ ನೆರವು ಕೋರಲಾಗಿತ್ತು. ಕೇಂದ್ರದ ಅಧಿಕಾರಿಗಳ ತಂಡ ಅಧ್ಯಯನ ವರದಿಯನ್ನೂ ನೀಡಿದೆ. ಆದರೆ, ಕೇಂದ್ರ ಸರ್ಕಾರದಿಂದ ಸ್ಪಂದನೆಯೇ ಸಿಕ್ಕಿಲ್ಲ ಎಂದು ದೂರಿದರು.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಜ್ಯಕ್ಕೆ ನಿಗದಯಾಗಿರುವ 13 ಕೋಟಿ ಮಾನವ ದಿನಗಳನ್ನು ಬರಗಾಲದ ಕಾರಣಕ್ಕೆ 16 ಕೋಟಿ ಮಾನವ ದಿನಗಳಿಗೆ ಹೆಚ್ಚಿಸುವಂತೆ ಕೋರಿರುವ ಬೇಡಿಕೆಗೂ ಕೇಂದ್ರ ಸರ್ಕಾರ ಸ್ಪಂದಿಸಿಲ್ಲ. ಬರ ಪರಿಹಾರದ ವಿಚಾರದಲ್ಲಿ ಕೇಂದ್ರದ ಕೃಷಿ ಸಚಿವರು ಮತ್ತು ಗೃಹ ಸಚಿವರನ್ನು ಭೇಟಿಮಾಡಲು ಸಮಯಾವಕಾಶ ಕೋರಿ 12 ಪತ್ರ ಬರೆಯಲಾಗಿದೆ. ಆದರೆ, ಭೇಟಿಗೆ ಕಾಲಾವಕಾಶವನ್ನು ನೀಡಿಲ್ಲ ಎಂದು ಪತ್ರಗಳನ್ನು ಪ್ರದರ್ಶಿಸಿದರು.

ಚಿತ್ರದುರ್ಗ ಮತ್ತು ಗದಗ ಜಿಲ್ಲೆಯ ಕೆಲವು ಭಾಗಗಳಲ್ಲಿ ಮೇವಿನ ಕೊರತೆ ಕಾಣಿಸಿಕೊಂಡಿದೆ. ಪರಿಸ್ಥಿತಿ ಉಲ್ಬಣಿಸುವುದನ್ನು ತಡೆಯಲು ಹೊರ ರಾಜ್ಯಕ್ಕೆ ಮೇವು ಸಾಗಾಣಿಕೆ ನಿಷೇಧಿಸಲಾಗಿದೆ. ರೈತರು ಮೇವು ಬೆಳೆಯಲು ಉತ್ತೇಜನ ನೀಡುವುದಕ್ಕಾಗಿ 7.60 ಲಕ್ಷ ಮೇವಿನ ಕಿಟ್‌ಗಳನ್ನು ವಿತರಿಸಲಾಗಿದೆ. ಅಗತ್ಯ ಇರುವ ತಾಲ್ಲೂಕುಗಳಲ್ಲಿ ಗೋಶಾಲೆ ಅಥವಾ ಮೇವಿನ ಬ್ಯಾಂಕ್ ಆರಂಭಿಸಲಾಗುವುದು ಎಂದರು.

ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳ ಬಳಿ ₹ 895 ಕೋಟಿ ಅನುದಾನ ಲಭ್ಯವಿದೆ. ಕೇಂದ್ರ ಸರ್ಕಾರವು ಬರ ನಿರ್ವಹಣೆ ವಿಚಾರದಲ್ಲಿ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿದೆ. ಈಗ ವಿರೋಧ ಪಕ್ಷದವರು ಬರಗಾಲದ ವಿಚಾರವನ್ನು ರಾಜಕೀಯ ಪ್ರಚಾರಕ್ಕಾಗಿ ಬಳಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ ಎಂದು ದೂರಿದರು.

'ಕೇಂದ್ರ ಸರ್ಕಾರಕ್ಕೂ ಜವಾಬ್ದಾರಿ ಇದೆ'

'ಬರ ನಿರ್ವಹಣೆ ವಿಷಯದಲ್ಲಿ ರಾಜ್ಯ ಸರ್ಕಾರಕ್ಕೆ ಮಾತ್ರವಲ್ಲ, ಕೇಂದ್ರ ಸರ್ಕಾರಕ್ಕೂ ಜವಾಬ್ದಾರಿ ಇದೆ. ಆದರೆ, ನಿಯಮಾನುಸಾರ ನೆರವು ಕೋರಿ ನಾನು ಮತ್ತು ಕಂದಾಯ ಸಚಿವರು ಎಷ್ಟು ಪತ್ರ ಬರೆದರೂ ಕೇಂದ್ರದಿಂದ ಪ್ರತಿಕ್ರಿಯೆಯೇ ಇಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಉದ್ಯೋಗ ಖಾತ್ರಿ ಯೋಜನೆಯಡಿ ಪ್ರತಿಯೊಬ್ಬರಿಗೆ 150 ದಿನಗಳ ಕೆಲಸ ನೀಡಲು ಅವಕಾಶ ಇದ್ದರೂ ರಾಜ್ಯದ ಮನವಿಯನ್ನು ಪುರಸ್ಕರಿಸಿಲ್ಲ ಎಂದರು.

ಬರ ನಿರ್ವಹಣೆಗೆ ರಾಜ್ಯ ಸರ್ಕಾರ ಎಲ್ಲ ಕ್ರಮ ಕೈಗೊಂಡಿದೆ. ಜಿಲ್ಲಾಧಿಕಾರಿಗಳು ಮತ್ತು ತಹಶೀಲ್ದಾರ್‌ಗಳ ಬಳಿ ₹ 900 ಕೋಟಿ ಲಭ್ಯವಿದೆ. ಎಷ್ಟೇ ಹಣ ಖರ್ಚಾದರೂ ನೀರು, ಮೇವು ಕೊರತೆ ಆಗದಂತೆ ಎಚ್ಚರಿಕೆ ವಹಿಸಲು ಸೂಚಿಸಲಾಗಿದೆ. ಜನರಿಗೆ ಉದ್ಯೋಗದ ಕೊರತೆ ಆಗದಂತೆಯೂ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಸಾಲ ಮರುಪಾವತಿ ಅವಧಿ ವಿಸ್ತರಣೆ

ರೈತರು ಬ್ಯಾಂಕ್‌ಗಳು ಮತ್ತು ಸಹಕಾರ ಸಂಸ್ಥೆಗಳಿಂದ ಪಡೆದಿರುವ ಕೃಷಿ ಸಾಲದ ಮರುಪಾವತಿ ಅವಧಿ ವಿಸ್ತರಣೆಗೆ ರಾಜ್ಯಮಟ್ಟದ ಬ್ಯಾಂಕರುಗಳ ಸಮಿತಿ (ಎಸ್‌ಎಲ್‌ಬಿಸಿ) ಮುಖಾಂತರ ನಿರ್ದೇಶನ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಅಲ್ಪಾವಧಿ ಸಾಲವನ್ನು ಮಧ್ಯಮಾವಧಿಗೆ, ಮಧ್ಯಮಾವಧಿ ಸಾಲವನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತಿಸುವಂತೆ ಸೂಚಿಸಲಾಗಿದೆ. ರೈತರಿಗೆ ತೊಂದರೆಯಾಗಲು ಸರ್ಕಾರ ಅವಕಾಶ ನೀಡುವುದಿಲ್ಲ ಎಂದರು.

ಚಳ್ಳಕೆರೆಯಿಂದ ಪರಿಹಾರ ವಿತರಣೆ

ಈಗಾಗಲೇ ಘೋಷಿಸಿರುವಂತೆ ರೈತರಿಗೆ ₹ 2,000ವರೆಗಿನ ಪರಿಹಾರ ವಿತರಣೆಯನ್ನು ಚಳ್ಳಕೆರೆ ತಾಲ್ಲೂಕಿನಿಂದ ಮುಂದಿನ ವಾರದಲ್ಲಿ ಆರಂಭಿಸಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

'ಈ ಬಾರಿ ತಂತ್ರಾಂಶ ಆಧಾರಿತ ವ್ಯವಸ್ಥೆಯ ಮೂಲಕ ಬರ ಪರಿಹಾರ ವಿತರಿಸಲಾಗುವುದು. ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ನೈಸರ್ಗಿಕ ವಿಕೋಪ ಪರಿಹಾರ ವಿತರಣೆಯಲ್ಲೂ ಅಕ್ರಮಗಳು ನಡೆದಿದ್ದವು. ಬಸವರಾಜ ಬೊಮ್ಮಾಯಿ ಅವರ ಸಹೋದರನ ಜಮೀನಿಗೆ ನೀಡಬೇಕಾದ ಪರಿಹಾರವನ್ನು ಬೇರೊಬ್ಬರಿಗೆ ವಿತರಿಸಲಾಗಿತ್ತು' ಎಂದರು.

ಇಂದು ಬಿಜೆಪಿ ಶಾಸಕಾಂಗ ಪಕ್ಷದ ಸಭೆ: ಅತೃಪ್ತರ ಗೈರು?

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಮಂಗಳವಾರ ರಾತ್ರಿ ಇಲ್ಲಿನ ಜೆ.ಡಬ್ಲ್ಯು. ಮಾರಿಯೇಟ್ ಹೊಟೇಲ್‌ನಲ್ಲಿ ನಡೆಯಲಿದ್ದು, ಈ ಸಭೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಅವರೂ ಭಾಗವಹಿಸಲಿದ್ದಾರೆ.

ಬೆಳಗಾವಿ ಅಧಿವೇಶನ ಆರಂಭಗೊಂಡು ವಾರ ಕಳೆದರೂ ಶಾಸಕಾಂಗ ಪಕ್ಷದ ಸಭೆ ನಡೆಸುವ ಬಗ್ಗೆ ಗೊಂದಲ ಸೃಷ್ಟಿಯಾಗಿತ್ತು. ಅಲ್ಲದೇ, ವಿವಿಧ ನಾಯಕರ ಮಧ್ಯೆ ಸಮನ್ವಯದ ಕೊರತೆ ಮತ್ತು ಅಸಮಾಧಾನ ಕಲಾಪದ ವೇಳೆಯಲ್ಲಿ ಮುನ್ನೆಲೆಗೆ ಬಂದಿತ್ತು. ಅಧ್ಯಕ್ಷ ಮತ್ತು ವಿರೋಧಪಕ್ಷದ ನಾಯಕರ ಬಗ್ಗೆ ಅತೃಪ್ತಿ ಹೊಂದಿರುವವರು ಹಾಗೂ ಪಕ್ಷದಿಂದ ಅಂತರ ಕಾಯ್ದುಕೊಂಡಿರುವ ಶಾಸಕರು ಸಭೆಯಲ್ಲಿ ಭಾಗವಹಿಸುವ ಸಾಧ್ಯತೆ ಇಲ್ಲ ಎಂದು ಮೂಲಗಳು ಹೇಳಿವೆ.

ಎಲ್ಲರೂ ಭಾಗವಹಿಸುವಂತೆ ನೋಡಿಕೊಳ್ಳಲು ಅತೃಪ್ತರ ಮನವೊಲಿಸುವ ಕಾರ್ಯವೂ ಅಧ್ಯಕ್ಷ, ವಿರೋಧಪಕ್ಷದ ನಾಯಕರಿಂದ ನಡೆದಿದೆ. ಹೀಗಾಗಿ ಅತೃಪ್ತರೂ ಸಭೆಯಲ್ಲಿ ಭಾಗಹಿಸಲಿದ್ದಾರೆ ಎಂದು ಶಾಸಕರೊಬ್ಬರು ತಿಳಿಸಿದರು.

ಪ್ರತಿ ದಿನ ಶಾಸಕರ ಸಭೆ

ವಿಧಾನಮಂಡಲದ ಎರಡೂ ಸದನಗಳಲ್ಲಿ ಸಂಪರ್ಕ ಕೊರತೆಯಿಂದ ಉಂಟಾಗುತ್ತಿರುವ ಗೊಂದಲವನ್ನು ನಿವಾರಿಸುವ ಉದ್ದೇಶದಿಂದ ಬಿಜೆಪಿಯ ಹಿರಿಯ ಶಾಸಕರು ಪ್ರತಿ ದಿನ ಕಲಾಪದ ಆರಂಭಕ್ಕೂ ಮೊದಲು ಸಭೆ ನಡೆಸಿ ಅನುಸರಿಸಬೇಕಾದ ಕಾರ್ಯತಂತ್ರ ರೂಪಿಸುತ್ತಿದ್ದಾರೆ. ಈ ಸಭೆಯಲ್ಲಿ 8 ರಿಂದ 10 ಶಾಸಕರು ಭಾಗವಹಿಸುತ್ತಿದ್ದಾರೆ. ಉಪನಾಯಕ ಮತ್ತು ಸಚೇತಕರ ನೇಮಕ ಆಗದೇ ಇರುವುದರಿಂದ ಗೊಂದಲ ಸೃಷ್ಟಿ ಆಗುತ್ತದೆ. ಇದನ್ನು ಸರಿಪಡಿಸಲು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಬಿಜೆಪಿಯ ಶಾಸಕರೊಬ್ಬರು ತಿಳಿಸಿದರು.

ವಿರೋಧಪಕ್ಷದ ನಾಯಕ ಆರ್.ಅಶೋಕ ಅವರ ಕೊಠಡಿಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಆರಗ ಜ್ಞಾನೇಂದ್ರ, ಎಸ್. ಸುರೇಶ್‌ಕುಮಾರ್, ಸಿ.ಸಿ.ಪಾಟೀಲ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಬಸನಗೌಡ ಪಾಟೀಲ ಯತ್ನಾಳ, ಬಿ.ವೈ.ವಿಜಯೇಂದ್ರ, ಕೋಟ ಶ್ರೀನಿವಾಸ ಪೂಜಾರಿ, ಎನ್.ರವಿಕುಮಾರ್ ಭಾಗವಹಿಸಿದ್ದರು.

ವಕೀಲರ ಮೇಲಿನ ಹಿಂಸೆ ನಿಷೇಧ ಮಸೂದೆ ಮಂಡನೆ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ವಕೀಲರ ಮೇಲೆ ಹಲ್ಲೆ ಅಥವಾ ಹಿಂಸಾಚಾರ ನಡೆಸುವವರಿಗೆ ಆರು ತಿಂಗಳಿನಿಂದ ಮೂರು ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ₹ 1 ಲಕ್ಷದವರೆಗೆ ದಂಡ ವಿಧಿಸುವುದಕ್ಕೆ ಅವಕಾಶ ಕಲ್ಪಿಸುವ 'ಕರ್ನಾಟಕ ನ್ಯಾಯವಾದಿಗಳ ಮೇಲಿನ ಹಿಂಸಾಚಾರ ನಿಷೇಧ ಮಸೂದೆ- 2023' ಅನ್ನು ಸೋಮವಾರ ಸದನದಲ್ಲಿ ಮಂಡಿಸಲಾಯಿತು.

ವಕೀಲರು ತಮ್ಮ ಕರ್ತವ್ಯ ನಿರ್ವಹಣೆ ವಿಷಯದಲ್ಲಿ ಬೆದರಿಕೆಗಳು ಬಂದಾಗ, ಕರ್ತವ್ಯ ನಿರ್ವಹಣೆಗೆ ಅಡ್ಡಿಪಡಿಸಿದಾಗ, ಅವರ ಮೇಲೆ ಹಲ್ಲೆ ನಡೆಯುವಂತಹ ಸಂದರ್ಭಗಳಲ್ಲಿ ರಕ್ಷಿಸುವುದಕ್ಕಾಗಿ ಈ ಮಸೂದೆಯನ್ನು ರೂಪಿಸಲಾಗಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ಮಸೂದೆಯನ್ನು ಮಂಡಿಸಿದರು.

ಈ ಮಸೂದೆಯ ಅಡಿಯಲ್ಲಿ ದಾಖಲಿಸುವ ಪ್ರಕರಣಗಳ ವಿಚಾರಣೆಯನ್ನು ಪ್ರಥಮ ದರ್ಜೆ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅಥವಾ ಅದಕ್ಕಿಂತ ಹೆಚ್ಚಿನ ದರ್ಜೆಯ ನ್ಯಾಯಾಲಯಗಳಲ್ಲೇ ನಡೆಸಬೇಕು. ಯಾವುದೇ ಪ್ರಕರಣಗಳಲ್ಲಿ ವಕೀಲರನ್ನು ಬಂಧಿಸಿದಾಗ 24 ಗಂಟೆಗಳ ಒಳಗಾಗಿ ಆ ವಕೀಲನು ಸದಸ್ಯನಾಗಿರುವ ವಕೀಲರ ಸಂಘದ ಅಧ್ಯಕ್ಷ ಅಥವಾ ಕಾರ್ಯದರ್ಶಿಗೆ ಬಂಧನದ ವಿಷಯವನ್ನು ಪೊಲೀಸರು ತಿಳಿಸುವುದನ್ನು ಈ ಮಸೂದೆಯು ಕಡ್ಡಾಯಗೊಳಿಸುತ್ತದೆ.

ಎಸ್‌ಸಿಎಸ್‌ಪಿ, ಟಿಎಸ್‌ಪಿ: ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಅನುದಾನವನ್ನು 'ಪರಿಭಾವಿತ ವೆಚ್ಚ' ಎಂಬ ಪರಿಕಲ್ಪನೆಯಡಿ ಬೇರೆ ಉದ್ದೇಶಕ್ಕೆ ವರ್ಗಾವಣೆ ಮಾಡುವುದಕ್ಕೆ ಅವಕಾಶ ನೀಡುವ ಸೆಕ್ಷನ್ 7–ಡಿ ಅನ್ನು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯಿಂದ ಕೈಬಿಡುವ ಪ್ರಸ್ತಾವವುಳ್ಳ ತಿದ್ದುಪಡಿ ಮಸೂದೆಯನ್ನೂ ಸದನದಲ್ಲಿ ಮಂಡಿಸಲಾಯಿತು.

ಸೆಕ್ಷನ್ 7–ಡಿ ರದ್ದುಗೊಳಿಸುವುದರ ಜತೆ ಉಪ ಮುಖ್ಯಮಂತ್ರಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರನ್ನು ಎಸ್.ಸಿ ಮತ್ತು ಎಸ್.ಟಿ ರಾಜ್ಯ ಅಭಿವೃದ್ಧಿ ಪರಿಷತ್‌ನ ಪದನಿಮಿತ್ತ ಸದಸ್ಯರನ್ನಾಗಿ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರನ್ನು ಟಿಎಸ್‌ಪಿ ನೋಡಲ್ ಏಜೆನ್ಸಿಯ ಉಪಾಧ್ಯಕ್ಷರನ್ನಾಗಿ ನೇಮಿಸಲು ಅವಕಾಶ ಕಲ್ಪಿಸುವ ತಿದ್ದುಪಡಿಗಳೂ ಈ ಮಸೂದೆಯಲ್ಲಿವೆ.

ಲೀಲಾವತಿ ಪ್ರತಿಮೆ ಸ್ಥಾಪನೆ ಭರವಸೆ

ವಿಧಾನಸಭೆ: ಚಿತ್ರನಟಿ ದಿವಂಗತ ಲೀಲಾವತಿ ಅವರು ನಿರ್ಮಿಸಿರುವ ಪಶುವೈದ್ಯ ಆಸ್ಪತ್ರೆ ಆವರಣದಲ್ಲಿ ಲೀಲಾವತಿ ಅವರ ಪ್ರತಿಮೆ ಸ್ಥಾಪಿಸುವ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸುವುದಾಗಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಸಲಹೆಗೆ ಶಿವಕುಮಾರ್ ಅವರು ಈ ಭರವಸೆ ನೀಡಿದರು.

ನಿಧನ ವಾರ್ತೆ

ನಿವೃತ್ತ ನ್ಯಾಯಮೂರ್ತಿ ಎನ್.ಕೆ.ಪಾಟೀಲ

ಬೆಂಗಳೂರು: ಹೈಕೋರ್ಟ್‌ನ 'ಸಜ್ಜನ ನ್ಯಾಯಮೂರ್ತಿ' ಎಂದೇ ಹೆಸರಾಗಿದ್ದ ನಾಗನಾಥ ಕಂಟೆಪ್ಪ ಪಾಟೀಲ (70) ಸೋಮವಾರ ಹೈದರಾಬಾದ್‌ನ ಯಶೋದಾ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಪುತ್ರರು ಇದ್ದಾರೆ. ಪುತ್ರ ನಿಶಾಂತ್ ಪಾಟೀಲ ಸದ್ಯ ಸುಪ್ರೀಂ ಕೋರ್ಟ್‌ನಲ್ಲಿ ಕರ್ನಾಟಕ ಹೈಕೋರ್ಟ್‌ನ ಹೆಚ್ಚುವರಿ ಅಡ್ವೊಕೇಟ್ ಜನರಲ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬೀದರ್ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ನಿಡೆಬಾನ್ ಗ್ರಾಮದಲ್ಲಿ 1954ರ ಮೇ 2ರಂದು ಜನಿಸಿದ್ದ ಪಾಟೀಲರು ಬೆಂಗಳೂರಿನ ಶ್ರೀ ರೇಣುಕಾಚಾರ್ಯ ಕಾನೂನು ಕಾಲೇಜಿನಿಂದ ಕಾನೂನು ಪದವಿ ಪಡೆದಿದ್ದರು. 1982ರ ಏಪ್ರಿಲ್ 8ರಂದು ಸನ್ನದು ನೋಂದಣಿ ಮಾಡಿಸಿ 18 ವರ್ಷಗಳ ಕಾಲ ವಿವಿಧ ಸ್ತರಗಳ ನ್ಯಾಯಾಲಯದಲ್ಲಿ ವಕೀಲಿಕೆ ನಡೆಸಿದ್ದರು. 2000ರ ಡಿಸೆಂಬರ್ 11ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.

'ಅಂತ್ಯ ಸಂಸ್ಕಾರ ಮಂಗಳವಾರ (ಡಿ.12) ಸಂಜೆ 4 ಗಂಟೆಗೆ ಬೆಂಗಳೂರಿನ ವಿಮಾನ ನಿಲ್ದಾಣ ಮಾರ್ಗದಲ್ಲಿರುವ ಹೆಬ್ಬಾಳದ ಸ್ಮಶಾನದಲ್ಲಿ ನಡೆಯಲಿದೆ. ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು, ನ್ಯಾಯಾಂಗ ಬಡಾವಣೆಯ 14ನೇ ಮುಖ್ಯ ರಸ್ತೆಯಲ್ಲಿರುವ ಅವರ ನಿವಾಸದಲ್ಲಿ ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಅವಕಾಶ ಕಲ್ಪಿಸಲಾಗಿದೆ' ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಂಪರ್ಕ: 98804–78173.

ಜಮೀರ್ ವಜಾಗೆ ಆಗ್ರಹಿಸಿ ಬಿಜೆಪಿ–ಜೆಡಿಎಸ್ ಧರಣಿ

ಪ್ರಜಾವಾಣಿ ವಾರ್ತೆ

ವಿಧಾನಸಭೆಯಲ್ಲಿ ವಿರೋಧ ಪಕ್ಷದ ಸದಸ್ಯರು ಸಚಿವ ಜಮೀರ್ ಅಹಮದ್ ಖಾನ್ ಅವರನ್ನು ವಜಾಗೊಳಿಸುವಂತೆ ಆಗ್ರಹಿಸಿ ಸ್ಪೀಕರ್ ಪೀಠದ ಎದುರು ಧರಣಿ ನಡೆಸಿದರು —ವಾರ್ತಾ ಇಲಾಖೆ ಚಿತ್ರ

ವಿಧಾನಸಭೆ: ತೆಲಂಗಾಣ ವಿಧಾನಸಭಾ ಚುನಾವಣೆ ವೇಳೆ ಸಭಾಧ್ಯಕ್ಷ ಹುದ್ದೆಯ ಕುರಿತು ವಸತಿ ಸಚಿವ ಜಮೀರ್ ಅಹಮದ್ ಖಾನ್ ನೀಡಿರುವ ಹೇಳಿಕೆಯನ್ನು ವಿರೋಧಿಸಿ, ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡುವಂತೆ ಆಗ್ರಹಿಸಿ ಬಿಜೆಪಿ. ಜೆಡಿಎಸ್ ಶಾಸಕರು ಸೋಮವಾರ ಧರಣಿ ನಡೆಸಿದರು.

ಪ್ರಶ್ನೋತ್ತರ ವೇಳೆ ಜಮೀರ್ ಪ್ರಶ್ನೆಯೊಂದಕ್ಕೆ ಉತ್ತರ ಹೇಳಲು ನಿಂತಾಗ ಬಿಜೆಪಿ ಸದಸ್ಯರು ಅದಕ್ಕೆ ಅವಕಾಶ ನೀಡಲಿಲ್ಲ. 'ಜಮೀರ್ ಅವರಿಗೆ ಮಾತನಾಡಲು ಬಿಡುವುದಿಲ್ಲ' ಎಂದು ಬಿಜೆಪಿ ಸದಸ್ಯರು ಪಟ್ಟು ಹಿಡಿದರು.

'ಸಂವಿಧಾನದ ಹುದ್ದೆಗೆ ಜಮೀರ್ ಅಗೌರವ ತೋರಿದರೂ ಕಾಂಗ್ರೆಸ್ ಪಕ್ಷವಾಗಲಿ, ರಾಜ್ಯ ಸರ್ಕಾರವಾಗಲಿ ಕ್ಷಮೆ ಕೇಳಿಲ್ಲ. ಸಭಾಧ್ಯಕ್ಷರೂ ಸುಮ್ಮನೆ ಇದ್ದಾರೆ. ಇದನ್ನು ಸಹಿಸಲು ಸಾಧ್ಯವಿಲ್ಲ. ಆದ್ದರಿಂದ ಜಮೀರ್ ಅವರನ್ನು ಸಚಿವ ಸ್ಥಾನದಿಂದ ವಜಾ ಮಾಡಲೇಬೇಕು' ಎಂದು ಒತ್ತಾಯಿಸಿದರು.

ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸಭಾಧ್ಯಕ್ಷರ ಪೀಠದ ಮುಂದಿನ ಜಾಗ ಧಾವಿಸಿ, ಧರಣಿ ಆರಂಭಿಸಿದರು. ಆರಂಭದಲ್ಲಿ ಆರ್ಭಟದಲ್ಲೇ ಧರಣಿ, ಪ್ರತಿಭಟನೆ ನಡೆಸಿದ ಬಿಜೆಪಿ ಶಾಸಕರು ಸಂಜೆ ವೇಳೆ ದಣಿದು ಹೋಗಿದ್ದರು. ಸಂಜೆ 7.40ಕ್ಕೆ ಕಲಾಪ ಮುಂದೂಡುವ ಮುನ್ನ ಸಭಾಧ್ಯಕ್ಷ ಖಾದರ್ ಅವರು, ನಿಲುವಳಿ ಸೂಚನೆಗೆ ಮನವಿ ಕೊಟ್ಟಿದ್ದೀರಿ. ನಿಯಮ 69ರ ಅಡಿ ಚರ್ಚೆಗೆ ಅವಕಾಶ ಕೊಡುತ್ತೇನೆ. ಧರಣಿ ವಾಪಸ್ ತೆಗೆದುಕೊಂಡು, ನಿಮ್ಮ ಆಸನಗಳಿಗೆ ಹೋಗಿ ಎಂದು ಹೇಳಿದರು. ಅದಕ್ಕೆ ಒಪ್ಪಿದ ಬಿಜೆಪಿ ಸದಸ್ಯರು, ಧರಣಿ ವಾಪಸ್ ಪಡೆದರು.

ಜಮೀರ್ ವಜಾ ಮಾಡಿ: ಬಿಜೆಪಿಯ ಡಾ. ಸಿ. ಎನ್. ಅಶ್ವತ್ಥನಾರಾಯಣ ಅವರು, 'ಜಮೀರ್ ಅವರನ್ನು ವಜಾ ಮಾಡಿ' ಎಂದು ಘೋಷಣೆಗಳನ್ನು ಆರಂಭಿಸಿದರು. ಬಿಜೆಪಿ ಸದಸ್ಯರು ಧ್ವನಿಗೂಡಿಸಿದರು.

ಈ ಮಧ್ಯೆ ಸಭಾಧ್ಯಕ್ಷರು ಪ್ರಶ್ನೋತ್ತರ, ಮಸೂದೆಗಳ ಅಂಗೀಕಾರ ಮತ್ತು ಇತರ ಕಲಾಪವನ್ನು ನಡೆಸಿದರು. ಬಿಜೆಪಿ ಸದಸ್ಯರ ಘೋಷಣೆಗಳು ಮತ್ತು ಕೂಗಾಟ ಹೆಚ್ಚು ಫಲ ನೀಡಲಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಧರಣಿ ಕೈಬಿಡುವಂತೆ ಮನವೊಲಿಸಿದರೂ ಪ್ರಯೋಜನವಾಗಲಿಲ್ಲ.

ಬಿಜೆಪಿಯವರು ಗದ್ದಲ ಆರಂಭಿಸಿದ ಸ್ವಲ್ಪ ಹೊತ್ತಿನಲ್ಲೇ ಮಧ್ಯ ಪ್ರವೇಶಿಸಿ ಮಾತನಾಡಿದ ಸಭಾಧ್ಯಕ್ಷ ಯು.ಟಿ. ಖಾದರ್, 'ಏಕಾಏಕಿ ಪ್ರಶ್ನೋತ್ತರ ಅವಧಿಗೆ ಅಡ್ಡಿಪಡಿಸುವುದು ಸರಿಯಲ್ಲ. ಬರಗಾಲದ ವಿಷಯ ಮತ್ತು ಉತ್ತರ ಕರ್ನಾಟಕದ ಬಗ್ಗೆ ಚರ್ಚೆ ಮಾಡದೇ ಈ ರೀತಿ ಅಡ್ಡಿಪಡಿಸುವುದು ಸರಿಯಲ್ಲ ಎಂದು ಹೇಳಿ 10 ನಿಮಿಷಗಳ ಅವಧಿಗೆ ಕಲಾಪವನ್ನು ಮುಂದೂಡಿದರು.

ಖಾದರ್ ಅವರು ಬಿಜೆಪಿ ನಾಯಕರನ್ನು ತಮ್ಮ ಕೊಠಡಿಗೆ ಕರೆಸಿ ಸಂಧಾನ ನಡೆಸಿದರೂ ಫಲ ನೀಡಲಿಲ್ಲ. 'ಜಮೀರ್ ಅವರ ವಜಾ ಆಗಲೇಬೇಕು' ಎಂದು ಬಿಜೆಪಿ ಪಟ್ಟು ಹಿಡಿಯಿತು.

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, 'ಜಮೀರ್ ಅಹಮದ್ ಅವರು ಪೀಠಕ್ಕೆ ಅಗೌರವ ಆಗುವ ಯಾವುದೇ ಮಾತುಗಳನ್ನು ಆಡಿಲ್ಲ. ಬಿಜೆಪಿಯವರು ರಾಜಕೀಯ ಮತ ಬೇಟೆಗಾಗಿ ಕ್ಷುಲ್ಲಕ ರಾಜಕಾರಣ ಮಾಡುತ್ತಿದ್ದಾರೆ. ಇದು ನಾಚಿಕೆಯ ಸಂಗತಿ. ಸಮಾಜಕ್ಕೆ ಬೆಂಕಿ ಇಡುತ್ತಿದ್ದಾರೆ' ಎಂದು ಹರಿಹಾಯ್ದರು.

ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, 'ಇನ್ನು ಮುಂದೆ ಸದನದಲ್ಲಿ ಸಭಾಧ್ಯಕ್ಷರಿಗೆ ಅಲೈಕು ಸಲಾಂ, ಜೀ ಹುಜೂರ್, ಜಹಾಂಪನ ಎಂದೂ ಹೇಳಬೇಕಾಗುತ್ತದೆ' ಎಂದರು.

'ಸಭಾಧ್ಯಕ್ಷರು ಏಕಪಕ್ಷೀಯವಾಗಿ ವರ್ತಿಸುತ್ತಿದ್ದಾರೆ. ಒನ್ ಸೈಡ್ ಒನ್ ಸೈಡ್', 'ಖಾದರ್ ಸಾಬ್ ಜರಾ ಸುನೋ', 'ಜಮೀರ್ ವಜಾ ಮಾಡಿ ಖಾದರ್ ಮಂತ್ರಿ ಮಾಡಿ' ಎಂದು ಬಿಜೆಪಿ ಸದಸ್ಯರು ಘೋಷಣೆ ಕೂಗಿದರೆ, 'ಜಮೀರ್ ಕರ್ನಾಟಕದ ಜಿನ್ನಾ. ಜಿನ್ನಾದ್ದೂ ಫೋಟೊ ಹಾಕಿಸಿ' ಎಂದರು ಯತ್ನಾಳ.

ಕಳೆದ ವಾರ ಧರಣಿ ಮತ್ತು ಸಭಾತ್ಯಾಗದಲ್ಲಿ ಪಾಲ್ಗೊಳ್ಳದ ಶಾಸಕ ಎಸ್.ಟಿ.ಸೋಮಶೇಖರ್ ಸೋಮವಾರ ಧರಣಿಯಲ್ಲಿ ಭಾಗವಹಿಸಿದ್ದರು. ರಮೇಶ ಜಾರಕಿಹೊಳಿ ಕಲಾಪಕ್ಕೆ ಬಂದಿದ್ದರೂ ಧರಣಿಯ ವೇಳೆ ಹೊರ ಹೋದವರು ಮತ್ತೆ ಬರಲೇ ಇಲ್ಲ.

ಸಭಾಧ್ಯಕ್ಷ ಸ್ಥಾನಕ್ಕೆ ಅಗೌರವ: ಆರ್.ಅಶೋಕ

- ಜಮೀರ್ ಅವರು ಹಿಂದೂಗಳನ್ನು ಎರಡನೇ ದರ್ಜೆ ನಾಗರಿಕರಂತೆ ಪರಿಗಣಿಸುವ ಹೇಳಿಕೆ ನೀಡಿದ್ದಾರೆ. ಈ ರೀತಿ ಹಿಂದೆ ಎಂದೂ ಆಗಿರಲಿಲ್ಲ. ಇದು ಪಾಕಿಸ್ತಾನವೊ ಭಾರತವೋ? ಇವರು ಪಾಕಿಸ್ತಾನದ ಸಂವಿಧಾನ ಪಾಲಿಸುತ್ತಿದ್ದಾರೆಯೇ?
- ಕರ್ನಾಟಕದಲ್ಲಿ ಸಭಾಧ್ಯಕ್ಷ ಸ್ಥಾನಕ್ಕೆ ಮುಸ್ಲಿಂ ವ್ಯಕ್ತಿಯನ್ನು ನೇಮಿಸಿದ್ದೇವೆ. ಆ ಸ್ಥಾನದಲ್ಲಿ ಹಿಂದೂಗಳು ತಲೆಬಾಗಬೇಕು ಎಂದು ಹೇಳಿದ್ದಾರೆ. ಮುಸ್ಲಿಮರು ಉನ್ನತ ಸ್ಥಾನದವರು. ಅವರ ಅಡಿಯಲ್ಲಿ ಹಿಂದೂಗಳು ಸಲಾಂ ಹೊಡೆದು ಕೆಳಗೆ ಕೂರಬೇಕು ಎಂಬುದು ಅವರ ಮಾತಿನ ಅರ್ಥ.
- ತೆಲಂಗಾಣದಲ್ಲಿ ಚುನಾವಣೆ ಸಂದರ್ಭದಲ್ಲಿ ಜಮೀರ್ ಅವರು ಸಭಾಧ್ಯಕ್ಷ ಹುದ್ದೆಯ ಬಗ್ಗೆ ಕೋಮು ಬಣ್ಣ ಹಚ್ಚುವ ಹೇಳಿಕೆ ನೀಡಿದ್ದರು. ಮುಸ್ಲಿಂ ಸಭಾಧ್ಯಕ್ಷರಿಗೆ ಬಿಜೆಪಿಯವರು ತಲೆಬಾಗುವಂತೆ ಮಾಡಿದ್ದೇವೆ ಎಂದು ಹೇಳಿದ್ದಾರೆ. ಇದು ಸಭಾಧ್ಯಕ್ಷ ಸ್ಥಾನಕ್ಕೆ ಮಾಡಿರುವ ಅಗೌರವ.
- ಇದು ಬಿಜೆಪಿ ಹೋರಾಟ ಮಾತ್ರವಲ್ಲ, ಸಂವಿಧಾನ ಉಳಿಸುವ ಹೋರಾಟ. ಆದ್ದರಿಂದ ಸದನದ ಕಲಾಪದ ಅವಧಿಯನ್ನು ಒಂದು ವಾರ ಮುಂದುವರಿಸಬೇಕು

ಬಿಜೆಪಿಗೆ ಬರದ ಬಗ್ಗೆ ಕಾಳಜಿ ಇಲ್ಲ: ಖಾದರ್

- ಬಿಜೆಪಿಯವರಿಗೆ ಬರ ಮತ್ತು ಉತ್ತರ ಕರ್ನಾಟಕದ ವಿಷಯದ ಬಗ್ಗೆ ಚರ್ಚೆ ನಡೆಸುವ ಕಾಳಜಿ ಇಲ್ಲ. ಹೀಗಾಗಿ ನೋಟಿಸ್ ಕೊಡದೇ ವಿಷಯ ಪ್ರಸ್ತಾಪಿಸಿದ್ದೀರಿ. ನೋಟಿಸ್ ಕೊಟ್ಟರೆ ವಿಷಯ ಪ್ರಸ್ತಾಪಕ್ಕೆ ಅವಕಾಶ ನೀಡುತ್ತೇನೆ
- ಜನರ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡುವ ಆಸಕ್ತಿ ಇಲ್ಲ. ಈ ರೀತಿ ಧರಣಿಯಿಂದ ಪ್ರಯೋಜನವಿಲ್ಲ. ಕೋಟಿಗಟ್ಟಲೆ ಹಣ ವ್ಯರ್ಥವಾಗುತ್ತಿದೆ. ನಿಮಗೆ ರಾಜ್ಯದ ಜನರ ಬಗ್ಗೆ ಕಾಳಜಿ ಇಲ್ಲ
- ಜಮೀರ್ ಅವರ ಹೇಳಿಕೆಗೆ ಬಹಳ ದಿನಗಳೇ ಆಗಿಹೋದವು. ಅಧಿವೇಶನ ಆರಂಭವಾಗಿ ಒಂದು ವಾರ ಆಯಿತು. ಆಗ ಸುಮ್ಮನಿದ್ದೀರಿ. ಈಗ ಏಕಾಏಕಿ ವಿಷಯ ಪ್ರಸ್ತಾಪಿಸಿ ಅಡ್ಡಿಪಡಿಸುತ್ತಿರುವುದು ಸರಿಯಲ್ಲ. ನನ್ನ ಜಾಗದಲ್ಲಿ ನೀವು ಇದ್ದರೆ ಏನು ಮಾಡುತ್ತಿದ್ದಿರಿ?

ಇಷ್ಟು ದಿನ ಸುಮ್ಮನಿದ್ದದ್ದು ಏಕೆ?: ಸಿ.ಎಂ

- ನಮ್ಮ ಪಕ್ಷ ಸಂವಿಧಾನಕ್ಕೆ ಅತ್ಯಂತ ಗೌರವ ಕೊಡುತ್ತದೆ. ಇದು ಸಂವಿಧಾನದ ಬಿಕ್ಕಟ್ಟಿನ ಪ್ರಶ್ನೆಯೇ ಅಲ್ಲ. ಬಿಜೆಪಿಯವರಿಗೆ ಸಂವಿಧಾನದ ಬಗ್ಗೆ ಗೌರವವೇ ಇಲ್ಲ.
- ಸಚಿವ ಜಮೀರ್ ಜತೆ ಚರ್ಚಿಸಿದ್ದೇನೆ. ಯಾವುದೇ ಶಾಸಕರಿಗೆ ಅವಮಾನವಾಗುವಂತೆ ಮಾತನಾಡಿಲ್ಲ ಮತ್ತು ಅಸಂಸದೀಯ ಪದ ಬಳಸಿಲ್ಲ ಎಂದು ತಿಳಿಸಿದ್ದಾರೆ.
- ಮುಸ್ಲಿಂ ಧರ್ಮೀಯರಿಗೆ ಸ್ಪೀಕರ್ ಸ್ಥಾನ ಕೊಟ್ಟಿರುವುದನ್ನು ಮುಸ್ಲಿಂ ಮುಖಂಡರ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಸ್ಪೀಕರ್ ಸ್ಥಾನಕ್ಕೆ ಎಲ್ಲರೂ ಗೌರವ ಕೊಡಬೇಕು ಎಂದಿದ್ದಾರೆ.
- ಅವರು ಮಾತನಾಡಿ ತಿಂಗಳಾಗುತ್ತಿದೆ. ಅದು ಪ್ರಮುಖ ವಿಷಯವೇ ಆಗಿದ್ದರೆ ಇಷ್ಟು ದಿನ ಬಿಜೆಪಿಯವರು ಮೌನವಾಗಿದ್ದುದು ಏಕೆ? ಅಧಿವೇಶನದ ಮೊದಲ ವಾರ ಏಕೆ ಪ್ರಸ್ತಾಪಿಸಲಿಲ್ಲ?
- ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತು ಸದನದಲ್ಲಿ ಚರ್ಚೆಯಾದರೆ ಬಿಜೆಪಿಯವರ ಬಂಡವಾಳ ಹೊರಗೆ ಬರುತ್ತದೆ. ಈ ಕಾರಣದಿಂದ ಪ್ರತಿಭಟನೆಗೆ ಇಳಿದಿದ್ದಾರೆ.

ಕ್ಷಮೆಯೂ ಇಲ್ಲ, ರಾಜೀನಾಮೆಯೂ ಇಲ್ಲ: ಜಮೀರ್ ಅಹಮದ್ ಖಾನ್

ಬೆಳಗಾವಿ: ಸಭಾಧ್ಯಕ್ಷರ ಹುದ್ದೆಯ ಬಗ್ಗೆ ಗೌರವದಿಂದ ಮಾತನಾಡಿದ್ದೇನೆ. ಬಿಜೆಪಿಯವರಿಗೆ ಬೇರೆ ವಿಷಯ ಇಲ್ಲದ ಕಾರಣಕ್ಕೆ ಹೀಗೆ ಮಾಡುತ್ತಿದ್ದಾರೆ. ಕ್ಷಮೆ ಕೇಳುವ ಪ್ರಶ್ನೆಯೂ ಇಲ್ಲ; ರಾಜೀನಾಮೆ ಕೊಡುವುದೂ ಇಲ್ಲ ಎಂದು ಸಚಿವ ಜಮೀರ್ ಅಹಮದ್ ಖಾನ್ ಹೇಳಿದರು.

ಸುವರ್ಣ ವಿಧಾನಸೌಧದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಕ್ಷಮೆ ಕೇಳುವಂತಹ ಮಾತನ್ನು ಆಡಿಲ್ಲ ಎಂದರು.

'ನಿಯಮಗಳ ಪ್ರಕಾರ ನೋಟಿಸ್ ನೀಡಿದರೆ ಚರ್ಚೆಗೆ ಸಿದ್ಧ. ಅವರಿಗೆ ಚರ್ಚೆ ಬೇಕಿಲ್ಲ. ವಿವಾದ ಬೇಕಿದೆ. ಸಭಾಧ್ಯಕ್ಷರ ಪೀಠಕ್ಕೆ ಎಲ್ಲ ಸದಸ್ಯರೂ ಸೇರಿ ನಮಸ್ಕರಿಸುತ್ತೇವೆ. ಅಂತಹ ಉನ್ನತ ಹುದ್ದೆಯನ್ನು ಮುಸ್ಲಿಂ ಸಮುದಾಯಕ್ಕೆ ಕಾಂಗ್ರೆಸ್ ನೀಡಿದೆ ಎಂದು ಹೇಳಿದ್ದರಲ್ಲಿ ತಪ್ಪೇನು' ಎಂದರು.

ದಾವೋಸ್ ಸಮಾವೇಶಕ್ಕೆ ಸಿ.ಎಂ: ₹12 ಕೋಟಿ ವೆಚ್ಚ

ವಿಧಾನಸಭೆ: ಸ್ವಿಟ್ಜರ್‌ಲೆಂಡ್‌ನ ದಾವೋಸ್‌ನಲ್ಲಿ 2024ರ ಜನವರಿಯಲ್ಲಿ ನಡೆಯಲಿರುವ ವಿಶ್ವ ಆರ್ಥಿಕ ವೇದಿಕೆಯ ಸಮಾವೇಶದಲ್ಲಿ ಭಾಗವಹಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ನಿಯೋಗಕ್ಕೆ ₹ 12 ಕೋಟಿ ಅಂದಾಜು ವೆಚ್ಚವಾಗಲಿದೆ.

ಬಜೆಟ್‌ನ ಅಂದಾಜು ವೆಚ್ಚಕ್ಕೆ ಹೊರತಾಗಿ, ಸರ್ಕಾರ ಹೆಚ್ಚುವರಿಯಾಗಿ ವಿವಿಧ ಕಾರ್ಯಕ್ರಮ ಹಾಗೂ ವೆಚ್ಚಗಳಿಗಾಗಿ ಭರಿಸಬೇಕಾದ ಒಟ್ಟು ₹ 3,542.10 ಕೋಟಿ ಮೊತ್ತದ ಮೊದಲ ಪೂರಕ ಅಂದಾಜನ್ನು ಸೋಮವಾರ ವಿಧಾನಸಭೆಯಲ್ಲಿ ಮಂಡಿಸಲಾಗಿದೆ.

ಕೈಗಾರಿಕಾ ಸಚಿವರ ನೇತೃತ್ವದ ನಿಯೋಗದ ಅಮೆರಿಕ ಭೇಟಿಗೆ ₹ 2.25 ಕೋಟಿ, ವಿಧಾನ ಸಭಾಧ್ಯಕ್ಷರಿಗೆ ಹೊಸ ವಾಹನ ಖರೀದಿಸಲು ₹ 39 ಲಕ್ಷ, ಉಪ ಸಭಾಪತಿಗೆ ಹೊಸ ವಾಹನ ಖರೀದಿಸಲು ಹೆಚ್ಚುವರಿಯಾಗಿ ₹ 8 ಲಕ್ಷ ಒದಗಿಸಲಾಗಿದೆ.

'ವೈದ್ಯಕೀಯ ಕಾಲೇಜು ಎಚ್‌ಒಡಿ ನೇಮಕಕ್ಕೆ ರೊಟೇಷನ್ ಪದ್ಧತಿ'

ಪ್ರಜಾವಾಣಿ ವಾರ್ತೆ

ವಿಧಾನ ಪರಿಷತ್: 'ಸ್ವಾಯತ್ತ ಸಂಸ್ಥೆಗಳೂ ಸೇರಿದಂತೆ ಎಲ್ಲ ವೈದ್ಯಕೀಯ ಕಾಲೇಜುಗಳಲ್ಲಿ ವಿಭಾಗ ಮುಖ್ಯಸ್ಥರ (ಎಚ್‌ಒಡಿ) ನೇಮಕಕ್ಕೆ ರೊಟೇಷನ್ ಪದ್ಧತಿ ಅಳವಡಿಸಲು ಉದ್ದೇಶಿಸಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ್ ಪಾಟೀಲ ಹೇಳಿದರು.

ಜೆಡಿಎಸ್‌ನ ಮರಿತಿಬ್ಬೇ ಗೌಡರ ಪ್ರಶ್ನೆಗೆ ಉತ್ತರಿಸಿದ ಅವರು, 'ಒಬ್ಬರೇ ಹಲವು ವರ್ಷ ಎಚ್‌ಒಡಿ ಹುದ್ದೆಯಲ್ಲಿ ಮುಂದುವರಿಯುವುದನ್ನು ತಪ್ಪಿಸಲು ವೃಂದ ಮತ್ತು ನೇಮಕಾತಿ (ಸಿ ಆ್ಯಂಡ್ ಆರ್) ನಿಯಮಗಳಿಗೆ ತಿದ್ದುಪಡಿ ತರಲಾಗುವುದು' ಎಂದರು.

'ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳಡಿ ಬರುವ ಸರ್ಕಾರಿ ವೈದ್ಯಕೀಯ ವಿಜ್ಞಾನ ಕಾಲೇಜುಗಳ ಸಿಬ್ಬಂದಿಗಳ ನೇಮಕಾತಿ, ಜೇಷ್ಠತೆ, ಬಡ್ತಿ ನೀಡುವ ಸಂಬಂಧ ಹಾಲಿ ಇರುವ ನಿಯಮಕ್ಕೆ ತಿದ್ದುಪಡಿ ತರಲಾಗುವುದು. ಒಂದು ತಿಂಗಳ ಒಳಗೆ ಈ ಪ್ರಕ್ರಿಯೆ ಪೂರ್ಣಗೊಳ್ಳಲಿದೆ' ಎಂದರು.

'ಗ್ರೂಪ್ 'ಎ' ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಗ್ರೂಪ್ 'ಬಿ', 'ಸಿ' ಮತ್ತು 'ಡಿ' ಸಿಬ್ಬಂದಿಗೆ ಇದೇ ನಿಯಮಗಳನ್ನು ಅಳವಡಿಸಿಕೊಳ್ಳುವ ಕುರಿತು ಅಧಿಕಾರಿಗಳ ಜೊತೆ ಚರ್ಚೆ ನಡೆಸಿ, ಕಾನೂನು ಮತ್ತು ಆರ್ಥಿಕ ಇಲಾಖೆಯಿಂದ ಅಭಿಪ್ರಾಯ ಕೇಳಲಾಗಿದೆ. ಇದೇ 22ರಂದು ಇನ್ನೊಂದು ಸುತ್ತಿನ ಸಭೆ ಇದೆ. ಎಲ್ಲ ಸಾಧಕ-ಬಾಧಕಗಳ ಬಗ್ಗೆ ಚರ್ಚಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಅವರು ಹೇಳಿದರು.

ಆಯುಷ್ ಆಸ್ಪತ್ರೆಗಳಿಗೆ ಶೀಘ್ರ ಸಿಬ್ಬಂದಿ ನೇಮಕಾತಿ: ದಿನೇಶ್ ಗುಂಡೂರಾವ್

'ತಾಲ್ಲೂಕು ಮತ್ತು ಜಿಲ್ಲಾ ಆಯುಷ್ ಆಸ್ಪತ್ರೆಗಳಲ್ಲಿ ಒಳರೋಗಿಗಳಿಗೆ ಚಿಕಿತ್ಸೆ ನೀಡಲು ಅಗತ್ಯವಿರುವ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಒಂದೆರಡು ತಿಂಗಳಲ್ಲಿ ಪೂರ್ಣಗೊಳ್ಳಲಿದೆ' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿಯ ಟಿ.ಎಚ್. ಪೂಜಾರ್ ಅವರ ಪ್ರಶ್ನೆಗೆ ಉತ್ತರಿಸಿದ ಅವರು, 'ರಾಜ್ಯದಲ್ಲಿ ಒಟ್ಟು 80 ಸರ್ಕಾರಿ ಆಯುಷ್ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ. ಆ ಪೈಕಿ, 55 ಆಸ್ಪತ್ರೆಗಳಿಗೆ ಸಿಬ್ಬಂದಿಗಳಿದ್ದರೆ, 25 ಆಸ್ಪತ್ರೆಗಳಲ್ಲಿ ಕೊರತೆ ಇದೆ' ಎಂದರು.

'ರಾಷ್ಟ್ರೀಯ ಆಯುಷ್ ಅಭಿಯಾನದಡಿ ಇಬ್ಬರು ತಜ್ಞ ವೈದ್ಯರು ಒಳಗೊಂಡಂತೆ ಎಂಟು ಸಿಬ್ಬಂದಿಯನ್ನು ತಾತ್ಕಾಲಿಕ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಈ ಆಸ್ಪತ್ರೆಗಳಲ್ಲಿ ಒಳರೋಗಿಗಳನ್ನು ದಾಖಲಿಸಿಕೊಳ್ಳಲಾಗುತ್ತಿದೆ' ಎಂದರು.

ಹಿಮೋಫೀಲಿಯಾ ಪತ್ತೆ ಹಚ್ಚಲು ಕ್ರಮ: 'ಹಿಮೋಫೀಲಿಯಾ ಮತ್ತು ರಕ್ತಹೀನತೆ ಸಂಬಂಧಿಸಿದ ಕಾಯಿಲೆಗಳನ್ನು ಪತ್ತೆಹಚ್ಚಲು ಸರ್ಕಾರ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

ಬಿಜೆಪಿಯ ಎಸ್. ರುದ್ರೇಗೌಡ ಪ್ರಶ್ನೆಗೆ ಉತ್ತರಿಸಿದ ಅವರು, 'ಈ ಎರಡೂ ಕಾಯಿಲೆಗಳು ಅನುವಂಶಿಕ ಇಲ್ಲವೇ ಹುಟ್ಟಿನಿಂದ ಬರುವ ಕಾಯಿಲೆಗಳಾಗಿವೆ. ಈ ರೋಗಕ್ಕೆ ತುತ್ತಾದವರಿಗೆ ರಾಜ್ಯ ರಕ್ತ ಕೋಶ ಕಾರ್ಯಕ್ರಮದಡಿ ಉಚಿತ ಚಿಕಿತ್ಸೆ ಮತ್ತು ಆರೈಕೆಯನ್ನು ಮಾಡಲಾಗುತ್ತದೆ. ಜಿಲ್ಲಾಸ್ಪತ್ರೆಗಳು ಮತ್ತು ವೈದ್ಯಕೀಯ ಆಸ್ಪತ್ರೆಗಳಲ್ಲಿ 6ರಿಂದ 8 ಹಾಸಿಗೆಗಳ ಆರೈಕೆ ಕೇಂದ್ರಗಳನ್ನು ಸ್ಥಾಪಿಸಲಾಗಿದೆ' ಎಂದರು.

ಕರ್ನಾಟಕ ಸ್ಟಾಂಪು(ತಿದ್ದುಪಡಿ) ಮಸೂದೆ 2023ಗೆ ಒಪ್ಪಿಗೆ

ಗದ್ದಲ: ಚರ್ಚೆ ಇಲ್ಲದೆ 5 ಮಸೂದೆ ಅಂಗೀಕಾರ

ಪ್ರಜಾವಾಣಿ ವಾರ್ತೆ

ವಿಧಾನಸಭೆ: ಮುದ್ರಾಂಕ ಶುಲ್ಕ ಹೆಚ್ಚಿಸುವ ಮತ್ತು ಬ್ಯಾಂಕ್ ಗ್ಯಾರಂಟಿಗಳ ಮೇಲಿನ ಶುಲ್ಕವನ್ನು ಪರಿಷ್ಕರಿಸುವ ಉದ್ದೇಶದ ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ 2023 ಸೇರಿ ಒಟ್ಟು ಐದು ಮಸೂದೆಗಳನ್ನು ವಿರೋಧಪಕ್ಷಗಳ ಧರಣಿ ಮಧ್ಯೆ ಸೋಮವಾರ ಅಂಗೀಕರಿಸಲಾಯಿತು.

ವಸತಿ ಜಮೀರ್ ಅಹಮದ್ ವಜಾಗೆ ಆಗ್ರಹಿಸಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಧರಣಿ ನಡೆಸುತ್ತಿದ್ದಾಗಲೇ ಸಭಾಧ್ಯಕ್ಷ ಯು.ಟಿ.ಖಾದರ್ ಅವರು ಮಸೂದೆಗಳನ್ನು ಪರ್ಯಾಲೋಚನೆಗೆ ಕೈಗೆತ್ತಿಕೊಂಡರು. ಮಸೂದೆಯ ಮೇಲಿನ ಚರ್ಚೆಯಲ್ಲಿ ಭಾಗವಹಿಸುವಂತೆ ಖಾದರ್ ಅವರು ಮನವಿ ಮಾಡಿದರೂ ವಿರೋಧ ಪಕ್ಷಗಳ ಸದಸ್ಯರು ಕಿವಿಗೆ ಹಾಕಿಕೊಳ್ಳಲಿಲ್ಲ. ಗದ್ದಲ ಮಧ್ಯೆಯೇ ಪರ್ಯಾಲೋಚನೆ ನಡೆಸಿದರು.

ನೋಂದಣಿ ದರ ಪರಿಷ್ಕರಣೆ ಇಲ್ಲ: ಕರ್ನಾಟಕ ಸ್ಟಾಂಪು (ತಿದ್ದುಪಡಿ) ಮಸೂದೆ ಕುರಿತು ವಿವರಣೆ ನೀಡಿದ ಕಂದಾಯ ಸಚಿವ ಕೃಷ್ಣಬೈರೇಗೌಡ, 'ಈ ಮಸೂದೆಯ ಉದ್ದೇಶ ನೋಂದಣಿ ದರ ಹೆಚ್ಚಿಸುವುದಕ್ಕಲ್ಲ. ಹಲವು ಬಗೆಯ ಮುದ್ರಾಂಕ ಶುಲ್ಕವನ್ನು ಪರಿಷ್ಕರಿಸುವುದಾಗಿದೆ. ಕೆಲವು ದರಗಳನ್ನು 1994, 2007 ಮತ್ತು 2011 ರಲ್ಲಿ ಪರಿಷ್ಕರಿಸಲಾಗಿತ್ತು. ಇನ್ನೂ ₹5,₹6,₹10 ಶುಲ್ಕಗಳಿವೆ. ಈಗಿನ ದಿನಮಾನಕ್ಕೆ ತಕ್ಕಂತೆ ಪರಿಷ್ಕರಿಸಬೇಕಾಗಿದೆ' ಎಂದು ಹೇಳಿದರು.

'ದತ್ತಕ ಪತ್ರ, ಬ್ಯಾಂಕ್ ಗ್ಯಾರಂಟಿ, ದೃಢೀಕರಣ ಪತ್ರ, ಒಪ್ಪಂದ ಪತ್ರ, ಲಿಖಿತಗಳ ರದ್ದತಿ, ಒಡಂಬಡಿಕೆ ಪತ್ರ- ಹೀಗೆ 54 ವಿಷಯಗಳಿಗೆ ಸಂಬಂಧಿಸಿದಂತೆ ಮುದ್ರಾಂಕ ಶುಲ್ಕವನ್ನು ಸಂಗ್ರಹಿಸಲಾಗುತ್ತಿದೆ. ಇಲಾಖೆಗೆ ಮುಂದ್ರಾಕದಿಂದ ಶೇ 10 ರಷ್ಟು ಮಾತ್ರ ಆದಾಯ ಬರುತ್ತಿದೆ. ನೋಂದಣಿಯಿಂದ ಶೇ 90 ರಷ್ಟು ಆದಾಯ ಬರುತ್ತಿದೆ. ಮುದ್ರಾಂಕ ಶುಲ್ಕ ಸಂಗ್ರಹಣೆಯಲ್ಲಿ ಸೋರಿಕೆ ಆಗುತ್ತಿದ್ದು, ಅದನ್ನು ತಡೆಗಟ್ಟಲು ಕ್ರಮ ಕೈಗೊಳ್ಳಲಾಗುವುದು. ದರ ಗೊಂದಲ ನಿವಾರಣೆಯೂ ಮಸೂದೆಯ ಮತ್ತೊಂದು ಪ್ರಮುಖ ಉದ್ದೇಶ' ಎಂದು ತಿಳಿಸಿದರು.

ಜನಸಂಖ್ಯೆ ಮಿತಿ ತಗ್ಗಿಸಲು ಕೊಡಗು ಶಾಸಕರ ಒತ್ತಾಯ: ಮಲೆನಾಡು ಮತ್ತು ಕೊಡಗು ಜಿಲ್ಲೆಗಳಲ್ಲಿ ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಪ್ರತಿ ಕ್ಷೇತ್ರದ ಜನಸಂಖ್ಯೆ ಕನಿಷ್ಠ ಮಿತಿ 18 ಸಾವಿರದ ಬದಲಿಗೆ 17 ಸಾವಿರಕ್ಕೆ ತಗ್ಗಿಸಬೇಕು ಎಂದು ಕಾಂಗ್ರೆಸ್‌ನ ಎ.ಎಸ್. ಪೊನ್ನಣ್ಣ, ಮಂಥರ್ ಗೌಡ ಮತ್ತು ಟಿ.ಡಿ. ರಾಜೇಗೌಡ ಒತ್ತಾಯಿಸಿದರು.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ತಿದ್ದುಪಡಿ ಮಸೂದೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದ ಅವರು, ಮಲೆನಾಡು ಮತ್ತು ಕೊಡಗು ಭಾಗದಲ್ಲಿ ಕೆಲವು ಕ್ಷೇತ್ರಗಳ ವ್ಯಾಪ್ತಿ ನೂರು ಕಿ.ಮೀ ಹೆಚ್ಚು ವಿಸ್ತೀರ್ಣವನ್ನು ಹೊಂದಿವೆ. ಆದರೂ ಜನಸಂಖ್ಯೆ ಕಡಿಮೆ ಇರುತ್ತದೆ ಎಂದರು.

ಈ ಮಸೂದೆ ಈಗಾಗಲೇ ಸುಗ್ರೀವಾಜ್ಞೆ ರೂಪದಲ್ಲಿ ಜಾರಿಯಲ್ಲಿದ್ದು, ಅದನ್ನು ಬದಲಿಸಲು ಮಸೂದೆ ತರಲಾಗಿದೆ. ಇದಕ್ಕೆ ಅಂಗೀಕಾರ ನೀಡಿ, ಮುಂದಿನ ದಿನಗಳಲ್ಲಿ ಬದಲಾವಣೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಕರಾವಳಿ ಅಭಿವೃದ್ಧಿ ಮಂಡಳಿ ಮಸೂದೆ 2023: ಕರಾವಳಿ ಪ್ರದೇಶದ ಸರ್ವತೋಮುಖ ಅಭಿವೃದ್ಧಿಗಾಗಿ ಕರಾವಳಿ ಮಂಡಳಿ ಸ್ಥಾಪಿಸಲು ಈ ಮಸೂದೆ ತರಲಾಗಿದೆ ಎಂದು ಯೋಜನಾ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ತಿಳಿಸಿದರು.

ಮಲೆನಾಡು ಪ್ರದೇಶದ ವ್ಯಾಖ್ಯಾನದೊಳಗಿನಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ಹೊರಗಿಡಲು ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿ ಅಧಿನಿಯಮಕ್ಕೆ ತಿದ್ದುಪಡಿ ಅಗತ್ಯ ಎಂದು ಹೇಳಿದರು.

ಕರಾವಳಿ ಪ್ರದೇಶ ಅಭಿವೃದ್ಧಿ ಮಂಡಳಿ ರಚನೆಯ ಜತೆಗೆ ಒಂದು ಅನುಷ್ಠಾನ ಸಮಿತಿಯ ರಚನೆ, ವಿವಿಧ ಇಲಾಖೆಗಳ ಸಮನ್ವಯಕ್ಕೆ ಮಂಡಳಿಗೆ ಅಧಿಕಾರ ನೀಡಲಾಗುವುದು ಎಂದು ಸುಧಾಕರ್ ತಿಳಿಸಿದರು.

ಅಂಗೀಕಾರಗೊಂಡ ಇತರೆ ಮಸೂದೆಗಳು

- ಕರ್ನಾಟಕ ಸರಕು ಮತ್ತು ಸೇವೆ ತೆರಿಗೆ(ಎರಡನೇ ತಿದ್ದುಪಡಿ) 2023
- ಕರ್ನಾಟಕ ವೈದ್ಯಕೀಯ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ಅಭ್ಯರ್ಥಿಗಳ ಕಡ್ಡಾಯ ಸೇವಾ(ತಿದ್ದುಪಡಿ) ಮಸೂದೆ 2023

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

❦ ಸುಭಾಷಿತ ❦

ಕಷ್ಟಗಳು ನಿಮ್ಮನ್ನು ನಾಶ ಮಾಡಲೆಂದು ಬರುವುದಿಲ್ಲ, ನಿಮ್ಮಲ್ಲಿ ಅಡಗಿರುವ ಸಾಮರ್ಥ್ಯ, ಶಕ್ತಿಯನ್ನು ನೀವು ಅರಿಯಲು ನೆರವಾಗುತ್ತವೆ. ನಿಮ್ಮನ್ನು ಎದುರಿಸುವುದೂ ಕಷ್ಟ ಎಂಬುದು ಕಷ್ಟಗಳಿಗೆ ಅರಿವಾಗಲಿ.

-ಎ.ಪಿ.ಜೆ. ಅಬ್ದುಲ್ ಕಲಾಂ

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಅನ್ಯ ಉದ್ದೇಶಕ್ಕೆ ಬಳಸುವುದು ಬೇಡ

ರಾಜ್ಯದಲ್ಲಿ ಪರಿಶಿಷ್ಟ ಜಾತಿ (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ಅಭಿವೃದ್ಧಿಗೆ ಸರ್ಕಾರ ಮೀಸಲಿಡುತ್ತಿರುವ ಅನುದಾನವು ಸಮರ್ಪಕವಾಗಿ ಈ ಸಮುದಾಯಗಳ ಜನರನ್ನು ತಲುಪುತ್ತಿಲ್ಲ ಎಂದು ವಿಧಾನಮಂಡಲದ ಎಸ್.ಸಿ ಮತ್ತು ಎಸ್.ಟಿ ಕಲ್ಯಾಣ ಸಮಿತಿಯು ತನ್ನ ವರದಿಯಲ್ಲಿ ಹೇಳಿದೆ. ಪರಿಶಿಷ್ಟರ ಅಭ್ಯುದಯಕ್ಕಾಗಿ ಮೀಸಲಿಡುವ ಅನುದಾನವು ಅದೇ ಉದ್ದೇಶಕ್ಕೆ ಸದ್ಬಳಕೆ ಆಗುವುದನ್ನು ಖಾತರಿಪಡಿಸಲು ಹೊಸ ವ್ಯವಸ್ಥೆಯೊಂದನ್ನು ರೂಪಿಸಬೇಕು ಎಂದು ವಿಧಾನಮಂಡಲದಲ್ಲಿ ಈ ತಿಂಗಳ 6ರಂದು ಮಂಡಿಸಿರುವ ವರದಿಯಲ್ಲಿ ಸಮಿತಿ ಶಿಫಾರಸು ಮಾಡಿದೆ. ಸಮಿತಿಯ ಅಂದಾಜಿನ ಪ್ರಕಾರ, ರಾಜ್ಯದಲ್ಲಿ ಎಸ್.ಸಿ ಮತ್ತು ಎಸ್.ಟಿ ಜನರ ಒಟ್ಟು ಸಂಖ್ಯೆ 1.8 ಕೋಟಿಯಷ್ಟಿದೆ. 2013ರಲ್ಲಿ ಪರಿಶಿಷ್ಟ ಜಾತಿ ಉಪಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ (ಟಿಎಸ್‌ಪಿ) ಕಾಯ್ದೆ ಜಾರಿಯಾಯಿತು. ಅಂದಿನಿಂದ ಈವರೆಗೆ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ₹ 2.5 ಲಕ್ಷ ಕೋಟಿ ಅನುದಾನ ಒದಗಿಸಲಾಗಿದೆ. ಈ ಮೊತ್ತದಲ್ಲಿ ದೊಡ್ಡ ಪಾಲು, ನಿರ್ದಿಷ್ಟಪಡಿಸಿದ ಫಲಾನುಭವಿಗಳನ್ನು ತಲುಪಿಲ್ಲ ಎಂದು ಸಮಿತಿಯು ವರದಿಯಲ್ಲಿ ಹೇಳಿದೆ.

ಜನಸಂಖ್ಯೆಗೆ ಅನುಗುಣವಾಗಿ ಎಸ್.ಸಿ ಮತ್ತು ಎಸ್.ಟಿ ಸಮುದಾಯಗಳ ಅಭಿವೃದ್ಧಿಗೆ ಅನುದಾನ ಮೀಸಲಿಡುವುದನ್ನು ಕಡ್ಡಾಯಗೊಳಿಸುವ 'ಕರ್ನಾಟಕ ಪರಿಶಿಷ್ಟ ಜಾತಿ ಉಪಯೋಜನೆ ಮತ್ತು ಪರಿಶಿಷ್ಟ ಪಂಗಡಗಳ ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಕಾಯ್ದೆ'ಯನ್ನು ವಿಧಾನಮಂಡಲವು 2013ರಲ್ಲಿ ಅಂಗೀಕರಿಸಿತು. ಈ ಉಪಯೋಜನೆಗಳ ಅಡಿಯಲ್ಲಿ ಮೀಸಲಿಡುವ ಅನುದಾನವನ್ನು ಅನ್ಯ ಉದ್ದೇಶಗಳಿಗೆ ವರ್ಗಾಯಿಸುವಂತಿಲ್ಲ, ಪರಿಶಿಷ್ಟ ಸಮುದಾಯದ ಜನರಿಗೆ ನೇರವಾಗಿ ಅನುಕೂಲವಾಗುವಂತಹ ಕಾರ್ಯಕ್ರಮಗಳಿಗೆ ಮಾತ್ರ ಬಳಸಬೇಕು ಎಂಬ ನಿರ್ಬಂಧ ಕಾಯ್ದೆಯಲ್ಲಿದೆ. ಈ ಅನುದಾನವನ್ನು ಬೇರೆ ಯೋಜನೆಗಳಿಗೆ ವಿಭಜಿಸಿ, ವರ್ಗಾಯಿಸುವುದಕ್ಕೂ ಅವಕಾಶವಿಲ್ಲ. ಆದರೆ, ಇದಕ್ಕೆ ತದ್ವಿರುದ್ಧ ಎಂಬಂತಹ ಅಂಶವೊಂದನ್ನು ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7-ಡಿ ಒಳಗೊಂಡಿದೆ. 'ಮೂಲಸೌಕರ್ಯ ಯೋಜನೆಗಳಲ್ಲಿ ಬಳಕೆ ಮಾಡುವ ಅನುದಾನವನ್ನು ಪರಿಶಿಷ್ಟರ ಅಭಿವೃದ್ಧಿ ಉದ್ದೇಶಕ್ಕಾಗಿಯೇ ಬಳಸಲಾಗಿದೆ ಎಂದು ಪರಿಭಾವಿಸಬಹುದು' (ಡೀಮ್ಡ್ ಎಕ್ಸ್‌ಪೆಂಡಿಚರ್) ಎಂದು ಸೆಕ್ಷನ್ 7-ಡಿ ಹೇಳುತ್ತದೆ. ರಸ್ತೆಗಳು, ಸೇತುವೆಗಳಂತಹ ಮೂಲಸೌಕರ್ಯಗಳನ್ನು ಪರಿಶಿಷ್ಟರೂ ಬಳಸುತ್ತಾರೆ ಎಂಬ ಕಾರಣವನ್ನು ಮುಂದಿಟ್ಟುಕೊಂಡು ಎಸ್‌ಸಿಎಸ್‌ಪಿ ಹಾಗೂ ಟಿಎಸ್‌ಪಿ ಅನುದಾನವನ್ನು ಈ ಕಾಮಗಾರಿಗಳಿಗೆ ವಿನಿಯೋಗಿಸಲು ಸೆಕ್ಷನ್ 7-ಡಿ ಅವಕಾಶ ಕಲ್ಪಿಸಿದೆ. ಪರಿಶಿಷ್ಟರ ಅಭಿವೃದ್ಧಿಗಾಗಿ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಗಳಿಗೆ ವರ್ಗಾವಣೆ ಮಾಡುವುದನ್ನು ನಿರ್ಬಂಧಿಸುವುದು ಕಾಯ್ದೆಯ ಪ್ರಮುಖ ಧ್ಯೇಯಗಳಲ್ಲಿ ಒಂದು. ಆದರೆ, ಈ ಕಾಯ್ದೆಯ ಸೆಕ್ಷನ್ 7-ಡಿ ದುರ್ಬಳಕೆ ಪದೇಪದೇ ಆಗುತ್ತಲೇ ಇದೆ. ಅದರ ಪರಿಣಾಮವಾಗಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಒದಗಿಸಿದ್ದ ಹತ್ತಾರು ಸಾವಿರ ಕೋಟಿ ರೂಪಾಯಿಗಳ ಅನುದಾನವು ಅನ್ಯ ಕಾರ್ಯಕ್ರಮಗಳಿಗಾಗಿ ವರ್ಗಾವಣೆಯಾಗಿದೆ. ಪರಿಶಿಷ್ಟರ ಅಭಿವೃದ್ಧಿಗೆ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸುವುದನ್ನು ನಿರ್ಬಂಧಿಸುವ ಕಾಯ್ದೆಯ ಮೂಲ ಉದ್ದೇಶವೇ ಸೆಕ್ಷನ್-7ಡಿ ಕಾರಣದಿಂದ ವಿಫಲಗೊಳ್ಳುತ್ತಿದೆ.

ಪರಿಶಿಷ್ಟರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳಿಗೆ ಮಾತ್ರವೇ ಈ ಅನುದಾನ ಬಳಕೆಯಾಗಬೇಕು

ಸಿದ್ದರಾಮಯ್ಯ ನೇತೃತ್ವದ ಈಗಿನ ಸರ್ಕಾರವು 2023-24ರ ಬಜೆಟ್‌ನಲ್ಲಿ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿಯಲ್ಲಿ ಪರಿಶಿಷ್ಟರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ₹ 34,294 ಕೋಟಿ ಅನುದಾನವನ್ನು ಮೀಸಲಿಟ್ಟಿದೆ. ಈ ಪೈಕಿ ₹ 11,000 ಕೋಟಿಯಷ್ಟು ಅನುದಾನವನ್ನು ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕಾಗಿ ವರ್ಗಾಯಿಸುವ ನಿರ್ಧಾರವನ್ನು ಕೈಗೊಂಡಿದೆ. ದಲಿತ ಸಂಘಟನೆಗಳ ಪ್ರಬಲ ವಿರೋಧಕ್ಕೆ ಮಣಿದ ರಾಜ್ಯ ಸರ್ಕಾರವು ಎಸ್‌ಸಿಎಸ್‌ಪಿ, ಟಿಎಸ್‌ಪಿ ಕಾಯ್ದೆಯ ಸೆಕ್ಷನ್ 7-ಡಿ ಅನ್ನು ರದ್ದುಗೊಳಿಸಲು ಮುಂದಾಗಿದೆ. ಇದಕ್ಕಾಗಿ ತಿದ್ದುಪಡಿ ಮಸೂದೆಯನ್ನು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಲಾಗಿದೆ. ಆದರೆ, ಗ್ಯಾರಂಟಿಗಳ ಅನುಷ್ಠಾನಕ್ಕೆ ₹ 11,000 ಕೋಟಿಯಷ್ಟು ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನವನ್ನು ವರ್ಗಾಯಿಸುವ ನಿರ್ಧಾರವನ್ನು ಹಿಂಪಡೆಯಲಾಗುತ್ತದೆಯೇ ಎಂಬುದರ ಕುರಿತು ಸರ್ಕಾರ ತನ್ನ ನಿಲುವನ್ನು ಸ್ಪಷ್ಟಪಡಿಸಿಲ್ಲ. ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿಯಲ್ಲಿ ಈವರೆಗೆ ಮಾಡಿರುವ ವೆಚ್ಚ ಹಾಗೂ ಈ ಯೋಜನೆಗಳಿಗೆ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಗಳಿಗೆ ವರ್ಗಾವಣೆ ಮಾಡಿರುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಶ್ವೇತಪತ್ರವೊಂದನ್ನು ಪ್ರಕಟಿಸಬೇಕು. ಆ ಮೂಲಕ, ಪರಿಶಿಷ್ಟರ ಅಭಿವೃದ್ಧಿಗಾಗಿ ಅವರ ಜನಸಂಖ್ಯೆಗೆ ಅನುಗುಣವಾಗಿ ಅನುದಾನ ಮೀಸಲಿಟ್ಟು, ಬಳಕೆ ಮಾಡಬೇಕೆಂಬ ಕಾಯ್ದೆಯ ಅನುಷ್ಠಾನದಲ್ಲಿನ ಗೊಂದಲಗಳಿಗೆ ತೆರೆ ಎಳೆಯಬೇಕು. ಈ ಯೋಜನೆಗಳ ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಅನ್ಯ ಉದ್ದೇಶಗಳಿಗೆ ವರ್ಗಾಯಿಸಲು ಅವಕಾಶ ನೀಡುವುದರಿಂದ ಶೋಷಿತ ಸಮುದಾಯಗಳ ಜನರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅಡಿ ಒದಗಿಸಿದ ಅನುದಾನವನ್ನು ಸಂಪೂರ್ಣವಾಗಿ ನಿರ್ದಿಷ್ಟ ಉದ್ದೇಶಕ್ಕಾಗಿಯೇ ಬಳಸುವುದನ್ನು ಕಡ್ಡಾಯಗೊಳಿಸಬೇಕು. ಪರಿಶಿಷ್ಟರ ಅಭಿವೃದ್ಧಿಗೆ ಪೂರಕವಾದ ಕಾರ್ಯಕ್ರಮಗಳಿಗೆ ಮಾತ್ರವೇ ಈ ಅನುದಾನ ಬಳಕೆಯಾಗಬೇಕು. 'ಪರಿಭಾವಿತ ವೆಚ್ಚ' ಎಂಬ ಪರಿಕಲ್ಪನೆಗೆ ಸರ್ಕಾರ ವಿದಾಯ ಹೇಳಬೇಕು.

ದಿನದ ಟ್ವೀಟ್

ಹೊಸ ಅಧ್ಯಾಯಕ್ಕೆ ನಾಂದಿ

ಸುಪ್ರೀಂ ಕೋರ್ಟ್ ತೀರ್ಪಿನಿಂದ ನನಗೆ ಸಂತೋಷವಾಗಿದೆ, ಕಾಶ್ಮೀರ ವಿವಾದಕ್ಕೆ ಕೊನೆಗೂ ಅಂತ್ಯ ಹಾಡಲಾಗಿದೆ. ಸತ್ಯಶೋಧನಾ ಮತ್ತು ಸಾಮರಸ್ಯ ಆಯೋಗ ರಚಿಸಬೇಕೆಂಬ ಕೌಲ್ ಅವರ ಸಲಹೆಯೂ ಉತ್ತಮವಾಗಿದೆ. ಶಾಂತಿ ಸ್ಥಾಪನೆಯ ಹೊಸ ಅಧ್ಯಾಯ ಆರಂಭವಾಗಲಿ.

ಎಸ್.ವೈ.ಖುರೇಷಿ, ನಿವೃತ್ತ ಮುಖ್ಯ ಚುನಾವಣಾ ಆಯುಕ್ತ

ಕಿಡಿನುಡಿ

ಮಾತೆತ್ತಿದರೆ ದಮ್ಮು, ತಾಕತ್ ಬಗ್ಗೆ ಮಾತನಾಡುವ ರಾಜ್ಯದ ಬಿಜೆಪಿ ನಾಯಕರು ವಿಧಾನಮಂಡಲದ ಕಲಾಪದಲ್ಲಿ ಭಾಗವಹಿಸುವ ಧೈರ್ಯ ತೋರಬೇಕು. ವಿಧಾನಸಭಾ ಅಧಿವೇಶನವನ್ನು ಕರೆದಿರುವುದೇ ರಾಜ್ಯ ಸರ್ಕಾರದ ಆಡಳಿತದ ವಿಮರ್ಶೆಗೆ. ಸರ್ಕಾರ ತನ್ನ ಕರ್ತವ್ಯದಲ್ಲಿ ಎಡವಿದ್ದರೆ, ತಪ್ಪು ಮಾಡಿದ್ದರೆ ಅದನ್ನು ಎತ್ತಿ ತೋರಿಸುವ ಕೆಲಸವನ್ನು ವಿರೋಧ ಪಕ್ಷಗಳು ಮಾಡಬೇಕಾಗಿದೆ. ಆ ದಮ್ಮು, ತಾಕತ್ತು ಬಿಜೆಪಿ ಶಾಸಕರಿಗೆ ಇಲ್ಲ.

ಸಿದ್ದರಾಮಯ್ಯ, ಮುಖ್ಯಮಂತ್ರಿ

25 ವರ್ಷಗಳ ಹಿಂದೆ

ಶನಿವಾರ, 12-12-1998

• **ಮುಷ್ಕರ: ದೇಶದಾದ್ಯಂತ ಭಾಗಶಃ ಯಶಸ್ವಿ**

ನವದೆಹಲಿ, ಡಿ. 11 (ಪಿಟಿಐ, ಯುಎನ್‌ಐ)- ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಆರ್ಥಿಕ ನೀತಿಯನ್ನು ವಿರೋಧಿಸಿ ಹಲವಾರು ಕಾರ್ಮಿಕ ಸಂಘಗಳು ಇಂದು ಕರೆ ನೀಡಿದ್ದ ಒಂದು ದಿನದ ರಾಷ್ಟ್ರವ್ಯಾಪಿ ಮುಷ್ಕರದಿಂದಾಗಿ ಹಲವಾರು ರಾಜ್ಯಗಳಲ್ಲಿ ಜನಜೀವನ ಅಸ್ತವ್ಯಸ್ತಗೊಂಡಿತು.

ಸಂಸತ್ತಿನ ಮುಂದೆ ಕಾಂಗ್ರೆಸ್ಸೇತರ ವಿರೋಧ ಪಕ್ಷಗಳ ಸಂಸತ್ ಸದಸ್ಯರು ಸರ್ಕಾರದ ತಪ್ಪು ಆರ್ಥಿಕ ನೀತಿಯ ವಿರುದ್ಧ ಘೋಷಣೆಗಳನ್ನು ಕೂಗಿದರು. ಬಿಜೆಪಿ ನೇತೃತ್ವದ ಸರ್ಕಾರ ಬೆಲೆ ಏರಿಕೆಯನ್ನು ತಡೆಗಟ್ಟಲು ವಿಫಲವಾಗಿದೆ ಎಂದು ದೂರಿದರು.

50 ವರ್ಷಗಳ ಹಿಂದೆ

ಬುಧವಾರ, 12-12-1973

• **ಮಾರುಕಟ್ಟೆಗಳಲ್ಲಿ ಕಲಬೆರಕೆ ವ್ಯಾಪಾರಿಗಳ ಹೆಸರು ಪ್ರದರ್ಶನ**

ನವದೆಹಲಿ, ಡಿ. 11- ಕಲಬೆರಕೆ ಮತ್ತು ಕೆಳದರ್ಜೆ ವಸ್ತುಗಳ ಮಾರಾಟ ಹೆಚ್ಚುತ್ತಿರುವ ಬಗ್ಗೆ ಕಾಂಗ್ರೆಸ್ ಸಂಸದೀಯ ಪಕ್ಷದ ಕಾರ್ಯ ಸಮಿತಿ ಸದಸ್ಯರು ಇಂದು ತೀವ್ರ ಆತಂಕ ವ್ಯಕ್ತಪಡಿಸಿದರು.

ಆಹಾರ ಕಲಬೆರಕೆ 'ಗಂಭೀರ ಸಮಸ್ಯೆ' ಆಗಿದೆ ಎಂದು ಅಭಿಪ್ರಾಯಪಟ್ಟ ಇಂದಿರಾ ಗಾಂಧಿ ಅವರು, ವೈದ್ಯರು ಮತ್ತು ಗೃಹಿಣಿಯರು ಮುಖ್ಯವಾಗಿ ಅವರ ವಿರುದ್ಧ ಜನಾಭಿಪ್ರಾಯ ರೂಪಿಸುವ ದಿಸೆಯಲ್ಲಿ ಶ್ರಮಿಸಬೇಕು ಎಂದು ಹೇಳಿದರು.

ಕಾಶ್ಮೀರದಲ್ಲಿ ಮಾಡಿದಂತೆ ಕಲಬೆರಕೆ ವಸ್ತುಗಳನ್ನು ಮಾರುವವರ ಹೆಸರುಗಳನ್ನು ಮಾರುಕಟ್ಟೆಗಳಲ್ಲಿ ಬಹಿರಂಗವಾಗಿ ಪ್ರದರ್ಶಿಸಬೇಕು ಎಂದು ಹೇಳಿದರು.

• **ಬಸವಲಿಂಗಪ್ಪ ಜತೆಗೆ ಇನ್ನೂ ಮೂವರನ್ನು ಕೈಬಿಡುವ ಸಂಭವ**

ನವದೆಹಲಿ, ಡಿ. 11- ಕರ್ನಾಟಕದ ಮುಖ್ಯಮಂತ್ರಿ ದೇವರಾಜ ಅರಸು ಅವರು ಈ ತಿಂಗಳ 13ರಂದು ಬೆಂಗಳೂರಿಗೆ ಹಿಂದಿರುಗಿ ಬಂದ ಒಂದೆರಡು ದಿನಗಳಲ್ಲಿ ತಮ್ಮ ಹೊಸ ಸಚಿವ ಸಂಪುಟವನ್ನು ರಚಿಸುವರು.

ಪೌರಾಡಳಿತ ಮಂತ್ರಿ ಬಸವಲಿಂಗಪ್ಪ ಅವರ ಜತೆಗೆ ಇನ್ನೂ ಇಬ್ಬರು ಅಥವಾ ಮೂವರನ್ನು ಹೊಸ ಸಂಪುಟದಿಂದ ಕೈಬಿಡುವ ಸಂಭವವಿದೆ.

ಮಂತ್ರಿಮಂಡಳ ರಚನೆಯ ಬಗ್ಗೆ ಅರಸು ಅವರು ಕಾಂಗ್ರೆಸ್ ಅಧ್ಯಕ್ಷರ ಜತೆ ಮಾತುಕತೆ ನಡೆಸಿದರು.

ವಿದ್ಯಾರ್ಥಿಗಳ ವ್ಯಕ್ತಿತ್ವ ರೂಪಿಸುವಲ್ಲಿ ಶಾಲಾ ಸಂಸ್ಕೃತಿಯ ಪಾತ್ರ ಹಿರಿದು

ಪಠ್ಯಕ್ರಮ ಚೌಕಟ್ಟು-ಮೌಲ್ಯದ ಅಭಿವ್ಯಕ್ತಿ

ವಿಶ್ಲೇಷಣೆ

ಅನುರಾಗ್ ಬೆಹರ್

ಒಂದು ಶಾಲೆಯ ಪಠ್ಯಕ್ರಮವು ವಿದ್ಯಾರ್ಥಿಗಳ ಕಲಿಕೆಯನ್ನು ರೂಪಿಸುವ ಎಲ್ಲ ಅಂಶಗಳನ್ನು ಒಳಗೊಂಡಿರುತ್ತದೆ. ಕಲಿಕಾ ಗುರಿಗಳು, ಪಠ್ಯವಿಷಯ, ಪಠ್ಯಪುಸ್ತಕಗಳು, ಬೋಧನಾವಿಧಾನ, ಮೌಲ್ಯಮಾಪನ ಮಾತ್ರವಲ್ಲದೆ ಶಾಲೆಯ ಸಂಸ್ಕೃತಿ ಮತ್ತು ಕಾರ್ಯವಿಧಾನಗಳು ಸಹ ಪ್ರಮುಖವೆನಿಸುತ್ತವೆ. ಪಠ್ಯಕ್ರಮದ ಸಂಕುಚಿತ ದೃಷ್ಟಿಕೋನಗಳು ಹಲವು ಬಾರಿ ಅದರ ಗುರಿ ಮತ್ತು ಅಭ್ಯಾಸ ಕ್ರಮವನ್ನು ನಿರ್ಧರಿಸುತ್ತವೆ. ಶಿಕ್ಷಣದಲ್ಲಿ ಶಾಲಾ ಸಂಸ್ಕೃತಿ ಮತ್ತು ಕಾರ್ಯವಿಧಾನಗಳು ವಹಿಸುವ ಪ್ರಮುಖ ಪಾತ್ರವನ್ನು ಈ ಬಗೆಯ ದೃಷ್ಟಿಕೋನಗಳು ನಿರ್ಲಕ್ಷಿಸುತ್ತವೆ ಅಥವಾ ಈ ಕುರಿತು ಬೂಟಾಟಿಕೆಯ ಕಾಳಜಿಯನ್ನಷ್ಟೇ ತೋರುತ್ತವೆ.

ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು- 2023 (ಎನ್‌ಸಿಎಫ್), ಸಂಸ್ಕೃತಿ ಮತ್ತು ಕಾರ್ಯವಿಧಾನಗಳನ್ನು ಸದುದ್ದೇಶದ ಹೇಳಿಕೆಗಳಿಗಷ್ಟೇ ಸೀಮಿತಗೊಳಿಸದೆ, ಅವುಗಳಿಗೆ ಸಲ್ಲಬೇಕಾದ ಪ್ರಾಮುಖ್ಯವನ್ನು ನೀಡುತ್ತದೆ. ಉದ್ದೇಶ ಮತ್ತು ತತ್ವಗಳನ್ನು ನಡವಳಿಕೆ ಹಾಗೂ ಅಭ್ಯಾಸಗಳ ರೂಪದಲ್ಲಿ ಕಾರ್ಯರೂಪಕ್ಕೆ ಇಳಿಸುತ್ತದೆ. ವಿದ್ಯಾರ್ಥಿಗಳು ಸಂಸ್ಕೃತಿಯ ಅನುಭವವನ್ನು ಪಡೆಯುವ ರೀತಿ ಹೀಗೆಯೇ. ಉದಾಹರಣೆಗೆ, ಎಲ್ಲರನ್ನೂ ಗೌರವಿಸುವುದು, ಬಹುತ್ವ, ಸಹಾನುಭೂತಿ ಮತ್ತು ಒಳಗೊಳ್ಳುವಿಕೆಯಂತಹ ಮೌಲ್ಯಗಳನ್ನು ಅಳವಡಿಸಿಕೊಳ್ಳುವುದು ಅಗತ್ಯವೆಂದು ಬರೀ ಬಾಯಿಮಾತಿನಲ್ಲಿ ಹೇಳುವ ಬದಲು, ದೈನಂದಿನ ಶಾಲಾ ಬದುಕಿನಲ್ಲಿ ಈ ಮೌಲ್ಯಗಳು ಅಭಿವ್ಯಕ್ತಗೊಳ್ಳುವಂತೆ ಮಾಡುವುದು ಹೇಗೆ ಎಂಬುದರ ಬಗ್ಗೆ ಇದು ಗಮನ ಹರಿಸುತ್ತದೆ.

ಪ್ರಾಂಶುಪಾಲರು ಅಥವಾ ಶಿಕ್ಷಕರನ್ನು ಪೋಷಕರು ಭೇಟಿಯಾದಾಗ ಅವರನ್ನು ನಡೆಸಿಕೊಳ್ಳುವ ರೀತಿ, ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳ ಜೊತೆಗೆ ಶಿಕ್ಷಕರ ವರ್ತನೆ, ಇತರರಿಗೆ ನೆರವಾಗುವ ವಿದ್ಯಾರ್ಥಿಗಳ ಸದ್ಗುಣವನ್ನು ಗುರುತಿಸುವಂತಹ ಅನೇಕ ವಿಷಯಗಳು ಇದರ ವ್ಯಾಪ್ತಿಗೆ ಬರುತ್ತವೆ. ಶಾಲಾ ಸಂಸ್ಕೃತಿಯು ವಿದ್ಯಾರ್ಥಿಗಳ ಕಲಿಕೆಯಲ್ಲಿ ಎರಡು ರೀತಿಯ ಪಾತ್ರಗಳನ್ನು ವಹಿಸುತ್ತದೆ. ಕ್ರಿಯಾಶೀಲ, ಪ್ರೇರಣೆಯಾಗಬಲ್ಲ ವಿದ್ಯಾರ್ಥಿಗಳೊಂದಿಗೆ ಸೇರಿ ಪರಿಣಾಮಕಾರಿ ಕಲಿಕಾ ಪರಿಸರವನ್ನು ರೂಪಿಸುತ್ತದೆ ಹಾಗೂ ಮೌಲ್ಯಗಳನ್ನು ರೂಢಿಸಿಕೊಳ್ಳಲು ಅನುವಾಗಿಸುತ್ತದೆ.

ಸಂಸ್ಕೃತಿಯು ಕಲಿಕೆಯ ವಿಭಿನ್ನ ಪರಿಸರಗಳನ್ನು ಪೋಷಿಸಬಲ್ಲದು. ನಿರ್ಬಂಧ, ನಿಯಂತ್ರಣ, ನಿಯಮ ಪಾಲನೆಗೆ ಒತ್ತು ನೀಡಬಹುದು ಅಥವಾ ವ್ಯಕ್ತಿಗಳಲ್ಲಿ ವಿಶ್ವಾಸ ತುಂಬಿ, ಸ್ವಯಂಶಿಸ್ತು ರೂಢಿಸಿಕೊಳ್ಳಲು ಪೂರಕವಾಗಬಹುದು, ಕಠಿಣ ಪರಿಶ್ರಮದಿಂದ ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲು ಉತ್ತೇಜಿಸಬಹುದು. ಮೊದಲನೆಯದನ್ನು ಮಾಡುವುದು ತುಂಬಾ ಸುಲಭ. ಆದರೆ ಎರಡನೆಯದನ್ನು ಸಾಧಿಸಬೇಕಾದರೆ ಶಿಕ್ಷಕರು ಮತ್ತು ಇಡೀ ಶಾಲೆಯ ಸಂಘಟಿತ ಪ್ರಯತ್ನ ಬೇಕಾಗುತ್ತದೆ. ಸಂರಚನಾಕ್ರಮ ಮತ್ತು ಮಾರ್ಗದರ್ಶನದ ಕೊರತೆಯು ಕಲಿಕೆಯ ವಿಚಾರದಲ್ಲಿ ಭೀತಿ ಹಾಗೂ ಅಪನಂಬಿಕೆಯಷ್ಟೇ ಸಮಸ್ಯೆಯನ್ನು ಉಂಟುಮಾಡಬಲ್ಲದು. ವಿದ್ಯಾರ್ಥಿಗಳ ಪಾಲಿಗೆ ಭಯರಹಿತ, ಪ್ರೇರಣೆಯುತ ಮತ್ತು ಉತ್ತೇಜನಕಾರಿ ಪರಿಸರವನ್ನು ಒಳಗೊಂಡ ಸೂಕ್ತ ಮಾರ್ಗದರ್ಶನವು ಕಲಿಕೆಯ ದೃಷ್ಟಿಯಿಂದ ಹೆಚ್ಚು ಪರಿಣಾಮಕಾರಿಯಾಗುತ್ತದೆ.

ಶಾಲೆಗಳು ಹೇಗೆ ಸೂಕ್ತ ಕಲಿಕಾ ಪರಿಸರವನ್ನು ರೂಪಿಸುತ್ತವೆ ಮತ್ತು ಮೌಲ್ಯಗಳನ್ನು ವೃದ್ಧಿಸುತ್ತವೆ ಎಂಬುದನ್ನು ಅರಿಯುವ ಮೊದಲು ಶಾಲಾ ಸಂಸ್ಕೃತಿ ಎಂದರೇನು ಎಂಬುದನ್ನು ತಿಳಿದುಕೊಳ್ಳೋಣ. ಇದು, ಎರಡು ಅಂತರ್‌ಸಂಬಂಧಿ ಆಯಾಮಗಳನ್ನು ಹೊಂದಿದೆ. ಮೊದಲನೆಯದು, ಮೌಲ್ಯಗಳು, ರೂಢಿಗಳು ಮತ್ತು ನಂಬಿಕೆಗಳು. ಎರಡನೆಯದು, ನಡವಳಿಕೆಗಳು, ಸಂಬಂಧಗಳು ಮತ್ತು ಕಾರ್ಯವಿಧಾನಗಳು. ಯಾವುದೇ ಶಾಲೆಯು ಈ ಅನುಭವಗಳನ್ನು ರೂಢಿಸಬೇಕಾದರೆ, ಸಂಸ್ಕೃತಿಯ ಮೂರು ವಿಧದ ಲಕ್ಷಣಗಳು ಹೊರಹೊಮ್ಮುವುದಕ್ಕೆ ಮಹತ್ವ ನೀಡಬೇಕಾಗುತ್ತದೆ.

ಮೊದಲನೆಯದಾಗಿ, ಶಾಲೆ ಮತ್ತು ಅದರೊಂದಿಗೆ ಭಾಗಿಯಾಗುವ ಜನರ ನಡುವಿನ ಸಂಬಂಧ. ಇದರಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು, ಪ್ರಾಂಶುಪಾಲರು, ಸಹಾಯಕ ಸಿಬ್ಬಂದಿ, ಪೋಷಕರು... ಈ ಎಲ್ಲರೂ ಒಳಗೊಳ್ಳುತ್ತಾರೆ. ಉದಾಹರಣೆಗೆ, ಸ್ಪರ್ಧಾತ್ಮಕತೆಗೆ ವಿರುದ್ಧವಾಗಿ ಸಹಕಾರಿ ಮನೋಭಾವ ಮತ್ತು ಸಹೋದ್ಯೋಗಿಗಳ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುವ ಶಿಕ್ಷಕರು, ಸದಾಕಾಲ ನಿರ್ದೇಶನವನ್ನೇ ನೀಡುವುದಕ್ಕೆ ವಿರುದ್ಧವಾಗಿ ಸಲಹೆ ಪಡೆದು ಮುನ್ನಡೆಯುವ ಪ್ರಾಂಶುಪಾಲರು ಮತ್ತು ಸಂವಾದದ ಮೂಲಕ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳುವ ವಿದ್ಯಾರ್ಥಿಗಳು. ಶೈಕ್ಷಣಿಕ ಹಿನ್ನೆಲೆಯಲ್ಲಿನ ಕಾರ್ಯಕಾರಿ ಸಂಬಂಧಗಳು ಪರಸ್ಪರ ನಂಬಿಕೆ, ಗೌರವ, ಮುಕ್ತತೆ, ಸಂವಹನ ಮತ್ತು ಸಹಯೋಗ ಅಲ್ಲದೆ ಕಾಳಜಿ ಮತ್ತು ಜವಾಬ್ದಾರಿಯುತ ವರ್ತನೆಗಳಿಂದ ಗುರುತಿಸಲ್ಪಡುತ್ತವೆ.

ಎರಡನೆಯದಾಗಿ, ಶಾಲೆಯಲ್ಲಿ ಪ್ರದರ್ಶಿಸಲು ಮತ್ತು ಸಂಭ್ರಮಿಸಲು ಪರಿಗಣಿಸಬೇಕಾದ ಸಂಕೇತಗಳು. ಬಹುತೇಕ ಶಾಲೆಗಳು ಸ್ಪಷ್ಟವಾಗಿ ಕಾಣುವ ಮತ್ತು ಸೂಚ್ಯವಾಗಿರುವ ಅನೇಕ ಸಂಕೇತಗಳನ್ನು ಹೊಂದಿರುತ್ತವೆ. ಶಾಲೆಗೆ ಮೌಲ್ಯಯುತ ಎನಿಸುವ ಅಂಶಗಳಿಗೆ ಪ್ರದರ್ಶನ ಫಲಕಗಳು ಒತ್ತು ನೀಡುತ್ತವೆ. ಉದಾಹರಣೆಗೆ, ಮಂಡಳಿಯ ಪರೀಕ್ಷೆಗಳಲ್ಲಿ ಉನ್ನತ ಶ್ರೇಯಾಂಕ ಪಡೆದ ವಿದ್ಯಾರ್ಥಿಗಳ ಭಾವಚಿತ್ರ, ಶಾಲೆಯು ಗೆದ್ದ ಪ್ರಶಸ್ತಿಗಳು ಅಥವಾ ಶಾಲೆಗೆ ಭೇಟಿ ನೀಡಿದ ಸಂದರ್ಶಕರ ಚಿತ್ರಗಳಂತಹವನ್ನು ಪ್ರದರ್ಶಿಸುವುದು. ಆಗಾಗ್ಗೆ ಶಾಲೆಯ ಫಲಕಗಳಲ್ಲಿ 'ಹೇಳಿಕೆ'ಗಳು ಅಥವಾ 'ಉಲ್ಲೇಖ'ಗಳನ್ನು ಬರೆಯಲಾಗುತ್ತದೆ. ಇವು ಸಹ ಯಾವುದಕ್ಕೆ ಬೆಲೆ ಕೊಡಲಾಗುತ್ತದೆ ಎಂಬುದನ್ನು ನೇರವಾಗಿ ಸೂಚಿಸುತ್ತವೆ.

ಪ್ರಾಂಶುಪಾಲರು ಅಥವಾ ಸಿಬ್ಬಂದಿಯ ಕೊಠಡಿ, ತರಗತಿ ಕೋಣೆಗಳು ಅಥವಾ ಶಾಲಾ ಆವರಣದಲ್ಲಿ ಪ್ರಮುಖ ಮತ್ತು ಪ್ರಸಿದ್ಧ ವ್ಯಕ್ತಿಗಳ ಭಾವಚಿತ್ರಗಳು ಅಥವಾ ಪ್ರತಿಮೆಗಳನ್ನು ಇಡಲಾಗುತ್ತದೆ. ಭೌತಿಕ ವಸ್ತುಗಳ ಆಯ್ಕೆ ಮತ್ತು ಏರ್ಪಾಡು ದೊಡ್ಡ ಮಟ್ಟದ ಸಾಂಕೇತಿಕ ಮೌಲ್ಯವನ್ನು ಹೊಂದಿರುತ್ತವೆ. ಉದಾಹರಣೆಗೆ, ಪ್ರಾಂಶುಪಾಲರ ಕುರ್ಚಿಯು ಶಿಕ್ಷಕರ ಕುರ್ಚಿಗಿಂತ ಚೆನ್ನಾಗಿರುತ್ತದೆ. ತರಗತಿ ಕೋಣೆಯಲ್ಲಿ ಮಾಡಿರುವ ಪೀಠೋಪಕರಣಗಳ ಏರ್ಪಾಡು ಶಾಲೆಯು ಬೋಧನೆ-ಕಲಿಕೆ ಪ್ರಕ್ರಿಯೆಯ ಕುರಿತು ಹೊಂದಿರುವ ನಂಬಿಕೆಗಳನ್ನು ಪ್ರತಿನಿಧಿಸಬಲ್ಲದು. ಶಾಲಾ ಸಭೆ ಅಥವಾ ಇತರ ಕಾರ್ಯಕ್ರಮಗಳಲ್ಲಿ ನಡೆಸುವ ಯಾವುದೇ ಸಂಭ್ರಮಾಚರಣೆ ಅಥವಾ ಶ್ಲಾಘನೆಯು ಆಳವಾದ ಸಾಂಕೇತಿಕ ಮೌಲ್ಯವನ್ನು ಒಳಗೊಂಡಿರುತ್ತದೆ. ಈ ಎಲ್ಲ ಸಂಕೇತಗಳನ್ನು ಪಠ್ಯಕ್ರಮದ ಉದ್ದೇಶಗಳೊಂದಿಗೆ ವಿಚಾರಪೂರ್ಣವಾಗಿ ಮತ್ತು ಎಚ್ಚರಿಕೆಯಿಂದ ಹೊಂದಿಸಬೇಕಾಗುತ್ತದೆ.

ಮೂರನೆಯದಾಗಿ, ತರಗತಿ ಕೋಣೆ ಮತ್ತು ಶಾಲಾ ಕಾರ್ಯನಿರ್ವಹಣೆಗೆ ಸಂಬಂಧಿಸಿದ ವ್ಯವಸ್ಥೆ ಹಾಗೂ ಅಭ್ಯಾಸಗಳು. ತರಗತಿ ಕೋಣೆಯ ಪ್ರಮುಖ ಅಭ್ಯಾಸಗಳಲ್ಲಿ ಆಸನ ವ್ಯವಸ್ಥೆಯೂ ಸೇರಿದೆ. ಇದು ಹುಡುಗ, ಹುಡುಗಿಯರಿಬ್ಬರೂ ಒಟ್ಟಿಗೆ ಕುಳಿತುಕೊಳ್ಳುವಂತೆ ಮಾಡುವುದು ಅಥವಾ ಶೈಕ್ಷಣಿಕವಾಗಿ ಚುರುಕಾದ ವಿದ್ಯಾರ್ಥಿಗಳಿಗೆ ಯಾವುದೇ ಆದ್ಯತೆ ನೀಡದಿರುವಂತಹ ಸಂಗತಿಗಳನ್ನು ಒಳಗೊಂಡಿದೆ. ಬೋಧನೆ ಮತ್ತು ಕಲಿಕಾ ಸಾಮಗ್ರಿಗಳ ಲಭ್ಯತೆ ಮತ್ತು ಅವು ಎಲ್ಲರಿಗೂ ಸುಲಭವಾಗಿ ಸಿಗುವಂತಹ ಸ್ಥಿತಿ, ಅಗತ್ಯ ಪ್ರಮಾಣದಲ್ಲಿ ದೊರೆಯುವಿಕೆ ಹಾಗೂ ಅದನ್ನು ಹೇಗೆ ಹಂಚಲಾಗುತ್ತಿದೆ ಎನ್ನುವುದನ್ನು ಖಾತರಿಪಡಿಸುವುದನ್ನು ಸಹ ಒಳಗೊಂಡಿದೆ.

ಅಲ್ಲದೆ, ಕಲಿಕಾ ಪ್ರಕ್ರಿಯೆಯಲ್ಲಿ ವಿದ್ಯಾರ್ಥಿಗಳಿಗೆ ಜವಾಬ್ದಾರಿ ವಹಿಸುವುದು ಹಾಗೂ ತರಗತಿಯ ಸ್ವಚ್ಛತೆಯ ಹೊಣೆಯನ್ನು ಸಹ ಅವರಿಗೆ ವಹಿಸುವುದು, ಇತರ ಪ್ರಮುಖ ಶಾಲಾ ಪ್ರಕ್ರಿಯೆಗಳಲ್ಲಿ ಶಾಲಾ ಪ್ರಾರ್ಥನಾ ಸಭೆ, ಊಟದ ಸಮಯದ ನಿರ್ವಹಣೆ ಮತ್ತು ಸಿದ್ಧತೆ, ಕ್ರೀಡೆ, ಸಭೆ ಮತ್ತು ಕಾರ್ಯಕ್ರಮಗಳ ನಿರ್ವಹಣೆಯ ಜವಾಬ್ದಾರಿ ಹಂಚಿಕೆ, ಶಾಲೆಯನ್ನು ಸುಸ್ಥಿತಿಯಲ್ಲಿ ಇಡುವುದು, ಕ್ರೀಡೆ ಮತ್ತು ಅದರ ನಿರ್ವಹಣೆಯಲ್ಲಿನ ಅಭ್ಯಾಸಗಳು, ಪೋಷಕರು ಹಾಗೂ ಸ್ಥಳೀಯ ಸಮುದಾಯದ ಜೊತೆಗೆ ಶಾಲೆಯು ತೊಡಗಿಕೊಳ್ಳುವಂತಹ ಸಂಗತಿಗಳು ಸೇರಿವೆ.

ಸಂಘಟನಾತ್ಮಕ ಸಂಸ್ಕೃತಿಯು ಎಲ್ಲ ರೀತಿಯ ಸಾಧನೆಯ ಮೇಲೆ ಉಂಟುಮಾಡುವ ವಿಸ್ತೃತ ಪರಿಣಾಮದ ಕುರಿತು ನಮ್ಮಲ್ಲಿ ಹೆಚ್ಚಿನವರಿಗೆ ವೈಯಕ್ತಿಕ ಅನುಭವಗಳಿವೆ. ಶಾಲೆಗಳು ಇದಕ್ಕೆ ಹೊರತಾಗಿಲ್ಲ. ಶೈಕ್ಷಣಿಕ ಗುರಿ ಸಾಧನೆಯಲ್ಲಿ ಎನ್‌ಸಿಎಫ್, ಶಾಲಾ ಸಂಸ್ಕೃತಿಗೆ ಅದರಲ್ಲೂ ಶಿಕ್ಷಕರಿಗೆ ಪ್ರಾಯೋಗಿಕ ಮತ್ತು ನಿರೂಪಿತ ರೀತಿಯಲ್ಲಿ ತನ್ನದೇ ಆದ ಕೊಡುಗೆಯನ್ನು ನೀಡುತ್ತದೆ.

ಚುರುಮುರಿ



ನೀರಿಲ್ಲದ ಬಾವಿಯಲ್ಲಿ...

• ಲಿಂಗರಾಜು ಡಿ.ಎಸ್.

ನಾವೆಲ್ಲ ಸುವರ್ಣ ವಿಧಾನಸೌಧದ ಮುಂದೆ ನಿಂತುಗಂಡು 'ಅಹಾ! ಯಂಗೈತೆ!' ಅಂತ ಮಾತಾಡಿಕ್ಯತಿದ್ದೋ. ಅಸೆಂಬ್ಲಿ ಸುರುವಾಗಿ ಏಟೊತ್ತಾದ್ರೂ ಮಂತ್ರಿಗಳು, ಶಾಸಕರು ಬರಲೇ ಇಲ್ಲ.

'ಎಲ್ಲೋದ್ರುಲಾ ಇವರೆಲ್ಲಾ? ಕೋಟಿ ಕಾರುಗಳು ಒಂದೂ ಕಾಣಿತಿಲ್ಲ. ನೆನ್ನೆ ಕಮಲದವು ಬೇಜಾರು ಮಾಡಿಕ್ಯಂದು ಅಧ್ಯಕ್ಷರ ಮುಂದೆ ಇರೋ ಬಾವಿಗೆ ಬಿದ್ದವಂತೆ. ಏಟು ಜನಕ್ಕೆ ಏಟು ಬಿತ್ತೋ ಗೊತ್ತಿಲ್ಲ' ಯಂಟಪ್ಪಣ್ಣ ಲೊಚಗುಟ್ಟಿತು.

'ಅಣ್ಣೈ, ಅದು ನೀರಿನ ಬಾವಿ ಅಲ್ಲ, ಅಧ್ಯಕ್ಷರ ಪೀಠದ ಮುಂದಿರೋ ಖಾಲಿ ಜಾಗ. ಅಲ್ಲಿ ನಿಂತುಗಂಡು ಗಲಾಟೆ ಮಾಡಿ ಸ್ವಂತ ಕಾಯಕಕ್ಕೆ ಕಡೆದು ಹೊಂಟೋಗ್ಯವ್ರೆ. ಇಲ್ಲಿ ಕಾಣ್ತಿರೋ ಕಾರುಗಳು ಶಾಸಕರು, ಮಂತ್ರಿಗಳ ಚೋಟಾಳು, ಮೋಟಾಳುಗಳದ್ದು' ಅಂದ ಚಂದ್ರು.

'ಅಸೋಕಣ್ಣ 'ನಮ್ಮ ಹಲ್ಲಂಡೆಕೋರರು ಪಕ್ಸಾನೇ ಕೊಲ್ತಾವ್ರೆ. ಅಧಿಕಾರ ಇದ್ರೂ ಕಷ್ಟ, ಇಲ್ಲದಿದ್ರೂ ಕಷ್ಟ. ಇವುಕ್ಕೆ ಬಾಯಿಬೀಗ ಹಾಕದು ಯಂಗೆ?' ಅಂತ ತಲೆ ಮ್ಯಾಲೆ ಕೈಹೊತುಗಂಡು ಕೂತದೆ. ಕೈ ಪಕ್ಸದ್ದೂ ಇದೇ ಕಥೆ' ನಾನು ವಿಷಾದ ವ್ಯಕ್ತಪಡಿಸಿದೆ.

'ಅಲ್ಲ ಕನ್ರೊ, ಅಧಿವೇಶನದಲ್ಲಿ ಮಂತನಸ್ಥರು ಒಪ್ಪಂಗೆ ನಾಕು ಮಾತಾಡನ ಅನ್ನೋ ಬುದ್ಧಿ ಬರಲೇ ಇಲ್ಲವಲ್ಲ ಇವುಕ್ಕೆ. ಸದನದಲ್ಲಿ ಸಂತೆ ಮಾಡತವಲ್ಲೋ' ಯಂಟಪ್ಪಣ್ಣನಿಗೆ ಸಿಟ್ಟು ಬಂದಿತ್ತು.

'ಅಣ್ಣೈ, ಮೂಗಿಡಕಂದು ಸಂತೆ ಅನ್ರಿ' ಚಂದ್ರು ಹಳೆ ವರಸೆ ತೆಗೆದ.

ಮೂಗು ಹಿಡಕಂದ ಯಂಟಪ್ಪಣ್ಣ 'ಸತ್ತೆ, ಸತ್ತೆ' ಅಂದು ಸುಮ್ಮಗಾಯ್ತು... 'ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಹಿತ ಸತ್ತೋಯ್ತು ಕನಣ್ಣೈ' ಅಂತಂದರು ತುರೇಮಣೆ.

'ಅಲ್ಲ ಕನಣ್ಣೈ, ಸುಳ್ಳು ಪತ್ತೆ ಮಾಡಕ್ಕೆ ಸರ್ಕಾರ ಐದು ಸಂಸ್ಥೆ ನೇಮಕ ಮಾಡ್ಯದಂತೆ. ಅವ್ಯಾಕೆ ಬೇಕಿತ್ತು? ಯಾವತ್ತೂ ಸತ್ಯ ನುಡಿದೇ ಇರೋ ರಾಜಕೀಯದವುಕ್ಕೆ ಏನೆನ್ನಬೈದು?' ಚಂದ್ರು ವಿಷಯಾಂತರ ಮಾಡಿದ.

'ಅವುಕ್ಕೆ ಇನ್ನೇನಂದರ್‍ಲಾ? ಅನಾಯಕತ್ವದ ನಾಯಕರು ಅನ್ನಬೈದಷ್ಟೀಯೆ!' ತುರೇಮಣೆ ಲೇವಡಿ ಮಾಡಿದರು.

ಚರ್ಚೆ

ಯಾವುದು ನಿಜವಾದ ಪ್ರಶಸ್ತಿ?

ಪ್ರಶಸ್ತಿಯ ಬೆನ್ನೇರಿದವರನ್ನು ಪ್ರತಿರೋಧಿಸಲು ಇರುವ ಒಂದು ಮಾರ್ಗೋಪಾಯವೆಂದರೆ ಪ್ರಶಸ್ತಿಗೆ ಬೆನ್ನು ತೋರಿಸುವುದು

• ಟಿ.ಎನ್.ವಾಸುದೇವಮೂರ್ತಿ

ಇಂದಿನ ಸಾಹಿತ್ಯಕ ಕಾಲಘಟ್ಟಕ್ಕೆ 'ಪ್ರಶಸ್ತಿ ಸಾಹಿತ್ಯ'ದ ಓಲೈಕೆ ಕಾಲಘಟ್ಟವೆಂಬ ಹೆಸರು ಸೂಕ್ತ ಎಂದು ಅಭಿಪ್ರಾಯಪಟ್ಟಿರುವ ಅರುಣ್ ಜೋಳದಕೂಡ್ಲಿಗಿ, ಪ್ರಶಸ್ತಿಗಳು ಸಾಹಿತ್ಯಕ ವಾತಾವರಣವನ್ನು ಹೇಗೆ ಕಲುಷಿತಗೊಳಿಸುತ್ತವೆ ಎಂಬುದನ್ನು ತಮ್ಮ ಲೇಖನದಲ್ಲಿ (ಸಂಗತ, ಡಿ. 6) ಸುಸಂಗತವಾಗಿ ವಿಶ್ಲೇಷಿಸಿದ್ದಾರೆ.

ಹಿಂದೆ ನವೋದಯ ಯುಗದಲ್ಲಿ ಹೊಸ ಸಾಹಿತ್ಯ ಉದಯಿಸುವ ಸಮಯದಲ್ಲಿ ಕನ್ನಡ ಸಾಹಿತ್ಯಕ್ಕೆ ಪ್ರಚಾರದ ಅಗತ್ಯವಿತ್ತು. ಈ ಮನ್ನಣೆ, ಪ್ರಚಾರದಿಂದ ವಿಪುಲವಾಗಿ ಸಾಹಿತ್ಯ ರಚನೆಯಾಯಿತು. ಬಳಿಕ ಈ ಬೆಳವಣಿಗೆಗೊಂದು ಕಡಿವಾಣ ಹಾಕಲು ವಿಮರ್ಶೆಯ ಅವಶ್ಯಕತೆಯೂ ಸೃಷ್ಟಿಯಾಯಿತು. ಕುವೆಂಪು, ಬೇಂದ್ರೆ, ಡಿವಿಜಿ ಅಂತಹವರು ಪ್ರಾರಂಭದಲ್ಲಿ ಮನ್ನಣೆ, ಪ್ರಚಾರಕ್ಕೂ ಭಾಜನರಾದರು, ತರುವಾಯ ತೀಕ್ಷ್ಣವಾದ ಟೀಕೆ, ವಿಮರ್ಶೆಗಳಿಗೂ ಗುರಿಯಾದರು. ಈ ಎರಡೂ ಬಗೆಯ ಅಗ್ನಿಪರೀಕ್ಷೆಗಳನ್ನು ಜಯಿಸಿ ಅವರು ಇಂದಿಗೂ ಜೀವಂತವಾಗಿ ಇದ್ದಾರೆ. ಎಷ್ಟೋ ಸಲ ವಿಮರ್ಶೆಗಿಂತ ಹೊಗಳಿಕೆ ಮತ್ತು ಪ್ರಚಾರವು ಕವಿಪ್ರತಿಭೆಯನ್ನು ನಿರ್ನಾಮ ಮಾಡಿಬಿಡುತ್ತವೆ.

ಆಧುನಿಕ ಸಂಪರ್ಕ ಮಾಧ್ಯಮಗಳ ಇಂದಿನ ಯುಗದಲ್ಲಿ ಸಾಹಿತ್ಯ ಪ್ರಚಾರ ಖಂಡಿತವಾಗಿ ಒಂದು ಸವಾಲಾಗಿ ಉಳಿದಿಲ್ಲ. ಇಂದು ಪ್ರಶಸ್ತಿ, ಪ್ರಚಾರವು ಬರೀ ತೋರಿಕೆಯ ಬಡಿವಾರವಾಗಿವೆಯೇ ವಿನಾ ಇವು ಸಾಹಿತ್ಯ ಪ್ರಚಾರಕ್ಕೆ ಯಾವುದೇ ಕಾಯಕಲ್ಪ ಮಾಡಿಲ್ಲ. ಒಬ್ಬ ಸಾಹಿತಿ ಇಂತಹ ಕೃತಿ ರಚಿಸಿರುವರೆಂದು ಜನ ಗುರುತಿಸಿದಾಗ, ಆ ಸಾಹಿತಿಯ ಜೀವನ ಸಾರ್ಥಕ ಆಗುತ್ತದಲ್ಲದೆ ಅವರಿಗೆ ಇಂತಹ ಪ್ರಶಸ್ತಿ ಸಿಕ್ಕಿದೆ ಎಂದು ಪ್ರಚಾರವಾದಾಗಲಲ್ಲ. 'ಮನ್ನಣೆಯ ದಾಹವೀ ಎಲ್ಲಕಿಂ ತೀಕ್ಷ್ಣತಮ ತಿನ್ನುವುದದಾತ್ಮವನೆ ಮಂಕುತಿಮ್ಮ' ಎಂದಿದ್ದಾರೆ ಡಿವಿಜಿ. ಓದುಗರು ತನ್ನನ್ನು ಗುರುತಿಸುತ್ತಿಲ್ಲವೆಂಬ ಕಾರಣಕ್ಕೋ ತನ್ನ ಸೃಜನಶೀಲತೆಯ ಸೆಲೆಗಳು ಬತ್ತಿಹೋಗಿವೆಯೆಂದೋ ಅರಿವಾದಾಗಲಷ್ಟೇ ಸಾಹಿತಿಗಳು ಪ್ರಚಾರದ ಬೆನ್ನು ಹತ್ತುವರು, ಸಾಹಿತಿಯ ಸೋಗು ಹಾಕುವರು. ಪ್ರಶಸ್ತಿಯ ಬೆನ್ನೇರಿದವರು ಲೋಕದ ಕಣ್ಣಿಗೆ ವಿದೂಷಕರಂತೆ ಕಾಣಿಸುತ್ತಿರುತ್ತಾರೆ.

ಪ್ರಶಸ್ತಿಯ ಬೆನ್ನೇರಿದವರನ್ನು ಪ್ರತಿರೋಧಿಸಲು ಇರುವ ಒಂದು ಮಾರ್ಗೋಪಾಯವೆಂದರೆ ಪ್ರಶಸ್ತಿಗೆ ಬೆನ್ನು ತೋರಿಸುವುದು. ಕಳೆದ ದಶಕದಲ್ಲಿ ಈ ತರಹದ ಒಂದು ಪ್ರಶಸ್ತಿ ವಾಪಸಾತಿ ಅಭಿಯಾನವೂ ಪ್ರಾರಂಭವಾಗಿ ಯಾವುದೇ ತಾರ್ಕಿಕ ಅಂತ್ಯ ಕಾಣದೇ ನಿಂತಿತು. ತಾನು ಸೈದ್ಧಾಂತಿಕವಾಗಿ ಒಪ್ಪದಿರುವ ಒಂದು ರಾಜಕೀಯ ಪಕ್ಷ ಆಡಳಿತ ವಹಿಸಿಕೊಂಡಿದೆ ಎಂಬ ಕಾರಣಕ್ಕೆ ಪ್ರತಿಭಟಿಸಿದರೆ, ಅದು ನಶ್ವರವಾದ ಒಂದು ರಾಜಕೀಯ ಪ್ರತಿಕ್ರಿಯೆ ಯಾಗುತ್ತದೆ. ಪ್ರಶಸ್ತಿ ವಾಪಸಾತಿಗೆ ರಾಜಕೀಯ ಅಥವಾ ಸೈದ್ಧಾಂತಿಕ ಕಾರಣಕ್ಕಿಂತಲೂ ಮಿಗಿಲಾದ ಒಂದು ಸದೃಢ ತಾತ್ವಿಕ ನೆಲೆಗಟ್ಟು ಬೇಕಾಗುತ್ತದೆ. ಉದಾಹರಣೆಗೆ, ಶಾಲಾ ಶಿಕ್ಷಣವನ್ನು ರಾಜ್ಯಭಾಷೆಯಲ್ಲಿ ನೀಡುವುದನ್ನು ಕಡ್ಡಾಯಗೊಳಿಸುವವರೆಗೂ ಪ್ರಶಸ್ತಿ ಸ್ವೀಕರಿಸುವುದಿಲ್ಲ ಎಂದು ದೇವನೂರ ಮಹಾದೇವ ಅವರು ನೃಪತುಂಗ ಪ್ರಶಸ್ತಿಯನ್ನು ನಿರಾಕರಿಸಿದ್ದರು, ರಂಗಕರ್ಮಿ ರಘುನಂದನ ಅವರು ಸಹ ಇಂತಹುದೇ ತಾತ್ವಿಕ ಕಾರಣಕ್ಕೆ ಯಾವುದೇ ಸರ್ಕಾರ ನೀಡುವ ಎಲ್ಲ ತರಹದ ಪ್ರಶಸ್ತಿಗಳನ್ನೂ ನಿರಾಕರಿಸಿದ್ದಾರೆ.

ಯೋಗ್ಯರಲ್ಲದವರಿಂದ ಪಡೆವ ಪ್ರಶಸ್ತಿ ಒಂದು ಕಳಂಕವೆಂದು ಸಾಹಿತಿಗಳು ಭಾವಿಸಬೇಕು. ಗೀತೆಯಲ್ಲಿ 'ಲೋಕದ ಜನ ಎಂದಿಗೂ ಆತ್ಮಸತ್ವವುಳ್ಳವರನ್ನು ಅನುಸರಿಸುತ್ತಾರೆ' (ಗೀತೆ 3.20) ಎಂಬ ಮಾತಿದೆ. ಹೀಗೆ ಭಾವಿಸುವ ಸಾಹಿತಿಗಳ ಸಂತಾನ ವೃದ್ಧಿಸಿದಾಗಲಷ್ಟೇ ಪ್ರಶಸ್ತಿ, ಪ್ರಚಾರದ ವಿದೂಷಕತನ ಬಯಲಾಗುತ್ತದೆ. ನಮ್ಮ ನಿಜವಾದ ಬದ್ಧತೆಗೆ ನೂರಾರು ಜನರನ್ನು ಆಕರ್ಷಿಸಬಲ್ಲ ಸಾಮರ್ಥ್ಯ ಇರುತ್ತದೆ.

ಪ್ರಶಸ್ತಿಗಳು ಸಾಹಿತಿಗಳ ಸಂವೇದನೆಯನ್ನು ನಾಶ ಮಾಡುತ್ತಿವೆ ಎಂದು ಭಾವಿಸುವ ಸಾಹಿತಿಗಳು ಈ ಪ್ರಶಸ್ತಿ ನಿರಾಕರಣಾ ಚಳವಳಿಯನ್ನು ದೊಡ್ಡ ಮಟ್ಟದಲ್ಲಿ ಮುಂದುವರಿಸಬೇಕಾಗಿದೆ. ಆಗ, ಪ್ರಶಸ್ತಿ ಹೊಡೆದುಕೊಳ್ಳುವ ಸಾಹಿತಿಗಳ ವಿದೂಷಕತ್ವ ಮತ್ತು ಪ್ರಶಸ್ತಿಗೆ ಬೆನ್ನು ತೋರಿಸಬಲ್ಲ ಸಾಹಿತಿಗಳ ರಸಋಷಿತ್ವವು ಲೋಕದ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸಬಲ್ಲವು. ಇಂಥದೊಂದು ಅಭಿಯಾನವನ್ನು ಪ್ರಾರಂಭಿಸುವ ಬದ್ಧತೆ ತೋರಿಸಲಾರದವರ ಮಾತು ಬರೀ ಹಳಹಳಿಕೆಯಂತೆ ಕೇಳಿಸುತ್ತದೆ.



ಪ್ರಶಸ್ತಿ ನೀಡಿಕೆ, ಬೇಡಿಕೆಗಳು ಫ್ಯೂಡಲ್ ಯುಗದ ಪ್ರವೃತ್ತಿಗಳಾಗಿವೆ. ಪ್ರಜಾಪ್ರಭುತ್ವ ಯುಗದಲ್ಲಿ ಓದುಗರೇ ನಿಜವಾದ ಪ್ರಶಸ್ತಿದಾತರು. ಪುಸ್ತಕ ಬರುವುದನ್ನೇ ಕಾದು, ಬಂದಕೂಡಲೇ ಅದನ್ನು ಖರೀದಿಸಿ ಆಸಕ್ತಿಯಿಂದ ಓದುವ ಓದುಗರ ಕಾತರ ಮತ್ತು ಆಸಕ್ತಿಯೇ ನಿಜವಾದ ಪ್ರಶಸ್ತಿಯಾಗಿದೆ. ಇದರರ್ಥ, ವೇಗವಾಗಿ ಬಿಕರಿಯಾಗುವ ಪುಸ್ತಕಗಳೆಲ್ಲ ಶ್ರೇಷ್ಠ ಎಂದಲ್ಲ. ಹಲವು ತಲೆಮಾರುಗಳವರೆಗೆ ಓದುಗರ ಮನಸ್ಸಿನಲ್ಲಿ ಉಳಿಯಬಲ್ಲ ಸಾಹಿತಿಗಳಷ್ಟೇ ಸಾರ್ವಕಾಲಿಕರಾಗುತ್ತಾರೆ.

ತನ್ನ ಪುಸ್ತಕವು ಓದುಗರನ್ನು ತಲುಪುವುದಿಲ್ಲ, ತಲುಪಿದರೂ ಅವರು ಅದನ್ನು ಓದುವುದಿಲ್ಲ ಎಂದು ಮನಗಾಣುವ ಸಾಹಿತಿಗಳು ಪ್ರಶಸ್ತಿಯ ಬೆನ್ನ ಹಿಂದೆ ಬಿದ್ದು ಸೋಗಲಾಡಿಗಳಾಗುತ್ತಾರೆ. ಪ್ರಶಸ್ತಿಯ ಲೋಭಕ್ಕೆ ಬಲಿಯಾಗದಂತೆ ಸದ್ದಿಲ್ಲದೇ ಬರೆಯುತ್ತ ಸಹಸ್ರಾರು ಓದುಗರನ್ನು ತಲುಪುತ್ತಿರುವ ಲೆಕ್ಕವಿಲ್ಲದಷ್ಟು ಸಾಹಿತಿಗಳು ಇಂದಿಗೂ ನಮ್ಮ ನಡುವೆ ಇದ್ದಾರೆ. ಅವರು ನಮ್ಮ ಸಾಹಿತ್ಯ ಪರಂಪರೆಯ ನಿಜವಾದ ವಾರಸುದಾರರು. ಹಾಗಲ್ಲದೆ ಪ್ರಶಸ್ತಿ ಲೋಲುಪರೇ ಈ ಯುಗದ ಪ್ರತಿನಿಧಿಗಳೆಂದು ಯಾರಾದರೂ ತೀರ್ಮಾನಿಸಿದರೆ ಅದನ್ನು ಒಪ್ಪಲು ಕಷ್ಟವಾಗುತ್ತದೆ. ಅಂತಹ ತೀರ್ಮಾನದಿಂದ ವಿದೂಷಕರ ಯೋಗ್ಯತೆಗೆ ಸಲ್ಲದ ಬೆಲೆ ಕೊಟ್ಟಂತಾಗುತ್ತದೆ.

ವಾಚಕರ ವಾಣಿ

ವಿದ್ಯುತ್ ಅವಘಡ: ಎಲ್ಲೆಡೆ ನಡೆಯಲಿ ಸಮೀಕ್ಷೆ

ಬೆಂಗಳೂರಿನಲ್ಲಿ ಇತ್ತೀಚೆಗೆ ತುಂಡಾಗಿ ಬಿದ್ದಿದ್ದ, ವಿದ್ಯುತ್ ಪ್ರವಹಿಸುತ್ತಿದ್ದ ತಂತಿ ತುಳಿದು ತಾಯಿ, ಮಗು ಮೃತಪಟ್ಟ ಪ್ರಕರಣದ ನಂತರ ಇದೀಗ ಬೆಸ್ಕಾಂ ಎಚ್ಚೆತ್ತುಕೊಂಡು, ಅದನ್ನು ಗಂಭೀರವಾಗಿ ಪರಿಗಣಿಸಿ ಕಾರ್ಯಪ್ರವೃತ್ತವಾಗಿರುವುದು ಒಳ್ಳೆಯ ಬೆಳವಣಿಗೆ. ಬೆಸ್ಕಾಂ ವಲಯದಲ್ಲಿ ಸಂಬಂಧಿಸಿದ ಸಿಬ್ಬಂದಿಯು ಖುದ್ದು ಸಮೀಕ್ಷಾ ಕಾರ್ಯ ಕೈಗೊಂಡ ಮೇಲೆ ಅಪಾಯಕಾರಿ ವಿದ್ಯುತ್ ಕಂಬಗಳು, ಜೋತುಬಿದ್ದ ಬಾಕ್ಸ್, ಬಾಗಿರುವ ವಿದ್ಯುತ್ ಕಂಬಗಳು, ಅಪಾಯ ತಂದೊಡ್ಡುವ ಟ್ರಾನ್ಸ್‌ಫಾರ್ಮರ್, ಶಿಥಿಲಗೊಂಡ ವಿದ್ಯುತ್ ಕಂಬಗಳು ಕಂಡುಬಂದಿವೆ.

ಬೆಸ್ಕಾಂ ವಲಯದಲ್ಲಿ ಮಾತ್ರವಲ್ಲ, ರಾಜ್ಯದ ಎಲ್ಲ ಎಸ್ಕಾಂಗಳ ವ್ಯಾಪ್ತಿಯಲ್ಲೂ ಇಂತಹ ಸಮೀಕ್ಷೆ ನಡೆಸಬೇಕಾದ ಅಗತ್ಯ ಇದೆ. ಮಳೆ, ಗಾಳಿಗೆ ವಿದ್ಯುತ್ ಕಂಬಗಳು ಶಿಥಿಲಗೊಳ್ಳುವ ಸಾಧ್ಯತೆ ಹೆಚ್ಚು. ಇದರಿಂದ ಆಗಬಹುದಾದ ಸಂಭಾವ್ಯ ಅಪಾಯವನ್ನು ತಪ್ಪಿಸಿ ನಾಗರಿಕರ ಅಮೂಲ್ಯ ಜೀವಗಳನ್ನು ಕಾಪಾಡುವುದರತ್ತ ಗಂಭೀರವಾಗಿ ಗಮನಹರಿಸಬೇಕಾಗಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಸಿಬ್ಬಂದಿ ಸೇವೆ ಸಮರ್ಪಕವಾಗಿ ಬಳಕೆಯಾಗಲಿ

ಅನಾರೋಗ್ಯದಿಂದ ಬಳಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಬರುವ ರೋಗಿಗಳ ಚಿಕಿತ್ಸೆಗೆ ವೈದ್ಯರು ಸರಿಯಾಗಿ ಲಭ್ಯವಾಗುತ್ತಿಲ್ಲ. ಹೀಗಾಗಿ, ಇತ್ತ ಸರ್ಕಾರಿ ಆಸ್ಪತ್ರೆ ಸೇವೆಯೂ ಸಿಗುತ್ತಿಲ್ಲ, ಅತ್ತ ಖಾಸಗಿ ಆಸ್ಪತ್ರೆಗಳ ಶುಲ್ಕ ಭರಿಸಲೂ ಸಾಧ್ಯವಿಲ್ಲದ ನಮ್ಮಂತಹ ಸಾಮಾನ್ಯರ ಕಷ್ಟ ಹೇಳತೀರದಾಗಿದೆ. ಆರೋಗ್ಯ ಸಚಿವರು ಕೂಡಲೇ ಎಚ್ಚೆತ್ತು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಕೆ ಮತ್ತು ಸಿಬ್ಬಂದಿಯ ಹಾಜರಾತಿಯ ಖಾತರಿಗೆ ಬೆರಳಚ್ಚು ಯಂತ್ರದ ವ್ಯವಸ್ಥೆ ಮಾಡಬೇಕು. ಜೊತೆಗೆ, ಖಾಸಗಿ ಆಸ್ಪತ್ರೆಗಳ ರೀತಿಯಲ್ಲಿ ಆನ್‌ಲೈನ್ ಮೂಲಕ ವೈದ್ಯರ ಸೇವೆಯನ್ನು ಮುಂಗಡವಾಗಿ ಕಾಯ್ದಿರಿಸುವ ವ್ಯವಸ್ಥೆ ಮಾಡಿದರೆ ತುಂಬಾ ಅನುಕೂಲವಾಗುತ್ತದೆ.

ಜನಪ್ರಿಯ ಯೋಜನೆಗಳನ್ನು ನೀಡಲು ಮುಂದಾಗುವ ಸರ್ಕಾರಗಳು, ಇರುವ ವ್ಯವಸ್ಥೆ ಮತ್ತು ಸಿಬ್ಬಂದಿಯ ಸೇವೆಯನ್ನು ಜನಹಿತಕ್ಕಾಗಿ ಬಳಸಿಕೊಳ್ಳಲು ತಂತ್ರಜ್ಞಾನವನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳಬೇಕು.

ಎಸ್.ನಾಗರಾಜ ನಾಗೂರ, ಬಾಗಲಕೋಟೆ

ಸೀಟು ಕಾಯ್ದಿರಿಸುವಿಕೆ: ಬೇಕು ಆನ್‌ಲೈನ್ ವ್ಯವಸ್ಥೆ

ತಾಲ್ಲೂಕು ಕೇಂದ್ರವಾದ ಸಂಡೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ಧರ್ಮಸ್ಥಳಕ್ಕೆ ತೆರಳುವ ಭಕ್ತರ ಸಂಖ್ಯೆ ಅಧಿಕವಾಗಿದೆ. ಸಂಡೂರಿನಿಂದ ಧರ್ಮಸ್ಥಳಕ್ಕೆ ಹೋಗಲು ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳು ಇಲ್ಲದಿರುವುದರಿಂದ ಪ್ರಯಾಣಿಕರು ಸುತ್ತಿ ಬಳಸಿ ಕೂಡ್ಲಿಗಿ ಅಥವಾ ಹೊಸಪೇಟೆ ಮೂಲಕ ತೆರಳಬೇಕಾಗುತ್ತದೆ. ಹೀಗೆ ಮಾಡುವುದರಿಂದ ಪ್ರಯಾಣಕ್ಕೆ ತಗಲುವ ಸಮಯ ಹೆಚ್ಚಾಗುವುದರೊಂದಿಗೆ ಆರ್ಥಿಕ ಹೊರೆಯೂ ಆಗುತ್ತದೆ.

ಬಳ್ಳಾರಿಯಿಂದ ರಾತ್ರಿ ಎಂಟು ಗಂಟೆಗೆ ಸಂಡೂರು- ಕೂಡ್ಲಿಗಿ ಮಾರ್ಗವಾಗಿ ಧರ್ಮಸ್ಥಳಕ್ಕೆ ಹೋಗುವ ಸಾರಿಗೆ ನಿಗಮದ ಬಸ್ ಇದೆಯಾದರೂ ಇದರಲ್ಲಿ ಪ್ರಯಾಣಿಸಲು ಆನ್‌ಲೈನ್ ಮೂಲಕ ಸಂಡೂರಿನಿಂದ ಸೀಟು ಕಾಯ್ದಿರಿಸುವ ಸೌಲಭ್ಯ ಇಲ್ಲ. ಸೀಟು ಕಾಯ್ದಿರಿಸದೆ ಪ್ರಯಾಣಿಸಿದರೆ, ಸೀಟುಗಳು ಖಾಲಿ ಇರುವ ಸಾಧ್ಯತೆ ತೀರಾ ಕಡಿಮೆ. ಒಂದುವೇಳೆ ಬಳ್ಳಾರಿಯಿಂದ ಧರ್ಮಸ್ಥಳಕ್ಕೆ ಸೀಟು ಕಾಯ್ದಿರಿಸಿದಲ್ಲಿ ಪ್ರಯಾಣಿಕರಿಗೆ ಆರ್ಥಿಕ ಹೊರೆಯಾಗುತ್ತದೆ. ಆದ್ದರಿಂದ ಮೇಲೆ ತಿಳಿಸಿದ ಬಸ್ಸಿನಲ್ಲಿ ಸಂಡೂರಿನಿಂದ ಧರ್ಮಸ್ಥಳಕ್ಕೆ ಆನ್‌ಲೈನ್ ಮೂಲಕ ಸೀಟು ಕಾಯ್ದಿರಿಸಲು ಅನುಕೂಲ ಮಾಡಿಕೊಡಬೇಕು.

ಜಿ.ನಾಗೇಂದ್ರ ಕಾವೂರು, ಸಂಡೂರು

ಜಮ್ಮು, ಕಾಶ್ಮೀರ: ಕೊನೆಯಾದ ಅನಿಶ್ಚಿತತೆ

ಜಮ್ಮು ಮತ್ತು ಕಾಶ್ಮೀರದ ವಿಷಯದಲ್ಲಿ ನಿರಂತರ ವಿಚಾರಣೆ ಕೈಗೊಂಡ ಸುಪ್ರೀಂ ಕೋರ್ಟ್ ಈಗ ಅಂತಿಮ ತೀರ್ಪು ನೀಡಿರುವುದು ಅನಿಶ್ಚಿತತೆಯನ್ನು ಕೊನೆಗೊಳಿಸಿದೆ. ಸಮಾಧಾನಕರ ಅಂಶವೆಂದರೆ, 2024ರ ಸೆಪ್ಟೆಂಬರ್ ಒಳಗೆ ಅಲ್ಲಿ ಚುನಾವಣೆ ನಡೆಸಬೇಕಾಗುತ್ತದೆ. ರಾಜ್ಯದ ಸ್ಥಾನಮಾನ ಪುನಃಸ್ಥಾಪನೆಗೂ ಕಾಲಾವಧಿ ಸೂಚಿಸಿದ್ದರೆ ಚೆನ್ನಾಗಿತ್ತು. ರಾಜ್ಯದಲ್ಲಿ ಶಾಸನಸಭೆ ಇಲ್ಲದಿರುವಾಗ ನಡೆಸಿದ ತಂತ್ರಗಾರಿಕೆಯು ತಾಂತ್ರಿಕ ಹಾಗೂ ಕಾನೂನಾತ್ಮಕವಾಗಿ ಗೆದ್ದಿದೆ. ಅದಕ್ಕೆ ಮತದಾರರೇ ಸೂಕ್ತ ರಾಜಕೀಯ ಉತ್ತರ ನೀಡಬೇಕಷ್ಟೆ.

ಕೇಂದ್ರಾಡಳಿತ ಪ್ರದೇಶವಾಗಿ ಮುಂದುವರಿಯಲಿರುವ ಲಡಾಕ್‌ಗೆ ಎಲ್ಲ ಬಗೆಯ ಬೆಂಬಲ ನೀಡುವುದು ಈಗಿನ ತುರ್ತು ಅಗತ್ಯ. ಸಾಮಾನ್ಯ ನಾಗರಿಕನಿಗೆ 'ಆ್ಯಸಿಮೆಟ್ರಿಕ್ ಫೆಡರಲಿಸಂ, ಮೇಲಫೈಡಿ, ಅಲ್ಟ್ರಾ ವೈರ್ಸ್' ಇವೆಲ್ಲ ಸುಲಭಕ್ಕೆ ಅರ್ಥವಾಗುವುದಿಲ್ಲ. 35ಎ ವಿಷಯದಲ್ಲಿ ಕೇಂದ್ರ ಸರ್ಕಾರ ಅನುಸರಿಸಿದ ವಿಧಾನದ ಬಗೆಗೆ ಆಕ್ಷೇಪ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಯಾರ ಬಗೆಗೂ ಕ್ರಮ ಕೈಗೊಳ್ಳದಿರುವುದು ಗಮನಾರ್ಹ. ಸ್ಪಷ್ಟ ಬಹುಮತ ಇದ್ದಾಗ, ಸಹಿ ಹಾಕಬೇಕಾದವರು ವಿವರಣೆ ಕೇಳಲೂ ತಯಾರಿರದಿದ್ದರೆ ಇಂಥ ಘಟನೆಗಳು ಮರುಕಳಿಸಬಹುದಲ್ಲವೇ?

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಕರ್ತವ್ಯಪ್ರಜ್ಞೆ ಹೆಚ್ಚಲಿ, ರಜೆಗಿರಲಿ ಮಿತಿ

ಬ್ಯಾಂಕ್ ನೌಕರರ ವೇತನ ಇತ್ತೀಚೆಗೆ ಹೆಚ್ಚಳವಾಗಿದೆ. ಜೊತೆಗೆ, ವಾರದಲ್ಲಿ ಐದು ದಿನ ಮಾತ್ರ ಕೆಲಸದ ಬೇಡಿಕೆಯನ್ನು ಶಿಫಾರಸು ಮಾಡಿ ಕೇಂದ್ರಕ್ಕೆ ಅನುಮೋದನೆಗಾಗಿ ಕಳುಹಿಸಲಾಗಿದೆ. ಇಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಈಗಾಗಲೇ ಬಹಳಷ್ಟು ರಜೆ ದಿನಗಳು ನಿಗದಿಯಾಗಿವೆ. ಇದರಲ್ಲಿ ಹಬ್ಬ-ಹರಿದಿನ, ಜಯಂತಿಗಳ ಪಾಲೇ ದೊಡ್ಡದು. ಬ್ಯಾಂಕ್, ಎಲ್‌ಐಸಿಯಂತಹ ಯಾವುದೇ ಸಂಸ್ಥೆ ಇರಲಿ, ಐದು ದಿನದ ವಾರ ನಿಗದಿಯಾದಲ್ಲಿ, ಈ ಮೇಲಿನ ಜಯಂತಿ ಸೂಟಿಗಳನ್ನೆಲ್ಲ ರದ್ದುಪಡಿಸುವ ಅಗತ್ಯ ಇದೆ.

ನೌಕರರ ಎಲ್ಲ ಹಕ್ಕಿನ ರಜೆ, ಆಕಸ್ಮಿಕ ರಜೆ, ಹಬ್ಬದ ರಜೆ, ಜಯಂತಿ ರಜೆ, ಸಾರ್ವಜನಿಕ ರಜೆ, ವಾರಾಂತ್ಯದ ರಜೆ... ಎಲ್ಲಾ ಸೇರಿದರೆ, ವರ್ಷದಲ್ಲಿ ಒಟ್ಟು ಐದೂವರೆ ತಿಂಗಳು ರಜೆ ಸಿಕ್ಕಂತಾಗುವುದು! ಇದಲ್ಲದೆ, ಸ್ಥಳೀಯ ಸಂಪು, ಹರತಾಳಗಳು ಬೇರೆ. ಇದರ ಬದಲಾಗಿ, ಆಕಸ್ಮಿಕ ರಜೆಗಳಿಗೆ ಇನ್ನೂ ನಾಲ್ಕೈದು ರಜೆ ಸೇರಿಸಿದಲ್ಲಿ, ಆಯಾ ಧರ್ಮದ ನೌಕರರು ಈ ಹೆಚ್ಚುವರಿ ರಜೆ ಪಡೆದು ಹಬ್ಬ ಆಚರಿಸಬಹುದು. ಹೀಗಾದಲ್ಲಿ, ಕಚೇರಿಗಳನ್ನು ಮುಚ್ಚುವ ಪ್ರಮೇಯವೇ ಬಾರದು. ಇದರಿಂದ ವಾರದ ಐದೂ ದಿನಗಳು ಕೆಲಸದ ದಿನಗಳಂತಾಗಿ, ಜನರಿಗೆ ಹೆಚ್ಚಿನ ಅನುಕೂಲದೊಂದಿಗೆ, ದೇಶದ ಅಭಿವೃದ್ಧಿ ಕೂಡ ಆದೀತು. ರಾಷ್ಟ್ರೀಯ ಸಾರ್ವಜನಿಕ ರಜೆಗಳಾಗಿ ಗಾಂಧಿ ಜಯಂತಿ, ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಇವು ಮೂರೇ ಮುಂದುವರಿಯಬೇಕು.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

2019ರಲ್ಲಿ ದೆಹಲಿಯಲ್ಲಿ ನಡೆದಿದ್ದ ಪ್ರತಿಭಟನೆ

ಜಮ್ಮು ಮತ್ತು ಕಾಶ್ಮೀರ ವಿಶೇಷ ಸ್ಥಾನದ ಹಿನ್ನೆಲೆ–ಮುನ್ನೆಲೆ

ಪ್ರಜಾವಾಣಿ ವಾರ್ತೆ

ಬ್ರಿಟಿಷರು ಭಾರತವನ್ನು ತೊರೆಯುವಾಗ ಇಲ್ಲಿದ್ದ ಎಲ್ಲಾ ಸಂಸ್ಥಾನಗಳಿಗೂ ಸ್ವಾತಂತ್ರ್ಯವನ್ನು ನೀಡಿದ್ದರು. ಭಾರತಕ್ಕೆ ಸೇರುವ ಅಥವಾ ಪಾಕಿಸ್ತಾನಕ್ಕೆ ಸೇರುವ ಅಥವಾ ಸ್ವತಂತ್ರ ಸಂಸ್ಥಾನವಾಗಿ ಉಳಿಯುವ ಆಯ್ಕೆಯನ್ನು ಆ ಎಲ್ಲಾ ಸಂಸ್ಥಾನಗಳಿಗೆ ನೀಡಲಾಗಿತ್ತು. ಆಗ ಜಮ್ಮು–ಕಾಶ್ಮೀರದ ರಾಜ ಹರಿಸಿಂಗ್ ಸ್ವತಂತ್ರವಾಗಿ ಉಳಿಯುವುದನ್ನು ಆಯ್ಕೆ ಮಾಡಿಕೊಂಡಿದ್ದರು.

ಹೀಗಾಗಿ 1947ರ ಆಗಸ್ಟ್‌ನಲ್ಲೇ ಕಾಶ್ಮೀರವು ಭಾರತದೊಂದಿಗೆ ವಿಲೀನವಾಗಲಿಲ್ಲ. ಆದರೆ ಸ್ವತಂತ್ರವಾಗಿ ಉಳಿಯುವ ಅವರ ಆಯ್ಕೆ ದುಬಾರಿಯಾಗಿ ಪರಿಣಮಿಸಿತ್ತು. ಪಾಕಿಸ್ತಾನವು ಕಾಶ್ಮೀರದ ಮೇಲೆ ಅತಿಕ್ರಮಣ ಮಾಡಿತ್ತು. ಅದನ್ನು ಎದುರಿಸಲಾಗದ ಹರಿಸಿಂಗ್, ಭಾರತದ ನೆರವನ್ನು ಕೇಳಿದ್ದರು. ಜಮ್ಮು–ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡಿದರೆ ಮಾತ್ರ, ಪಾಕಿಸ್ತಾನವನ್ನು ಎದುರಿಸಲು ನೆರವು ನೀಡುವುದಾಗಿ ಭಾರತ ಷರತ್ತು ಹಾಕಿತ್ತು. ಅದಕ್ಕೆ ಒಪ್ಪಿದ್ದ ಹರಿಸಿಂಗ್, ಭಾರತದೊಂದಿಗೆ ಸೇರಿದ್ದರೂ ಸ್ವಾಯತ್ತೆಯನ್ನು ಉಳಿಸಿಕೊಳ್ಳುವ ಷರತ್ತು ಒಡ್ಡಿದ್ದರು. ಹೀಗೆ ಪರಸ್ಪರ ಷರತ್ತುಗಳ ಮೂಲಕವೇ ಜಮ್ಮು–ಕಾಶ್ಮೀರವನ್ನು ಭಾರತದೊಂದಿಗೆ ವಿಲೀನ ಮಾಡಲಾಗಿತ್ತು. ಸಂವಿಧಾನವನ್ನು ರಚಿಸುವಾಗ ಆ ಷರತ್ತುಗಳನ್ನು 370ನೇ ವಿಧಿಯ (ಕರಡು ಸಂವಿಧಾನದಲ್ಲಿ 306ಎ ವಿಧಿ) ಅಡಿ ಸೇರಿಸಲಾಯಿತು.

ಭಾರತದೊಂದಿಗೆ ವಿಲೀನವಾದರೂ ಜಮ್ಮು–ಕಾಶ್ಮೀರದ ವಿದೇಶಾಂಗ ವ್ಯವಹಾರ, ರಕ್ಷಣೆ ಮತ್ತು ಸಂವಹನ ವಿಚಾರಗಳಲ್ಲಿ ಮಾತ್ರ ಕೇಂದ್ರ ಸರ್ಕಾರಕ್ಕೆ ಅಧಿಕಾರವಿತ್ತು. ಉಳಿದ ಎಲ್ಲಾ ವಿಚಾರಗಳಲ್ಲೂ ರಾಜ ಹರಿಸಿಂಗ್ ಸ್ವತಂತ್ರ ಅಧಿಕಾರ ಹೊಂದಿದ್ದರು. ಭಾರತದ ಸಂವಿಧಾನ ಅಂಗೀಕಾರವಾದರೂ ಈ ಷರತ್ತುಗಳ ಕಾರಣದಿಂದಾಗಿ ಜಮ್ಮು–ಕಾಶ್ಮೀರಕ್ಕೆ ಪ್ರತ್ಯೇಕ ಸಂವಿಧಾನವನ್ನು ರಚಿಸಲಾಗಿತ್ತು. ಭಾರತ ಸಂವಿಧಾನವನ್ನೇ ಹೋಲುವ, ಅದರ ನಕಲಿನಂತೆಯೇ ಇದ್ದ ಕಾಯ್ದೆಗಳನ್ನು ಒಳಗೊಂಡಿದ್ದ ಚಿಕ್ಕ ಸಂವಿಧಾನವದು. ಇವೆಲ್ಲವುಗಳ ಹೊರತಾಗಿ ಜಮ್ಮು–ಕಾಶ್ಮೀರದ ಕಾಯಂ ನಿವಾಸಿಗಳಲ್ಲದೇ ಇರುವವರಿಗೆ ಅಲ್ಲಿ ಆಸ್ತಿ ಖರೀದಿಸಲು ಅವಕಾಶವಿರಲಿಲ್ಲ. ಭಾರತ ಸಂವಿಧಾನದ 35ಎ ವಿಧಿಯಲ್ಲಿ ಈ ಹಕ್ಕನ್ನು ರಕ್ಷಿಸಲಾಗಿತ್ತು. ಇದೇ ಜಮ್ಮು–ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನ.

ಈ ವಿಶೇಷ ಸ್ಥಾನವನ್ನು ಸಾಧ್ಯವಾಗಿಸಿದ್ದ 370ನೇ ವಿಧಿಯ ಬಗ್ಗೆ 60ರ ದಶಕದಿಂದಲೂ ಅಸಮಾಧಾನ ಇದ್ದೇ ಇತ್ತು. ಅದರ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಹಲವು ಬಾರಿ ಅರ್ಜಿ ಸಲ್ಲಿಸಲಾಗಿತ್ತು. ಆದರೆ, ಆ ವಿಶೇಷ ಸ್ಥಾನವನ್ನು ಸುಪ್ರೀಂ ಕೋರ್ಟ್ ಆಗೆಲ್ಲಾ ಎತ್ತಿಹಿಡಿದಿತ್ತು. 80ರ ದಶಕದಲ್ಲಿ ಈ ಅಸಮಾಧಾನವು ರಾಜಕೀಯ ರೂಪ ಪಡೆಯಿತು. ಈ ವಿಧಿಯನ್ನು ಜನಸಂಘವು ಮೊದಲಿನಿಂದಲೂ ವಿರೋಧಿಸಿಕೊಂಡೇ ಬಂದಿತ್ತು. ನಂತರದ ಬಿಜೆಪಿಯೂ ಅದನ್ನೇ ಮುಂದುವರಿಸಿತ್ತು. 370ನೇ ವಿಧಿಯನ್ನು ರದ್ದುಪಡಿಸಬೇಕು ಎಂಬುದು ಬಿಜೆಪಿಯ ಆಗ್ರಹವಾಗಿತ್ತು. ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳು ನಡೆಯಲು 370ನೇ ವಿಧಿಯೂ ಒಂದು ಕಾರಣ ಎಂಬ ಸಂಕಥನವನ್ನು ಸೃಷ್ಟಿಸಲಾಗಿತ್ತು. ದೇಶದ ಎಲ್ಲಾ ಪ್ರಜೆಗಳಿಗೂ ಒಂದೇ ಸಂವಿಧಾನ ಅನ್ವಯವಾಗಬೇಕು ಎಂಬ ವಿಚಾರವು 2014ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ದೊಡ್ಡಮಟ್ಟದಲ್ಲಿ ಚಲಾವಣೆಗೆ ಬಂದಿತು. ಅಧಿಕಾರಕ್ಕೆ ಬಂದರೆ 370ನೇ ವಿಧಿಯನ್ನು ರದ್ದುಪಡಿಸುತ್ತೇವೆ ಎಂದು ಬಿಜೆಪಿ ಘೋಷಿಸಿತ್ತು. ಆದರೆ ಆ ಘೋಷಣೆಯನ್ನು ಜಾರಿಗೆ ತಂದಿದ್ದು 2019ರ ಲೋಕಸಭಾ ಚುನಾವಣೆಯ ನಂತರ.

ಜಮ್ಮು–ಕಾಶ್ಮೀರದಲ್ಲಿ ಚುನಾಯಿತ ಸರ್ಕಾರ ಇಲ್ಲದೇ ಇದ್ದ ಸಂದರ್ಭದಲ್ಲಿ ಕೇಂದ್ರದ ಬಿಜೆಪಿ ಸರ್ಕಾರವು ವಿಶೇಷ ಸ್ಥಾನವನ್ನು ತೆಗೆದುಹಾಕಿತು. ಇದರ ವಿರುದ್ಧ ಅಲ್ಲಿನ ರಾಜಕೀಯ ಪಕ್ಷಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದವು. ಈಗ ಕೇಂದ್ರ ಸರ್ಕಾರದ ಕ್ರಮ ಸರಿಯಾಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಭಯೋತ್ಪಾದನಾ ಕೃತ್ಯ: ಭಾರಿ ಏರಿಕೆ

ಸಂವಿಧಾನದ 370ನೇ ವಿಧಿಯ ಅಡಿ ನೀಡಲಾದ ವಿಶೇಷ ಸ್ಥಾನವನ್ನು ತೆಗೆದುಹಾಕುವುದರಿಂದ ಜಮ್ಮು–ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಕಡಿವಾಣ ಹಾಕಬಹುದು ಎಂದು 2019ರ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರವು ಹೇಳಿತ್ತು. ಆದರೆ, ವಾಸ್ತವದಲ್ಲಿ ಇದು ಸಾಧ್ಯವಾಗಿಲ್ಲ ಎಂಬುದನ್ನು ಕೇಂದ್ರ ಸರ್ಕಾರದ್ದೇ ದತ್ತಾಂಶಗಳು ಹೇಳುತ್ತವೆ. ಬದಲಿಗೆ ಜಮ್ಮು–ಕಾಶ್ಮೀರದ ವಿಶೇಷ ಸ್ಥಾನವನ್ನು ತೆಗೆದುಹಾಕಿದ ನಂತರ ಭಯೋತ್ಪಾದನಾ ಚಟುವಟಿಕೆಗಳು ಭಾರಿ ಪ್ರಮಾಣದಲ್ಲಿ ಏರಿಕೆಯಾಗಿವೆ.

ವಿಶೇಷ ಸ್ಥಾನ ತೆಗೆದುಹಾಕುವುದರ ಮೂಲಕ ಭಯೋತ್ಪಾದನಾ ಚಟುವಟಿಕೆಗಳಿಗೆ ಕಡಿವಾಣ ಹಾಕುವಲ್ಲಿ ಸರ್ಕಾರ ವಿಫಲವಾಗಿದೆ. ಜತೆಗೆ ಭಯೋತ್ಪಾದನಾ ಚಟುವಟಿಕೆಗಳು ಉಲ್ಬಣಗೊಳ್ಳಲು ಸರ್ಕಾರದ ಈ ಕ್ರಮ ಕಾರಣವಾಗಿದೆ ಎಂಬುದನ್ನೂ ಈ ದತ್ತಾಂಶಗಳು ವಿವರಿಸುತ್ತವೆ.

2017ರಲ್ಲಿ ನಡೆದಿದ್ದ ಭಯೋತ್ಪಾದನಾ ಚಟುವಟಿಕೆಗಳಿಗೆ ಹೋಲಿಸಿದರೆ 2022ರಲ್ಲಿ ನಡೆದ ಕೃತ್ಯಗಳ ಸಂಖ್ಯೆಯಲ್ಲಿ ಒಂದೂವರೆ ಪಟ್ಟಿನಷ್ಟು (ಶೇ 155) ಏರಿಕೆಯಾಗಿದೆ.

2019ರಲ್ಲಿ ವಿಶೇಷ ಸ್ಥಾನ ತೆಗೆದುಹಾಕುವ ಸಂದರ್ಭದಲ್ಲಿ ಜಮ್ಮು–ಕಾಶ್ಮೀರದಾದ್ಯಂತ ಭಾರಿ ಪೊಲೀಸ್ ಭದ್ರತೆ ಒದಗಿಸಲಾಗಿತ್ತು. ಅರೆಸೇನಾ ಪಡೆಗಳ ಸಿಬ್ಬಂದಿ ಮತ್ತು ಸೈನಿಕರ ಸಂಖ್ಯೆಯನ್ನೂ ಹೆಚ್ಚಿಸಲಾಗಿತ್ತು. ಈ ಕಾರಣದಿಂದ 2019ರಲ್ಲಿ ನಡೆದ ಭಯೋತ್ಪಾದನಾ ಕೃತ್ಯಗಳ ಸಂಖ್ಯೆ ಭಾರಿ ಪ್ರಮಾಣದಲ್ಲಿ ಕಡಿಮೆಯಾಗಿತ್ತು. ಆದರೆ ಹೆಚ್ಚುವರಿ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಂಡ ಬೆನ್ನಲ್ಲೇ ಭಯೋತ್ಪಾದನಾ ಕೃತ್ಯಗಳ ಸಂಖ್ಯೆ ಏರಿಕೆಯಾಗಿತ್ತು.

ವಿಶೇಷ ಸ್ಥಾನ ಹಿನ್ನೋಟ

1947: ಜಮ್ಮು ಮತ್ತು ಕಾಶ್ಮೀರದ ಕೊನೆಯ ರಾಜ ಹರಿಸಿಂಗ್ ಅವರು 1947 ಅಕ್ಟೋಬರ್ 26ರಂದು ಭಾರತದೊಂದಿಗೆ ಸೇರಿಕೊಳ್ಳುವ, ವಿಲೀನ ಸನ್ನದಿಗೆ ಸಹಿ ಹಾಕಿದರು. ವಿದೇಶಾಂಗ ವ್ಯವಹಾರ, ರಕ್ಷಣೆ ಹಾಗೂ ಸಂವಹನ– ಈ ಮೂರು ವಿಷಯಗಳಿಗೆ ಸಂಬಂಧಿಸಿ ಭಾರತ ಸರ್ಕಾರ ನಿರ್ಧಾರ ಕೈಗೊಳ್ಳಬಹುದು ಎಂದು ಅವರು ಒಪ್ಪಿಗೆ ನೀಡಿದರು. ಆ ಮೂಲಕ ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡಲು ಒಪ್ಪಿಕೊಳ್ಳಲಾಗಿತ್ತು

1950: ಜನವರಿ 26ರಂದು ಭಾರತದ ಸಂವಿಧಾನವು ಜಾರಿಯಾಯಿತು. ವಿಶೇಷ ಸ್ಥಾನವನ್ನು ಸಂವಿಧಾನದ 370ನೇ ವಿಧಿಯಲ್ಲಿ ವಿವರಿಸಲಾಯಿತು. ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಪ್ರಥಮ ಬಾರಿಗೆ ರಾಷ್ಟ್ರಪತಿ ಅವರು ಸಾಂವಿಧಾನಿಕ ಆದೇಶವನ್ನು ಹೊರಡಿಸಿದರು. ಆ ಮೂಲಕ ಜಮ್ಮು–ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡಲಾಯಿತು

1952: ಜಮ್ಮು–ಕಾಶ್ಮೀರ ಸರ್ಕಾರ ಹಾಗೂ ಭಾರತ ಸರ್ಕಾರದೊಂದಿಗೆ 'ದೆಹಲಿ ಒಪ್ಪಂದ' ಏರ್ಪಟ್ಟಿತ್ತು. ರಾಜ್ಯ ಮತ್ತು ಸಮವರ್ತಿ ಪಟ್ಟಿಯಲ್ಲಿ ಇಲ್ಲದ ವಿಚಾರಗಳಿಗೆ ಸಂಬಂಧಿಸಿದಂತೆ ಭಾರತ ಸರ್ಕಾರವು ಕಾಯ್ದೆ ರೂಪಿಸಬಹುದು. ಆದರೆ, ಈ ಪಟ್ಟಿಗಳಲ್ಲಿ ಇಲ್ಲದ ವಿಚಾರಗಳ ಬಗೆಗಿನ ತೀರ್ಮಾನಗಳನ್ನು ಜಮ್ಮು ಮತ್ತು ಕಾಶ್ಮೀರ ಸರ್ಕಾರವೇ ತೆಗೆದುಕೊಳ್ಳುವ ಅವಕಾಶವನ್ನು ವಿಧಿ 248 (ಉಳಿಕೆ ಅಧಿಕಾರ) ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಯಿತು. ಈ ವಿಷಯವನ್ನೇ 'ದೆಹಲಿ ಒಪ್ಪಂದ' ಒಳಗೊಂಡಿದೆ

1954: ದೆಹಲಿ ಒಪ್ಪಂದವನ್ನು ಜಾರಿ ಮಾಡಲು 1954ರಲ್ಲಿ ರಾಷ್ಟ್ರಪತಿ ಅವರು ಸಾಂವಿಧಾನಿಕ ಆದೇಶವನ್ನು ಹೊರಡಿಸಿದರು

1956: ಜಮ್ಮು ಮತ್ತು ಕಾಶ್ಮೀರದ ಸಂವಿಧಾನವು ಜಾರಿಗೆ ಬಂದಿತು

1962: ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿ ಸಾಂವಿಧಾನಿಕ ಅವಕಾಶಗಳಿಗೆ ತಿದ್ದುಪಡಿ ತರುವ ವ್ಯಾಪಕ ಅಧಿಕಾರವು ರಾಷ್ಟ್ರಪತಿಗಿದೆ ಎಂದು ಸುಪ್ರೀಂ ಕೋರ್ಟ್ ಹೇಳಿತು

1968: ಸಂವಿಧಾನದ 370ನೇ ವಿಧಿಯು ಶಾಶ್ವತ ಸ್ವರೂಪದ್ದು ಎಂದು ಸುಪ್ರೀಂ ಕೋರ್ಟ್ ಹೇಳಿತು

2016: ಜಮ್ಮು– ಕಾಶ್ಮೀರದ ಸಂವಿಧಾನ ಸಭೆಯ ಶಿಫಾರಸಿನ ಮೇಲೆಯೇ 370ನೇ ವಿಧಿಯನ್ನು ರದ್ದುಗೊಳಿಸಲು ಸಾಧ್ಯ ಎಂದು ಸುಪ್ರೀಂ ಕೋರ್ಟ್ ಹೇಳಿತು. ಜಮ್ಮು ಮತ್ತು ಕಾಶ್ಮೀರದ ಸಂವಿಧಾನ ಸಭೆಯು 1957ರಲ್ಲಿಯೇ ವಿಸರ್ಜನೆಗೊಂಡಿದೆ

2018ರ ಡಿಸೆಂಬರ್: ಸಂವಿಧಾನದ 356ನೇ ವಿಧಿ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಬಳಸಿಕೊಂಡು ರಾಷ್ಟ್ರಪತಿ ಆಳ್ವಿಕೆಯನ್ನು ಹೇರಲಾಯಿತು

2019 ಆಗಸ್ಟ್ 5: ರಾಷ್ಟ್ರಪತಿ ಆದೇಶದ ಮೂಲಕ 'ಸಂವಿಧಾನ ಸಭೆ'ಯ ವ್ಯಾಖ್ಯಾನಕ್ಕೆ ತಿದ್ದುಪಡಿ ತರಲಾಯಿತು. ಆ ಮೂಲಕ ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಲಾಯಿತು

2019 ಆಗಸ್ಟ್ 9: ಜಮ್ಮು ಮತ್ತು ಕಾಶ್ಮೀರವನ್ನು ಎರಡು ಕೇಂದ್ರಾಡಳಿತ ಪ್ರದೇಶವನ್ನಾಗಿ ವಿಭಜಿಸಲಾಯಿತು

2019 ಆಗಸ್ಟ್ 28: ರಾಷ್ಟ್ರಪತಿ ಅವರ ಆದೇಶದ ಸಾಂವಿಧಾನಿಕ ಸಿಂಧುತ್ವವನ್ನು ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಐವರು ನ್ಯಾಯಮೂರ್ತಿಗಳ ಪೀಠಕ್ಕೆ ರವಾನಿಸಲಾಯಿತು

2020 ಮಾರ್ಚ್ 2: ಈ ವಿಷಯಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಸಾಂವಿಧಾನಿಕ ವಿಸ್ತೃತ ಪೀಠಕ್ಕೆ ವರ್ಗಾಯಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿತು

2022 ಏಪ್ರಿಲ್ 25: ಜಮ್ಮು ಮತ್ತು ಕಾಶ್ಮೀರದಲ್ಲಿ ಕ್ಷೇತ್ರ ಮರುವಿಂಗಡಣೆ ಕಾರ್ಯ ನಡೆಯುತ್ತಿದೆ. ಆದ ಕಾರಣ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಕ್ರಮವನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳನ್ನು ತ್ವರಿತವಾಗಿ ವಿಚಾರಣೆ ನಡೆಸಬೇಕು ಎಂದು ಅರ್ಜಿದಾರರೊಬ್ಬರು ಸುಪ್ರೀಂ ಕೋರ್ಟ್ ಅನ್ನು ಕೋರಿದರು. ಈ ಕಾರಣಕ್ಕಾಗಿ ಬೇಸಿಗೆ ರಜೆ ಬಳಿಕ ಎಲ್ಲ ಅರ್ಜಿಗಳ ವಿಚಾರಣೆ ನಡೆಸುವುದಾಗಿ ನ್ಯಾಯಾಲಯ ಹೇಳಿತು

2023 ಜುಲೈ 3: ಐವರು ನ್ಯಾಯಮೂರ್ತಿಗಳ ಪೀಠದ ಮುಂದೆ ಈ ಎಲ್ಲಾ ಅರ್ಜಿಗಳು ಬಂದವು

2023 ಆಗಸ್ಟ್ 2: ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಆರಂಭಿಸಿತು

2023 ಸೆಪ್ಟೆಂಬರ್ 5: 23 ಅರ್ಜಿಗಳ ವಿಚಾರಣೆಯನ್ನು 16 ದಿನ ನಡೆಸಿದ ನ್ಯಾಯಾಲಯವು ತನ್ನ ತೀರ್ಪನ್ನು ಕಾಯ್ದಿರಿಸಿತು

2023 ಡಿಸೆಂಬರ್ 11: ಜಮ್ಮು ಮತ್ತು ಕಾಶ್ಮೀರಕ್ಕೆ 370ನೇ ವಿಧಿ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದು ಮಾಡಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿಯಿತು.

ಆಧಾರ: ಪಿಟಿಐ, ಸಂವಿಧಾನದ 370ನೇ ವಿಧಿ, ಜಮ್ಮು–ಕಾಶ್ಮೀರ ಮರುರಚನೆ ಕಾಯ್ದೆ–2019, ನ್ಯಾಷನಲ್ ಆರ್ಕೈವ್ ಆಫ್ ಇಂಡಿಯಾದ ದಾಖಲಾತಿಗಳು, ಸಂವಿಧಾನ ರಚನಾ ಸಭೆಯ ಚರ್ಚೆಗಳು

'ಕರಾವಳಿ'ಯತ್ತ ಪ್ರಜ್ವಲ್

ಪ್ರಜ್ವಲ್ ದೇವರಾಜ್ ನಟನೆಯ 40ನೇ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದ್ದು, ಡೈನಾಮಿಕ್ ಪ್ರಿನ್ಸ್ 'ಕರಾವಳಿ'ಯತ್ತ ಹೆಜ್ಜೆ ಹಾಕಿದ್ದಾರೆ. ಈ ಸಿನಿಮಾಗೆ ಗುರುದತ್ ಗಾಣಿಗ ಅವರು ಆ್ಯಕ್ಷನ್ ಕಟ್ ಹೇಳುತ್ತಿದ್ದು, ಸಿನಿಮಾದ ಟೀಸರ್ ಬಿಡುಗಡೆಯಾಗಿದೆ.

ಕರಾವಳಿಯ ಮಣ್ಣಿನ ಕಥಾವಸ್ತುವನ್ನು ಹಿಡಿದು ಈ ಸಿನಿಮಾ ನಿರ್ಮಾಣಗೊಂಡಿದೆ. ಚಿತ್ರದಲ್ಲಿ ಭಿನ್ನವಾದ ಒಂದು ಪಾತ್ರದಲ್ಲಿ ಪ್ರಜ್ವಲ್ ಕಾಣಿಸಿಕೊಳ್ಳಲಿದ್ದಾರೆ. ಗುರುದತ್ ಈ ಹಿಂದೆ 'ಅಂಬಿ ನಿಂಗೆ ವಯಸ್ಸಾಯ್ತೋ' ಸಿನಿಮಾ ನಿರ್ದೇಶಿಸಿದ್ದರು. ಟೀಸರ್‌ನಲ್ಲಿ ಜಗತ್ತಿಗೆ ಪ್ರವೇಶಿಸುತ್ತಿರುವ ಎರಡು ಹೊಸ ಜೀವಗಳನ್ನು ತೋರಿಸಲಾಗಿದೆ. ತಾಯಿ ಮಗುವಿಗೆ ಜನ್ಮ ನೀಡುತ್ತಿರುವ ದೃಶ್ಯದ ಜೊತೆಗೆಯೇ ಎಮ್ಮೆ ತನ್ನ ಮಗುವಿಗೆ ಜನ್ಮ ನೀಡುತ್ತಿದೆ. ಶೀರ್ಷಿಕೆಗೆ 'ಆ್ಯನಿಮಲ್ vs ಹ್ಯೂಮನ್' ಎಂಬ ಅಡಿಬರಹ, ಯಕ್ಷಗಾನದಲ್ಲಿ ಬರುವ ಮಹಿಷನ ಧ್ವನಿ ಬಳಕೆ, ಹಿನ್ನೆಲೆ ಸಂಗೀತ ಸಿನಿಮಾದ ಕಥೆ ಕುರಿತು ಕುತೂಹಲ ಹೆಚ್ಚಿಸಿದೆ. ಕರಾವಳಿಯ ಯಾವ ಆಚರಣೆಯನ್ನು ನಿರ್ದೇಶಕರು ತೆರೆಗೆ ತರುತ್ತಿದ್ದಾರೆ ಎನ್ನುವುದು ಇನ್ನೂ ನಿಗೂಢ. ಚಿತ್ರಕ್ಕೆ ಸಚಿನ್ ಬಸ್ರೂರು ಸಂಗೀತ ಸಂಯೋಜನೆ ಮಾಡಿದ್ದಾರೆ. ಅಭಿಮನ್ಯು ಸದಾನಂದನ್ ಅವರ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಚಿತ್ರತಂಡ ಈ ತಿಂಗಳ ಕೊನೆಯಲ್ಲಿ ಅಥವಾ ಮುಂದಿನ ವರ್ಷದ ಪ್ರಾರಂಭದಲ್ಲಿ ಚಿತ್ರೀಕರಣಕ್ಕೆ ಇಳಿಯಲಿದೆ. ಮಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ.

ಜ.26ಕ್ಕೆ 'ಕೋಳಿ ಎಸ್ರು', 'ಹದಿನೇಳೆಂಟು'

ಹಲವು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು, ಪ್ರಶಸ್ತಿ ಬಾಚಿ ವಿಮರ್ಶಾತ್ಮಕವಾಗಿ ಮೆಚ್ಚುಗೆ ಪಡೆದ ಎರಡು ಕನ್ನಡ ಸಿನಿಮಾಗಳು 'ಪರಸ್ಪರ' ಜೊತೆಯಾಗಿ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿವೆ.

ಒಟಿಟಿ ವೇದಿಕೆಗಳಲ್ಲಿ ಸ್ಥಾನ ಸಿಗದೇ ಇದ್ದಾಗ, ಹಿಂಜರಿಯದೆ ಭಿನ್ನ ಪ್ರಯೋಗವೊಂದರ ಮೂಲಕ ಜನರೆದುರಿಗೆ ಬರುವ ನಿರ್ಧಾರವನ್ನು 'ಕೋಳಿ ಎಸ್ರು' ಹಾಗೂ 'ಹದಿನೇಳೆಂಟು' ತಂಡ ಮಾಡಿದೆ. ನಿರ್ದೇಶಕರಾದ ಚಂಪಾ ಪಿ.ಶೆಟ್ಟಿ ಹಾಗೂ ಪೃಥ್ವಿ ಕೊಣನೂರ್ ಅವರು ಜೊತೆಯಾಗಿ ಈ ಸಾಹಸಕ್ಕೆ ಕೈಹಾಕಿದ್ದಾರೆ.

ಈ ಎರಡೂ ಸಿನಿಮಾಗಳು 2024ರ ಜನವರಿ 26ರಂದು ರಾಜ್ಯದಾದ್ಯಂತ ಮಲ್ಟಿಪ್ಲೆಕ್ಸ್‌ಗಳಲ್ಲಿ ಬಿಡುಗಡೆಯಾಗಲಿವೆ. ಬಿಡುಗಡೆಗೆ ಲಕ್ಷಾಂತರ ರೂಪಾಯಿ ಖರ್ಚು ಬೀಳುವ ಕಾರಣ, ಹೊಸ ಮಾದರಿಯ ಪ್ರಯೋಗವೊಂದಕ್ಕೆ ಈ ತಂಡಗಳು ಸಜ್ಜಾಗಿವೆ. ₹400ಕ್ಕೆ ಈ ಎರಡೂ ಸಿನಿಮಾಗಳ ಟಿಕೆಟ್‌ಗಳನ್ನು ಆಸಕ್ತರು ಖರೀದಿಸಬಹುದು. ಅಥವಾ ಇಂತಹ ಸದಭಿರುಚಿಯ ಚಿತ್ರಗಳಿಗೆ ಹಣದ ರೂಪದಲ್ಲಿ ಪ್ರೋತ್ಸಾಹ ನೀಡಲು ಇಚ್ಛಿಸುವವರು ಆ ಮಾರ್ಗವನ್ನು ಅನುಸರಿಸಬಹುದು. ಈ ಎರಡೂ ಪ್ರಕ್ರಿಯೆಗಳಿಗಾಗಿ ತಂಡವು ಪ್ರತ್ಯೇಕ ವೆಬ್‌ಸೈಟ್ ರೂಪಿಸಿದೆ. ಒಂದೂವರೆ ತಿಂಗಳ ಮೊದಲೇ ಈ ಪ್ರಕ್ರಿಯೆ ಆರಂಭಿಸಿರುವ ತಂಡವು ಟಿಕೆಟ್ ಹಂಚಿಕೆ ಮೂಲಕ ಕ್ರೌಡ್ ಫಂಡಿಂಗ್ ಮಾಡಲಿದೆ. ಈ ಹಣವನ್ನು ಸಿನಿಮಾ ಪ್ರಚಾರ, ವಿತರಣೆಗೆ ಬಳಸಿಕೊಳ್ಳಲಿದೆ. ಕನ್ನಡ ಚಿತ್ರರಂಗದಲ್ಲಿ ಈ ಪ್ರಯೋಗ ಹೊಸದು. 'ಹೀಗೆ ಒಟ್ಟಿಗೇ ಎರಡೂ ಸಿನಿಮಾಗಳ ಬಿಡುಗಡೆ ಮಾಡುವುದರಿಂದ ಖರ್ಚು ಕೂಡಾ ಕಡಿಮೆ. ನಮ್ಮ ಈ ಮಾದರಿಯನ್ನು ಹೊಸಬರು ಅನುಸರಿಸಬಹುದು' ಎನ್ನುತ್ತಾರೆ 'ಹದಿನೇಳೆಂಟು' ಸಿನಿಮಾದ ನಿರ್ದೇಶಕ ಪೃಥ್ವಿ ಕೊಣನೂರ್.

ಹೆಚ್ಚಿನ ಮಾಹಿತಿಗೆ ಲಿಂಕ್‌ಗೆ ಭೇಟಿ ನೀಡಿ: paraspara.liv

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸರಕು ಸಾಗಣೆ ರೈಲಿನಲ್ಲಿ ಜೆಸಿಬಿಗಳನ್ನು ಸಾಲಾಗಿ ಇರಿಸಿದ ಹಲವು ಫೋಟೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಈ ಜೆಸಿಬಿಗಳು ಉತ್ತರ ಪ್ರದೇಶದಿಂದ ರಾಜಸ್ಥಾನಕ್ಕೆ ಹೊರಟಿವೆ. ಉತ್ತರ ಪ್ರದೇಶದಂತೆ ರಾಜಸ್ಥಾನದಲ್ಲೂ ಬುಲ್ಡೋಜರ್ ಕಾರ್ಯಾಚರಣೆ ನಡೆಯಲಿದೆ ಎಂದು ಈ ಫೋಟೊಗಳೊಂದಿಗೆ ವಿವರಣೆ ಹಂಚಿಕೊಳ್ಳಲಾಗಿದೆ. 'ಉತ್ತರ ಪ್ರದೇಶದಿಂದ ರೈಲೊಂದು ಜೆಸಿಬಿಗಳನ್ನು ತುಂಬಿಕೊಂಡು ರಾಜಸ್ಥಾನಕ್ಕೆ ಹೊರಟಿದೆ. ಇದು ಬಿಜೆಪಿ ಸರ್ಕಾರದ ಶಕ್ತಿ. ಜೈ ಶ್ರೀರಾಮ್, ಭಾರತ್ ಮಾತಾಕಿ ಜೈ' ಎನ್ನುವಂಥ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಇತ್ತೀಚೆಗಷ್ಟೇ ರಾಜಸ್ಥಾನ ವಿಧಾನಸಭೆಗೆ ಚುನಾವಣೆ ನಡೆದಿತ್ತು. ಬಿಜೆಪಿಯು 115 ಸ್ಥಾನಗಳನ್ನು ಪಡೆದು ಅಧಿಕಾರ ಪಡೆದುಕೊಂಡಿದೆ. ಈ ಕಾರಣಕ್ಕಾಗಿ ಈ ಪೋಸ್ಟ್‌ಗಳನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ಫೋಟೊಗಳಲ್ಲಿ ಕಂಡುಬಂದ ಕೆಲವು ಪದಗಳನ್ನು ಗೂಗಲ್ ಸರ್ಚ್‌ನಲ್ಲಿ ಹುಡುಕಿದಾಗ 2021ರ ನವೆಂಬರ್ 26ರಂದು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಆದ ವಿಡಿಯೊವೊಂದು ದೊರಕಿತು. ಈ ವಿಡಿಯೊವನ್ನು 'ಗೋಪಿರೈಲ್‌ವರ್ಲ್ಡ್' ಎನ್ನುವ ಖಾತೆಯ ಮೂಲಕ ಅಪ್‌ಲೋಡ್ ಮಾಡಲಾಗಿತ್ತು. ಈ ವಿಡಿಯೊದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾದ ಫೋಟೊಗಳಿಗೆ ಹೊಂದಿಕೆಯಾಗುತ್ತವೆ. ಈ ಖಾತೆಯು ರೈಲುಗಳ ಬಗ್ಗೆ ಮಾಹಿತಿಗಳನ್ನು ಹಂಚಿಕೊಳ್ಳುತ್ತದೆ. ಈ ವಿಡಿಯೊವನ್ನು ಆಂಧ್ರ ಪ್ರದೇಶದ ತಾನಾಜಿ ಜಂಕ್ಷನ್‌ನಲ್ಲಿ ಚಿತ್ರೀಕರಿಸಲಾಗಿದೆ. ಆದರೆ ಈಗ ಫೋಟೊಗಳನ್ನು ತಪ್ಪು ಮಾಹಿತಿಗಳೊಂದಿಗೆ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ನಿಸ್ವಾರ್ಥವಾಗಿರುವುದೇ ದೊಡ್ಡದು

ನುಡಿ ಬೆಳಗು



ಪಿ. ಚಂದ್ರಿಕಾ

ತಾನ್‌ಸೇನ್‌ನ ಕುರಿತು ಅಕ್ಬರ್ ಅತ್ಯಂತ ಪ್ರೀತಿಯಿಂದ ಹೇಳಿದ: 'ನಿನ್ನಂಥ ಹಾಡುಗಾರ ಜಗತ್ತಿನಲ್ಲೇ ಇನ್ನೊಬ್ಬನಿಲ್ಲ. ನೀನು ನನಗೆ ಸಿಕ್ಕಿದ್ದು ಪುಣ್ಯ' ಎಂದು. ಆಗ ತಾನ್‌ಸೇನ್ 'ಇಲ್ಲ ಪ್ರಭು. ನೀವು ನನ್ನ ಗುರು ಹರಿದಾಸರ ಹಾಡನ್ನು ಕೇಳಲಿಲ್ಲ ಅದಕ್ಕೆ ಹೀಗೆ ಹೇಳುತ್ತಿರುವಿರಿ. ಅವರ ಹಾಡನ್ನು ಕೇಳುತ್ತಿದ್ದರೆ ಜಗತ್ತನ್ನೇ ಮರೆಯುವಿರಿ' ಎಂದ.

ಅಕ್ಬರನಿಗೆ ಆಶ್ಚರ್ಯವಾಗುತ್ತದೆ- 'ನಾನು ಕೇಳಿದ ಅತ್ಯಂತ ಮಧುರಾತಿಮಧುರ ಕಂಠದ ಗಾಯಕ ತಾನ್‌ಸೇನ್. ಬಹುಶಃ ಇವನು ಗುರುವಿನ ಬಗ್ಗೆ ಅಪಾರವಾದ ಗೌರವದಿಂದ ಈ ಮಾತನ್ನು ಹೇಳುತ್ತಿದ್ದಾನೆ ಎನ್ನಿಸಿ, 'ಆಯ್ತಪ್ಪಾ ನಿನ್ನ ಗುರುವಿನ ಹಾಡನ್ನು ಕೇಳಿದ ಮೇಲೆ ಅದನ್ನು ನಿರ್ಧಾರ ಮಾಡೋಣ ಒಮ್ಮೆ ಕರೆಸಿಬಿಡು' ಎಂದ.

'ನನ್ನ ಗುರು ಹಾಗೆಲ್ಲ ಬರಲಾರರು ಮತ್ತು ಯಾರ ಎದುರೂ ಹಾಡಲಾರರು' ಎಂದ ತಾನ್‌ಸೇನ್.

ಅಕ್ಬರನಿಗೆ ರೇಗಿಹೋಯಿತು, 'ಅಲ್ಲಯ್ಯ ಅವರು ಬರಲಾರರು, ನನ್ನೆದುರು ಹಾಡಲಾರರು ಎಂದರೆ ಮತ್ತೆ ನಾನು ಹೇಗೆ ಅವರ ಹಾಡನ್ನು ಕೇಳುವುದು?' ಎಂದಾಗ ತಾನ್‌ಸೇನ್ 'ಅವರು ಯಮುನಾ ನದಿಯ ತೀರದಲ್ಲಿ ತಮಗೆ ಇಷ್ಟ ಬಂದಾಗ ಹಾಡುತ್ತಿರುತ್ತಾರೆ. ಅವರ ಹಾಡನ್ನು ಕೇಳಲಿಕ್ಕೆ ಅಲ್ಲಿಗೇ ಹೋಗಬೇಕು' ಎಂದ.

ಅಕ್ಬರ್ ಮತ್ತು ತಾನ್‌ಸೇನ್ ಯಮುನಾ ನದಿಯ ತೀರಕ್ಕೆ ಬಂದು ಅಲ್ಲಿ ಸಿಗುವ ಹಳ್ಳಿಗಳನ್ನು ಸುತ್ತಿ ಹರಿದಾಸನನ್ನು ಹುಡುಕುತ್ತಾರೆ. ಅವರಿಗೆ ಒಂದು ಹಳ್ಳಿಯ ಸಮೀಪ ಹರಿದಾಸ ಇರುವುದು ಗೊತ್ತಾಗುತ್ತದೆ. ಅಲ್ಲಿಗೆ ಹೋಗಿ ನೋಡುತ್ತಾರೆ. ಹರಿದಾಸ ನಿತ್ಯದ ಕೆಲಸದಲ್ಲಿ ತೊಡಗಿದ್ದಾನೆ. ಅಕ್ಬರ್ 'ಅವನೊಡನೆ ಮಾತನಾಡಿ ಹಾಡುವಂತೆ ಕೇಳುವ ಬಾ' ಎಂದು ತಾನ್‌ಸೇನ್‌ನಿಗೆ ಹೇಳುತ್ತಾನೆ.

ಆಗ ತಾನ್‌ಸೇನ್ 'ನೀವಿಲ್ಲಿಗೆ ಬಂದಿರುವುದು ಗೊತ್ತಾದರೆ ಅವರು ಹಾಡಲಿಕ್ಕೇ ಇಲ್ಲ' ಎನ್ನುತ್ತಾನೆ. 'ಹಾಗಾದರೆ ಹಾಡು ಕೇಳಲು ಏನು ಮಾಡೋಣ?' ಎಂದ ಅಕ್ಬರನಿಗೆ 'ನಾವಿಲ್ಲೇ ಅವರಿಗೆ ಕಾಣದ ಹಾಗೆ ಅವಿತಿದ್ದು ಅವರು ಯಾವಾಗ ಹಾಡುತ್ತಾರೋ ಆಗ ಕೇಳಿಕೊಂಡು ಹೊರಟುಬಿಡೋಣ' ಎನ್ನುತ್ತಾನೆ. ಅಕ್ಬರನಿಗೆ 'ಇದ್ಯಾಕೋ ತಾನ್‌ಸೇನ್ ಅತಿಯಾಗಿ ಆಡುತ್ತಿದ್ದಾನೆ ಎನ್ನಿಸಿತಾದರೂ ನೋಡೇ ಬಿಡೋಣ' ಎಂದು ಸುಮ್ಮನಾಗುತ್ತಾನೆ.

ಮಧ್ಯರಾತ್ರಿ ಹರಿದಾಸ ಹಾಡತೊಡಗುತ್ತಾನೆ. ಮೈಯೆಲ್ಲಾ ಕಣ್ಣಾಗಿ ಕುಳಿತು ಅಕ್ಬರ್-ತಾನ್‌ಸೇನ್ ಹಾಡನ್ನು ಕೇಳಿಸಿಕೊಳ್ಳುತ್ತಾರೆ. ಹಾಡು ಮುಗಿಯುವ ವೇಳೆಗೆ ಅಕ್ಬರ್ ಭಾವವಶನಾಗಿ ತಾನ್‌ಸೇನ್‌ನಿಗೆ 'ನಿಜ ನಿನ್ನ ಗುರು ಮಹಾನ್ ಹಾಡುಗಾರ. ಅವರ ಶಿಷ್ಯನಾಗಿದ್ದು ನೀನು ಯಾಕೆ ಇಷ್ಟು ಚೆನ್ನಾಗಿ ಹಾಡುವುದಿಲ್ಲ' ಎಂದ. ಆಗ ತಾನಸೇನ್ 'ಪ್ರಭು ಕ್ಷಮಿಸಿ. ನಾನು ನಿಮ್ಮ ಎದುರು ಹೊಟ್ಟೆಪಾಡಿಗಾಗಿ ಹಾಡುತ್ತೇನೆ. ಆದರೆ ನನ್ನ ಗುರುವಿಗೆ ಇದರ ಹಂಗಿಲ್ಲ. ಅವರು ಹಾಡುವುದು ಭಗವಂತನಿಗಾಗಿ ಮಾತ್ರ. ಅದಕ್ಕೆ ಅವರ ಧ್ವನಿಯಲ್ಲಿ ದೈವಿಕತೆ ಇದೆ. ನಮ್ಮ ಕೆಲಸ ನಿಸ್ವಾರ್ಥವಾದಷ್ಟೂ ಅದರ ಬೆಲೆ ಹೆಚ್ಚುತ್ತದೆ' ಎಂದ.

ತಾನ್‌ಸೇನ್‌ನ ಮಾತಿಗೆ ಅಕ್ಬರ ತಲೆದೂಗಿದ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಡಿಸೆಂಬರ್ 12, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣ ಅಮಾವಾಸ್ಯೆ ಗಂ. 29-02 ನಕ್ಷತ್ರ: ಅನುರಾಧ ಗಂ. 11-57 ಯೋಗ: ಧೃತಿ ಗಂ 18-51 ಕರಣ: ಚತುಷ್ಪಾದ ಗಂ. 17-48, ವೃಶ್ಚಿಕ ಮಾಸದ 26 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 3.

ರಾಹುಕಾಲ: ಮಧ್ಯಾಹ್ನ 03-00 – 04-30

ಸೂರ್ಯೋದಯ: 06-47 ಸೂರ್ಯಾಸ್ತ : 06-01

ಮುಸ್ಲಿಂ ದಿನಾಂಕ: 27 ಜುಮಾದುಲ್ಲಾವಲ್

ಅದೃಷ್ಟ ಸಂಖ್ಯೆ: 4, 11

ಮೇಷ: ಕುಟುಂಬದ ಹಾಗೂ ಸ್ನೇಹಿತರ ನಡುವಿನ ಸಂಬಂಧಗಳು ಈ ದಿನ ಇನ್ನಷ್ಟು ಉತ್ತಮಗೊಳ್ಳಲಿವೆ. ಮಂಗಳ ಕಾರ್ಯಗಳನ್ನು ನೆರವೇರಿಸಲು ಒಪ್ಪಿಕೊಳ್ಳಲಿದ್ದೀರಿ. ಒಪ್ಪಿಕೊಂಡ ಸಂಬಂಧದಿಂದ ಸಮಾಜದಲ್ಲಿ ಪ್ರತಿಷ್ಠೆ ಹೆಚ್ಚಲಿದೆ.

ವೃಷಭ: ನಿಮ್ಮ ವ್ಯವಹಾರದಲ್ಲಿ ಸ್ವಲ್ಪ ನಿಗೂಢತೆ ಕಾಣುವಿರಿ. ಆದರೆ ಎಲ್ಲದಕ್ಕೂ ಸದ್ಯದಲ್ಲೇ ಉತ್ತಮ ಫಲಿತಾಂಶ ಪಡೆಯಲಿದ್ದೀರಿ. ಹಣಕಾಸಿನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸುವಲ್ಲಿ ಯಶಸ್ವಿಯಾಗುವಿರಿ.

ಮಿಥುನ: ಹೊಸ ಉದ್ಯಮ ಆರಂಭಿಸಲು ಬಂಡವಾಳ ಹೂಡಿಕೆ ಮಾಡಬಹುದು. ಯಾವುದೇ ಹಣಕಾಸಿನ ಕೊರತೆ ಇರುವುದಿಲ್ಲ. ಆದರೆ ವಿದೇಶಿ ವಸ್ತುಗಳ ಖರೀದಿಗೆ ಧನ ವ್ಯಯಿಸುವುದನ್ನು ಕಡಿಮೆ ಮಾಡುವುದು ಉತ್ತಮ.

ಕರ್ಕಾಟಕ: ನಿಮ್ಮ ಉದಾತ್ತ ಚಿಂತನೆಯ ಲಾಭ ನಿಮ್ಮ ಸುತ್ತಮುತ್ತಲಿನವರಿಗೂ ಸಿಗುವ ಸುದಿನವಿದು. ಮನಸ್ಸಿನ ಏಕಾಗ್ರತೆಗೆ ಧ್ಯಾನ ಮಾಡಬೇಕು. ಹಣಕಾಸಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ.

ಸಿಂಹ: ಬಂಧುಗಳ ನೆರವಿನಿಂದ ಬರಬೇಕಿದ್ದ ಹಳೆಯ ಬಾಕಿ ಹಣ ನಿಮ್ಮ ಕೈ ಸೇರಲಿದೆ. ಹೊಸ ಮನೆ ನಿರ್ಮಾಣಕ್ಕೆ ತಯಾರಿ ನಡೆಸಲು ಸುದಿನ. ಸರ್ಕಾರಿ ಕಾರ್ಯಗಳು, ಕೋರ್ಟ್ ವಿಲೇವಾರಿ ಸುಖಾಂತ್ಯವಾಗಲಿದೆ.

ಕನ್ಯಾ: ಪರಿಸ್ಥಿತಿಯನ್ನು ಸಂಪೂರ್ಣವಾಗಿ ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇಡುವುದು ಒಳಿತು. ಗೃಹ ಬಳಕೆಯ, ಅಲಂಕಾರಿಕ ಸಾಮಗ್ರಿಗಳನ್ನು ಖರೀದಿಸುವಿರಿ. ಕರ್ತವ್ಯನಿಷ್ಠೆಯು ನಿಮ್ಮ ಕಾರ್ಯಸಾಧನೆಗೆ ಪೂರಕವಾಗಲಿದೆ.

ತುಲಾ: ಬದುಕಿನ ಸಾರ ತಿಳಿಯುವುದು ಬಹಳ ವಿಚಾರಕರವಾದ ವಿಷಯವಾದರೂ, ಇಂದು ನಿಮಗೆ ಅದರ ಬಗ್ಗೆ ಹೆಚ್ಚಿನ ಆಲೋಚನೆ ಬೇಡ. ಶತ್ರುಗಳ ಉಪಟಳದಿಂದ ತಪ್ಪಿಸಿಕೊಳ್ಳಲು ಹರಸಾಹಸ ಪಡಬೇಕು.

ವೃಶ್ಚಿಕ: ಸ್ವತ್ತು ಮಾರಾಟ ವಿಚಾರದಲ್ಲಿ ಸೋದರರ ಅಭಿಪ್ರಾಯ ಪಡೆದು ಮುಂದುವರಿಯುವಿರಿ. ಆದಾಯ ಹಂತಹಂತವಾಗಿ ಹೆಚ್ಚಾಗಲಿದ್ದು, ಧನ ಸಂಗ್ರಹಕ್ಕೆ ಸಾಧಕವಾಗಲಿದೆ. ಧನಾಗಮನ ನಿರಂತರವಾಗಿ ಇರಲಿದೆ.

ಧನು: ಪದವೀಧರರಿಗೆ ತಮ್ಮ ಉದ್ಯೋಗದ ಅನ್ವೇಷಣೆಯಲ್ಲಿ ಹೊಸ ರೀತಿಯ ಬೆಳವಣಿಗೆ ಕಂಡು ಬರಲಿದೆ. ಸರ್ಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ರಾಜಕೀಯ ವಿಷಯದಲ್ಲಿ ಸ್ಪರ್ಧೆಗೆ ಇಳಿಯಬೇಕಾಗಲಿದೆ.

ಮಕರ: ಅಧಿಕಾರಿಗಳ ಸಂಪರ್ಕದಿಂದ ನಿಮ್ಮ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ. ಪ್ರಭಾವಿ ವ್ಯಕ್ತಿಗಳ ಭೇಟಿ ಮಾಡುವ ಸಂದರ್ಭ ಬರಲಿದೆ. ವಿವಾಹದ ವಿಷಯದಲ್ಲಿ ಮೌನ ಮುರಿಯುವುದು ಅನಿವಾರ್ಯವಾಗಲಿದೆ.

ಕುಂಭ: ಈ ದಿನ ನಿಮ್ಮ ಸುತ್ತಲಿನವರ ಸಂತೋಷಕ್ಕೆ ನೀವು ಕಾರಣರಾಗುವಿರಿ. ಸ್ನೇಹಪರ ಸ್ವಭಾವದಿಂದ ವೈಯಕ್ತಿಕ ಸ್ಥಾನಮಾನಗಳು ಲಭಿಸಲಿವೆ. ರೋಮಾಂಚನಕಾರಿ ವಿಷಯಗಳು ನಿಮಗಾಗಿ ಕಾದಿವೆ.

ಮೀನ: ನಿಮ್ಮ ಕೆಲಸ ಕಾರ್ಯಗಳಿಗೆ ಇಂದು ಯಾವುದೇ ಅಡ್ಡಿ ಆತಂಕಗಳು ಇಲ್ಲ. ಆದರೂ ಕೆಲಸಗಳಲ್ಲಿ ಕೆಲವೊಂದು ವಿಷಯಗಳನ್ನು ಪುನಃ ಪುನಃ ಪರಾಮರ್ಶಿಸಲೇಬೇಕಾದಾಗ ಮೋಸ ಕೃತ್ಯ ನಡೆದಿರುವುದು ತಿಳಿಯಲಿದೆ.

ಪದಬಂಧ 5527

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ನಡುವೆ ಲಾಯವಿದ್ದಾಗ ತಪ್ಪಿಸಿಕೊಳ್ಳುವಿಕೆ! (4)
3.ವರ್ಣವುಳ್ಳ ಅಕ್ಷರಮಾಲೆ (4)
5.ಕನಕವನ್ನು ನೋಡುತ್ತಿರುವ ತಿಳಿಗೇಡಿ! (3)
7.ಸರಾಗವಾಗಿ ಕೆಲಸ ಮಾಡುತ್ತಿರುವ ಮೋಚಿ (4)
9.ಅಶೋಕ ವೃಕ್ಷದ ಹತ್ತಿರ ತೋಡಿಕೊಂಡಿರುವ ವ್ಯಸನ (2)
10.ಭಕ್ತಿ ಸಲ್ಲಿಸುವವ ತಿರುಗಿದ್ದಾನಲ್ಲಾ? (2)
11.ದಿನಮಣಿ ಹಾಗೂ ರಜನೀಕರ ಒಟ್ಟಿಗಿದ್ದಾರೆ (4)
13.ವನದ ಹತ್ತಿರ ಕಟ್ಟಿರುವ ಮನೆ (3)
17.ಬರ ಬಂದಾಗಿನ ನಗ್ನತೆ (4)
18.ಹಸು ಬಳಿ ಆಡುತ್ತಿರುವ ಮಗು (4)

ಮೇಲಿಂದ ಕೆಳಕ್ಕೆ

1.ಪದ ಹಾಡಿ ಬಹುಮಾನವಾಗಿ ಪಡೆದ ಬಿಲ್ಲೆ (3)
2.ನಿನ್ನೆ ನುಡಿದಿರುವ ಸತ್ಯ! (2)
3.ಮನಸ್ಸನ್ನು ಸೆಳೆದ ಕಾಡು ಹೂ (4)
4.ಅಕ್ಕಪಕ್ಕದವರು ಕಲಿಸಿರುವ ಎಣಿಕೆ (2)
6.ನಿಖರವಾಗಿ ವ್ಯಕ್ತವಾದ ಮರುಕ (4)
7.ಮುದ್ರಣದಲ್ಲಿ ಕಾಣಿಸಿದ ಕಡಲು! (3)
8.ಭಕ್ತನಲ್ಲಿ ನೆತ್ತರು ಸುರಿಯುತ್ತಿದೆಯಲ್ಲಾ? (4)
12.ಚಂದದಿಂದ ವಂತಿಗೆ ನೀಡುವವನು (4)
14.ಇದು ಕನಸಲ್ಲ!ಸತ್ಯ! (3)
15.ಹಾದಿಹೋಕನು ತೋರಿಸಿದ ರಸ್ತೆ (2)
16.ಸಂದೇಹ ಪಡುವವನ ಶರೀರ! (2)



5526ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಅಭಿಮಾನ 3.ವಿದಾಯ
4.ಗಗನ 6.ಕಾಟಾಚಾರ
8.ಯಥೋಚಿತ 10.ಸ್ವರ
11.ಸುಂಕ 12.ಅಂತರಂಗ
14.ಹರಿಗೋಲು 15.ಲಾವಣಿ
16.ತೊಗಟೆ 17.ಗೆಳೆತನ

ಮೇಲಿಂದ ಕೆಳಕ್ಕೆ
2.ನಗರ 3.ವಿನಯ
5.ದೂತ 7.ಚಾಕರ
9.ಚಿಲುಕ 10.ಸ್ವಗತ
11.ಸುಂದರಿ 12.ಅಂಬು
13.ಗಲಾಟೆ 14.ಹಣಿಗೆ

ಸುಡೊಕು 5913

		6		4		3		5
			5					
	9	2		3		7		1
2	1		9		3	6		
				1			5	3
3	8			5			7	
9		8						7
	6			9			3	
4		3			1	2		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5912 ಸುಡೊಕು

2	4	8	1	6	3	5	9	7
7	5	6	4	9	8	2	3	1
1	3	9	2	5	7	4	8	6
6	1	5	9	7	4	8	2	3
3	9	7	8	1	2	6	5	4
8	2	4	6	3	5	7	1	9
5	6	3	7	2	1	9	4	8
9	8	2	3	4	6	1	7	5
4	7	1	5	8	9	3	6	2

ಷೇರುಪೇಟೆ ವಹಿವಾಟು 102



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	20,969
ಇಂದಿನ ಅಂತ್ಯ	20,997
▲	28
ದಿನದ ಗರಿಷ್ಠ	21,026

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹580
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹585

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹915 (915)
ಸೂರ್ಯಕಾಂತಿ (ರಿಫೈನ್ಡ್)	₹925 (925)
ಪಾಮೋಲಿನ್	₹828 (828)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹222-466
ದ್ವಿತಳಿ (ಕೆ.ಜಿ)	₹233-603

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹149
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

(ಪ್ರತಿ ಕೆ.ಜಿ)

ವಿನಿಮಯ ದರ

$ ಡಾಲರ್	83.38
£ ಪೌಂಡ್	104.70
€ ಯುರೊ	89.78
¥ ಯೆನ್ (100ಕ್ಕೆ)	57

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-7800
ಬೆಂಗಳೂರು	₹8500-11000
ತುಮಕೂರು	₹7450-8120
ತುರುವೇಕೆರೆ	₹7800-7900

ಸುಧಾ, ಮಯೂರ ಓದಿ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ



ಶ್ರೀ ಎನ್. ಬೇಲೂರಯ್ಯ, BSc.,BL
ನಿರುಗುಂದ, ತುರುವೇಕೆರೆ ತಾ||
DOB: 01-01-1920 DOD:12-12-1980
ನೀವು ನಮ್ಮನ್ನಗಲಿ ಇಂದಿಗೆ 43 ವರ್ಷ ಕಳೆದರೂ, ಊರಿನ ಪ್ರಥಮ ವಿದ್ಯಾವಂತರಾಗಿ ಬಳಗದ ಮುಂದಾಳತ್ವದಲ್ಲಿ ಮತ್ತು ಅವರ ಏಳಿಗೆಯಲ್ಲಿ, ಕುಟುಂಬದ ಸುಖ-ದುಃಖಗಳಲ್ಲಿ ಸ್ಪಂದಿಸಿ, ತಮ್ಮ ಸಿದ್ಧಾಂತಗಳಿಗೆ ತೊಡಕು ಮಾಡದೆ, ನಮ್ಮೆಲ್ಲರ ಜೀವನ ಹೋರಾಟದಲ್ಲಿ ಮಾರ್ಗದರ್ಶಿಯಾದ ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ.
ಸದಾ ನಿಮ್ಮ ಸ್ಮರಣೆಯಲ್ಲಿ
ಕುಟುಂಬ ವರ್ಗದವರು
Mob: 9969220615

ವೈಕುಂಠ ಸಮಾರಾಧನೆ

ಹೆಬ್ಬಾಳದ ಶ್ರೀ ಟಿ.ಸಿ.ಹೇಮಣ್ಣ
ಲೇಟ್ ಶ್ರೀ ಚಿಕ್ಕಣ್ಣನವರ ಪುತ್ರ
ಇವರು ದಿ.02.12.2023ರಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧ ವೈಕುಂಠ ಸಮಾರಾಧನೆಯನ್ನು ದಿನಾಂಕ: 12.12.2023ರ ಮಂಗಳವಾರ, ಬೆಳಗ್ಗೆ 10.30 ರಿಂದ 12.00ವರೆಗೆ ನಮ್ಮ ಸ್ವಗೃಹ ಥಣಿಸಂದ್ರದಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಶ್ರೀಮತಿ ಲಕ್ಷ್ಮಮ್ಮ ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು. ಫೋ:9242202838

500ಕ್ಕೂ ಹೆಚ್ಚು ಚಾರ್ಜಿಂಗ್ ಕೇಂದ್ರ ಸ್ಥಾಪನೆಗೆ ಐಒಸಿಎಲ್ ಜತೆ ಟಾಟಾ ಪವರ್ ಒಪ್ಪಂದ

ನವದೆಹಲಿ (ಪಿಟಿಐ): ಬೆಂಗಳೂರು ಸೇರಿದಂತೆ ದೇಶದ ವಿವಿಧೆಡೆ 500ಕ್ಕೂ ಹೆಚ್ಚು ಸ್ಥಳಗಳಲ್ಲಿ ಅತಿವೇಗದ ಇ.ವಿ. ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್) ಜತೆಗೆ ಟಾಟಾ ಪವರ್‌ನ ಅಂಗಸಂಸ್ಥೆಯಾದ ಟಾಟಾ ಪವರ್ ಇ.ವಿ ಚಾರ್ಜಿಂಗ್ ಸಲ್ಯೂಷನ್ಸ್ ಒಪ್ಪಂದ ಮಾಡಿಕೊಂಡಿದೆ.

ಐಒಸಿಎಲ್‌ನ ಮಳಿಗೆಗಳ ಬಳಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಟಾಟಾ ಪವರ್ ಸೋಮವಾರ ತಿಳಿಸಿದೆ.

ದೇಶದ ಪ್ರಮುಖ ನಗರಗಳಾದ ಮುಂಬೈ, ದೆಹಲಿ, ಕೋಲ್ಕತ್ತ, ಬೆಂಗಳೂರು, ಅಹಮದಾಬಾದ್, ಪುಣೆ ಮತ್ತು ಕೊಚ್ಚಿ ಸೇರಿದಂತೆ ಪ್ರಮುಖ ಹೆದ್ದಾರಿಗಳಾದ ಮುಂಬೈ-ಪುಣೆ ಎಕ್ಸ್‌ಪ್ರೆಸ್ ವೇ, ಸೇಲಂ-ಕೊಚ್ಚಿ ಹೆದ್ದಾರಿ, ಗುಂಟೂರು-ಚೆನ್ನೈ ಹೆದ್ದಾರಿ ಮತ್ತು ಗೋಲ್ಡನ್ ಕ್ವಾಡ್ರಿಲ್ಯಾಟರಲ್ ಬಳಿ ಇ.ವಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ವಿವರಿಸಿದೆ.

ಚಿನ್ನದ ದರ ₹900, ಬೆಳ್ಳಿ ₹200 ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನದ ದರವು ಪ್ರತಿ 10 ಗ್ರಾಂ.ಗೆ ₹900 ಇಳಿಕೆ ಕಂಡು, ₹61,300ರಂತೆ ಮಾರಾಟವಾಯಿತು.

ಬೆಳ್ಳಿ ಧಾರಣೆಯು ಕೆ.ಜಿಗೆ ₹200 ಇಳಿಕೆ ಕಂಡು ₹76 ಸಾವಿರಕ್ಕೆ ತಲುಪಿತು. ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ಬೆಲೆ ಇಳಿಕೆ ಆಗಿದ್ದರಿಂದ ದೇಶೀಯ ಮಾರುಕಟ್ಟೆಯಲ್ಲೂ ಬೆಲೆ ಇಳಿಕೆಯಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಕೋಕ	14569-34989	ತಟ್ಟಿಬೆಟ್ಟೆ	42089-42089
ಬಂಟ್ವಾಳ		ಕೆಂಪುಗೋಟು	26989-35799	ಶಿರಸಿ	
ಹಳತು	42500-45500	ರಾಶಿ	36899-47619	ಬೆಟ್ಟೆ	40410-43899
ಕೋಕ	15000-27500	ಸಿಪ್ಪೆಗೋಟು	13669-21069	ಬಿಳಿಗೋಟು	33420-35249
ಕಾರ್ಕಳ		ಶಿವಮೊಗ್ಗ		ಚಾಲಿ	37299-39661
ಹೊಸತು	25000-36500	ಬೆಟ್ಟೆ	45100-51200	ರಾಶಿ	44608-47039
ಹಳತು	30000-46000	ಗೊರಬಲು	18000-38500	ಯಲ್ಲಾಪುರ	
ಕುಮಟ		ಹೊಸ	45709-47801	ಎಪಿ	53479-53479
ಚಿಪ್ಪು	26089-34509	ರಾಶಿ	26089-48009	ಬಿಳಿಗೋಟು	24899-35467
ಕೋಕ	19069-30799	ಸರಕು	57619-73159	ಚಾಲಿ	36111-39619
ಫ್ಯಾಕ್ಟರಿ	11089-23429	ಸಿದ್ದಾಪುರ		ಕೋಕ	18109-30169
ಹಳೆಚಾಲಿ	36899-39099	ಬಿಳಿಗೋಟು	33189-33909	ಕೆಂಪುಗೋಟು	24899-34099
ಹೊಸಚಾಲಿ	33019-35099	ಚಾಲಿ	38049-39139	ರಾಶಿ	43809-52565
ಸಾಗರ		ಕೋಕ	29099-31799	ತಟ್ಟಿಬೆಟ್ಟೆ	36919-43619
ಬಿಳಿಗೋಟು	30699-33209	ಕೆಂಪುಗೋಟು	26699-26699		
ಚಾಲಿ	33689-38709	ರಾಶಿ	46539-46749		

ಮುಂಬೈ ಧಾರಣೆ

ಶೇಂಗಾ

11-12-2023

ಜಾವಾ 70/80(ಹೊಸ)	12000-12100
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	890 (890)
ಪಾಮ್ ವಾರದ ಡೆಲಿವರಿ	826 (826)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 61,300 (61,575)
ಬೆಳ್ಳಿ ಕೆ.ಜಿ 71,500 (71,700)

ಆವರಣದಲ್ಲಿ ಶನಿವಾರದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹12600
ಎಸಿ	₹6750
ಆರ್‌ಪಿ	₹10200
ಆರ್‌ಸಿ	₹6095

ಇಪಿಎಫ್‌ಒ: ಇಟಿಎಫ್‌ನಲ್ಲಿ ₹27,105 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಪ್ರಸಕ್ತ ಹಣಕಾಸು ವರ್ಷದ ಅಕ್ಟೋಬರ್‌ವರೆಗೆ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ಒಟ್ಟು ₹27,105 ಕೋಟಿ ಹೂಡಿಕೆ ಮಾಡಿದೆ.

ಕೇಂದ್ರ ಕಾರ್ಮಿಕ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ಅವರು, ಸೋಮವಾರ ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ.

2015ರ ಆಗಸ್ಟ್‌ನಿಂದ ಇಟಿಎಫ್‌ನಲ್ಲಿ ಹೂಡಿಕೆ ಮಾಡುವುದನ್ನು ಇಪಿಎಫ್‌ಒ ಆರಂಭಿಸಿತ್ತು. 2022-23ರ ಹಣಕಾಸು ವರ್ಷದಲ್ಲಿ ₹53,081 ಕೋಟಿ, 2021-22ರಲ್ಲಿ ₹43,568 ಕೋಟಿ ಹೂಡಿಕೆ ಮಾಡಿದೆ ಎಂದು ಸಚಿವರು ತಿಳಿಸಿದ್ದಾರೆ.

2016-17ರಲ್ಲಿ ₹14,983 ಕೋಟಿ, 2017-18ರಲ್ಲಿ ₹24,790 ಕೋಟಿ, 2018-19ರಲ್ಲಿ ₹27,974 ಕೋಟಿ, 2019-20ರಲ್ಲಿ ₹31,501 ಕೋಟಿ, 2020-21ರಲ್ಲಿ ₹32,071 ಕೋಟಿಯನ್ನು ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಲಾಗಿತ್ತು ಎಂದು ವಿವರಿಸಿದ್ದಾರೆ.

‘ಬಿಎಂಡಬ್ಲ್ಯು ವಾಹನ ಬೆಲೆ ಏರಿಕೆ’

ನವದೆಹಲಿ (ಪಿಟಿಐ): ಐಷಾರಾಮಿ ಕಾರು ತಯಾರಕಾ ಕಂಪನಿ ಬಿಎಂಡಬ್ಲ್ಯು ಜನವರಿ 1ರಿಂದ ತನ್ನ ಎಲ್ಲ ಮಾದರಿಯ ವಾಹನಗಳ ಬೆಲೆಯನ್ನು ಶೇ 2ರ ವರೆಗೆ ಹೆಚ್ಚಳ ಮಾಡುವುದಾಗಿ ಸೋಮವಾರ ತಿಳಿಸಿದೆ.

ವಿದೇಶಿ ವಿನಿಮಯ ದರದಲ್ಲಿನ ಏರಿಳಿತಗಳು ಮತ್ತು ತಯಾರಿಕಾ ವೆಚ್ಚ ಹೆಚ್ಚಳದಿಂದ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಕಂಪನಿ ತಿಳಿಸಿದೆ.

ಮಾರುತಿ ಸುಜುಕಿ, ಹುಂಡೈ ಮೋಟರ್ ಇಂಡಿಯಾ, ಟಾಟಾ ಮೋಟರ್ಸ್, ಮಹೀಂದ್ರ ಆ್ಯಂಡ್ ಮಹೀಂದ್ರ, ಹೋಂಡಾ, ಔಡಿ ಸೇರಿದಂತೆ ವಿವಿಧ ಕಂಪನಿಗಳು ಜನವರಿಯಿಂದ ವಾಹನಗಳ ಬೆಲೆ ಹೆಚ್ಚಿಸುವುದಾಗಿ ಈಗಾಗಲೇ ತಿಳಿಸಿವೆ.

ಗಳಿಕೆ ಕಂಡ ಬ್ಯಾಂಕಿಂಗ್, ಲೋಹ, ಐ.ಟಿ ಷೇರು

ಹೊಸ ಎತ್ತರಕ್ಕೆ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಸೋಮವಾರ ವಹಿವಾಟಿನ ನಡುವಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪುವ ಮೂಲಕ ಹೊಸ ಮೈಲಿಗಲ್ಲು ಸ್ಥಾಪಿಸಿವೆ.

ಮುಂಬೈ ಷೇರುಪೇಟೆ ಸೂಚ್ಯಂಕ(ಬಿಎಸ್‌ಇ) ಸೆನ್ಸೆಕ್ಸ್ ಆರಂಭಿಕ ವಹಿವಾಟಿನಲ್ಲಿ ಸಾರ್ವಕಾಲಿಕ ದಾಖಲೆ ಮಟ್ಟವಾದ 70,057 ಅಂಶಗಳಿಗೆ ತಲುಪಿತು. ಬಳಿಕ ಇಳಿಕೆಯ ಹಾದಿ ಹಿಡಿಯಿತು. ಅಂತಿಮವಾಗಿ 102 ಅಂಶಗಳ ಏರಿಕೆಯೊಂದಿಗೆ 69,928 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 27.70 ಅಂಶ ಹೆಚ್ಚಾಗಿ 21,026 ಅಂಶಗಳೊಂದಿಗೆ ಗರಿಷ್ಠ ಮಟ್ಟವನ್ನು ತಲುಪಿತು. ಬಳಿಕ 20,997 ಅಂಶಗಳೊಂದಿಗೆ ವಹಿವಾಟು ಅಂತ್ಯಗೊಂಡಿತು.

‘ಅಮೆರಿಕ ಮತ್ತು ಭಾರತದ ಹಣದುಬ್ಬರ, ಐಐಪಿಯಿಂದ ಬಿಡುಗಡೆಯಾಗಲಿರುವ ಮಹತ್ವದ ದತ್ತಾಂಶದ ಸುಳಿವುಗಳನ್ನು ಹೂಡಿಕೆದಾರರು ಅರಿತಿದ್ದಾರೆ. ಹಾಗಾಗಿ, ಷೇರುಗಳ ಲಾಭದ ಮಟ್ಟದಲ್ಲಿ ಹೆಚ್ಚಳವಾಗಿದೆ. ಷೇರು ಮಾರುಕಟ್ಟೆ ಹೊಸ ದಾಖಲೆಯನ್ನೂ ಬರೆದಿದೆ’ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಫೆಡರಲ್ ಓಪನ್ ಮಾರ್ಕೆಟ್ ಕಮಿಟಿಯ (ಎಫ್‌ಒಎಂಸಿ) ಸಭೆಯು ನಾಳೆ ನಡೆಯಲಿದೆ. ಭವಿಷ್ಯದಲ್ಲಿ ದರ ಕಡಿತದ ಬಗ್ಗೆ ಹೂಡಿಕೆದಾರರು ನಿರೀಕ್ಷಿಸುತ್ತಿದ್ದಾರೆ’ ಎಂದು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ



ಅಲ್ಲದೆ, ಯುಎಸ್ ಫೆಡರಲ್ ರಿಸರ್ವ್ ಬ್ಯಾಂಕ್ ತನ್ನ ಬಡ್ಡಿದರಕ್ಕೆ ಸಂಬಂಧಿಸಿದ ಮುಂದಿನ ನಡೆಯ ಬಗ್ಗೆ ಬುಧವಾರ ಪ್ರಕಟಿಸಲಿದೆ. ಈ ಬಗೆಗಿನ ಆಶಾವಾದವು ದೇಶದ ಷೇರುಪೇಟೆಗಳಲ್ಲಿ ಸಕಾರಾತ್ಮಕ ವಹಿವಾಟು ಮುಂದುವರಿಯಲು ಕಾರಣವಾಗಿದೆ.

ಗಳಿಕೆ ಕಂಡ ಬ್ಯಾಂಕಿಂಗ್, ಐ.ಟಿ ಷೇರು: ಬ್ಯಾಂಕಿಂಗ್, ಐ.ಟಿ ಮತ್ತು ಲೋಹದ ಷೇರುಗಳು ಹೆಚ್ಚು ಗಳಿಕೆ ಕಂಡಿವೆ. ಬಿಎಸ್‌ಇಯ 18 ಷೇರುಗಳು ಗಳಿಕೆ ಕಂಡಿದ್ದರೆ, 11 ಇಳಿಕೆ ಕಂಡಿವೆ. ಒಂದು ಷೇರಿನ ದರ ಸ್ಥಿರವಾಗಿತ್ತು.

ಸೆನ್ಸೆಕ್ಸ್‌ನ ಷೇರುಗಳ ಪೈಕಿ ಅಲ್ಟ್ರಾಟೆಕ್ ಸಿಮೆಂಟ್ ಶೇ 3.04, ನೆಸ್ಲೆ ಶೇ 1.3, ಪವರ್ ಗ್ರಿಡ್ ಶೇ 1.05 ಮತ್ತು ಟಾಟಾ ಮೋಟರ್ಸ್ ಶೇ 0.85ರಷ್ಟು ಗಳಿಕೆ ಕಂಡಿವೆ. ಇಂಡಸ್ ಇಂಡ್ ಬ್ಯಾಂಕ್, ಎಚ್‌ಸಿಎಲ್ ಟೆಕ್, ಟಿಸಿಎಸ್, ಟೆಕ್ ಮಹೀಂದ್ರ, ಎನ್‌ಟಿಪಿಸಿ, ಐಟಿಸಿ, ಜೆಎಸ್‌ಡಬ್ಲ್ಯು ಸ್ಟೀಲ್ ಮತ್ತು ಟಾಟಾ ಸ್ಟೀಲ್ ಲಾಭವು ಸೆನ್ಸೆಕ್ಸ್ ಹೊಸ ಎತ್ತರಕ್ಕೆ ಏರಲು ನೆರವಾಗಿವೆ.

ಆಕ್ಸಿಸ್ ಬ್ಯಾಂಕ್ ಶೇ 1.26, ಮಹೀಂದ್ರ ಆ್ಯಂಡ್ ಮಹೀಂದ್ರ ಶೇ 0.99 ಮತ್ತು ಹಿಂದೂಸ್ತಾನ್ ಯೂನಿಲಿವರ್ ಶೇ 0.67ರಷ್ಟು ಇಳಿಕೆ ಕಂಡಿವೆ. ಮಾರುತಿ, ಬಜಾಜ್ ಫಿನ್‌ಸರ್ವ್, ಭಾರ್ತಿ ಏರ್‌ಟೆಲ್, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಇನ್ಫೊಸಿಸ್ ಷೇರು ಕೂಡ ಇಳಿಕೆ ಕಂಡಿವೆ.

ಬಿಎಸ್‌ಇಯ ಲಾರ್ಜ್ ಕ್ಯಾಪ್ ಶೇ 0.21, ಮಿಡ್ ಕ್ಯಾಪ್ ಶೇ 0.91 ಮತ್ತು ಸ್ಮಾಲ್ ಕ್ಯಾಪ್ ಶೇ 0.71ರಷ್ಟು ಏರಿಕೆ ಕಂಡಿವೆ. ವಲಯವಾರು ಸೂಚ್ಯಂಕಗಳಲ್ಲಿ ಸರಕುಗಳು ಶೇ 1.16, ಲೋಹ ಶೇ 1.1, ಸೇವೆ ಶೇ 0.95, ಬಂಡವಾಳ ಸರಕು ಶೇ 0.76, ಬಿಎಸ್‌ಇ ಯುಟಿಲಿಟಿ ಶೇ 0.67 ಮತ್ತು ಬಿಎಸ್‌ಇ ಆಟೊ ಶೇ 0.48ರಷ್ಟು ಏರಿಕೆಯಾಗಿವೆ.

ಬಿಎಸ್‌ಇ ಹೆಲ್ತ್‌ಕೇರ್ ಶೇ 0.38 ಮತ್ತು ತೈಲ ಮತ್ತು ಅನಿಲ ಶೇ 0.15ರಷ್ಟು ಇಳಿಕೆ ಕಂಡಿವೆ.

ಹಾಂಗ್‌ಕಾಂಗ್‌ನ ಹ್ಯಾಂಗ್‌ಸೆಂಗ್ ಶೇ 0.8ರಷ್ಟು ಇಳಿಕೆ ಕಂಡಿದೆ. ಶಾಂಘೈ ಕಾಂಪೋಸಿಟ್ ಶೇ 0.7 ಮತ್ತು ನಿಕ್ಕೇಯ್ ಶೇ 1.5ರಷ್ಟು ಸೂಚ್ಯಂಕ ಗಳಿಕೆ ಕಂಡಿದೆ.

ಜನವರಿಗೆ ಈರುಳ್ಳಿ ಬೆಲೆ ಇಳಿಕೆ ನಿರೀಕ್ಷೆ

ರಫ್ತು ನಿರ್ಬಂಧ ರೈತರ ಮೇಲೆ ಪರಿಣಾಮ ಬೀರಲ್ಲ: ಕೇಂದ್ರ ಸರ್ಕಾರ ಸ್ಪಷ್ಟನೆ

ನವದೆಹಲಿ (ಪಿಟಿಐ): ‘ಮುಂಬರುವ ಜನವರಿ ತಿಂಗಳ ವೇಳೆಗೆ ದೇಶದಲ್ಲಿ ಈರುಳ್ಳಿ ಚಿಲ್ಲರೆ ಬೆಲೆಯು ಒಂದು ಕೆ.ಜಿಗೆ ₹40ಕ್ಕೆ ಇಳಿಕೆಯಾಗುವ ಸಾಧ್ಯತೆಯಿದೆ’ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಕಾರ್ಯದರ್ಶಿ ರೋಹಿತ್ ಕುಮಾರ್ ಹೇಳಿದ್ದಾರೆ.

ಪ್ರಸ್ತುತ ಮಾರುಕಟ್ಟೆಯಲ್ಲಿ ಒಂದು ಕೆ.ಜಿ ಈರುಳ್ಳಿಯ ಸರಾಸರಿ ದರ ₹57 ಇದೆ. ಕಳೆದ ವಾರ ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಈರುಳ್ಳಿ ಧಾರಣೆಯು ಒಂದು ಕೆಜಿಗೆ ₹80 ಮುಟ್ಟಿತ್ತು. ಹಾಗಾಗಿ, ಬೆಲೆ ಏರಿಕೆಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರವು ಮುಂದಿನ ವರ್ಷದ ಮಾರ್ಚ್‌ವರೆಗೆ ಈರುಳ್ಳಿ ರಫ್ತಿಗೆ ನಿರ್ಬಂಧ ಹೇರಿ ಆದೇಶ

ಹೊರಡಿಸಿದೆ.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ರೋಹಿತ್ ಕುಮಾರ್, ‘ಕೆಲವರು ಈರುಳ್ಳಿ ಬೆಲೆಯು ₹100 ಮುಟ್ಟುವ ಸಾಧ್ಯತೆಯಿದೆ ಎಂದಿದ್ದರು. ಆದರೆ, ಅದು ₹60 ದಾಟುವುದಿಲ್ಲ’ ಎಂದು ಪ್ರತಿಕ್ರಿಯಿಸಿದರು.

> ಈರುಳ್ಳಿ ಬೆಳೆಗಾರರ ಸಂಕಷ್ಟ ಕೇಂದ್ರ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಕೂಡಲೇ, ರಫ್ತು ಮೇಲಿನ ನಿಷೇಧದ ಆದೇಶವನ್ನು ಹಿಂದಕ್ಕೆ ಪಡೆಯಬೇಕು
> **ಶರದ್ ಪವಾರ್,** ಅಧ್ಯಕ್ಷ, ಎನ್‌ಸಿಪಿ

‘ಭಾರತ ಮತ್ತು ಬಾಂಗ್ಲಾದೇಶದ ಮಾರುಕಟ್ಟೆಯಲ್ಲಿ ಕೆಲವು ವ್ಯಾಪಾರಿ ಗುಂಪುಗಳು ಬೆಲೆ ಏರಿಕೆ ನೆಪದಲ್ಲಿ ಶೋಷಣೆ ಮಾಡುತ್ತಿವೆ. ದರ ವ್ಯತ್ಯಾಸದಲ್ಲಿಯೂ ತೊಡಗಿವೆ. ಈರುಳ್ಳಿ ರಫ್ತು ನಿಷೇಧವು ರೈತರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ಗ್ರಾಹಕ ಬೆಲೆ ಸೂಚ್ಯಂಕ (ಸಿಪಿಐ) ಆಧರಿಸಿದ ಈರುಳ್ಳಿ ಚಿಲ್ಲರೆ ಹಣದುಬ್ಬರ ದರವು ಜುಲೈನಿಂದ ಎರಡು ಅಂಕಿ ದಾಖಲಿಸಿತ್ತು. ಪ್ರಸಕ್ತ ಸಾಲಿನ ಏಪ್ರಿಲ್ 1ರಿಂದ ಆಗಸ್ಟ್ 4ರ ಭಾರತದಿಂದ ಬಾಂಗ್ಲಾದೇಶ, ಮಲೇಷ್ಯಾ ಹಾಗೂ ಯುಎಇ ಸೇರಿದಂತೆ ವಿವಿಧ ದೇಶಗಳಿಗೆ ಒಟ್ಟು 9.75 ಟನ್ ಈರುಳ್ಳಿಯನ್ನು ರಫ್ತು ಮಾಡಲಾಗಿದೆ.

ಎರಡು ತಿಂಗಳ ಹಿಂದೆ ದೇಶದಲ್ಲಿ ಈರುಳ್ಳಿ ಧಾರಣೆಯು ಏರಿಕೆ ಕಂಡಿತ್ತು. ಹಾಗಾಗಿ, ಜನರಿಗೆ ಆಗುತ್ತಿರುವ ಹೊರೆ ತಪ್ಪಿಸುವ ನಿಟ್ಟಿನಲ್ಲಿ ತನ್ನ ಬಳಿ ಇರುವ ಹೆಚ್ಚುವರಿ ದಾಸ್ತಾನಿನಿಂದ ಒಂದು ಕೆ.ಜಿ ಈರುಳ್ಳಿಗೆ ₹25ರಂತೆ ರಿಯಾಯಿತಿ ದರದಲ್ಲಿ ಕೇಂದ್ರವು ಮಾರಾಟ ಮಾಡಿತ್ತು.

‘ರಹಸ್ಯ ಟಿಪ್ಪಣಿ’: ವರದಿ ಅಲ್ಲಗಳೆದ ಭಾರತ

ನವದೆಹಲಿ(ಪಿಟಿಐ): ‘ಹರ್‌ದೀಪ್ ಸಿಂಗ್ ನಿಜ್ಜರ್ ಸೇರಿದಂತೆ ಕೆಲ ಸಿಖ್ ಪ್ರತ್ಯೇಕತಾವಾದಿಗಳ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಭಾರತವು ಏಪ್ರಿಲ್‌ನಲ್ಲಿ ‘ರಹಸ್ಯ ಟಿಪ್ಪಣಿ’ ನೀಡಿತ್ತು ಎಂಬ ವರದಿಗಳು ಸುಳ್ಳು ಹಾಗೂ ಸಂಪೂರ್ಣ ಕಲ್ಪಿತ’ ಎಂದು ಭಾರತ ಪ್ರತಿಕ್ರಿಯಿಸಿದೆ.

‘ಇಂತಹ ಯಾವುದೇ ಟಿಪ್ಪಣಿ ಅಥವಾ ಜ್ಞಾಪನಾಪತ್ರವನ್ನು ಭಾರತ ನೀಡಿಲ್ಲ. ಈ ಕುರಿತ ವರದಿಗಳು ಶುದ್ಧ ಸುಳ್ಳು ಹಾಗೂ ಕಪೋಲಕಲ್ಪಿತ’ ಎಂದು ವಿದೇಶಾಂಗ ಸಚಿವಾಲಯ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

‘ಈ ಕುರಿತು ಸುದ್ದಿ ಪ್ರಕಟಿಸಿರುವ ಸುದ್ದಿಸಂಸ್ಥೆಯು ಪಾಕಿಸ್ತಾನದ ಗುಪ್ತಚರ ಸಂಸ್ಥೆ ಸೃಷ್ಟಿಸುವ ಸುಳ್ಳು ಸಂಕಥನವನ್ನು ಪ್ರಚುರಪಡಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಇದು, ಸುದ್ದಿಸಂಸ್ಥೆಯು ಈ ಹಿಂದಿನಿಂದಲೂ ನಡೆಸುತ್ತಿರುವ ನಿರಂತರ ತಪ್ಪುಮಾಹಿತಿ ಪ್ರಸಾರ ಕಾರ್ಯದ ಭಾಗವೂ ಆಗಿದೆ’ ಎಂದು ಬಾಗ್ಚಿ ಹೇಳಿದ್ದಾರೆ.

ಅಮೆರಿಕದ ಆನ್‌ಲೈನ್ ಸುದ್ದಿಸಂಸ್ಥೆ ‘ದಿ ಇಂಟರ್‌ಸೆಪ್ಟ್’ ಈ ಕುರಿತ

ಅರಿಂದಮ್ ಬಾಗ್ಚಿ

ಸುದ್ದಿಯನ್ನು ಪ್ರಕಟಿಸಿತ್ತು.

ಜೂನ್ 18ರಂದು ಖಾಲಿಸ್ತಾನಿ ಉಗ್ರ ಹರ್‌ದೀಪ್ ಸಿಂಗ್ ನಿಜ್ಜರ್ ಹತ್ಯೆಯಾಗಿತ್ತು. ಈ ಕುರಿತು ಪ್ರತಿಕ್ರಿಯಿಸಿದ್ದ ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ, ‘ನಿಜ್ಜರ್ ಹತ್ಯೆಯಲ್ಲಿ ಭಾರತದ ಕೈವಾಡ ಇದೆ’ ಎಂದು ಆರೋಪಿಸಿದ್ದರು.

‘ಪಶ್ಚಿಮ ರಾಷ್ಟ್ರಗಳಲ್ಲಿರುವ ನಿರ್ದಿಷ್ಟ ಸಿಖ್ ಗುಂಪುಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಭಾರತ ಸರ್ಕಾರ ಸೂಚನೆ ನೀಡಿತ್ತು. ವಿದೇಶಾಂಗ ಸಚಿವಾಲಯವು ಏಪ್ರಿಲ್‌ನಲ್ಲಿ ಈ ಸಂಬಂಧ ಪಟ್ಟಿಯೊಂದನ್ನು ಬಿಡುಗಡೆ ಮಾಡಿತ್ತು. ನಿಜ್ಜರ್ ಸೇರಿದಂತೆ ಭಾರತೀಯ ತನಿಖಾ ಸಂಸ್ಥೆಗಳಿಂದ ತನಿಖೆ ಎದುರಿಸುತ್ತಿರುವ ಸಿಖ್ ಪ್ರತ್ಯೇಕತಾವಾದಿಗಳ ಹೆಸರುಗಳನ್ನು ಈ ಪಟ್ಟಿ ಒಳಗೊಂಡಿತ್ತು’ ಎಂದೂ ‘ದಿ ಇಂಟರ್‌ಸೆಪ್ಟ್’ ವರದಿ ಮಾಡಿತ್ತು.

3,000 ಕಿ.ಮೀ ಪೂರ್ಣಗೊಳಿಸಿದ ಯುವ ಗಳಂ ಯಾತ್ರೆ

ಹೈದರಾಬಾದ್: ಟಿಡಿಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ನಾರಾ ಲೋಕೇಶ್ ಅವರು

ನಾರಾ ಲೋಕೇಶ್

ಜ.27ರಂದು ಆರಂಭಿಸಿದ್ದ ‘ಯುವ ಗಳಂ ಪಾದಯಾತ್ರೆ’ಯು ಸೋಮವಾರ 3,000 ಕಿ.ಮೀ ಪೂರ್ಣಗೊಳಿಸಿ ಮಹತ್ವದ ಮೈಲುಗಲ್ಲನ್ನು ಸಾಧಿಸಿದೆ.

ಲೋಕೇಶ್ ಮತ್ತು ಅವರ ತಂಡವು ವೈಎಸ್‌ಆರ್‌ಸಿಪಿ ನೇತೃತ್ವದ ಸರ್ಕಾರದ ಎಲ್ಲ ಅಡಿತಡೆಗಳನ್ನು ದಾಟಿ 3,000 ಕಿ.ಮೀ ಪಾದಯಾತ್ರೆಯನ್ನು ಪೂರ್ಣಗೊಳಿಸಿದೆ. ಇದರ ಸ್ಮರಣಾರ್ಥ ಅವರು, ತುನಿ ವಿಧಾನಸಭಾ ಕ್ಷೇತ್ರದ ತೇಟಗುಂಟಾ ಪಂಚಾಯಿತಿಯಲ್ಲಿ ಫಲಕವನ್ನು ಅನಾವರಣ ಮಾಡಿದರು ಮತ್ತು ವೈಎಸ್‌ಆರ್‌ಸಿಪಿ ಸರ್ಕಾರ ಮುಚ್ಚಿರುವ ಅಣ್ಣಾ ಕ್ಯಾಂಟೀನ್ ಸೇವೆಯನ್ನು ಪುನರಾರಂಭಿಸುವುದಾಗಿ ತಿಳಿಸಿದರು.

ಲೋಕೇಶ್ ಅವರೊಂದಿಗೆ ಪತ್ನಿ ನಾರಾ ಬ್ರಹ್ಮಣಿ, ಪುತ್ರ ದೇವಾಂಶ್ ಮತ್ತು ಕುಟುಂಬ ಸದಸ್ಯರೂ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು.

ತೇಟಗುಂಟದಲ್ಲಿ ಸೋಮವಾರ ಹಬ್ಬದ ವಾತಾವರಣ ಇತ್ತು. ಟಿಡಿಪಿ ನಾಯಕರು ಮತ್ತು ಜನರು ಲೋಕೇಶ್ ಅವರಿಗೆ ಬೆಂಬಲ ಸೂಚಿಸಲು ಅಲ್ಲಿಗೆ ಬಂದಿದ್ದರು.

ಯುವ ಗಳಂ ಪಾದಯಾತ್ರೆಯು ಈವರೆಗೆ 10 ಜಿಲ್ಲೆಗಳ, 92 ವಿಧಾನಸಭಾ ಕ್ಷೇತ್ರಗಳು ಮತ್ತು 217 ಮಂಡಲಗಳು ಹಾಗೂ 1,915 ಗ್ರಾಮಗಳಲ್ಲಿ ಸಂಚರಿಸಿದೆ.

ಈ ಸಂದರ್ಭದಲ್ಲಿ ಜನರಿಗೆ ಪ್ರಸಕ್ತ ಸಮಸ್ಯೆಗಳ ಬಗ್ಗೆ ಅರಿವು ಮೂಡಿಸಲು ಲೋಕೇಶ್ ಅವರು 90 ಸಾರ್ವಜನಿಕ ಸಭೆ, 142 ಸಂವಾದ, 12 ವಿಶೇಷ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದರು.

ಬೆಳ್ಳುಳ್ಳಿ ಬಲು ದುಬಾರಿ: ಗ್ರಾಹಕರು ಗಾಬರಿ

ಒಂದನೇ ಪುಟದಿಂದ...

‘ಒಂದು ತಿಂಗಳ ಹಿಂದೆ ಒಂದು ಕೆ.ಜಿ ಬೆಳ್ಳುಳ್ಳಿ ದರ ₹200ರ ಆಸುಪಾಸು ಇತ್ತು. ಕಳೆದ ವರ್ಷ ಇದೇ ಅವಧಿಯಲ್ಲಿ ₹100ಕ್ಕೆ ಮೂರರಿಂದ ನಾಲ್ಕು ಕೆ.ಜಿ ಮಾರಾಟ ಮಾಡಿದ್ದೆವು. ನಾಟಿ ಬೆಳ್ಳುಳ್ಳಿ ದೊರೆಯುವುದೇ ಕಷ್ಟವಾಗಿದೆ’ ಎನ್ನುತ್ತಾರೆ ಚಿಕ್ಕಬಳ್ಳಾಪುರದ ಬಜಾರ್ ರಸ್ತೆಯ ಬೆಳ್ಳುಳ್ಳಿ ವ್ಯಾಪಾರಿ ವೆಂಕಟಮ್ಮ.

ವಾರದಿಂದ ವಾರಕ್ಕೆ ದರ ಏರಿಕೆ: ‘ರೈತರು ಬೆಳೆದ ಹೊಸ ಫಸಲು ಜನವರಿ ನಂತರ ಮಾರುಕಟ್ಟೆಗೆ ಬರುತ್ತದೆ. ಈಗ ಮದುವೆ, ಸಭೆ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿರುವ ಕಾರಣ ಬೆಳ್ಳುಳ್ಳಿಗೆ ಬೇಡಿಕೆ ಇದೆ. ಹೀಗಾಗಿ ವಾರದಿಂದ ವಾರಕ್ಕೆ ದರವು ₹20ರಷ್ಟು ಹೆಚ್ಚಾಗುತ್ತಿದೆ’ ಎಂದು ಹುಬ್ಬಳ್ಳಿ ಎಪಿಎಂಸಿ ಕಮಿಷನ್ ಏಜೆಂಟ್ ಮೊಹ್ಮದ್ ಅಲಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹುಬ್ಬಳ್ಳಿಗೆ ಹೈಬ್ರೀಡ್ ಬೆಳ್ಳುಳ್ಳಿ ಮಧ್ಯಪ್ರದೇಶದಿಂದ ಪೂರೈಕೆ ಆಗುತ್ತಿದೆ. ಬಾಗಲಕೋಟೆ, ಚಿಕ್ಕಮಗಳೂರು ಮತ್ತು ಹಾವೇರಿ ಜಿಲ್ಲೆಗಳಲ್ಲಿ ರೈತರು ಜವಾರಿ ಬೆಳ್ಳುಳ್ಳಿ ಬೆಳೆಯುತ್ತಿದ್ದು, ಅದು ಜನವರಿ ನಂತರ ಮಾರುಕಟ್ಟೆಗೆ ಬರಲಿದೆ. ಆರಂಭದಲ್ಲಿ ಹೊಸ ಬೆಳ್ಳುಳ್ಳಿ ಹಸಿ ಇರುವುದರಿಂದ ಬೇಡಿಕೆ ಇರುವುದಿಲ್ಲ. ಮುಂದಿನ ವರ್ಷ ಮಾರ್ಚ್ ಅಂತ್ಯದವರೆಗೆ ಬೆಳ್ಳುಳ್ಳಿ ದರ ಏರುಗತಿಯಲ್ಲಿ ಮುಂದುವರಿಯಬಹುದು’ ಎಂದರು.

‘ದಲ್ಲಾಳಿಗಳು ಬೆಳ್ಳುಳ್ಳಿ ದಾಸ್ತಾನು ಇಟ್ಟುಕೊಂಡು ಕೃತಕ ಅಭಾವ ಸೃಷ್ಟಿಸುತ್ತಿದ್ದಾರೆ’ ಎಂದು ತರಕಾರಿ ವ್ಯಾಪಾರಿಗಳು ಆರೋಪಿಸಿದ್ದಾರೆ.

ರಷ್ಯಾದ 8 ಬ್ಯಾಲಿಸ್ಟಿಕ್ ಕ್ಷಿಪಣಿ ಹೊಡೆದುರುಳಿಸಿದ ಉಕ್ರೇನ್

ಕೀವ್ (ಎಪಿ): ಉಕ್ರೇನ್ ರಾಜಧಾನಿ ಕೀವ್ ಮೇಲೆ ಸೋಮವಾರ ನಸುಕಿನಲ್ಲಿ ಎಂಟು ಬ್ಯಾಲೆಸ್ಟಿಕ್ ಕ್ಷಿಪಣಿಗಳನ್ನು ರಷ್ಯಾ ಉಡಾಯಿಸಿದೆ. ಈ ಎಲ್ಲ ಕ್ಷಿಪಣಿಗಳನ್ನು ವಾಯು ರಕ್ಷಣಾ ವ್ಯವಸ್ಥೆಯಿಂದ ಹೊಡೆದುರುಳಿಸಿರುವುದಾಗಿ ಉಕ್ರೇನ್ ವಾಯುಪಡೆ ಹೇಳಿದೆ. ಇತ್ತೀಚಿನ ದಿನಗಳಲ್ಲಿ ಕೀವ್ ಮೇಲೆ ರಷ್ಯಾ ಪಡೆಗಳು ಡ್ರೋನ್ ಮತ್ತು ಕ್ಷಿಪಣಿಗಳಿಂದ ನಿರಂತರ ದಾಳಿ ನಡೆಸುತ್ತಿವೆ.

ಧ್ವಂಸಗೊಳಿಸಿದ ಕ್ಷಿಪಣಿಗಳ ಚೂರುಗಳು ಸಿಡಿದು ಮೂವರಿಗೆ ಗಾಯಗಳಾಗಿವೆ. ರಾತ್ರಿ ವೇಳೆ ಕರ್ಫ್ಯೂ ವಿಧಿಸಲಾಗಿದ್ದ ನಗರದಲ್ಲಿ ವಾಯು ದಾಳಿಯ ಸೈರನ್‌ಗಳು ಮೊಳಗಿದ ಬೆನ್ನಲ್ಲೇ ನಸುಕಿನ 4 ಗಂಟೆಯ ನಂತರ ಸರಣಿ ಸ್ಫೋಟಗಳ ಜೋರು ಸದ್ದು ಕೇಳಿಸಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ

ರಾಜಧಾನಿಯಲ್ಲಿ ಕ್ಷಿಪಣಿಗಳ ಸ್ಫೋಟದ ರಭಸಕ್ಕೆ ಕೆಲವು ಮನೆಗಳ ಕಿಟಕಿಗಳು ಹಾನಿಗೊಂಡಿವೆ ಎಂದು ಗೃಹ ಸಚಿವ ಐಹೋರ್ ಕ್ಲಿಮೆಂಕೊ ತಿಳಿಸಿದ್ದಾರೆ.

ಉಕ್ರೇನ್‌ನ ಇತರೆಡೆಯಲ್ಲಿ 18 ಡ್ರೋನ್‌ಗಳನ್ನು ರಷ್ಯಾ ಪಡೆಗಳು ರಾತ್ರಿಯಿಡಿ ಹಾರಿಸಿದ್ದು, ಇದರಲ್ಲಿ ಹೆಚ್ಚಿನ ಡ್ರೋನ್‌ಗಳ ಗುರಿ ದಕ್ಷಿಣದ ಮೈಕೊಲೈವ್ ಪ್ರದೇಶದ ಮೇಲೆ ನೆಟ್ಟಿತ್ತು. ರಾಜಧಾನಿ ಕೀವ್ ಮೇಲೆ 75 ಇರಾನಿ ಡ್ರೋನ್‌ಗಳನ್ನು ರಷ್ಯಾ ಹಾರಿಸಿದೆ. ಇದರಲ್ಲಿ 74 ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ ಎಂದು ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

ದಕ್ಷಿಣದಲ್ಲಿರುವ ರಫಾ ನಗರದ ಮೇಲೂ ವೈಮಾನಿಕ ದಾಳಿ

ಗಾಜಾ: ದಾಳಿ ತೀವ್ರಗೊಳಿಸಿದ ಇಸ್ರೇಲ್

ಗಾಜಾ ಪಟ್ಟಿ, ರಫಾ (ಎಪಿ/ಎಎಫ್‌ಪಿ): ‘ನಮ್ಮ ಬೇಡಿಕೆಗಳು ಈಡೇರದೆ ಒಬ್ಬ ಒತ್ತೆಯಾಳು ಕೂಡ ಇಸ್ರೇಲ್‌ಗೆ ಜೀವಂತವಾಗಿ ಮರಳುವುದಿಲ್ಲ’ ಎಂದು ಹಮಾಸ್ ಬಂಡುಕೋರರು ಬೆದರಿಕೆಯೊಡ್ಡಿದ ಬೆನ್ನಲ್ಲೇ ಇಸ್ರೇಲ್ ಸೇನೆಯು ದಕ್ಷಿಣ ಗಾಜಾದ ಮೇಲೆ ಭಾನುವಾರ ರಾತ್ರಿಯಿಂದಲೇ ಬಾಂಬ್ ದಾಳಿ ತೀವ್ರಗೊಳಿಸಿದೆ.

ಗಾಜಾದ ದಕ್ಷಿಣಕ್ಕಿರುವ ಅತಿದೊಡ್ಡ ನಗರ ಖಾನ್ ಯೂನಿಸ್ ಮೇಲೆ ಭಾನುವಾರ ರಾತ್ರೋರಾತ್ರಿ ಇಸ್ರೇಲ್ ಸೇನೆ ವೈಮಾನಿಕ ದಾಳಿ ನಡೆಸಿ, ಬಾಂಬ್‌ಗಳ ಸುರಿಮಳೆಗರೆದಿದೆ. ಇದೇ ವೇಳೆ, ಗಾಜಾದ ಕೇಂದ್ರ ಮತ್ತು ಉತ್ತರದ ನಗರ ಪ್ರದೇಶದ ಮೇಲೂ ಭಾರಿ ದಾಳಿಯಾಗಿದೆ ಎಂದು ‘ಎಎಫ್‌ಪಿ’ ಪ್ರತಿನಿಧಿ ವರದಿ ಮಾಡಿದ್ದಾರೆ.

ದಕ್ಷಿಣದಲ್ಲಿರುವ ರಫಾ ನಗರದ ಮೇಲೂ ವೈಮಾನಿಕ ದಾಳಿಯಾಗಿದೆ. ಗಾಜಾ ನಗರದಿಂದ ಸುರಕ್ಷತೆ ಬಯಸಿ ಜನರು ರಫಾಕ್ಕೆ ಓಡಿಹೋಗಿದ್ದರು. ಆದರೆ, ಬಾಂಬ್ ದಾಳಿಯಲ್ಲಿ ಏಳು ಮಕ್ಕಳು ಸತ್ತಿದ್ದಾರೆ ಮತ್ತು ಹಲವರು ಗಾಯಗೊಂಡಿದ್ದಾರೆ ಎಂದು ನಿವಾಸಿ

ಗಾಜಾ ಪಟ್ಟಿಯ ಕೇಂದ್ರ ಭಾಗದಲ್ಲಿರುವ ಅಲ್‌ಮಘಾಜಿ ನಿರಾಶ್ರಿತರ ಶಿಬಿರದ ಮೇಲೆ ಇಸ್ರೇಲ್ ಸೋಮವಾರ ವೈಮಾನಿಕ ದಾಳಿ ನಡೆಸಿದ ನಂತರ ಧ್ವಂಸಗೊಂಡ ಕಟ್ಟಡದ ಅವಶೇಷಗಳಡಿ ಬದುಕುಳಿದವರಿಗಾಗಿ ಪ್ಯಾಲೆಸ್ಟೀನಿಯರು ಹುಡುಕಾಟ ನಡೆಸಿದರು –ಎಎಫ್‌ಪಿ ಚಿತ್ರ

ಉಮ್ ಮೊಹಮ್ಮದ್ ಅಲ್ ಜಬ್ರಿ ಹೇಳಿದ್ದಾರೆ.

ಗಾಜಾದ ಪ್ರಮುಖ ಎರಡು ದೊಡ್ಡ ನಗರಗಳಲ್ಲಿ ಇಸ್ರೇಲ್ ಪಡೆಗಳು ಮತ್ತು ಹಮಾಸ್ ಬಂಡುಕೋರರ ನಡುವೆ ಸೋಮವಾರ ತೀವ್ರ ಕಾಳಗ ನಡೆಯಿತು. ಇಸ್ರೇಲ್ ಪಡೆಗಳು ಮುತ್ತಿಗೆ ಹಾಕಿರುವ ಪ್ರದೇಶಗಳಿಂದ ಭಾರಿ ಸಂಖ್ಯೆಯಲ್ಲಿ ನಾಗರಿಕರ ಸ್ಥಳಾಂತರ ನಡೆದ ನಂತರವೂ ಹಲವು ಕಡೆಗಳಲ್ಲಿ ನಾಗರಿಕರು ಸಿಲುಕಿಕೊಂಡಿದ್ದಾರೆ.

ಇಸ್ರೇಲ್ ಭೂಸೇನಾ ಪಡೆಗಳು ಕಳೆದ ವಾರ ಹೊಸ ದಾಳಿ ಆರಂಭಿಸಿದ ಮೇಲೆ ಖಾನ್ ಯೂನಿಸ್ ನಗರ ಮತ್ತು ಸುತ್ತಮುತ್ತ ಭಾರಿ ಹೋರಾಟಗಳು ನಡೆಯುತ್ತಿವೆ. ಗಾಜಾ ನಗರದ ಕೆಲವು ಭಾಗಗಳಲ್ಲಿ ಮತ್ತು ಉತ್ತರ ಗಾಜಾದಲ್ಲಿನ ಜಬಾಲಿಯಾ ನಿರಾಶ್ರಿತರ ಶಿಬಿರದಲ್ಲಿ ಇನ್ನೂ ಯುದ್ಧ ನಡೆಯುತ್ತಲೇ ಇದೆ ಎಂದು ಸ್ಥಳೀಯರು ಹೇಳಿದ್ದಾರೆ.

ಸುರಂಗದ ದ್ವಾರ ಶೋಧಿಸುತ್ತಿದ್ದ ಇಸ್ರೇಲ್ ಸೈನಿಕರನ್ನು ಗುರಿಯಾಗಿಸಿ ಖಾನ್ ಯೂನಿಸ್‌ನಲ್ಲಿ ಮನೆಯೊಂದನ್ನು ಸ್ಫೋಟಿಸಿರುವುದಾಗಿ ಹಮಾಸ್ ಬಂಡುಕೋರರು ಹೇಳಿಕೊಂಡಿದ್ದಾರೆ.

ಹಮಾಸ್ ಒತ್ತೆಯಲ್ಲಿ ಇನ್ನೂ 117 ಮಂದಿ

ಹಮಾಸ್ ಬಂಡುಕೋರರ ಬಳಿ ಇನ್ನೂ 117 ಒತ್ತೆಯಾಳುಗಳಿದ್ದಾರೆ. ಅ.7ರ ದಾಳಿಯ ಸಮಯದಲ್ಲಿ ಒತ್ತೆ ಇರಿಸಿಕೊಂಡವರಲ್ಲಿ 20 ಜನರನ್ನು ಕೊಂದು, ಶವಗಳನ್ನು ಇರಿಸಿಕೊಂಡಿದ್ದಾರೆ ಎಂದು ಇಸ್ರೇಲ್ ಹೇಳಿದೆ.

ಉಳಿದಿರುವ ಒತ್ತೆಯಾಳುಗಳಲ್ಲಿ ಹೆಚ್ಚಿನವರು ಸೈನಿಕರು ಮತ್ತು ನಾಗರಿಕರು. ಇಸ್ರೇಲ್ ಬಂಧಿಸಿರುವ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆಗಾಗಿ ಈ ಒತ್ತೆಯಾಳುಗಳನ್ನು ವಿನಿಮಯ ಮಾಡಿಕೊಳ್ಳಲು ಹಮಾಸ್ ಬಂಡುಕೋರರು ಬಯಸಿದ್ದಾರೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ
Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 8050198999, 6366430266

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

General

ಕಂಪನಿ ಆಫೀಸ್, ವರ್ಕ್ ಫ್ರಮ್ ಹೋಂ ಬೇಕಾಗಿದ್ದಾರೆ. ವಯೋಮಿತಿ ಇರುವುದಿಲ್ಲ. 18,000–57,000/–. ಮೊದಲು ಬಂದವರಿಗೆ ಆದ್ಯತೆ. 8861041526, 99457191526

ತಕ್ಷಣ ಬೇಕಾಗಿದ್ದಾರೆ. ಟಯೋಟಾ,TVS, ಬ್ರಿಟಾನಿಯಾ, ಟಾಟಾ ಮೋಟಾರ್ಸ್ ಕಂಪನಿಗಳಿಗೆ SSLC, PUC, Degree,ITIನವರು. 18,000/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9036125229

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು,ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ.ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- . ESI, PF ಸೌಲಭ್ಯವಿರುತ್ತದೆ. ಬೆಂಗಳೂರು- 56. ಸಂಪರ್ಕಿಸಿ: 7899235388, 9148525233

ವ್ಯಾಪಾರ
Business to Business
Business

ಮಹಿಳೆಯರಿಗೆ ಹಾಗೂ ಮಹಿಳಾ ಸಂಘ ಸಂಸ್ಥೆಗಳಿಗೆ ವ್ಯಾಪಾರ ಮಾಡುವುದಕ್ಕೆ ರೇಷ್ಮೆ ಸೀರೆಗಳನ್ನು, ಎಲ್ಲಾ ತರಹದ ಸೀರೆಗಳನ್ನು ಕೊಡಲಾಗುತ್ತದೆ. 8892501007/ 9606701007

ಭವಿಷ್ಯ
Astrology

ಒಂದೇ ಕರೆಯಲ್ಲಿಶಾಶ್ವತ ಪರಿಹಾರ ಸ್ತ್ರೀಪುರುಷ.ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿಪರಿಹಾರ ಪಂಡಿತ್:ಮೋಡಿ.ಬೆಟ್ಟಪ್ಪ ಉಚಿತ:ಭವಿಷ್ಯ:ಖಚಿತ ಪರಿಹಾರ,ದಕ್ಷಿಣಕನ್ನಡಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ
Travel

★ಆರ್.ಗಾಂಧಿ ಟೂರ್ಸ್★ ವಿಮಾನದಲ್ಲಿ 03.01.2024 10ದಿನಗಳು ರಾಜಸ್ಥಾನಪ್ರವಾಸ. 16.01.2024 10ದಿನಗಳು ಗುಜರಾತ್ ಪ್ಯಾಕೇಜ್. 10.01.2024 4ದಿನಗಳು ಉಜ್ಜೈನ್,ಓಂಕಾರೇಶ್ವರ ಪ್ಯಾಕೇಜ್.9945445809/ 9902433500

ಭಾರತಪರಂಪರ ದರ್ಶನ 15.12.2023, 7ದಿನ ನವಗ್ರಹಸಹಿತ,ತಮಿಳುನಾಡು. 16.1.2024 11ದಿನ ಗುಜರಾತ್ ಮಧ್ಯಪ್ರದೇಶ, 4ಜ್ಯೋತಿರ್ಲಿಂಗ 8.2.2024 ಕಾಶಿ,ಅಯೋಧ್ಯ 7ದಿನ. 9448792891.

DH DECCAN HERALD Classifieds More value, more impact
ಪ್ರಜಾವಾಣಿ
EDUCATION
The perfect medium for all educational related ads!
Book your ad with us now.
www.dhclassifieds.com
BOOK NOW
+91 9886213331 | +91 9901641752
+91 9845114560 | +91 9900428036
+91 9731810277 | 080- 45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಧಾನಿ ತೆಗೆದುಕೊಂಡ ದೂರದೃಷ್ಟಿಯ ನಿರ್ಧಾರದಿಂದ ಕಾಶ್ಮೀರದಲ್ಲಿ ಶಾಂತಿ ನೆಲೆಸಿದೆ: ಕೇಂದ್ರ ಗೃಹ ಸಚಿವ

ಐತಿಹಾಸಿಕ ತೀರ್ಪು: ಮೋದಿ, ಶಾ ಬಣ್ಣನೆ

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿದ ಕೇಂದ್ರ ಸರ್ಕಾರದ ನಿರ್ಧಾರವನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿರುವುದು 'ಐತಿಹಾಸಿಕ' ಎಂದು ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಬಣ್ಣಿಸಿದ್ದಾರೆ.

ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ಹಾಗೂ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಈ ತೀರ್ಪನ್ನು ಸ್ವಾಗತಿಸಿವೆ. ಜಮ್ಮು ಮತ್ತು ಕಾಶ್ಮೀರದ ರಾಜಕೀಯ ಪಕ್ಷಗಳ ಮುಖಂಡರಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

'ಸುಪ್ರೀಂ ಕೋರ್ಟ್ ತೀರ್ಪು ಕೇವಲ ಕಾನೂನಿಗೆ ಸಂಬಂಧಿಸಿದ ತೀರ್ಪು ಮಾತ್ರವಲ್ಲ. ಇದು ಭರವಸೆಯ ಬೆಳಕು' ಎಂದು ಮೋದಿ ತಮ್ಮ 'ಎಕ್ಸ್' ಖಾತೆಯಲ್ಲಿ 'ನವ ಜಮ್ಮು ಮತ್ತು ಕಾಶ್ಮೀರ' ಎಂಬ ಹ್ಯಾಷ್‌ಟ್ಯಾಗ್‌ನಡಿ ಪ್ರತಿಕ್ರಿಯಿಸಿದ್ದಾರೆ.

'2019ರ ಆಗಸ್ಟ್ 5ರಂದು ಸಂಸತ್ತು ತೆಗೆದುಕೊಂಡ ನಿರ್ಧಾರವನ್ನು ಈ ತೀರ್ಪು ಎತ್ತಿಹಿಡಿದಿದೆ. ಇದು ಜಮ್ಮು ಮತ್ತು ಕಾಶ್ಮೀರ ಹಾಗೂ ಲಡಾಖ್‌ನಲ್ಲಿರುವ ನಮ್ಮ ಸಹೋದರ, ಸಹೋದರಿಯರಿಗೆ ಭರವಸೆ, ಪ್ರಗತಿ ಮತ್ತು ಏಕತೆಯನ್ನು ಸಾರುವ ಘೋಷಣೆಯಾಗಿದೆ. ಜಮ್ಮು ಮತ್ತು ಕಾಶ್ಮೀರದ ಜನರ ಆಶೋತ್ತರಗಳನ್ನು ನನಸಾಗಿಸುವ ನಮ್ಮ ಬದ್ಧತೆ ಅಚಲ ಎಂಬ ಭರವಸೆ ನೀಡುತ್ತಿದ್ದೇನೆ' ಎಂದಿದ್ದಾರೆ.

370ನೇ ವಿಧಿಯಡಿ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸುವ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಿದ್ದ ಅಮಿತ್ ಶಾ, 'ನಾವು ತೆಗೆದುಕೊಂಡಿದ್ದ ನಿರ್ಧಾರ ಸಂಪೂರ್ಣವಾಗಿ ಸಾಂವಿಧಾನಿಕ ಎಂಬುದು ಸಾಬೀತಾಗಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ಪ್ರಧಾನಿ ಮೋದಿ ಅವರು ಐದು ವರ್ಷಗಳ ಹಿಂದೆ ತೆಗೆದುಕೊಂಡಿದ್ದ ದೂರದೃಷ್ಟಿಯ ನಿರ್ಧಾರವು ಕಣಿವೆ ರಾಜ್ಯದಲ್ಲಿ ಶಾಂತಿ ಸ್ಥಾಪನೆಗೆ ನೆರವಾಗಿದೆ. ಒಂದು ಕಾಲದಲ್ಲಿ ಹಿಂಸೆಯಿಂದ ನಲುಗಿದ್ದ ರಾಜ್ಯದಲ್ಲಿ ಬೆಳವಣಿಗೆ ಮತ್ತು ಅಭಿವೃದ್ಧಿಯ ಹೊಸ ಶಕೆಗೆ ನಾಂದಿ ಹಾಡಿದೆ' ಎಂದು ಹೇಳಿದ್ದಾರೆ.

'ವಿಶೇಷ ಸ್ಥಾನಮಾನ ರದ್ದುಗೊಂಡ ನಂತರ ಈ ರಾಜ್ಯವು ಪ್ರವಾಸೋದ್ಯಮ ಮತ್ತು ಕೃಷಿ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಸಾಧಿಸಿದ್ದು, ಜನರ ಜೀವನಮಟ್ಟ ಸುಧಾರಿಸಿದೆ. ಬಡವರು ಹಾಗೂ ಶೋಷಿತರ ಹಕ್ಕುಗಳು ಮರುಸ್ಥಾಪನೆಯಾಗಿದೆ. ಪ್ರತ್ಯೇಕತಾವಾದ ಮತ್ತು ಕಲ್ಲು ತೂರಾಟವು ಇತಿಹಾಸದ ಪುಟಗಳನ್ನು ಸೇರಿದೆ' ಎಂದಿದ್ದಾರೆ.

ಆರ್‌ಎಸ್‌ಎಸ್ ಸ್ವಾಗತ: ಸುಪ್ರೀಂ ಕೋರ್ಟ್ ತೀರ್ಪನ್ನು ಆರ್‌ಎಸ್‌ಎಸ್ ಸ್ವಾಗತಿಸಿದ್ದು, 'ದೇಶದ ಏಕತೆಯನ್ನು ಇನ್ನಷ್ಟು ಬಲಪಡಿಸುತ್ತದೆ' ಎಂದಿದೆ.

'ಆರ್‌ಎಸ್‌ಎಸ್ ಈ ತೀರ್ಪನ್ನು ಸ್ವಾಗತಿಸುತ್ತದೆ. ವಿಶೇಷ ಸ್ಥಾನಮಾನ ರದ್ದುಪಡಿಸುವಂತೆ ಸಂಘವು ಹಲವು ನಿರ್ಣಯಗಳನ್ನು ತೆಗೆದುಕೊಂಡಿದೆ ಮಾತ್ರವಲ್ಲ, ಸಾಕಷ್ಟು ಹೋರಾಟಗಳಲ್ಲೂ ಪಾಲ್ಗೊಂಡಿದೆ. ಹಲವು ವರ್ಷಗಳಿಂದ ಅನ್ಯಾಯಕ್ಕೆ ಗುರಿಯಾಗಿದ್ದ ಜಮ್ಮು ಮತ್ತು ಕಾಶ್ಮೀರದ ಜನರು ಇದೀಗ ನಿರಾಳರಾಗಿದ್ದಾರೆ' ಎಂದು ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖ ಸುನಿಲ್ ಅಂಬೇಕರ್ ತಿಳಿಸಿದ್ದಾರೆ.

'ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಈಗ ನಮ್ಮ ಮುಂದೆ ಬಾಕಿಯಿರುವ ಗುರಿಯೆಂದರೆ ಪಾಕ್ ಆಕ್ರಮಿಕ ಕಾಶ್ಮೀರದ (ಪಿಒಕೆ) ವಿಮೋಚನೆ. ಬಲಿಷ್ಠ ಭಾರತ ಮತ್ತು ದೃಢ ನಿಶ್ಚಯ ಹೊಂದಿರುವ ಸರ್ಕಾರದಿಂದ ಪಿಒಕೆ ವಿಮೋಚನೆ ಸಾಧ್ಯ ಎಂಬ ವಿಶ್ವಾಸ ನಮ್ಮದು' ಎಂದು ವಿಎಚ್‌ಪಿ ಕಾರ್ಯಾಧ್ಯಕ್ಷ ಅಲೋಕ್ ಕುಮಾರ್ ಹೇಳಿದ್ದಾರೆ.

ರಾಜಕೀಯ ನಾಯಕರಿಗೆ ಗೃಹಬಂಧನ: ಗೇಟುಗಳಿಗೆ ಸರಪಳಿ ಮತ್ತು ಬೀಗ ಹಾಕಿರುವ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಕಾಶ್ಮೀರದ ರಾಜಕಾರಣಿಗಳು, ತಮ್ಮನ್ನು ಗೃಹ ಬಂಧನದಲ್ಲಿ ಇರಿಸಲಾಗಿದೆ ಎಂದು ಆರೋಪಿಸಿದ್ದಾರೆ. ಆದರೆ, ಈ ಆರೋಪಗಳನ್ನು ಅಲ್ಲಿಯ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ತಳ್ಳಿಹಾಕಿದ್ದಾರೆ.

'ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸುವ ಮುನ್ನವೇ ಪೊಲೀಸರು ಮೆಹಬೂಬಾ ಮುಫ್ತಿ ಅವರ ಮನೆಯ ಬಾಗಿಲು ಮುಚ್ಚಿ ಮೊಹರು ಮಾಡಿದ್ದಾರೆ' ಎಂದು ಪಿಡಿಪಿ ಆರೋಪಿಸಿತ್ತು.

ಭಾರತದ ಪರಿಕಲ್ಪನೆಗೆ ಸೋಲು: ಮೆಹಬೂಬಾ

ಶ್ರೀನಗರ (ಪಿಟಿಐ): ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು 'ಗಲ್ಲು ಶಿಕ್ಷೆಗಿಂತ ಕಡಿಮೆಯದ್ದಲ್ಲ' ಎಂದು ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಅಧ್ಯಕ್ಷೆ ಮೆಹಬೂಬಾ ಮುಫ್ತಿ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

'ಸಂಸತ್ತಿನಲ್ಲಿ ತೆಗೆದುಕೊಂಡಿದ್ದ ಅಸಾಂವಿಧಾನಿಕ ಮತ್ತು ಕಾನೂನುಬಾಹಿರ ನಿರ್ಧಾರವೊಂದನ್ನು ಈಗ ಕಾನೂನುಬದ್ಧ ಎಂದು ಘೋಷಿಸಲಾಗಿದೆ. ಇದು ಜಮ್ಮು ಮತ್ತು ಕಾಶ್ಮೀರಕ್ಕೆ ಮಾತ್ರವಲ್ಲದೆ, ಭಾರತದ ಪರಿಕಲ್ಪನೆಗೆ ಗಲ್ಲು ಶಿಕ್ಷೆ ವಿಧಿಸಿದಂತಾಗಿದೆ' ಎಂದು 'ಎಕ್ಸ್' ಖಾತೆಯಲ್ಲಿ ವಿಡಿಯೊ ಸಂದೇಶದಲ್ಲಿ ತಿಳಿಸಿದ್ದಾರೆ.

'ಸಂವಿಧಾನದ 370ನೇ ವಿಧಿ ತಾತ್ಕಾಲಿಕ, ಆದ್ದರಿಂದ ವಿಶೇಷ ಸ್ಥಾನಮಾನ ರದ್ದುಪಡಿಸಲಾಗಿದೆ ಎಂದು ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಇದು ನಮ್ಮ ಸೋಲಲ್ಲ, ಭಾರತದ ಪರಿಕಲ್ಪನೆಗೆ ಆಗಿರುವ ಸೋಲು. ಜಮ್ಮು ಮತ್ತು ಕಾಶ್ಮೀರದ ಮುಸ್ಲಿಮರು ಪಾಕಿಸ್ತಾನವನ್ನು ತಿರಸ್ಕರಿಸಿ ಇಲ್ಲಿನ ಹಿಂದೂ, ಕ್ರೈಸ್ತ, ಸಿಖ್ ಮತ್ತು ಬೌದ್ಧರ ಜತೆ ಕೈಜೋಡಿಸಿದ್ದರು. ಗಾಂಧೀಜಿ ಅವರ ಭಾರತದ ಜತೆ ನಿಂತಿದ್ದರು. ಭಾರತದ ಆ ಕಲ್ಪನೆಗೆ ಈಗ ಸೋಲಾಗಿದೆ' ಎಂದಿದ್ದಾರೆ.

'ಭರವಸೆ ಕಳೆದುಕೊಳ್ಳಬೇಡಿ. ಜಮ್ಮು ಮತ್ತು ಕಾಶ್ಮೀರ ಸಾಕಷ್ಟು ಏರಿಳಿತಗಳನ್ನು ಕಂಡಿದೆ. ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ತಾತ್ಕಾಲಿಕ ತಡೆ ಎಂದುಕೊಳ್ಳಿ. ಇದನ್ನೇ ಅಂತ್ಯವೆಂದು ತಿಳಿದುಕೊಳ್ಳುವ ತಪ್ಪು ಮಾಡಬೇಡಿ. ನಾವು ಭರವಸೆ ಕಳೆದುಕೊಂಡು ಸೋಲು ಒಪ್ಪಿಕೊಳ್ಳಬೇಕೆಂದು ವಿರೋಧಿಗಳು ಬಯಸಿಕೊಂಡಿದ್ದಾರೆ. ಅದಕ್ಕೆ ಅವಕಾಶ ಮಾಡಿಕೊಡಬೇಡಿ' ಎಂದು ಜಮ್ಮು ಮತ್ತು ಕಾಶ್ಮೀರದ ಜನರಿಗೆ ಮನವಿ ಮಾಡಿದರು.

ರಾಜಕೀಯ ಚಟುವಟಿಕೆ ಸ್ಥಗಿತ: ಜಮ್ಮು ಮತ್ತು ಕಾಶ್ಮೀರದಲ್ಲಿ ಎಲ್ಲ ರಾಜಕೀಯ ಚಟುವಟಿಕೆಗಳನ್ನು ಒಂದು ವಾರದವರೆಗೆ ಸ್ಥಗಿತಗೊಳಿಸುವುದಾಗಿ ಪೀಪಲ್ಸ್ ಡೆಮಾಕ್ರಟಿಕ್ ಪಾರ್ಟಿ (ಪಿಡಿಪಿ) ಪ್ರಕಟಿಸಿದೆ.

ಈ ತೀರ್ಪು ಜಮ್ಮು ಮತ್ತು ಕಾಶ್ಮೀರದ ಯಾರಿಗೂ ಸಂತಸ ತಂದಿಲ್ಲ. ಕಣಿವೆಯ ಜನರ ಭಾವನೆಗಳನ್ನು ಸುಪ್ರಿಂ ಕೋರ್ಟ್ ಪರಿಗಣಿಸಬೇಕಿತ್ತು

ಗುಲಾಮ್ ನಬಿ ಆಜಾದ್
ಮುಖ್ಯಸ್ಥ (ಡಿಪಿಎಪಿ)

ಇದು ದುಃಖದ ವಿಚಾರ. ಆದರೆ ಪ್ರಸ್ತುತ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪು ಅನಿರೀಕ್ಷಿತವೇನೂ ಆಗಿರಲಿಲ್ಲ

ಮೀರ್‌ವೈಝ್ ಉಮರ್ ಫಾರೂಖ್
ಹುರಿಯತ್ ಕಾನ್ಫರೆನ್ಸ್ ಮುಖ್ಯಸ್ಥ

'ಗೌರವಪೂರ್ವಕ ಅಸಮ್ಮತಿ'

ನವದೆಹಲಿ (ಪಿಟಿಐ): 'ಸಂವಿಧಾನದ 370ನೇ ವಿಧಿಯ ಅಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ಹಿಂಪಡೆದ ರೀತಿಯ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಕುರಿತಾಗಿ ನಾವು ಗೌರವಪೂರ್ವಕ ಅಸಮ್ಮತಿ ಹೊಂದಿದ್ದೇವೆ' ಎಂದು ಕಾಂಗ್ರೆಸ್ ಹಿರಿಯ ನಾಯಕ ಪಿ. ಚಿದಂಬರಂ ಪ್ರತಿಕ್ರಿಯಿಸಿದ್ದಾರೆ.

ಕೋರ್ಟ್ ತೀರ್ಪನ್ನು ಎಚ್ಚರಿಕೆಯಿಂದ ಅಧ್ಯಯನ ಮಾಡಬೇಕು ಎಂದು ಹೇಳಿರುವ ಅವರು, 'ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಪರಿಪೂರ್ಣ ಸ್ಥಾನಮಾನ ನೀಡಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಕಾಂಗ್ರೆಸ್ ಕೂಡಾ ಇದನ್ನೇ ಯಾವಾಗಲೂ ಆಗ್ರಹಿಸುತ್ತಿತ್ತು. ಈ ಅಂಶವನ್ನು ಸ್ವಾಗತಿಸುತ್ತೇವೆ' ಎಂದಿದ್ದಾರೆ.

'ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಪರಿಪೂರ್ಣ ಸ್ಥಾನಮಾನವನ್ನು ಕೂಡಲೇ ಪುನಃಸ್ಥಾಪಿಸಬೇಕು. ಲಡಾಖ್ ಜನರ ಆಶೋತ್ತರಗಳನ್ನು ಈಡೇರಿಸಬೇಕು. ವಿಧಾನಸಭೆ ಚುನಾವಣೆ ಶೀಘ್ರ ನಡೆಸಬೇಕು ಎಂದು ನಾವು ನಂಬಿದ್ದೇವೆ. ಅದಕ್ಕಾಗಿ 2024ರ ಸೆಪ್ಟೆಂಬರ್ 30ರವರೆಗೆ ಕಾಯುವ ಅಗತ್ಯವಿಲ್ಲ' ಎಂದಿದ್ದಾರೆ.

2 ಮಸೂದೆಗಳಿಗೆ ಸಂಸತ್ತು ಅಸ್ತು

ನವದೆಹಲಿ (ಪಿಟಿಐ): ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ಎರಡು ಮಸೂದೆಗಳನ್ನು ಸಂಸತ್ತು ಅಂಗೀಕರಿಸಿದೆ. ರಾಜಸಭೆಯು ಈ ಮಸೂದೆಗಳನ್ನು ಸೋಮವಾರ ಧ್ವನಿಮತದಿಂದ ಅಂಗೀಕರಿಸಿತು.

ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ, ಭಯೋತ್ಪಾದನೆಯಿಂದ ಮುಕ್ತವಾದ 'ಹೊಸ ಮತ್ತು ಅಭಿವೃದ್ಧಿ ಕಾಶ್ಮೀರ' ಅಭಿವೃದ್ಧಿಪಡಿಸುವ ಕಾರ್ಯ ಆರಂಭವಾಗಿದೆ ಎಂದು ಗೃಹ ಸಚಿವ ಅಮಿತ್ ಶಾ ಅವರು ಸದನಕ್ಕೆ ಭರವಸೆ ನೀಡಿದರು.

ಶಾ ಉತ್ತರ ನೀಡುತ್ತಿದ್ದಾಗಲೇ ಕಾಂಗ್ರೆಸ್ ನೇತೃತ್ವದಲ್ಲಿ ಪ್ರತಿಪಕ್ಷಗಳು ಸಭಾತ್ಯಾಗ ಮಾಡಿದವು. ಜಮ್ಮು–ಕಾಶ್ಮೀರ ಪುನರ್ವಿಂಗಡಣೆ (ತಿದ್ದುಪಡಿ) ಮಸೂದೆ ಹಾಗೂ ಜಮ್ಮು–ಕಾಶ್ಮೀರ ಮೀಸಲಾತಿ (ತಿದ್ದುಪಡಿ) ಮಸೂದೆ ಅನ್ನು ಕಳೆದ ವಾರ ಮಂಡಿಸಲಾಗಿತ್ತು.

ಕಾನೂನಿನ ಬೆಲೆಯಿಲ್ಲ: ಪಾಕಿಸ್ತಾನ

ಇಸ್ಲಾಮಾಬಾದ್ (ಪಿಟಿಐ): ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿಗೆ 'ಕಾನೂನಿನ ಮೌಲ್ಯವಿಲ್ಲ' ಎಂದು ಪಾಕಿಸ್ತಾನ ಪ್ರತಿಕ್ರಿಯೆ ನೀಡಿದೆ. ಕೇಂದ್ರ ಸರ್ಕಾರವು 2019ರ ಆಗಸ್ಟ್ 5ರಂದು ಕೈಗೊಂಡ ನಿರ್ಧಾರಕ್ಕೆ ಅಂತರ ರಾಷ್ಟ್ರೀಯ ಕಾನೂನು ಮಾನ್ಯತೆ ನೀಡುವುದಿಲ್ಲ ಎಂದು ಹೇಳಿದೆ.

'ವಿಶ್ವಸಂಸ್ಥೆ ಭದ್ರತಾ ಮಂಡಳಿಯ ಸಂಬಂಧಪಟ್ಟ ನಿರ್ಣಯಗಳಿಗೆ ಅನುಗುಣವಾಗಿ ಕಾಶ್ಮೀರದ ಜನರಿಗೆ ತಮ್ಮ ಕುರಿತು ತೀರ್ಮಾನ ಕೈಗೊಳ್ಳಲು ಹಕ್ಕು ಇದೆ' ಎಂದು ಪಾಕಿಸ್ತಾನದ ಉಸ್ತುವಾರಿ ವಿದೇಶಾಂಗ ಸಚಿವ ಜಲೀಲ್ ಅಬ್ಬಾಸ್ ಜಿಲಾನಿ ಹೇಳಿದ್ದಾರೆ.

ಸ್ಥಾನ ರದ್ದತಿಗೆ 'ಸುಪ್ರೀಂ' ಮುದ್ರೆ

ಒಂದನೇ ಪುಟದಿಂದ...

'ಜಮ್ಮು ಮತ್ತು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಿದ್ದು ತಾತ್ಕಾಲಿಕವಾಗಿತ್ತು ಎಂಬುದನ್ನು 370ನೇ ವಿಧಿಯ ಯಾವ ವ್ಯಾಖ್ಯಾನವೂ ಹೇಳುವುದಿಲ್ಲ' ಎಂದು ಅವರು ಹೇಳಿದ್ದಾರೆ.

ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್ ಮತ್ತು ಸಂಜೀವ್ ಖನ್ನಾ ಅವರು ಸಹಮತದ ಪ್ರತ್ಯೇಕ ತೀರ್ಪುಗಳನ್ನು ಬರೆದಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ರಾಜ್ಯದಿಂದ ಲಡಾಖ್ ಅನ್ನು ಪ್ರತ್ಯೇಕಿಸಿ, ಅದನ್ನು ಕೇಂದ್ರಾಡಳಿತ ಪ್ರದೇಶವಾಗಿಸಿದ ಕೇಂದ್ರ ಸರ್ಕಾರದ ತೀರ್ಮಾನವನ್ನು ಕೋರ್ಟ್ ಎತ್ತಿಹಿಡಿದಿದೆ. 'ಜಮ್ಮು ಮತ್ತು ಕಾಶ್ಮೀರದ ವಿಧಾನಸಭೆಗೆ 2024ರ ಸೆಪ್ಟೆಂಬರ್ 30ಕ್ಕೆ ಮೊದಲು ಚುನಾವಣೆ ನಡೆಸಬೇಕು' ಎಂದು ಕೇಂದ್ರ ಚುನಾವಣಾ ಆಯೋಗಕ್ಕೆ ಕೋರ್ಟ್ ಸೂಚನೆ ನೀಡಿದೆ.

370ನೆಯ ವಿಧಿಯ ಕಾರಣದಿಂದಾಗಿ ಜಮ್ಮು ಮತ್ತು ಕಾಶ್ಮೀರಕ್ಕೆ ಸಾರ್ವಭೌಮ ಸ್ಥಾನ ಇತ್ತು ಎಂಬುದನ್ನು ಒಪ್ಪುವುದಾದರೆ, ಒಕ್ಕೂಟದ ಜೊತೆ ವಿಶೇಷ ಒಪ್ಪಂದ ಹೊಂದಿರುವ ಇತರ ರಾಜ್ಯಗಳಿಗೂ ಇಂಥದ್ದೇ ಸಾರ್ವಭೌಮತ್ವ ಇರುತ್ತದೆ ಎಂಬ ವಾದ ಎದುರಾಗುತ್ತದೆ. 'ಆದರೆ ವಾಸ್ತವ ಹೀಗಿಲ್ಲ... ಜಮ್ಮು ಮತ್ತು ಕಾಶ್ಮೀರದ ವಿಶೇಷ ಸಂದರ್ಭವು ವಿಶೇಷ ಕಾನೂನಿನ, ಅಂದರೆ 370ನೇ ವಿಧಿಯ, ಅಗತ್ಯವನ್ನು ಸೃಷ್ಟಿಸಿತು. 370ನೆ ವಿಧಿಯು ಅಸಮ ಒಕ್ಕೂಟ ವ್ಯವಸ್ಥೆಯ ಒಂದು ನಿದರ್ಶನ. ಇತರ ರಾಜ್ಯಗಳ ಪ್ರಜೆಗಳಿಗೆ ಇರುವುದಕ್ಕಿಂತ ಭಿನ್ನವಾದ ಸಾರ್ವಭೌಮ ಸ್ಥಾನಮಾನವನ್ನು ಜಮ್ಮು ಮತ್ತು ಕಾಶ್ಮೀರದ ಜನರಿಗೆ ಇಲ್ಲ' ಎಂದು ಸಂವಿಧಾನ ಪೀಠವು ಸ್ಪಷ್ಟಪಡಿಸಿದೆ.

ಮಹಾರಾಜ ಹರಿಸಿಂಗ್ ಅವರು ವಿಲೀನ ಸನ್ನದಿಗೆ 1947ರಲ್ಲಿ ಸಹಿ ಮಾಡುವಾಗ ರಕ್ಷಣೆ, ಸಂವಹನ ಮತ್ತು ವಿದೇಶ ವ್ಯವಹಾರಗಳ ವಿಚಾರದಲ್ಲಿ ಮಾತ್ರ ಸಾರ್ವಭೌಮತ್ವವನ್ನು ಬಿಟ್ಟುಕೊಟ್ಟಿದ್ದರು ಎಂದು ಅರ್ಜಿದಾರರು ವಾದಿಸಿದ್ದರು. ಆದರೆ, ಹಿಂದೆ ರಾಜ್ಯವಾಗಿದ್ದ ಜಮ್ಮು ಮತ್ತು ಕಾಶ್ಮೀರವು, ವಿಲೀನ ಸನ್ನದಿಗೆ ಸಹಿ ಮಾಡಿದ ನಂತರದಲ್ಲಿ, ದೇಶದ ಸಂವಿಧಾನ ಅಂಗೀಕಾರವಾದ ನಂತರದಲ್ಲಿ ಸಾರ್ವಭೌಮತ್ವದ ಯಾವುದೇ ಅಂಶವನ್ನು ಉಳಿಸಿಕೊಂಡಿಲ್ಲ ಎಂದು ಸಿಜೆಐ ಸ್ಪಷ್ಟಪಡಿಸಿದ್ದಾರೆ.

ಸಾಮರಸ್ಯ ಆಯೋಗ ರಚಿಸಿ: 'ಸುಪ್ರೀಂ'

ಒಂದನೇ ಪುಟದಿಂದ...

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯು ಜಾರಿಯಲ್ಲಿದ್ದ ಅವಧಿಯಲ್ಲಿ ನಡೆದ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ತನಿಖೆ ನಡೆಸಲು ಸತ್ಯಶೋಧನೆ ಮತ್ತು ಸಾಮರಸ್ಯ ಆಯೋಗವನ್ನು ರಚಿಸಲಾಯಿತು. ಅದು ನೋವು ಅನುಭವಿಸಿದವರಿಗೆ, ತಮ್ಮ ಮನಸ್ಸಿನಲ್ಲಿ ಇದ್ದುದನ್ನು ಹೇಳಿಕೊಳ್ಳಲು ನೆರವಾಯಿತು. ಹಾಗೆಯೇ, ಶಾಂತಿಯ ಸ್ಥಾಪನೆಗೆ ಇಂಬು ಕೊಟ್ಟಿತು ಎಂದು ಕೌಲ್ ಅವರು ವಿವರಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದಂತೆ ಈ ಆಯೋಗವು, ಸಾಮರಸ್ಯ ಸ್ಥಾಪನೆಗೆ ಅಗತ್ಯವಿರುವ ಕ್ರಮಗಳನ್ನು ಶಿಫಾರಸು ಮಾಡಬೇಕು ಎಂದು ಕೌಲ್ ಸೂಚಿಸಿದ್ದಾರೆ. ಮುಂದೆ ಸಾಗಬೇಕು ಎಂದಾದರೆ ಗಾಯಗಳು ಮಾಯಬೇಕು. 'ನೆನಪುಗಳು ಮಾಸುವ ಮುನ್ನ' ಆಯೋಗವನ್ನು ತ್ವರಿತವಾಗಿ ರಚಿಸಬೇಕು. ಆಯೋಗದ ಕೆಲಸಗಳು ಕಾಲಮಿತಿಯಲ್ಲಿ ಪೂರ್ಣಗೊಳ್ಳಬೇಕು ಎಂದಿದ್ದಾರೆ.

'ಒಂದಿಡೀ ಯುವ ತಲೆಮಾರು ಅವಿಶ್ವಾಸದಲ್ಲಿ ಬೆಳೆದು ಬಂದಿದೆ... ವಿಷಯದ ಮಹತ್ವ ಹಾಗೂ ಇಲ್ಲಿರುವ ಸೂಕ್ಷ್ಮಗಳನ್ನು ಪರಿಗಣಿಸಿ, ಆಯೋಗವನ್ನು ರಚಿಸುವುದು ಹೇಗೆ ಮತ್ತು ಅದು ಮುಂದಡಿ ಇರಿಸಬೇಕಿರುವುದು ಹೇಗೆ ಎಂಬುದನ್ನು ಸರ್ಕಾರ ತೀರ್ಮಾನಿಸಬೇಕು' ಎಂದು ತೀರ್ಪಿನಲ್ಲಿ ತಿಳಿಸಿದ್ದಾರೆ.

ಇಂಥದ್ದೊಂದು ಆಯೋಗವನ್ನು ರಚಿಸಬೇಕು ಎಂಬ ಆಗ್ರಹವನ್ನು ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಸಹ ಮಂಡಿಸುತ್ತ ಬಂದಿದ್ದಾರೆ. 'ಆಯೋಗವು ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸುವ ಕೋರ್ಟ್‌ನಂತೆ ಆಗಬಾರದು. ಅದು ಮಾನವೀಯ ಹಾಗೂ ವ್ಯಕ್ತಿಗತವಾದ ನೆಲೆಯಲ್ಲಿ ಕೆಲಸ ಮಾಡಬೇಕು, ಜನ ತಾವು ಅನುಭವಿಸಿದ್ದನ್ನು ಮುಕ್ತವಾಗಿ ಹೇಳುವಂತೆ ಇರಬೇಕು' ಎಂದು ಕೌಲ್ ಅವರು ಹೇಳಿದ್ದಾರೆ.

ಒಡಿಶಾ: ಜಪ್ತಿ ಹಣ ₹353 ಕೋಟಿಗೆ ಏರಿಕೆ

ಭುವನೇಶ್ವರ (ಪಿಟಿಐ): ಕಾಂಗ್ರೆಸ್ ಪಕ್ಷದ ರಾಜ್ಯಸಭಾ ಸದಸ್ಯ ಧೀರಜ್ ಪ್ರಸಾದ್ ಸಾಹು ಅವರಿಗೆ ಸೇರಿದ್ದು ಎನ್ನಲಾದ ಡಿಸ್ಟಿಲರಿ ಸಮೂಹಕ್ಕೆ ಸಂಬಂಧಿಸಿದ ವಿವಿಧ ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಸತತ ಆರನೇ ದಿನವೂ ಶೋಧ ಮುಂದುವರಿಸಿದ್ದು, ಈವರೆಗೆ ದಾಖಲೆ ಇಲ್ಲದ ₹353 ಕೋಟಿ ಹಣವನ್ನು ಜಪ್ತಿ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತನಿಖಾ ಸಂಸ್ಥೆಯೊಂದು ಒಂದು ನಿರ್ದಿಷ್ಟ ಕಾರ್ಯಾಚರಣೆಯಲ್ಲಿ ಜಪ್ತಿ ಮಾಡಿರುವ ಅತ್ಯಧಿಕ ಮೊತ್ತದ 'ಕಪ್ಪುಹಣ' ಇದಾಗಿದೆ ಎಂದೂ ಅವರು ಹೇಳಿದ್ದಾರೆ.

ಸೋಮವಾರ ಅಧಿಕಾರಿಗಳು ಧೀರಜ್ ಪ್ರಸಾದ್ ಸಾಹು ಕುಟುಂಬದ ಮಾಲೀಕತ್ವದ ಬುದ್ಧ ಡಿಸ್ಟಿಲರೀಸ್‌ನ ಸುದಪದ ಘಟಕದಲ್ಲಿ ಶೋಧ ನಡೆಸಿದರು. ಜೊತೆಗೆ ಸಂಬಲ್‌ಪುರ, ಸುಂದರಗಢ, ಟಿಟಲ್‌ಗಢ, ಬೋಲಂಗೀರ್, ಭುವನೇಶ್ವರದಲ್ಲೂ ಕಾರ್ಯಾಚರಣೆ ನಡೆಸಿದರು ಎಂದು ತಿಳಿಸಿದರು.

'ಜಪ್ತಿ ಮಾಡಲಾದ ನಗದು ಎಣಿಕೆ ಕಾರ್ಯ ಭಾನುವಾರ ರಾತ್ರಿ ಮುಕ್ತಾಯವಾಗಿದೆ. ಹೀಗಾಗಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ತಂಡವು ವಶಕ್ಕೆ ಪಡೆದ ದಾಖಲೆಗಳನ್ನು ಪರಿಶೀಲಿಸಲು ಮುಂದಾಗಿದೆ' ಎಂದೂ ಮಾಹಿತಿ ನೀಡಿದರು.

ಈ ಮಧ್ಯೆ, ಒಡಿಶಾ ಸರ್ಕಾರವು ಅಕ್ರಮ ಮದ್ಯ ಮಾರಾಟಕ್ಕೆ ಮತ್ತು ಕಪ್ಪುಹಣ ಸಂಗ್ರಹಕ್ಕೆ ಅನುಕೂಲ ಮಾಡಿಕೊಡುತ್ತಿದೆ ಎಂದು ಆರೋಪಿಸಿ ಬಿಜೆಪಿ ತೀವ್ರ ವಾಗ್ದಾಳಿ ನಡೆಸಿದೆ. ಕಪ್ಪು ಹಣ ವರ್ಗಾವಣೆ ನಡೆಯುತ್ತಿದೆ ಎಂದು ಆರೋಪಿಸಿ ರಾಜ್ಯದಾದ್ಯಂತ ಇರುವ ಉಪ ವಿಭಾಗೀಯ ಕಚೇರಿಗಳ ಎದುರು ಬಿಜೆಪಿ ಪ್ರತಿಭಟನೆ ನಡೆಸಿತು.

'ಸಿಬಿಐಗೆ ಅಧಿಕಾರ: ಹೊಸ ಕಾನೂನು ರಚನೆ ಅಗತ್ಯವಿದೆ'

ನವದೆಹಲಿ (ಪಿಟಿಐ): ರಾಜ್ಯಗಳ ಅನುಮತಿ ಹಾಗೂ ಹಸ್ತಕ್ಷೇಪ ಇಲ್ಲದೆಯೇ ಯಾವುದೇ ಪ್ರಕರಣ ಕುರಿತು ತನಿಖೆ ನಡೆಸುವುದಕ್ಕೆ ಸಿಬಿಐಗೆ ವ್ಯಾಪಕ ಅಧಿಕಾರ ನೀಡಬೇಕು. ಈ ಸಂಬಂಧ ಹೊಸ ಕಾನೂನು ರಚಿಸುವ ತುರ್ತು ಅಗತ್ಯ ಇದೆ ಎಂದು ಸಂಸದೀಯ ಸಮಿತಿಯೊಂದು ಸೋಮವಾರ ಹೇಳಿದೆ.

ಪ್ರಮುಖ ಪ್ರಕರಣಗಳ ಕುರಿತು ತನಿಖೆ ನಡೆಸುವುದಕ್ಕಾಗಿ ಕೆಲವು ರಾಜ್ಯಗಳು ಸಿಬಿಐಗೆ ನೀಡಿರುವ ಅನುಮತಿಯನ್ನು ಹಿಂಪಡೆದಿವೆ. ತನಿಖೆ ನಡೆಸುವುದಕ್ಕೆ ಸಂಬಂಧಿಸಿ ಸಿಬಿಐ ಹೊಂದಿರುವ ಅಧಿಕಾರವನ್ನು ರಾಜ್ಯಗಳ ಇಂತಹ ಕ್ರಮವು ಮೊಟಕುಗೊಳಿಸುತ್ತದೆ ಎಂದೂ ಸಮಿತಿ ಹೇಳಿದೆ.

ಜೊತೆಗೆ, ಸಿಬಿಐ ಕಾರ್ಯವೈಖರಿಯು ವಸ್ತುನಿಷ್ಠ ಹಾಗೂ ನಿಷ್ಪಕ್ಷಪಾತವಾಗಿರುವಂತೆ ನೋಡಿಕೊಳ್ಳಲು ಕೆಲ ಕ್ರಮಗಳನ್ನು ಕೈಗೊಳ್ಳಬೇಕು. ಹೀಗೆ ಮಾಡುವುದರಿಂದ, ತಮ್ಮ ವಿರುದ್ಧ ತಾರತಮ್ಯ ಮಾಡುತ್ತಿಲ್ಲ ಎಂಬ ಭಾವನೆ ರಾಜ್ಯಗಳಲ್ಲಿಯೂ ಮೂಡುತ್ತದೆ ಎಂದು ಸಿಬ್ಬಂದಿ, ಸಾರ್ವಜನಿಕ ದೂರುಗಳು, ಕಾನೂನು ಮತ್ತು ನ್ಯಾಯ ಕುರಿತ ಸಂಸದೀಯ ಸ್ಥಾಯಿ ಸಮಿತಿಯು ಸಂಸತ್‌ನಲ್ಲಿ ಮಂಡಿಸಿರುವ ವರದಿಯಲ್ಲಿ ಹೇಳಲಾಗಿದೆ.

ದೆಹಲಿ ವಿಶೇಷ ಪೊಲೀಸ್ ಎಸ್ಟಾಬ್ಲಿಷ್‌ಮೆಂಟ್ ಕಾಯ್ದೆ (ಡಿಎಸ್‌ಪಿಇ) ಅಡಿ ಸಿಬಿಐ ಕಾರ್ಯ ನಿರ್ವಹಿಸುತ್ತಿದೆ. ಸಿಬಿಐ ತನಿಖೆ ನಡೆಸಬೇಕು ಎಂದಾದಲ್ಲಿ, ಸಂಬಂಧಪಟ್ಟ ರಾಜ್ಯದ ಅನುಮತಿ ಕಡ್ಡಾಯ ಎಂದು ಈ ಕಾಯ್ದೆ ಹೇಳುತ್ತದೆ.

ಮಧ್ಯಪ್ರದೇಶ: ಮೋಹನ್ ಯಾದವ್ ಹೊಸ ಸಿ.ಎಂ

ಭೋಪಾಲ್(ಪಿಟಿಐ): ಅಚ್ಚರಿಯ ಬೆಳವಣಿಗೆಯಲ್ಲಿ, ಮಧ್ಯಪ್ರದೇಶ ನೂತನ ಮುಖ್ಯಮಂತ್ರಿ ಸ್ಥಾನಕ್ಕೆ ಒಬಿಸಿ ನಾಯಕ ಹಾಗೂ ಉಜ್ಜೈನಿ ಶಾಸಕ ಮೋಹನ್ ಯಾದವ್ ಅವರನ್ನು ಬಿಜೆಪಿ ಸೋಮವಾರ ಆಯ್ಕೆ ಮಾಡಿದೆ.

ಇಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯು, 58 ವರ್ಷದ ಮೋಹನ್ ಯಾದವ್ ಅವರನ್ನು ಶಾಸಕಾಂಗ ಪಕ್ಷದ ನಾಯಕನಾಗಿ ಆಯ್ಕೆ ಮಾಡಿತು.

ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ನೇತೃತ್ವದ ಸಂಪುಟದಲ್ಲಿ ಯಾದವ್ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ಅವರು ಉಜ್ಜೈನಿ ದಕ್ಷಿಣ ಕ್ಷೇತ್ರವನ್ನು ಮೂರನೇ ಬಾರಿ ಪ್ರತಿನಿಧಿಸುತ್ತಿದ್ದಾರೆ.

'ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಯಾದವ್ ಹೆಸರನ್ನು ಸೂಚಿಸಿದರು. ಪಕ್ಷ ನೇಮಿಸಿದ್ದ ವೀಕ್ಷಕರ ಸಮ್ಮುಖದಲ್ಲಿ ಈ ಆಯ್ಕೆ ನಡೆಯಿತು' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ.ಶರ್ಮಾ ಹೇಳಿದ್ದಾರೆ.

ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿಗಳ ಸ್ಪರ್ಧೆಯಲ್ಲಿ ಮೋಹನ್ ಯಾದವ್ ಇರಲಿಲ್ಲ. ಆದರೆ, ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಘಕ್ಕೆ (ಆರ್‌ಎಸ್‌ಎಸ್) ಬಹಳ ಹತ್ತಿರ. ಜೊತೆಗೆ, ಇತರ ಹಿಂದುಳಿದ ವರ್ಗಗಳ ಪ್ರಭಾವಿ ನಾಯಕರೂ ಆಗಿದ್ದಾರೆ.

ಮೋಹನ್ ಯಾದವ್ ಅವರನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡುವ ಮೂಲಕ ಬಿಜೆಪಿಯು ನಾಲ್ಕನೇ ಬಾರಿ ಒಬಿಸಿ ನಾಯಕರಲ್ಲಿ ತನ್ನ ವಿಶ್ವಾಸ ಇರಿಸಿದಂತಾಗಿದೆ.

2003ರಲ್ಲಿ ಉಮಾ ಭಾರತಿ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ್ದ ಬಿಜೆಪಿ, ನಂತರ ಬಾಬುಲಾಲ್ ಗೌರ್ ಹಾಗೂ ಚೌಹಾಣ್ ಅವರಿಗೆ ಮಣೆ ಹಾಕಿತ್ತು.

ಹಕ್ಕು ಮಂಡನೆ: ಬಿಜೆಪಿ ಶಾಸಕಾಂಗ ಪಕ್ಷದ ಸಭೆ ಮುಗಿದ ನಂತರ, ನಿಯೋಜಿತ ಮುಖ್ಯಮಂತ್ರಿ ಮೋಹನ್ ಯಾದವ್ ಅವರು ರಾಜಭವನಕ್ಕೆ ತೆರಳಿದರು.

ರಾಜ್ಯಪಾಲರಾದ ಮಂಗೂಭಾಯ್ ಪಟೇಲ್ ಅವರನ್ನು ಭೇಟಿ ಮಾಡಿ, ಸರ್ಕಾರ ರಚನೆಗೆ ಹಕ್ಕು ಮಂಡಿಸಿದರು. ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ವಿ.ಡಿ.ಶರ್ಮಾ, ಕೇಂದ್ರದ ವೀಕ್ಷಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ರಾಜೀನಾಮೆ: ನೂತನ ಮುಖ್ಯಮಂತ್ರಿ ಸ್ಥಾನಕ್ಕೆ ಪಕ್ಷವು ಮೋಹನ್ ಯಾದವ್ ಅವರನ್ನು ಆಯ್ಕೆ ಮಾಡಿದ ಬೆನ್ನಲ್ಲೇ, ರಾಜಭವನಕ್ಕೆ ತೆರಳಿದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ರಾಜ್ಯಪಾಲರಾದ ಮಂಗೂಭಾಯ್ ಪಟೇಲ್ ಅವರಿಗೆ ತಮ್ಮ ರಾಜೀನಾಮೆ ಪತ್ರ ಸಲ್ಲಿಸಿದರು.

ಮಧ್ಯಪ್ರದೇಶ ರಾಜ್ಯಪಾಲ ಮಂಗೂಭಾಯ್ ಪಟೇಲ್ ಅವರು ನಿಯೋಜಿತ ಮುಖ್ಯಮಂತ್ರಿ ಮೋಹನ್ ಯಾದವ್ ಅವರನ್ನು ಸೋಮವಾರ ಅಭಿನಂದಿಸಿದರು. ಬಿಜೆಪಿ ನಾಯಕರಾದ ಕೈಲಾಶ್ ವಿಜಯವರ್ಗೀಯ, ನರೇಂದ್ರ ಸಿಂಗ್ ತೋಮರ್, ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್, ಮನೋಹರ ಲಾಲ್ ಖಟ್ಟರ್ ಸೇರಿ ಇತರರು ಇದ್ದರು —ಪಿಟಿಐ ಚಿತ್ರ

'ಜನರ ನಿರೀಕ್ಷೆಗೆ ತಕ್ಕಂತೆ ಕೆಲಸ'

'ರಾಜ್ಯದ ಜನರು ಅಪಾರ ನಿರೀಕ್ಷೆ ಹೊಂದಿದ್ದಾರೆ. ಅವರ ನಿರೀಕ್ಷೆಗಳನ್ನು ಪೂರೈಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುವೆ' ಎಂದು ನಿಯೋಜಿತ ಮುಖ್ಯಮಂತ್ರಿ ಮೋಹನ್ ಯಾದವ್ ಸೋಮವಾರ ಹೇಳಿದರು.

ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ರಾಜ್ಯದ ಜನರು ಭಾರಿ ಬಹುಮತದೊಂದಿಗೆ ಬಿಜೆಪಿ ಗೆಲ್ಲಿಸಿದ್ದಾರೆ. ಈಗ, ಪಕ್ಷವು ಸಾಮಾನ್ಯ ಕಾರ್ಯಕರ್ತನಿಗೆ ದೊಡ್ಡ ಜವಾಬ್ದಾರಿ ನೀಡಿದೆ. ಹೀಗಾಗಿ, ಜನರು ಹಾಗೂ ಪಕ್ಷದ ನಿರೀಕ್ಷೆಗೆ ತಕ್ಕಂತೆ ಕೆಲಸ ಮಾಡುವೆ' ಎಂದರು.

ತೋಮರ್ ಸ್ಪೀಕರ್; ಇಬ್ಬರು ಡಿಸಿಎಂ

'ಬಿಜೆಪಿಯು ಮಧ್ಯಪ್ರದೇಶ ವಿಧಾನಸಭೆ ನೂತನ ಸ್ಪೀಕರ್ ಸ್ಥಾನಕ್ಕೆ ಹಿರಿಯ ನಾಯಕ ನರೇಂದ್ರ ಸಿಂಗ್ ತೋಮರ್ ಅವರನ್ನು ಆಯ್ಕೆ ಮಾಡಿದೆ' ಎಂದು ಪಕ್ಷದ ಮುಖಂಡ ಹಾಗೂ ನಿರ್ಗಮಿತ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ.

'ರಾಜ್ಯವು ಇಬ್ಬರು ಉಪಮುಖ್ಯಮಂತ್ರಿಗಳನ್ನು ಹೊಂದಲಿದೆ. ರಾಜೇಂದ್ರ ಶುಕ್ಲಾ ಹಾಗೂ ಜಗದೀಶ್ ದೇವ್ಡಾ ಅವರನ್ನು ಉಪಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಹಿಂದುತ್ವದ ಪ್ರಖರ ಪ್ರತಿಪಾದಕನಿಗೆ ಮಣೆ

ಭೋಪಾಲ್(ಪಿಟಿಐ): ಮಧ್ಯಪ್ರದೇಶದ ಐತಿಹಾಸಿಕ ನಗರ ಉಜ್ಜೈನಿ ಮಹಾಕಾಲೇಶ್ವರ ದೇವಸ್ಥಾನದಿಂದ ಪ್ರಸಿದ್ಧಿ. ಕಳೆದ ವರ್ಷ ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿ, ಮಹಾಕಾಲ ಲೋಕ ಕಾರಿಡಾರ್ ನಿರ್ಮಿಸಲಾಗಿತ್ತು. ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷ ಈ ಕಾರಿಡಾರ್ ಲೋಕಾರ್ಪಣೆ ಮಾಡಿದ ನಂತರ ಉಜ್ಜೈನಿ ನಗರ ದೇಶದ ಗಮನವನ್ನೇ ಸೆಳೆದಿತ್ತು.

ಸೋಮವಾರ ನಡೆದ ರಾಜಕೀಯ ಬೆಳವಣಿಗೆಯಿಂದಾಗಿಯೂ ಈ ನಗರ ಮತ್ತೊಮ್ಮೆ ದೇಶದ ಗಮನ ಸೆಳೆದಿದೆ. ಈ ನಗರವನ್ನು ಪ್ರತಿನಿಧಿಸುವ ಶಾಸಕ, 58 ವರ್ಷದ ಮೋಹನ್ ಯಾದವ್, ಮಧ್ಯಪ್ರದೇಶದ ನೂತನ ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿಯಾಗಿ ಆಯ್ಕೆಯಾಗಿರುವುದೇ ಇದಕ್ಕೆ ಕಾರಣ.

ಮತ್ತೊಂದೆಡೆ, ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಜಾತಿ ಗಣತಿ ವಿಷಯವನ್ನು ವಿರೋಧ ಪಕ್ಷಗಳ ಒಕ್ಕೂಟ 'ಇಂಡಿಯಾ' ಪ್ರಬಲ ಅಸ್ತ್ರವನ್ನಾಗಿ ಮಾಡುವ ಸಾಧ್ಯತೆ ಇರುವ ಕಾರಣದಿಂದಾಗಿಯೂ, ಮೋಹನ್ ಅವರ ಆಯ್ಕೆ ಮಹತ್ವ ಪಡೆದಿದೆ.

2020ರಲ್ಲಿ ಬದಲಾದ ರಾಜಕೀಯ ಸನ್ನಿವೇಶದಿಂದಾಗಿ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಾಗ, ಮೋಹನ್ ಯಾದವ್ ಅವರು ಉನ್ನತ ಶಿಕ್ಷಣ ಸಚಿವರಾಗಿದ್ದರು. ಆಗ, ಧಾರ್ಮಿಕ ಮಹಾಕಾವ್ಯ 'ರಾಮಚರಿತಮಾನಸ' ವನ್ನು ಕಾಲೇಜು ಶಿಕ್ಷಣದಲ್ಲಿ ಐಚ್ಛಿಕ ವಿಷಯವನ್ನಾಗಿ ಮಾಡುವುದಾಗಿ ಘೋಷಿಸಿ, ಗಮನ ಸೆಳೆದಿದ್ದರು.

ಕಾಲೇಜು ದಿನಗಳಿಂದಲೂ ಪ್ರಖರ ಹಿಂದುತ್ವ ಪ್ರತಿಪಾದಕರಾಗಿರುವ ಮೋಹನ್, ಸಹಜವಾಗಿಯೇ ಆರ್‌ಎಸ್‌ಎಸ್ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದಾರೆ. ಪ್ರಮುಖ ಒಬಿಸಿ ನಾಯಕರಾಗಿಯೂ ಗುರುತಿಸಿಕೊಂಡಿದ್ದಾರೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಒಬಿಸಿಗಳ ಪ್ರಮಾಣ ಶೇ 48ಕ್ಕೂ ಅಧಿಕ.

ಶಿಕ್ಷಣ–ನಾಯಕತ್ವ ಗುಣ: ಉಜ್ಜೈನಿಯ ಮಾಧವ ವಿಜ್ಞಾನ ಕಾಲೇಜಿನ ವಿದ್ಯಾರ್ಥಿ ಸಂಘದ ಜಂಟಿ ಕಾರ್ಯದರ್ಶಿಯಾಗಿ 1982ರಲ್ಲಿ ಆಯ್ಕೆಯಾದ ಮೋಹನ್, 1984ರಲ್ಲಿ ಸಂಘದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು.

ಪದವಿ ನಂತರ ಎಲ್‌ಎಲ್‌ಬಿ ಹಾಗೂ ಎಂಬಿಎ ಪದವಿ ಪಡೆದಿರುವ ಅವರು, ಪಿಎಚ್.ಡಿ ಪದವಿಯನ್ನೂ ಪಡೆದಿದ್ದಾರೆ. 1993ರಿಂದ 1995ರ ವರೆಗೆ ಆರ್‌ಎಸ್‌ಎಸ್‌ನ ಉಜ್ಜೈನಿ ಘಟಕದ ಪದಾಧಿಕಾರಿಯಾಗಿದ್ದರು.

ವಿಧಾನಸಭೆ ಪ್ರವೇಶ: ಉಜ್ಜೈನಿ ದಕ್ಷಿಣ ಕ್ಷೇತ್ರದಿಂದ 2013ರಲ್ಲಿ ಗೆದ್ದು, ಮೊದಲ ಬಾರಿಗೆ ವಿಧಾನಸಭೆ ಪ್ರವೇಶಿಸಿದ ಮೋಹನ್, 2018 ಹಾಗೂ 2023ರಲ್ಲಿಯೂ ಗೆಲ್ಲುವ ಮೂಲಕ ಕ್ಷೇತ್ರದ ಮೇಲಿನ ತಮ್ಮ ಹಿಡಿತವನ್ನು ಸಾಬೀತುಪಡಿಸಿದ್ದಾರೆ.

2011ರಿಂದ 2013ರ ವರೆಗಿನ ಅವಧಿಯಲ್ಲಿ ಮಧ್ಯಪ್ರದೇಶ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಧರಣಿ, ಪ್ರತಿಭಟನೆ ನಿಷೇಧ: ಜೆಎನ್‌ಯು

ನವದೆಹಲಿ (ಪಿಟಿಐ): ಜವಹರಲಾಲ್ ನೆಹರೂ ವಿಶ್ವವಿದ್ಯಾಲಯವು (ಜೆಎನ್‌ಯು) ತನ್ನ ವ್ಯಾಪ್ತಿಯ ಶೈಕ್ಷಣಿಕ ಕಟ್ಟಡಗಳ 100 ಮೀಟರ್ ವ್ಯಾಪ್ತಿಯಲ್ಲಿ ಭಿತ್ತಿಪತ್ರ ಅಂಟಿಸುವುದು, ಧರಣಿ ನಡೆಸುವುದನ್ನು ನಿಷೇಧಿಸಿದೆ. ಈ ಕುರಿತ ನಿಯಮಗಳನ್ನು ಪರಿಷ್ಕರಿಸಿದೆ.

ಆ ಪ್ರಕಾರ, ನಿಯಮಗಳ ಉಲ್ಲಂಘನೆ ಆದರೆ ₹ 20,000ರವರೆಗೆ ದಂಡ ವಿಧಿಸಲು ಹಾಗೂ ಉಚ್ಚಾಟನೆ ಮಾಡಲು ಅವಕಾಶವಿದೆ. 'ದೇಶ ವಿರೋಧಿ' ಕೃತ್ಯಗಳಲ್ಲಿ ಭಾಗಿಯಾದರೆ ₹ 10 ಸಾವಿರವರೆಗೂ ದಂಡ ವಿಧಿಸಲೂ ಅವಕಾಶವಿದೆ.

ವಿ.ವಿ. ಉಲ್ಲೇಖಿಸಿರುವ ಶೈಕ್ಷಣಿಕ ಕಟ್ಟಡಗಳಲ್ಲಿ ವಿವಿಧ ವಿಭಾಗಗಳು, ವಿಭಾಗಗಳ ಮುಖ್ಯಸ್ಥರು, ಡೀನ್‌ಗಳು ಮತ್ತು ಇತರೆ ಪ್ರಮುಖ ಅಧಿಕಾರಿಗಳ ಕಚೇರಿಗಳು ಹಾಗೂ ತರಗತಿ ಕೊಠಡಿಗಳು, ಪ್ರಯೋಗಾಲಯ ಕೊಠಡಿಗಳು ಸೇರಿವೆ.

ಇದುವರೆಗೂ ಕುಲಪತಿ, ಕುಲಸಚಿವರು, ಸಿಪಿಒ ಕಚೇರಿಗಳಿದ್ದ ಆಡಳಿತಾತ್ಮಕ ಕಚೇರಿ ಸಂಕೀರ್ಣದ 100 ಮೀಟರ್ ವ್ಯಾಪ್ತಿಯಲ್ಲಿ ಧರಣಿ ಪ್ರತಿಭಟನೆ ನಡೆಸುವುದರ ವಿರುದ್ಧ ಹೈಕೋರ್ಟ್‌ನ ಆದೇಶದಂತೆ ನಿಷೇಧ ಹೇರಲಾಗಿತ್ತು.

2020–21ನೇ ಸಾಲಿನ ಎಂಬಿಬಿಎಸ್ ಅಭ್ಯರ್ಥಿಗಳಿಗೆ ಮತ್ತೊಂದು ಅವಕಾಶ

ನವದೆಹಲಿ (ಪಿಟಿಐ): 2020–21ನೇ ಶೈಕ್ಷಣಿಕ ವರ್ಷದಲ್ಲಿ ಎಂಬಿಬಿಎಸ್ ಪದವಿ ಕೋರ್ಸ್‌ಗೆ ಪ್ರವೇಶ ಪಡೆದಿದ್ದು, ತೇರ್ಗಡೆಗೊಳ್ಳದ ಅಭ್ಯರ್ಥಿಗಳಿಗೆ ಇನ್ನೊಂದು ಅವಕಾಶ ನೀಡಲು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ತೀರ್ಮಾನಿಸಿದೆ.

'ಆ ಶೈಕ್ಷಣಿಕ ವರ್ಷದ ಅನುತ್ತೀರ್ಣ ಅಭ್ಯರ್ಥಿಗಳಿಗೆ ಅನ್ವಯಿಸಿ ಇನ್ನೊಂದು ಅವಕಾಶ (5ನೇ ಯತ್ನ) ನೀಡಲಾಗುವುದು. ಆ ವರ್ಷದ ಅಭ್ಯರ್ಥಿಗಳ ಶೈಕ್ಷಣಿಕ ವರ್ಷದ ಕಲಿಕೆಯು ಕೋವಿಡ್ ಕಾರಣದಿಂದ ಬಾಧಿತವಾಗಿತ್ತು' ಎಂದು ಎನ್‌ಎಂಸಿ ಹೇಳಿಕೆಯಲ್ಲಿ ತಿಳಿಸಿದೆ.

'ಇದು, ಒಂದು ಬಾರಿಯ ಅವಕಾಶ ಮಾತ್ರ. ಭವಿಷ್ಯದಲ್ಲಿನ ಯಾವುದೇ ಕ್ರಮಗಳಿಗೆ ನಿದರ್ಶನವಾಗಿ ಪರಿಗಣಿಸಲಾಗದು' ಎಂದು ಆಯೋಗವು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದೆ.

ಸಿ.ಎಂ ಸೊರೇನ್‌ಗೆ ಇ.ಡಿ ಸಮನ್ಸ್

ರಾಂಚಿ (ಪಿಟಿಐ): ಜಮೀನು ಹಗರಣದಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಪ್ರಕರಣ ಸಂಬಂಧ ಮಂಗಳವಾರ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿ ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸೋಮವಾರ ಹೊಸದಾಗಿ ಸಮನ್ಸ್ ಜಾರಿ ಮಾಡಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಮಂಗಳವಾರ ರಾಂಚಿಯ 'ಹಿನೂ'ನಲ್ಲಿರುವ ಪ್ರಾದೇಶಿಕ ಕಚೇರಿಗೆ ಹಾಜರಾಗಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ ಹೇಳಿಕೆ ದಾಖಲಿಸುವಂತೆ ಸೂಚಿಸಲಾಗಿದೆ

'ವಿಕಸಿತ ಭಾರತ@2047:ಯುವ ಜನತೆಯ ಧ್ವನಿ' ಉಪಕ್ರಮಕ್ಕೆ ಪ್ರಧಾನಿ ಮೋದಿ ಚಾಲನೆ

'ನಾಯಕತ್ವ ಒದಗಿಸಲು ಯುವ ಪೀಳಿಗೆ ಸಿದ್ಧವಾಗಲಿ'

ನವದೆಹಲಿ(ಪಿಟಿಐ): ಯುವ ಪೀಳಿಗೆ ದೇಶಕ್ಕೆ ನಾಯಕತ್ವ ಒದಗಿಸಲು ಸಿದ್ಧವಾಗಬೇಕು. ಜೊತೆಗೆ, ಯಾವುದೇ ವಿಚಾರಕ್ಕಿಂತಲೂ ರಾಷ್ಟ್ರೀಯ ಹಿತಾಸಕ್ತಿಯೇ ಅವರ ಆದ್ಯತೆಯಾಗಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸೋಮವಾರ ಹೇಳಿದರು.

'ಸದ್ಯದ ಅವಧಿಯು ಭಾರತದ ಪಾಲಿಗೆ ಅಮೃತ ಕಾಲ. ಇಂತಹ ಮಹತ್ವದ ಅವಧಿಯಲ್ಲಿಯೇ ದೇಶವೊಂದು ಸರ್ವಾಂಗೀಣ ಪ್ರಗತಿಯತ್ತ ಹೆಜ್ಜೆ ಹಾಕುವ ಅವಕಾಶ ಸಿಗುತ್ತದೆ. ಅಂತಹ ಅದ್ಭುತ ಅವಕಾಶ ಈಗ ಭಾರತಕ್ಕೆ ಬಂದೊದಗಿದೆ' ಎಂದು ಮೋದಿ ಪ್ರತಿಪಾದಿಸಿದರು.

'ವಿಕಸಿತ ಭಾರತ@2047:-ಯುವ ಜನತೆಯ ಧ್ವನಿ' ಎಂಬ ಉಪಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

'2047ರ ವೇಳೆಗೆ ಭಾರತ ಯಾವ ರೀತಿ ಅಭಿವೃದ್ಧಿ ಸಾಧಿಸಿರಬೇಕು ಎಂಬ ಕುರಿತು ದೇಶದ ಯುವ ಜನತೆ ತಮ್ಮ ವಿಚಾರಗಳನ್ನು ಮಂಡಿಸಲು ಈ ಉಪಕ್ರಮವು ವೇದಿಕೆಯನ್ನು ಒದಗಿಸುತ್ತದೆ' ಎಂದು ಹೇಳಿದ ಅವರು, 'ದೇಶದ ಯುವ ಜನತೆಯು 'ಬದಲಾವಣೆಯ ಪ್ರತಿನಿಧಿ' ಹಾಗೂ 'ಬದಲಾವಣೆಯ ಫಲಾನುಭವಿ'ಯಾಗುವ ಶಕ್ತಿ ಹೊಂದಿದ್ದಾರೆ' ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ರಾಜ್ಯಗಳಲ್ಲಿರುವ ರಾಜಭವನಗಳಲ್ಲಿ ಹಮ್ಮಿಕೊಂಡಿದ್ದ ಕಾರ್ಯಾಗಾರದಲ್ಲಿ ಪಾಲ್ಗೊಂಡಿದ್ದ ವಿಶ್ವವಿದ್ಯಾಲಯಗಳ ಕುಲಪತಿಗಳು, ಶಿಕ್ಷಣ ಸಂಸ್ಥೆಗಳು ಮುಖ್ಯಸ್ಥರು ಹಾಗೂ ಬೋಧಕ ಸಿಬ್ಬಂದಿಯನ್ನು ಉದ್ದೇಶಿಸಿ ಅವರು ವರ್ಚುವಲ್ ಆಗಿ ಮಾತನಾಡಿದರು.

'ನಾವು ಎದುರಿಸಬೇಕಾದ ಪರೀಕ್ಷೆಯ ದಿನಾಂಕವನ್ನು ಘೋಷಿಸಿಯಾಗಿದೆ. ನಮ್ಮ ಮುಂದೆ ಅಮೃತ ಕಾಲದ 25 ವರ್ಷಗಳೂ ಇವೆ. ಈ ಅವಧಿಯಲ್ಲಿ ದಿನದ 24 ಗಂಟೆಯೂ ನಾವು ಕಾರ್ಯ ನಿರ್ವಹಿಸಬೇಕು. ದೇಶಕ್ಕೆ ನಾಯಕತ್ವ ಒದಗಿಸುವಂತಹ ಹಾಗೂ ಅವರ ಆದ್ಯತೆಯು ರಾಷ್ಟ್ರೀಯ ಹಿತಾಸಕ್ತಿಯೇ ಆಗಿರುವಂತಹ ಯುವ ಸಮುದಾಯವನ್ನು ಸಿದ್ಧಗೊಳಿಸುವ ಜವಾಬ್ದಾರಿ ನಮ್ಮ ಮೇಲಿದೆ' ಎಂದು ಹೇಳಿದರು.

'ದೇಶದಲ್ಲಿ ಯುವ ಜನತೆಯ ಸಂಖ್ಯೆ ದೊಡ್ಡದಿದೆ. ಅದರಲ್ಲೂ, 25–30 ವರ್ಷ ವಯೋಮಾನವನ್ನು ದುಡಿಯುವ ವಯಸ್ಸು ಎಂದು ವಿಶ್ವ ಮಟ್ಟದಲ್ಲಿ ಗುರುತಿಸಲಾಗುತ್ತದೆ. ಈ ವಿಚಾರದಲ್ಲಿಯೂ ಭಾರತವು ಮುಂದಾಳತ್ವ ವಹಿಸಲಿದೆ' ಎಂದರು.

ಮೋದಿ ಭಾಷಣದ ಪ್ರಮುಖಾಂಶಗಳು

- ದೇಶದ ಅಭಿವೃದ್ಧಿಗಾಗಿ ರೂಪಿಸಿದ ಕಾರ್ಯಯೋಜನೆ ಹಾಗೂ ಯುವ ಜನತೆ ಮಧ್ಯೆ ಸಂಪರ್ಕ ಬೆಳೆಸಬೇಕು. ಈ ವಿಚಾರವಾಗಿ ವಿಶ್ವವಿದ್ಯಾಲಯಗಳು ಹಾಗೂ ಬೋಧಕರು ಚಿಂತನೆ ನಡೆಸಬೇಕು
- ಶಿಕ್ಷಣ ಸಂಸ್ಥೆಗಳು ಯುವ ಜನತೆ ಜೊತೆ ಹೆಚ್ಚು ಸಂಪರ್ಕ ಹೊಂದಿರುತ್ತವೆ. ಹೀಗಾಗಿ, ದೇಶದ ಅಭಿವೃದ್ಧಿಗಾಗಿ ಅವರ ಆಲೋಚನೆಗಳಿಗೆ ರೂಪ ಕೊಡುವ ಕೆಲಸ ಶಿಕ್ಷಣ ಸಂಸ್ಥೆಗಳಿಂದಾಗಬೇಕು
- ಸಾರ್ವಜನಿಕ ಸಹಭಾಗಿತ್ವದಿಂದ ದೊಡ್ಡ ಕಾರ್ಯಗಳನ್ನು ಸುಲಭವಾಗಿ ಸಾಧಿಸಬಹುದು. ಸ್ವಚ್ಛ ಭಾರತ ಅಭಿಯಾನ, ಡಿಜಿಟಲ್ ಇಂಡಿಯಾ, ಕೋವಿಡ್ ಪಿಡುಗನ್ನು ದೇಶ ಗೆದ್ದಿರುವುದು ಇದಕ್ಕೆ ನಿದರ್ಶನ
- 'ವಿಕಸಿತ ಭಾರತ@2047:ಯುವ ಜನತೆಯ ಧ್ವನಿ' ಉಪಕ್ರಮವು ದೇಶದ ಆರ್ಥಿಕ ಪ್ರಗತಿ, ಸಾಮಾಜಿಕ ಪ್ರಗತಿ, ಸುಸ್ಥಿರ ಪರಿಸರ ಹಾಗೂ ಉತ್ತಮ ಆಡಳಿತದಂತಹ ಅಂಶಗಳನ್ನು ಒಳಗೊಂಡಿದೆ

'ವಿಕಸಿತ ಭಾರತ' ಸಲಹೆಗಳಿಗೆ ಆಹ್ವಾನ

- ಈ ಉಪಕ್ರಮ ಕುರಿತು ದೇಶದ ಪ್ರತಿಯೊಂದು ಕಾಲೇಜು ಹಾಗೂ ವಿಶ್ವವಿದ್ಯಾಲಯ ವಿಶೇಷ ಪ್ರಚಾರೋಂದಲನ ನಡೆಸಬೇಕು
- ವಿಕಸಿತ ಭಾರತ ಉಪಕ್ರಮದ ಪೋರ್ಟಲ್‌ನಲ್ಲಿ ಯುವ ಜನತೆ ತಮ್ಮ ವಿಚಾರಗಳನ್ನು, ಸಲಹೆ–ಸೂಚನೆಗಳನ್ನು ಹಂಚಿಕೊಳ್ಳುವಂತೆ ಪ್ರೋತ್ಸಾಹಿಸಬೇಕು
- ಐದು ಬೇರೆ ಬೇರೆ ವಿಷಯಗಳು ಕುರಿತು ಸಲಹೆಗಳು/ ವಿಚಾರಗಳನ್ನು ಹಂಚಿಕೊಳ್ಳಬೇಕು
- ಆಯ್ದ 10 ಅತ್ಯುತ್ತಮ ಸಲಹೆಗಳಿಗೆ ಬಹುಮಾನ ನೀಡಲಾಗುತ್ತದೆ
- MyGov ಪೋರ್ಟಲ್ ಮೂಲಕವೂ ಯುವ ಸಮುದಾಯ ತಮ್ಮ ಸಲಹೆಗಳನ್ನು ನೀಡಬಹುದು

ಟಿ20 ಕ್ರಿಕೆಟ್: ಭಾರತ–ದಕ್ಷಿಣ ಆಫ್ರಿಕಾ ನಡುವಿನ 2ನೇ ಪಂದ್ಯಕ್ಕೂ ಮಳೆ ಭೀತಿ

ಯುವಪಡೆಗೆ ಸೀಮಿತ ಅವಕಾಶ

ಗೆಬೆರ್ಹಾ (ದಕ್ಷಿಣ ಆಫ್ರಿಕಾ), (ಪಿಟಿಐ): ಮೊದಲ ಬಾರಿ ಭಾರತ ತಂಡದೊಡನೆ ದಕ್ಷಿಣ ಆಫ್ರಿಕಾ ಪ್ರವಾಸಕ್ಕೆ ತೆರಳಿರುವ ಯುವ ಆಟಗಾರರಿಗೆ ತಮ್ಮ ಸಾಮರ್ಥ್ಯ ಪ್ರದರ್ಶನಕ್ಕೆ ಈಗ ಸೀಮಿತ ಅವಕಾಶಗಳಷ್ಟೇ ಇವೆ. ಡರ್ಬನ್‌ನ ಕಿಂಗ್ಸ್‌ಮೀಡ್‌ನಲ್ಲಿ ಭಾನುವಾರ ಮೊದಲ ಟಿ20 ಪಂದ್ಯ ಮಳೆಗೆ ಕೊಚ್ಚಿಹೋಗಿದ್ದು, ಮಂಗಳವಾರ ಎರಡನೇ ಪಂದ್ಯವಾದರೂ ನಡೆಯಲಿ ಎಂದು ಹಾರೈಸಬೇಕಾಗಿದೆ.

ಆದರೆ ಮೂರು ಪಂದ್ಯಗಳ ಸರಣಿಯ ಈ ಪಂದ್ಯಕ್ಕೂ ಮಳೆಯಾಗಬಹುದೆಂಬ ಮುನ್ಸೂಚನೆಯಿದೆ. ಬರುವ ಜೂನ್‌ನಲ್ಲಿ ನಡೆಯುವ ಟಿ20 ವಿಶ್ವಕಪ್‌ಗೆ ಮೊದಲು ಭಾರತಕ್ಕೆ ಒಟ್ಟು ಐದು ಚುಟುಕು ಕ್ರಿಕೆಟ್ ಪಂದ್ಯಗಳಷ್ಟೇ ಆಡಲು ಇದೆ.

ಭಾರತ ತಂಡದ ಯಶಸ್ವಿ ಜೈಸ್ವಾಲ್ ಮತ್ತು ರಿಂಕು ಸಿಂಗ್ –ಎಎಫ್‌ಪಿ ಚಿತ್ರ

ಹೀಗಾಗಿ ತಂಡದ ಆಯ್ಕೆ ಪ್ರಕ್ರಿಯೆಯಲ್ಲಿರುವ 'ಚಿಂತಕರ ಚಾವಡಿ'ಯ ಮುಂದೆ ಸವಾಲು ಇದೆ.

ಜನವರಿಯಲ್ಲಿ ಅಫ್ಗಾನಿಸ್ತಾನ ವಿರುದ್ಧ ಭಾರತ ತಂಡ ಮೂರು ಟಿ20 ಪಂದ್ಯಗಳನ್ನು ಆಡಬೇಕಿದೆ. ಹೀಗಾಗಿ ಪ್ರಸಕ್ತ ಸನ್ನಿವೇಶದಲ್ಲಿ ಐಪಿಎಲ್‌ಗೂ ಮಹತ್ವ ಬರಲಿದೆ. ಅಲ್ಲಿ ಆಟಗಾರರ ಫಾರ್ಮ್, ದೈಹಿಕ ಕ್ಷಮತೆ ನೋಡಿಕೊಂಡು ವೆಸ್ಟ್ ಇಂಡೀಸ್– ಅಮೆರಿಕದಲ್ಲಿ ನಡೆಯುವ ವಿಶ್ವಕಪ್‌ಗೆ ತಂಡ ರೂಪಿಸಬೇಕಾಗುತ್ತದೆ.

ಈ ಪ್ರವಾಸಕ್ಕೆ 17 ಆಟಗಾರರ ತಂಡ ಆಯ್ಕೆ ಮಾಡಲಾಗಿತ್ತು. ಆದರೆ ಈಗ ಎರಡೇ ಪಂದ್ಯ ಉಳಿದಿರುವ ಕಾರಣ ಎಲ್ಲರಿಗೂ ಅವಕಾಶ ಸಿಗುವ ಸಾಧ್ಯತೆ ಕ್ಷೀಣವಾಗಿದೆ. ಈಗ ಇರುವ ಆಟಗಾರರಲ್ಲಿ ಶುಭಮನ್ ಗಿಲ್, ಸೂರ್ಯಕುಮಾರ್ ಯಾದವ್ ಮತ್ತು ರಿಂಕು ಸಿಂಗ್ ಅವರು ಬ್ಯಾಟರ್‌ಗಳಾಗಿ ವಿಶ್ವಕಪ್ ತಂಡಕ್ಕೆ ಆಯ್ಕೆಯಾಗುವುದು ಬಹುತೇಕ ಖಚಿತ. ಗಿಲ್ ಅವರು ಆಸ್ಟ್ರೇಲಿಯಾ ವಿರುದ್ಧ ತವರಿನಲ್ಲಿ ನಡೆದ ಸರಣಿಗೆ ವಿಶ್ರಾಂತಿ ಪಡೆದಿದ್ದು, ಸೂರ್ಯಕುಮಾರ್ ಯಾದವ್ ತಂಡ ಮುನ್ನಡೆಸಿದ್ದರು.

ಯಶಸ್ವಿ ಜೈಸ್ವಾಲ್ ಮತ್ತು ಋತುರಾಜ ಗಾಯಕವಾಡ್ ಅವರು ಸಾಕಷ್ಟು ರನ್ ಗಳಿಸಿದ್ದಾರೆ. ಆದರೆ ವಿಶ್ವಕಪ್‌ಗೆ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಲಭ್ಯರಿರುವುದಾದರೆ ಯುವ ಆಟಗಾರರಿಗೆ ಸ್ಥಾನ ಸಿಗುವುದು ಕಷ್ಟ. ಐಪಿಎಲ್‌ನಲ್ಲಿ ಅಮೋಘ ಪ್ರದರ್ಶನ ನೀಡಿ ಆಯ್ಕೆಗಾರರೆದುರು ಸಾಮರ್ಥ್ಯ ತೋರುವ ಸವಾಲು ಅವರ ಮುಂದಿರಲಿದೆ.

ರಿಂಕು ಅವರಂತೆ ಜೀತೇಶ್ ಅವರೂ ಚುಟುಕು ಕ್ರಿಕೆಟ್‌ನಲ್ಲಿ 'ಫಿನಿಷರ್' ಪಾತ್ರ ನಿರ್ವಹಿಸಿದ್ದಾರೆ. ದಕ್ಷಿಣ ಆಫ್ರಿಕಾ ವಿರುದ್ಧ ಆಡುವ ಅವಕಾಶ ಸಿಗಬಹುದೆಂಬ ವಿಶ್ವಾಸ ದಲ್ಲಿ ಅವರಿದ್ದಾರೆ.

ದಕ್ಷಿಣ ಆಫ್ರಿಕಾ ಪಿಚ್‌ಗಳಲ್ಲಿ ಚೆಂಡು ಹೆಚ್ಚು ಪುಟಿದೇಳುವುದರಿಂದ ಯುವ ಬ್ಯಾಟರ್‌ಗಳಿಗೆ ಸವಾಲಾಗಲಿದೆ. ಬೌಲಿಂಗ್ ವಿಭಾಗದಲ್ಲಿ ಅರ್ಷದೀಪ್ ಮತ್ತು ಬೂಮ್ರಾ ಅವರು ಆಯ್ಕೆಯಾಗಬಹುದು. ಈ ಸರಣಿಯಲ್ಲಿ ಬೂಮ್ರಾ ಆಡುತ್ತಿಲ್ಲ. ದೀಪಕ್ ಚಾಹರ್ ವೈಯಕ್ತಿಕ ಕಾರಣಗಳಿಂದ ತಂಡ ಸೇರಿಕೊಂಡಿಲ್ಲ. ಸ್ಪಿನ್ನರ್‌ಗಳಾದ ಕುಲದೀಪ್ ಸಿಂಗ್ ಮತ್ತು ರವಿ ಬಿಷ್ಣೋಯಿ ಇಬ್ಬರೂ ಆಸ್ಟ್ರೇಲಿಯಾ ವಿರುದ್ಧ ಗಮನ ಸೆಳೆದಿದ್ದಾರೆ.

ಭಾರತದ ರೀತಿಯಲ್ಲೇ ದಕ್ಷಿಣ ಆಫ್ರಿಕಾ ತಂಡಕ್ಕೂ, ವಿಶ್ವಕಪ್‌ಗೆ ಮುನ್ನ ಐದೇ ಟಿ20 ಪಂದ್ಯಗಳು ಉಳಿದಿವೆ.

ತಂಡಗಳು

ಭಾರತ: ಸೂರ್ಯಕುಮಾರ್ ಯಾದವ್, ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್, ಋತುರಾಜ ಗಾಯಕ ವಾಡ್, ತಿಲಕ್ ವರ್ಮಾ, ರಿಂಕು ಸಿಂಗ್, ಶ್ರೇಯಸ್ ಅಯ್ಯರ್, ಇಶಾನ್ ಕಿಶನ್, ಜೀತೇಶ್ ಶರ್ಮಾ (ವಿಕೆಟ್ ಕೀಪರ್), ರವೀಂದ್ರ ಜಡೇಜಾ (ಉಪನಾಯಕ), ವಾಷಿಂಗ್ಟನ್ ಸುಂದರ್, ರವಿ ಬಿಷ್ಣೋಯಿ, ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್, ಮೊಹಮ್ಮದ್ ಸಿರಾಜ್, ಮುಕೇಶ್ ಕುಮಾರ್, ದೀಪಕ್ ಚಾಹರ್.

ದಕ್ಷಿಣ ಆಫ್ರಿಕಾ: ಏಡನ್ ಮರ್ಕರಂ (ನಾಯಕ), ಬಾರ್ಟ್‌ಮನ್, ಮ್ಯಾಥ್ಯೂ ಬ್ರೀಟ್ಝ್ಕೆ, ನಾಂಡ್ರೆ ಬರ್ಗರ್, ಜೆರಾಲ್ಡ್ ಕೋಝಿ, ಡೊನವನ್ ಫೆರೀರಾ, ರೀಝಾ ಹೆಂಡ್ರಿಕ್ಸ್, ಮಾರ್ಕೊ ಜಾನ್ಸೆನ್, ಹೆನ್ರಿಚ್ ಕ್ಲಾಸೆನ್, ಕೇಶವ ಮಹಾರಾಜ್, ಡೇವಿಡ್ ಮಿಲ್ಲರ್, ಆ್ಯಂಡಿಲೆ ಪಿಶುವಾಹೊ, ತಬ್ರೇಜ್ ಶಂಶಿ, ಟ್ರಿಸ್ಟಾನ್ ಸ್ಟಬ್ಸ್ ಮತ್ತು ಲಿಝಾರ್ಡ್ ವಿಲಿಯಮ್ಸ್.

ಪಂದ್ಯ ಆರಂಭ: ರಾತ್ರಿ 8.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ವೈಶಾಖ ಮಿಂಚು: ಸೆಮಿಗೆ ಕರ್ನಾಟಕ

ವಿಜಯ್ ಹಜಾರೆ ಟ್ರೋಫಿ; ಮಯಂಕ್ ಪಡೆಗೆ ಮುಂದೆ ರಾಜಸ್ಥಾನ ಸವಾಲು

ರಾಜ್‌ಕೋಟ್: ವೈಶಾಖ ವಿಜಯಕುಮಾರ್ ಅವರ ಶಿಸ್ತಿನ ದಾಳಿಯ ನೆರವಿನಿಂದ ಕರ್ನಾಟಕ ತಂಡವು ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆಯ ಎ ಗ್ರೌಂಡ್‌ನಲ್ಲಿ ಸೋಮವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಕರ್ನಾಟಕ ತಂಡವು 7 ವಿಕೆಟ್‌ಗಳಿಂದ ವಿದರ್ಭ ಎದುರು ಜಯಿಸಿತು. ಇದೇ 14ರಂದು ನಡೆಯಲಿರುವ ನಾಲ್ಕರ ಘಟ್ಟದ ಪಂದ್ಯದಲ್ಲಿ ಮಯಂಕ್ ಬಳಗವು ರಾಜಸ್ಥಾನ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದ ಕರ್ನಾಟಕದ ನಾಯಕ ಮಯಂಕ್ ಅಗರವಾಲ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಅವರ ನಿರ್ಧಾರವನ್ನು ಸಮರ್ಥಿಸಿಕೊಂಡ ವೈಶಾಖ (44ಕ್ಕೆ4) ಮತ್ತು ಬೌಲರ್‌ಗಳು ವಿದರ್ಭ ತಂಡವನ್ನು 173 ರನ್‌ಗಳ ಸಾಧಾರಣ ಮೊತ್ತಕ್ಕೆ ಕಟ್ಟಿಹಾಕಿತು.

ಈ ಗುರಿ ಬೆನ್ನಟ್ಟಿದ ಕರ್ನಾಟಕ ತಂಡವು 40.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 177 ರನ್ ಗಳಿಸಿ ಗೆದ್ದಿತು. ಕರ್ನಾಟಕದ ಆರಂಭಿಕ ಜೋಡಿ ಆರ್. ಸಮರ್ಥ್ (ಔಟಾಗದೆ 72, 113ಎ, 4X7) ಮತ್ತು ಮಯಂಕ್ (51; 64ಎ, 4X6, 6X1) ಲಯ ಕಂಡುಕೊಂಡರು. ಮೊದಲ ವಿಕೆಟ್ ಜೊತೆಯಾಟದಲ್ಲಿ 82 ರನ್ ಸೇರಿಸಿದರು.

ವೈಶಾಖ ದಾಳಿ: ವಿದರ್ಭ ತಂಡವನ್ನು ಪ್ರತಿನಿಧಿಸಿರುವ ಕರುಣ್ ನಾಯರ್ ಸೇರಿದಂತೆ ನಾಲ್ಕು ವಿಕೆಟ್ ಕಬಳಿಸಿದ ವೈಶಾಖ ಮಿಂಚಿದರು.

ಕರುಣ್ ಅವರು ಮೂರು ಎಸೆತಗಳಲ್ಲಿ ಐದು ರನ್ ಮಾತ್ರ ಗಳಿಸಿ ಔಟಾದರು. ಅವರನ್ನು ವೈಶಾಖ ಕ್ಲೀನ್ ಬೌಲ್ಡ್ ಮಾಡಿದರು.

ವೈಶಾಖ ವಿಜಯಕುಮಾರ್

ವೈಶಾಖ, ಕೌಶಿಕ್ ಮತ್ತು ಮನೋಜ್ ಅವರ ಸಂಘಟಿತ ದಾಳಿ ಹಾಗೂ ಫೀಲ್ಡರ್‌ಗಳ ಚುರುಕುತನದಿಂದಾಗಿ ವಿದರ್ಭ ತಂಡವು ಆರಂಭಿಕ ಹಂತದಲ್ಲಿಯೇ ಪೆಟ್ಟು ತಿಂದಿತು. ಕೇವಲ 70 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು.

ಆರಂಭಿಕ ಬ್ಯಾಟರ್ ಅಥರ್ವ ತೈಡೆ ಅವರನ್ನು ತಮ್ಮ ಚುರುಕಿನ ಫೀಲ್ಡಿಂಗ್ ಮೂಲಕ ರನ್‌ಔಟ್ ಮಾಡಿದ ಮಯಂಕ್ ಕರ್ನಾಟಕಕ್ಕೆ ಮೊದಲ ಯಶಸ್ಸು ತಂದುಕೊಟ್ಟರು. ಅಮನ್ ನಾಯ್ಕಂಡೆ ಅವರಿಗೆ ಖಾತೆ ತೆರೆಯಲು ವೈಶಾಖ ಅಡ್ಡಿಯಾದರು.

ಹರ್ಷ ದುಬೆ (1 ರನ್) ಕೂಡ ವೈಶಾಖಗೆ ವಿಕೆಟ್ ಒಪ್ಪಿಸಿದರು. ಇನ್ನೊಂದು ಬದಿಯಿಂದ ಕೌಶಿಕ್ ರನ್‌ಗಳಿಗೆ ಕಡಿವಾಣ ಹಾಕಿದರು. ಮನೋಜ್ ಮತ್ತು ಜೆ. ಸುಚಿತ್ ಅವರು ತಲಾ ಎರಡು ವಿಕೆಟ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ವಿದರ್ಭ: 44.5 ಓವರ್‌ಗಳಲ್ಲಿ 173 (ಅಕ್ಷಯ್ ವಾಡ್ಕರ್ 32, ಯಶ್ ಕದಂ 38, ಶುಭಂ ದುಬೆ 41, ದರ್ಶನ್ ನಾಯ್ಕಂಡೆ 20, ವೈಶಾಖ ವಿಜಯಕುಮಾರ್ 44ಕ್ಕೆ4, ಮನೋಜ್ ಬಾಂಢಗೆ 27ಕ್ಕೆ2, ಜೆ. ಸುಚಿತ್ 30ಕ್ಕೆ2) **ಕರ್ನಾಟಕ:** 40.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 177 (ಆರ್. ಸಮರ್ಥ್ ಔಟಾಗದೆ 72, ಮಯಂಕ್ ಅಗರವಾಲ್ 51, ನಿಕಿನ್ ಜೋಸ್ 31, ಕೃಷ್ಣನ್ ಶ್ರೀಜಿತ್ 15, ಹರ್ಷ ದುಬೆ 32ಕ್ಕೆ2) **ಫಲಿತಾಂಶ:** ಕರ್ನಾಟಕ ತಂಡಕ್ಕೆ 7 ವಿಕೆಟ್‌ಗಳ ಜಯ.

ಲೊಮ್ರೊರ್ ಶತಕ: ರಾಜಸ್ಥಾನಕ್ಕೆ ಜಯ



ಮಹಿಪಾಲ್ ಲೊಮ್ರೊರ್

ಮಹಿಪಾಲ್ ಲೊಮ್ರೊರ್ ಅಜೇಯ ಶತಕದ (122; 114ಎ, 4X6, 6X6) ಬಲದಿಂದ ರಾಜಸ್ಥಾನ ತಂಡವು 200 ರನ್‌ಗಳ ಭರ್ಜರಿ ಅಂತರದಿಂದ ಕೇರಳ ವಿರುದ್ಧ ಗೆದ್ದು ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟಿತು.

ಇನ್ನುಳಿದ ಕ್ವಾರ್ಟರ್‌ಫೈನಲ್ ಪಂದ್ಯಗಳಲ್ಲಿ ಮುಂಬೈ ತಂಡವು ತಮಿಳುನಾಡು ಎದುರು 7 ವಿಕೆಟ್‌ಗಳಿಂದ ಸೋತಿತು. ಇನ್ನೊಂದರಲ್ಲಿ ಹರಿಯಾಣ 4 ವಿಕೆಟ್‌ಗಳಿಂದ ಬಂಗಾಳವನ್ನು ಸೋಲಿಸಿ ಸೆಮಿಫೈನಲ್ ಪ್ರವೇಶಿಸಿತು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 267 (ಮಹಿಪಾಲ್ ಲೊಮ್ರೊರ್ ಔಟಾಗದೆ 122, ಕುನಾಲ್ ಸಿಂಗ್ ರಾಥೋಡ್ 66, ಬಾಸಿಲ್ ಥಂಪಿ 57ಕ್ಕೆ2, ಅಕಿನ್ ಸಲ್ಡಾರ್ 62ಕ್ಕೆ3) **ಕೇರಳ:** 21 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 67 (ಸಚಿನ್ ಬೇಬಿ 28, ರೋಹನ್ ಕುನ್ನುಮಲ್ 11, ಖಲೀಲ್ ಅಹಮದ್ 15ಕ್ಕೆ2, ಅರಾಫತ್ ಖಾನ್ 20ಕ್ಕೆ3, ಅನಿಕೇತ್ ಚೌಧರಿ 4ಕ್ಕೆ4) **ಫಲಿತಾಂಶ:** ರಾಜಸ್ಥಾನ ತಂಡಕ್ಕೆ 200 ರನ್‌ಗಳ ಜಯ.
ಮುಂಬೈ: 48.3 ಓವರ್‌ಗಳಲ್ಲಿ 227 (ಜಯ್ ಗೋಕುಲ್ ಬಿಸ್ತಾ 37, ಹಾರ್ದಿಕ್ ತಮೊರೆ 24, ಪ್ರಸಾದ್ ಪವಾರ್ 59, ಶಿವಂ ದುಬೆ 45, ಶಮ್ಸ್ ಮುಲಾನಿ 27, ಎಂ. ಸಿದ್ಧಾರ್ಥ್ 35ಕ್ಕೆ2, ಚಕ್ರವರ್ತಿ 37ಕ್ಕೆ3, ಸಾಯಿಕಿಶೋರ್ 51ಕ್ಕೆ3, ಬಾಬಾ ಅಪರಾಜಿತ್ 31ಕ್ಕೆ2) **ತಮಿಳುನಾಡು:** 43.2 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 229 (ಬಾಬಾ ಅಪರಾಜಿತ್ 45, ಎನ್. ಜಗದೀಶನ್ 27, ಬಾಬಾ ಇಂದ್ರಜೀತ್ ಔಟಾಗದೆ 103, ವಿಜಯ್ ಶಂಕರ್ ಔಟಾಗದೆ 51, ತನುಷ್ ಕೋಟ್ಯಾನ್ 55ಕ್ಕೆ1) **ಫಲಿತಾಂಶ:** ತಮಿಳುನಾಡಿಗೆ 7 ವಿಕೆಟ್ ಜಯ.
ಬಂಗಾಳ: 50 ಓವರ್‌ಗಳಲ್ಲಿ 225 (ಅಭಿಷೇಕ್ ಪೊರೆಲ್ 24, ಸುದೀಪ್ ಘರಮಿ 21, ಶಾಬಾಜ್ ಅಹಮದ್ 100, ಪ್ರದಿಪ್ತ ಪ್ರಾಮಾಣಿಕ್ 21, ಸುಮಿತ್ ಕುಮಾರ್ 27ಕ್ಕೆ2, ಯಜುವೇಂದ್ರ ಚಾಹಲ್ 37ಕ್ಕೆ4, ರಾಹುಲ್ ತೆವಾಟಿಯಾ 32ಕ್ಕೆ2) **ಹರಿಯಾಣ:** 45.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 226 (ಅಂಕಿತ್ ಕುಮಾರ್ 102, ಅಶೋಕ್ ಮನೇರಿಯಾ 39, ನಿಶಾಂತ್ ಸಿಂಧು 27, ಮೊಹಮ್ಮದ್ ಕೈಫ್ 44ಕ್ಕೆ2, ಪ್ರದಿಪ್ತ ಪ್ರಾಮಾಣಿಕ್ 29ಕ್ಕೆ2) **ಫಲಿತಾಂಶ:** ಹರಿಯಾಣ ತಂಡಕ್ಕೆ 4 ವಿಕೆಟ್‌ಗಳ ಜಯ.

ಸೆಮಿಫೈನಲ್ ಪಂದ್ಯ: ಹರಿಯಾಣ–ತಮಿಳುನಾಡು (ಡಿ. 13); ಕರ್ನಾಟಕ–ರಾಜಸ್ಥಾನ (ಡಿ. 14) , ಸ್ಥಳ: ರಾಜ್‌ಕೋಟ್

ಭಾರತ ವಿರುದ್ಧ ಟೆಸ್ಟ್ ಸರಣಿಗೆ ಯುವ ಸ್ಪಿನ್ನರ್ ಬಶೀರ್

ಇಂಗ್ಲೆಂಡ್ ತಂಡದಲ್ಲಿ 3 ಹೊಸಮುಖ

ಲಂಡನ್ (ಎಎಫ್‌ಪಿ): 20 ವರ್ಷದ ಸ್ಪಿನ್ನರ್ ಶೋಯೆಬ್ ಬಶೀರ್ ಅವರು, ಐದು ಟೆಸ್ಟ್ ಪಂದ್ಯಗಳ ಸರಣಿಗಾಗಿ ಭಾರತ ಪ್ರವಾಸ ಕೈಗೊಳ್ಳುವ 16 ಸದಸ್ಯರ ಇಂಗ್ಲೆಂಡ್ ಕ್ರಿಕೆಟ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಇವರ ಜೊತೆ ವೇಗದ ಬೌಲರ್ ಗಸ್ ಅಟ್ಕಿನ್ಸನ್ ಮತ್ತು ಸ್ಪಿನ್ನರ್ ಟಾಮ್ ಹಾರ್ಟ್ಲಿ ಅವರೂ ಮೊದಲ ಬಾರಿ ಸ್ಥಾನ ಪಡೆದಿದ್ದಾರೆ.

ಬೆನ್ ಸ್ಟೋಕ್ಸ್

ಟೆಸ್ಟ್ ಸರಣಿಯ ವೇಳಾಪಟ್ಟಿ		
ಪಂದ್ಯ	ದಿನಾಂಕ	ಸ್ಥಳ
ಮೊದಲ	ಜ.25ರಿಂದ 29	ಹೈದರಾಬಾದ್
ಎರಡನೇ	ಫೆ.2ರಿಂದ 6	ವಿಶಾಖಪಟ್ಟಣ
ಮೂರನೇ	ಫೆ.15ರಿಂದ 19	ರಾಜಕೋಟ್
ನಾಲ್ಕನೇ	ಫೆ.23ರಿಂದ 27	ರಾಂಚಿ
ಐದನೇ	ಮಾರ್ಚ್ 7ರಿಂದ 11	ಧರ್ಮಶಾಲಾ

ಆಫ್‌ಬ್ರೇಕ್ ಬೌಲರ್ ಬಶೀರ್ ಜೂನ್‌ನಲ್ಲಷ್ಟೇ ಸಾಮರ್ಸೆಟ್ ತಂಡದ ಪರ ಪ್ರಥಮ ದರ್ಜೆ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದರು. 67ರ ಸರಾಸರಿಯಲ್ಲಿ 10 ವಿಕೆಟ್‌ಗಳನ್ನು ಪಡೆದಿದ್ದಾರೆ. ಅವರು ತಂಡಕ್ಕೆ ಆಯ್ಕೆಯಾಗಿರುವ ನಾಲ್ವರು ಸ್ಪಿನ್ನರ್‌ಗಳಲ್ಲಿ ಒಬ್ಬರಾಗಿದ್ದಾರೆ. ಗಾಯಾಳಾಗಿದ್ದ ಉಪ ನಾಯಕ ಓಲಿ ಪೋಪ್ ಮತ್ತು ಜಾಕ್ ಲೀಚ್ ಅವರು ತಂಡಕ್ಕೆ ಮರಳಿದ್ದಾರೆ.

ಅಟ್ಕಿನ್ಸನ್ ಮತ್ತು ಎಡಗೈ ಸ್ಪಿನ್ನರ್ ಹಾರ್ಟ್ಲಿ ಈಗಾಗಲೇ ಏಕದಿನ ಕ್ರಿಕೆಟ್‌ನಲ್ಲಿ ಇಂಗ್ಲೆಂಡ್ ತಂಡಕ್ಕೆ ಆಡಿದ್ದಾರೆ. ಆದರೆ ಟೆಸ್ಟ್ ಆಡಿಲ್ಲ. ಮೊಣಕಾಲಿನ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಬೆನ್ ಸ್ಟೋಕ್ಸ್ ಚೇತರಿಸಿಕೊಂಡಿದ್ದು ತಂಡದ ನಾಯಕರಾಗಿದ್ದಾರೆ.

ಆ್ಯಷಸ್ ಸರಣಿಗೆ ಅವಕಾಶವಂಚಿತರಾಗಿದ್ದ ವಿಕೆಟ್ ಕೀಪರ್ ಬೆನ್ ಫೋಕ್ಸ್ ಈ ಸರಣಿಗೆ ಆಯ್ಕೆಯಾಗಿದ್ದಾರೆ. ಆಸ್ಟ್ರೇಲಿಯಾ ವಿರುದ್ಧ 2–2 ರಲ್ಲಿ ಸಮಬಲಗೊಂಡಿದ್ದ ಆ ಸರಣಿಯಲ್ಲಿ 'ಸರಣಿ ಶ್ರೇಷ್ಠ'ರಾಗಿದ್ದ ಕ್ರಿಸ್ ವೋಕ್ಸ್ ಅವರು ಸ್ಥಾನ ಪಡೆದಿಲ್ಲ.

ಟೆಸ್ಟ್‌ಗಳಲ್ಲಿ ಇಂಗ್ಲೆಂಡ್ ಪರ ಅತ್ಯಧಿಕ ವಿಕೆಟ್‌ಗಳನ್ನು ಪಡೆದಿರುವ 41 ವರ್ಷದ ಜೇಮ್ಸ್ ಆ್ಯಂಡರ್ಸನ್ ಅವರು, ಮಾರ್ಕ್ ವುಡ್ ಮತ್ತು ಓಲಿ ರಾಬಿನ್ಸನ್ ಅವರೊಡನೆ ವೇಗದ ದಾಳಿಯ ಭಾಗವಾಗಿದ್ದಾರೆ. ಮೊದಲ ಟೆಸ್ಟ್ ಪಂದ್ಯ ಜನವರಿ 25ರಂದು ಹೈದರಾಬಾದ್‌ನಲ್ಲಿ ಆರಂಭವಾಗಲಿದೆ.

ತಂಡ ಹೀಗಿದೆ: ಬೆನ್ ಸ್ಟೋಕ್ಸ್ (ನಾಯಕ), ರೆಹಾನ್ ಅಹ್ಮದ್, ಜೇಮ್ಸ್ ಆ್ಯಂಡರ್ಸನ್, ಗಸ್ ಅಟ್ಕಿನ್ಸನ್, ಜಾನಿ ಬೇಸ್ಟೊ, ಶೋಯೆಬ್ ಬಶೀರ್, ಹ್ಯಾರಿ ಬ್ರೂಕ್, ಜಾಕ್ ಕ್ರಾಲಿ, ಬೆನ್ ಡಕೆಟ್, ಬೆನ್ ಫೋಕ್ಸ್, ಟಾಮ್ ಹಾರ್ಟ್ಲಿ, ಜಾಕ್ ಲೀಚ್, ಓಲಿ ಪೋಪ್, ಓಲಿ ರಾಬಿನ್ಸನ್, ಜೋ ರೂಟ್ ಮತ್ತು ಮಾರ್ಕ್ ವುಡ್.

ಐಪಿಎಲ್ ಹರಾಜು: ಹರ್ಷಲ್, ಶಾರ್ದೂಲ್‌ಗೆ ಹೆಚ್ಚಿನ ಮೂಲಬೆಲೆ

ನವದೆಹಲಿ (ಪಿಟಿಐ): ವೇಗದ ಬೌಲರ್‌ಗಳಾದ ಹರ್ಷಲ್ ಪಟೇಲ್ ಮತ್ತು ಶಾರ್ದೂಲ್ ಠಾಕೂರ್ ಜೊತೆ ಅನುಭವಿ ಉಮೇಶ್ ಯಾದವ್ ಅವರು ಈ ತಿಂಗಳ 19ರಂದು ದುಬೈನಲ್ಲಿ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಹರಾಜಿನಲ್ಲಿ ತಲಾ ₹2 ಕೋಟಿ ಮೂಲ ಬೆಲೆ ಹೊಂದಿದ್ದಾರೆ. 77 ಸ್ಥಾನಗಳಿಗಾಗಿ 333 ಮಂದಿ ಆಟಗಾರರು ಬಿಡ್‌ನಲ್ಲಿದ್ದಾರೆ.

ಎರಡು ವರ್ಷಗಳ ಹಿಂದೆ ನಡೆದ ಆಟಗಾರರ ಬಿಡ್ ಸಂದರ್ಭದಲ್ಲಿ ಹರ್ಷಲ್ ಪಟೇಲ್ ₹10.75 ಕೋಟಿಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಪಾಲಾಗಿದ್ದರು. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನದ ಪರಿಣಾಮ ಅವರು ರಾಷ್ಟ್ರೀಯ ತಂಡಕ್ಕೂ ಆಯ್ಕೆಯಾಗಿದ್ದರು.

ಐಪಿಎಲ್ ಆಡಳಿತ ಮಂಡಳಿಯು ಫ್ರಾಂಚೈಸಿಗಳಿಗೆ ಪೂರ್ವಭಾವಿಯಾಗಿ 1,166 ಆಟಗಾರರ ಪಟ್ಟಿ ಕಳುಹಿಸಿತ್ತು. ಅವರ ಆಯ್ಕೆಗಳ ನಂತರ ಈ ಪಟ್ಟಿಯನ್ನು 333ಕ್ಕೆ ಪರಿಷ್ಕರಿಸಲಾಯಿತು. ಈ 333 ಮಂದಿಯಲ್ಲಿ ಭಾರತದ 214 ಹಾಗೂ ವಿದೇಶಿ ತಂಡಗಳ 119 ಆಟಗಾರರು ಒಳಗೊಂಡಿದ್ದಾರೆ.

ಹತ್ತು ಫ್ರಾಂಚೈಸಿ ತಂಡಗಳು ಒಟ್ಟು ₹262.95 ಕೋಟಿ ಮೊತ್ತವನ್ನು ಆಟಗಾರರ ಬಿಡ್‌ಗೆ ವೆಚ್ಚ ಮಾಡಲು ಅವಕಾಶವಿದೆ.

77 ಸ್ಥಾನಗಳಲ್ಲಿ 30 ಸ್ಥಾನಗಳಿಗೆ ವಿದೇಶಿ ಆಟಗಾರರನ್ನು ಖರೀದಿಸಬೇಕಾಗುತ್ತದೆ. ವಿಶ್ವಕಪ್ ಗೆದ್ದ ತಂಡದ ನಾಯಕ ಪ್ಯಾಟ್ ಕಮಿನ್ಸ್, ಫೈನಲ್ ಪಂದ್ಯದ ಹೀರೊ ಟ್ರಾವಿಸ್ ಹೆಡ್, ವಿಕೆಟ್ ಕೀಪರ್ ಜೋಸ್ ಇಂಗ್ಲಿಸ್ ಮತ್ತು ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರು ₹2 ಕೋಟಿ ಮೂಲ ಬೆಲೆಯನ್ನು ಹೊಂದಿರುವ ಆಟಗಾರರ ಪಟ್ಟಿಯಲ್ಲಿದ್ದಾರೆ. ನ್ಯೂಜಿಲೆಂಡ್‌ನ ರಚಿನ್ ರವೀಂದ್ರ ₹50 ಲಕ್ಷ ಮೂಲ ಬೆಲೆ ಹೊಂದಿದ್ದಾರೆ. ದಕ್ಷಿಣ ಆಫ್ರಿಕಾದ ಬೌಲರ್ ಜೆರಾಲ್ಡ್ ಕೋಜಿ ಮತ್ತು ಬ್ಯಾಟರ್ ರಸಿ ವ್ಯಾನ್‌ಡರ್ ಡಸೆನ್ ಅವರೂ ಬಿಡ್‌ಗೆ ಇದ್ದಾರೆ.

ಹರ್ಷಲ್ ಪಟೇಲ್, ಶಾರ್ದೂಲ್ ಠಾಕೂರ್

ವಿವಿಧ ಲೀಗ್‌ಗಳಲ್ಲಿ ಭರ್ಜರಿ ಹೊಡೆತಗಳಿಂದ ಹೆಸರು ಪಡೆದಿರುವ ಇಂಗ್ಲೆಂಡ್‌ನ ಟಾಮ್ ಕೊಹ್ಲರ್ ಕ್ಯಾಡ್ಮೋರ್ ₹40 ಲಕ್ಷ ಮೂಲಬೆಲೆ ಹೊಂದಿದ್ದಾರೆ. ವನೀಂದು ಹಸರಂಗ ಅವರ ಮೂಲಬೆಲೆ ₹1.5 ಕೋಟಿ. ಶ್ರೀಲಂಕಾದ ಇನ್ನೊಬ್ಬ ಬೌಲರ್ ದಿಲ್ಶನ್ ಮಧುಶಂಕ ಅವರೂ ಬಿಡ್ ಯಾದಿಯಲ್ಲಿರುವ ಆಟಗಾರರಲ್ಲಿ ಸೇರಿದ್ದಾರೆ.

ಯುಪಿ ಯೋಧಾಸ್ ತಂಡದ ಪ್ರದೀಪ್ ನರ್ವಾಲ್ ಅವರನ್ನು ಬೆಂಗಳೂರು ಬುಲ್ಸ್ ತಂಡದ ಆಟಗಾರರು ಹಿಡಿಯಲೆತ್ನಿಸಿದರು

ಪ್ರೊ ಕಬಡ್ಡಿ ಲೀಗ್: ಪಿಂಕ್ ಪ್ಯಾಂಥರ್ಸ್‌ಗೆ ಮಣಿದ ಜೈಂಟ್ಸ್

ಗೆಲುವಿನ ಖಾತೆ ತೆರೆದ ಬುಲ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್‌ನ 10ನೇ ಆವೃತ್ತಿಯಲ್ಲಿ ಬೆಂಗಳೂರು ಬುಲ್ಸ್ ತಂಡ ಮೊದಲ ಜಯ ದಾಖಲಿಸಿದೆ. ಸತತ ನಾಲ್ಕು ಪಂದ್ಯಗಳಲ್ಲಿ ಸೋತಿದ್ದ ಸೌರಭ್ ನಂದಲ್ ಬಳಗ ಸೋಮವಾರ ಗೆಲುವಿನ ಖಾತೆ ತೆರೆಯಿತು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ರೋಚಕ ಪಂದ್ಯದಲ್ಲಿ ಬುಲ್ಸ್ ತಂಡ, ಯುಪಿ ಯೋಧಾಸ್ ತಂಡವನ್ನು 38–36 ರಿಂದ ಸೋಲಿಸಿತು. ಆರಂಭದಲ್ಲಿ 6–1ರಿಂದ ಹಿನ್ನಡೆಯಲ್ಲಿ ಬುಲ್ಸ್ ತಂಡ, ನಂತರ ಚೇತರಿಸಿಕೊಂಡು 9–7ರಿಂದ ಮುನ್ನಡೆ ಸಾಧಿಸಿತು. ಐದನೇ ಪಂದ್ಯದಲ್ಲಿ ಆತಿಥೇಯ ತಂಡ ಅಭಿಮಾನಿಗಳ ನಿರೀಕ್ಷೆ ಹುಸಿ ಮಾಡಲಿಲ್ಲ.

ಪಂದ್ಯ ಆರಂಭಗೊಂಡ 16ನೇ ನಿಮಿಷದಲ್ಲಿ ಯೋಧಾಸ್ ತಂಡ ಆಲೌಟ್ ಆಯಿತು. ವಿರಾಮದ ವೇಳೆಗೆ 21–14ರಿಂದ ಬುಲ್ಸ್ ತಂಡ ಮುಂದಿತ್ತು. ತಂಡದ ಆಟಗಾರರು ಉತ್ತಮ ಪ್ರದರ್ಶನ ನೀಡಿ ಪಾಯಿಂಟ್ಸ್ ಅಂತರವನ್ನು ಮತ್ತಷ್ಟು ಹೆಚ್ಚಿಸಿದರು. ಕೊನೆಗೂ ಲಯಕ್ಕೆ ಮರಳಿದ ವಿಕಾಸ್ ಖಂಡೋಲಾ ಉತ್ತಮ ರೈಡಿಂಗ್ ಪ್ರದರ್ಶಿಸಿ, 11 ಪಾಯಿಂಟ್ ಸಂಪಾದಿಸಿದರು. ಇವರಿಗೆ ಪ್ರಮುಖ ಆಟಗಾರ ಭರತ್ ಬೆಂಬಲ ನೀಡಿದರು. ಅವರು 11 ಪಾಯಿಂಟ್ಸ್ ಗಳಿಸಿದರು.

ಯೋಧಾಸ್ ಪರ ರೈಡರ್ ಪ್ರದೀಪ್ ನರ್ವಾಲ್ ಅವರು 11 ರೈಡಿಂಗ್ ಪಾಯಿಂಟ್ಸ್‌ಗಳೊಂದಿಗೆ 'ಸೂಪರ್ 10' ಸಾಧನೆ ಮಾಡಿದರು. ಸುರೇಂದರ್ ಗಿಲ್ (8), ವಿಜಯ್ ಮಲ್ಲಿಕ (6) ಸಾಥ್ ನೀಡಿದರು.

ಜೈಪುರ ಪಿಂಕ್ ಪ್ಯಾಂಥರ್ಸ್‌ಗೆ ಗೆಲುವು: ತೀವ್ರ ಹಣಾಹಣಿಯಿಂದ ಕೂಡಿದ್ದ ಮತ್ತೊಂದು ಪಂದ್ಯದಲ್ಲಿ ಹಾಲಿ ಚಾಂಪಿಯನ್ ಜೈಪುರ ಪಿಂಕ್ ಪ್ಯಾಂಥರ್ಸ್ 35–32 ರಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಪ್ಯಾಂಥರ್ಸ್ ತಂಡದ ಅರ್ಜುನ್ ದೇಶ್ವಾಲ್ ಈ ಪಂದ್ಯದಲ್ಲಿ 15 ಅಂಕಗಳನ್ನು ಗಳಿಸಿ, ಪ್ರೊ ಕಬಡ್ಡಿ ಲೀಗ್ ವೃತ್ತಿಜೀವನದಲ್ಲಿ 700ನೇ ರೈಡ್ ಅಂಕಗಳನ್ನು ದಾಖಲಿಸಿದರು.

ಲೀಗ್‌ನಲ್ಲಿ ಆಡಿದ ಒಟ್ಟು ಐದು ಪಂದ್ಯಗಳ ಪೈಕಿ ಮೊದಲ ಮೂರು ಪಂದ್ಯಗಳಲ್ಲಿ ಗೆಲುವು ಸಾಧಿಸಿದ್ದ ಗುಜರಾತ್ ಜೈಂಟ್ಸ್ ತಂಡ, ಈ ಪಂದ್ಯದಲ್ಲಿ ಸೋಲು ಅನುಭವಿಸಿತು. ಆದರೂ ಪಾಯಿಂಟ್ಸ್ (17) ಪಟ್ಟಿಯಲ್ಲಿ ಅಗ್ರಸ್ಥಾನ ಉಳಿಸಿಕೊಂಡಿದೆ. ಪಿಂಕ್ ಪ್ಯಾಂಥರ್ಸ್‌ಗೆ ಇದು ಎರಡನೇ ಗೆಲುವು.

ಇಂದಿನ ಪಂದ್ಯ
ಬೆಂಗಾಲ್ ವಾರಿಯರ್ಸ್–ಪಟ್ನಾ ಪೈರೆಟ್ಸ್ (ರಾತ್ರಿ 8)

ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿ

ಭಾರತಕ್ಕೆ ಇಂದು ಡಚ್ ಸವಾಲು

ಕ್ವಾಲಾಲಂಪುರ (ಪಿಟಿಐ): ಎರಡು ಬಾರಿಯ ಚಾಂಪಿಯನ್ ಭಾರತ ತಂಡ, ಪುರುಷರ ಜೂನಿಯರ್ ವಿಶ್ವಕಪ್ ಹಾಕಿ ಟೂರ್ನಿಯ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಬಲಿಷ್ಠ ನೆದರ್ಲೆಂಡ್ಸ್ ತಂಡವನ್ನು ಮಂಗಳವಾರ ಎದುರಿಸಲಿದ್ದು, ಆಟದ ಮಟ್ಟವನ್ನು ಎತ್ತರಿಸಿಕೊಳ್ಳಬೇಕಾದ ಅಗತ್ಯವಿದೆ.

ಭಾರತ ಈ ಹಿಂದೆ 2001ರಲ್ಲಿ ಆಸ್ಟ್ರೇಲಿಯಾ ಹೋಬಾರ್ಟ್‌ನಲ್ಲಿ ಮತ್ತು 2016ರಲ್ಲಿ ತವರಿನಲ್ಲಿ (ಲಖನೌ) ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿತ್ತು. 1997ರಲ್ಲಿ ಇಂಗ್ಲೆಂಡ್‌ನ ಮಿಲ್ಟನ್ ಕೀನ್ಸ್‌ನಲ್ಲಿ ನಡೆದ ಟೂರ್ನಿಯಲ್ಲಿ ರನ್ನರ್ ಅಪ್ ಆಗಿತ್ತು.

'ಸಿ' ಗುಂಪಿನ ಪಂದ್ಯಗಳಲ್ಲಿ ಭಾರತ ಮಿಶ್ರಪ್ರದರ್ಶನ ನೀಡಿದೆ. ಕೊರಿಯಾ ಮೇಲೆ 4–1 ರಿಂದ ಗೆದ್ದರೂ, 1–4 ರಿಂದ ಸ್ಪೇನ್ ಎದುರು ಸೋಲನುಭವಿಸಿತ್ತು. ಆದರೆ ಕೊನೆಯ ಪಂದ್ಯ ದಲ್ಲಿ ಕೆನಡಾ ತಂಡವನ್ನು 10–1 ಗೋಲುಗಳಿಂದ ಸದೆಬಡಿದು ಗುಂಪಿನಲ್ಲಿ ಎರಡನೇ ಸ್ಥಾನದೊಡನೆ ಎಂಟರ ಘಟ್ಟ ತಲುಪಿದೆ. ಮೂರೂ ಪಂದ್ಯ ಗೆದ್ದ ಸ್ಪೇನ್ ಮೊದಲ ಸ್ಥಾನ ಗಳಿಸಿತ್ತು.

ನೆದರ್ಲೆಂಡ್ಸ್ ಎರಡು ಪಂದ್ಯ ಗೆದ್ದು, ಒಂದನ್ನು ಡ್ರಾ ಮಾಡಿಕೊಂಡು 'ಡಿ' ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತ್ತು.

ಭಾರತ ಜೂನಿಯರ್ ಪುರುಷರ ತಂಡದ ಉತ್ತಮ್ ಸಿಂಗ್

ಭಾರತ ಸಕಾರಾತ್ಮಕ ಆರಂಭ ಪಡೆದರೂ, ಸ್ಪೇನ್ ಎದುರಿನ ಪಂದ್ಯದಲ್ಲಿ ಅದರ ದೌರ್ಬಲ್ಯ ಕಂಡಿತ್ತು. ಚುರುಕಾದ, ಕಿರು ಪಾಸ್‌ಗಳೊಂದಿಗೆ ಆಡಿದ ಸ್ಪೇನ್, ಭಾರತದ ರಕ್ಷಣಾ ಕೋಟೆಯಲ್ಲಿ ಮುನ್ನುಗ್ಗಲು ಸಾಕಷ್ಟು ಬಿರುಕುಗಳನ್ನು ಕಂಡುಕೊಂಡಿತ್ತು. ಹೀಗಾಗಿ ನೆದರ್ಲೆಂಡ್ಸ್ ವಿರುದ್ಧದ ಪಂದ್ಯ ಭಾರತಕ್ಕೆ ಎಚ್ಚರಿಕೆಯ ಗಂಟೆ. ನೆದರ್ಲೆಂಡ್ಸ್ ಕೂಡ ವ್ಯವಸ್ಥಿತ ಸಂಯೋಜನೆಯಿಂದ ಆಡುವ ತಂಡ. ಒತ್ತಡದ ಸಂದರ್ಭದಲ್ಲಿ ಹೆಚ್ಚು ಪೆನಾಲ್ಟಿ ಕಾರ್ನರ್‌ಗಳನ್ನು ಎದುರಾಳಿಗೆ ಬಿಟ್ಟುಕೊಡದಂತೆ ಭಾರತ ಎಚ್ಚರಿಕೆ ವಹಿಸಬೇಕಾಗಿದೆ.

ಕೆನಡಾ ವಿರುದ್ಧ 10–1 ಗೆಲುವು ನಮಗೆ ವಿಶ್ವಾಸ ವೃದ್ಧಿಸಲು ನೆರವಾಗಲಿದೆ ಎಂಬುದನ್ನು ತಂಡದ ನಾಯಕ ಉತ್ತಮ್ ಸಿಂಗ್ ಅವರೂ ಒಪ್ಪಿಕೊಂಡರು. 'ಈ ವಿಶ್ವಕಪ್‌ನಲ್ಲಿ ನಾವು ಕೆಲವು ಉತ್ತಮ ಪಂದ್ಯಗಳನ್ನು ಆಡಿದೆವು. ಕೆನಡಾ ವಿರುದ್ಧ ದೊಡ್ಡ ಗೆಲುವು ನಾಕೌಟ್ ಹಂತದಲ್ಲಿ ನಮ್ಮ ವಿಶ್ವಾಸ ವೃದ್ಧಿಸಲಿದೆ. ನಮ್ಮಿಂದಾದಷ್ಟು ಒಳ್ಳೆಯ ಆಟ ಆಡುತ್ತೇವೆ' ಎಂದು ಉತ್ತಮ್ ಹೇಳಿದರು.

ಸೆಮಿಫೈನಲ್ ಪಂದ್ಯಗಳು ಗುರುವಾರ ನಡೆಯಲಿದ್ದು, ಫೈನಲ್ ಶನಿವಾರ ನಿಗದಿಯಾಗಿದೆ.

ಕೂಚ್ ಬಿಹಾರ್ ಟ್ರೋಫಿ: ಶುಭಂಗೆ ಏಳು ವಿಕೆಟ್, ಕರ್ನಾಟಕಕ್ಕೆ ಸೋಲು

ಮೈಸೂರು: ಎಡಗೈ ಸ್ಪಿನ್ನರ್ ಶುಭಂ ಮಿಶ್ರಾ ಅವರ ಅಮೋಘ ಬೌಲಿಂಗ್ ನೆರವಿನಿಂದ (37ಕ್ಕೆ 7) ಉತ್ತರ ಪ್ರದೇಶ ತಂಡವು ಕೂಚ್ ಬಿಹಾರ್ ಟ್ರೋಫಿ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಸೋಮವಾರ ಕರ್ನಾಟಕ ತಂಡದ ವಿರುದ್ಧ 92 ರನ್‌ಗಳ ಭರ್ಜರಿ ಜಯ ದಾಖಲಿಸಿತು.

ಮಾನಸಗಂಗೋತ್ರಿಯ ಶ್ರೀಕಂಠ ದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ಆತಿಥೇಯರನ್ನು ಶುಭಂ ಮಿಶ್ರಾ ಕಾಡಿದರು. ಮೂರನೇ ದಿನದ ಕೊನೆಗೆ 35 ರನ್‌ಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ಕರ್ನಾಟಕಕ್ಕೆ ಅಂತಿಮ ದಿನ ಸಮಿತ್ ದ್ರಾವಿಡ್ (28 ರನ್) ಹಾಗೂ ಧ್ರುವ್ ಪ್ರಭಾಕರ್ (21) ಕೆಲಕಾಲ ಆಸರೆಯಾದರು. ಡ್ರಾದತ್ತ ಚಿತ್ತ ಹರಿಸಿದ ಈ ಜೋಡಿ 38 ರನ್ ಜೊತೆಯಾಟವಾಡಿತು. ಈ ವೇಳೆ ಸಮಿತ್, ಆರುಷ್ ಗೋಯೆಲ್ ಎಸೆತದಲ್ಲಿ ಯಶು ಪ್ರಧಾನ್‌ಗೆ ಕ್ಯಾಚ್ ನೀಡಿದ ನಂತರ ತಂಡ ಸೋಲಿನತ್ತ ಮುಖಮಾಡಿತು. ಕೆಳ ಕ್ರಮಾಂಕದ ಆಟಗಾರರು ಒಂದಂಕಿಯನ್ನೂ ದಾಟಲಿಲ್ಲ. ಕರ್ನಾಟಕ 35.5 ಓವರ್‌ಗಳಲ್ಲಿ 90 ರನ್‌ಗೆ ಆಲೌಟ್ ಆಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಉತ್ತರ ಪ್ರದೇಶ: 239. ಕರ್ನಾಟಕ: 234. ಎರಡನೇ ಇನಿಂಗ್ಸ್: ಉತ್ತರ ಪ್ರದೇಶ 177, ಕರ್ನಾಟಕ: 35.5 ಓವರ್‌ಗಳಲ್ಲಿ 90 (ಸಮಿತ್ ದ್ರಾವಿಡ್ 28, ಶುಭಂ ಮಿಶ್ರಾ 37ಕ್ಕೆ 7).

ಯು–19 ವಿಶ್ವಕಪ್: ಭಾರತಕ್ಕೆ ಮೊದಲ ಎದುರಾಳಿ ಬಾಂಗ್ಲಾ

ದುಬೈ (ಪಿಟಿಐ): ಭಾರತ ತಂಡವು, 19 ವರ್ಷದೊಳಗಿನವರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಜನವರಿ 20ರಂದು ಬಾಂಗ್ಲಾದೇಶ ವಿರುದ್ಧ ಬ್ಲೂಮ್‌ಫೊಂಟೀನ್‌ನಲ್ಲಿ (ದಕ್ಷಿಣ ಆಫ್ರಿಕಾ) ಆಡುವ ಮೂಲಕ ತನ್ನ ಅಭಿಯಾನ ಆರಂಭಿಸಲಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಪರಿಷ್ಕೃತ ವೇಳಾಪಟ್ಟಿಯನ್ನು ಸೋಮವಾರ ಬಿಡುಗಡೆ ಮಾಡಿದೆ.

ಶ್ರೀಲಂಕಾ ಕ್ರಿಕೆಟ್ ಮಂಡಳಿ ಅಮಾನತಿನಲ್ಲಿರುವ ಕಾರಣ, ಅಲ್ಲಿ ನಿಗದಿಯಾಗಿದ್ದ ಈ ಟೂರ್ನಿಯನ್ನು ನಂತರ ದಕ್ಷಿಣ ಆಫ್ರಿಕಾಕ್ಕೆ ವಹಿಸಲಾಗಿತ್ತು. ಕ್ರಿಕೆಟ್ ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪದ ಕಾರಣ ಐಸಿಸಿ ಲಂಕಾ ಮಂಡಳಿ ವಿರುದ್ಧ ಕ್ರಮ ಕೈಗೊಂಡಿತ್ತು.

ಭಾರತವು, ಬಾಂಗ್ಲಾದೇಶ, ಐರ್ಲೆಂಡ್ ಮತ್ತು ಅಮೆರಿಕದ ಜೊತೆ 'ಎ' ಗುಂಪಿನಲ್ಲಿದೆ.

ಬಾಂಗ್ಲಾ ವಿರುದ್ಧ ಪಂದ್ಯದ ನಂತರ ಭಾರತ ತಂಡವು ಜ. 25ರಂದು ಐರ್ಲೆಂಡ್ ವಿರುದ್ಧ ಬ್ಲೂಮ್‌ಫೊಂಟೀನ್‌ನಲ್ಲಿ ಆಡಲಿದೆ. ಕೊನೆಯ ಲೀಗ್ ಪಂದ್ಯವನ್ನೂ ಅದೇ ಕ್ರೀಡಾಂಗಣದಲ್ಲಿ ಜ. 28ರಂದು ಅಮೆರಿಕ ವಿರುದ್ಧ ಆಡಲಿದೆ.

ಜನವರಿ 19ರಂದು ಎರಡು ಪಂದ್ಯಗಳೊಡನೆ ಟೂರ್ನಿ ಆರಂಭವಾಗಲಿದೆ. ಅಂದು ಐರ್ಲೆಂಡ್, ಅಮೆರಿಕ ವಿರುದ್ಧ ಬ್ಲೂಮ್‌ಫೊಂಟಿನ್‌ನಲ್ಲಿ, ವೆಸ್ಟ್ ಇಂಡೀಸ್, ದಕ್ಷಿಣ ಆಫ್ರಿಕಾ ವಿರುದ್ಧ ಪಾಚೆಫ್‌ಸ್ಟ್ರೂಮ್‌ನಲ್ಲಿ ಆಡಲಿದೆ.

ಸಂಕ್ಷಿಪ್ತ ಸುದ್ದಿ

ಬ್ರಿಜ್‌ಭೂಷಣ್ ಆಪ್ತನ ಸ್ಪರ್ಧೆಗೆ ಆಕ್ಷೇಪ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಚುನಾವಣೆಯಲ್ಲಿ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರ ಆಪ್ತರಾದ ಸಂಜಯ್ ಸಿಂಗ್ ಅವರಿಗೆ ಸ್ಪರ್ಧಿಸಲು ಅವಕಾಶವಾಗದಂತೆ ನೋಡಿಕೊಳ್ಳಬೇಕು ಎಂದು ಒಲಿಂಪಿಕ್ಸ್ ಪದಕ ವಿಜೇತ ಕುಸ್ತಿಪಟುಗಳಾದ ಬಜರಂಗ್ ಪೂನಿಯಾ ಮತ್ತು ಸಾಕ್ಷಿ ಮಲಿಕ್ ಅವರು ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರಿಗೆ ಮನವಿ ಮಾಡಿದ್ದಾರೆ.

ಇಬ್ಬರು ಕುಸ್ತಿಪಟುಗಳು, ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಅವರನ್ನು ಸೋಮವಾರ ಈ ಸಂಬಂಧ ಭೇಟಿ ಮಾಡಿದರು.

ಭಾರತೀಯ ಕುಸ್ತಿ ಫೆಡರೇಷನ್‌ಗೆ (ಡಬ್ಲ್ಯುಎಫ್‌ಐ) ಇದೇ ತಿಂಗಳ 21ರಂದು ಬಹು ನಿರೀಕ್ಷಿತ ಚುನಾವಣೆ ನಡೆಯಲಿದ್ದು, ಅದೇ ದಿನ ಫಲಿತಾಂಶ ಹೊರಬೀಳಲಿದೆ. ಬ್ರಿಜ್ ಭೂಷಣ್ ಅವರಿಗೆ ನಿಷ್ಠರಾಗಿರುವ ಸಂಜಯ್ ಸಿಂಗ್ ಮತ್ತು 2010ರ ಕಾಮನ್‌ವೆಲ್ತ್ ಗೇಮ್ಸ್ ಚಿನ್ನದ ಪದಕ ವಿಜೇತೆ ಅನಿತಾ ಶೆರಾಣ್ ಅಧ್ಯಕ್ಷ ಸ್ಥಾನದ ಸ್ಪರ್ಧೆಯಲ್ಲಿದ್ದಾರೆ.

ಕ್ರಿಕೆಟ್: ಪಾಕ್ ಬ್ಯಾಟರ್ ಅಸಾದ್ ವಿದಾಯ

ಕರಾಚಿ (ಪಿಟಿಐ): ಪಾಕಿಸ್ತಾನದ ಬ್ಯಾಟರ್ ಅಸಾದ್ ಶಫೀಕ್ ಎಲ್ಲಾ ಮಾದರಿಯ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ್ದಾರೆ.

ಅವರು 2010ರಿಂದ 2020ರವರೆಗೆ ಪಾಕಿಸ್ತಾನ ಟೆಸ್ಟ್ ತಂಡವನ್ನು ಪ್ರತಿನಿಧಿಸಿದ್ದರು. 37 ವರ್ಷದ ಆಟಗಾರ 77 ಪಂದ್ಯಗಳಲ್ಲಿ 38.19 ಸರಾಸರಿಯಲ್ಲಿ 12 ಶತಕ, 27 ಅರ್ಧಶತಕಗಳನ್ನು ಒಳಗೊಂಡಂತೆ 4,660 ರನ್ ಗಳಿಸಿದ್ದಾರೆ. ಅಲ್ಲದೆ, 60 ಏಕದಿನ ಮತ್ತು ಹತ್ತು ಟಿ20 ಅಂತರರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದಾರೆ.

ಕ್ರಿಕೆಟ್‌ಗೆ ಬೇಕಾದ ಫಿಟ್‌ನೆಸ್ ಹೊಂದಿಲ್ಲದ ಕಾರಣ ವಿದಾಯಕ್ಕೆ ನಿರ್ಧರಿಸಿದ್ದೇನೆ ಎಂದು ತಿಳಿಸಿದ್ದಾರೆ.

2030ರ ಏಷ್ಯಾ ಪ್ಯಾರಾ ಗೇಮ್ಸ್‌ನಲ್ಲಿ 200 ಪದಕ ಗುರಿ: ಠಾಕೂರ್

ಖೇಲೊ ಇಂಡಿಯಾ ಪ್ಯಾರಾ ಕೂಟಕ್ಕೆ ಚಾಲನೆ

ನವದೆಹಲಿ (ಪಿಟಿಐ): 'ಭಾರತ ತಂಡ 2030ರ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ 200 ಪದಕಗಳನ್ನು ಗೆಲ್ಲುವ ಗುರಿ ಇಟ್ಟುಕೊಳ್ಳಬಹುದು' ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಸೋಮವಾರ ಹೇಳಿದ್ದಾರೆ.

ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್ ಉದ್ಘಾಟಿಸಿ ಮಾತನಾಡಿದ ಠಾಕೂರ್, '2022ರ ಹಾಂಗ್‌ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ನಾವು 111 ಪದಕ ಗೆಲ್ಲಲು ಸಾಧ್ಯವಾಗಬಹುದಾದರೆ, 2030ರಲ್ಲಿ 200 ಪದಕಗಳನ್ನು ಗೆಲ್ಲುವ ಗುರಿಯನ್ನೂ ನಾವು ಸಾಧಿಸಬಹುದು ಎಂಬುದು ನನ್ನ ಭಾವನೆ' ಎಂದು ಸಚಿವರು ಹೇಳಿದರು.

'ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್ ದೇಶದ ಕ್ರೀಡಾ ವ್ಯವಸ್ಥೆಯಲ್ಲಿ ಹೊಸ ಶಕೆಗೆ ನಾಂದಿ ಹಾಡುತ್ತಿದೆ. ಈ ಉಪಕ್ರಮ ಎಲ್ಲಾ ಅಥ್ಲೀಟುಗಳಿಗೆ ಸಮಾನ ಅವಕಾಶ ಒದಗಿಸುವ ದೃಷ್ಟಿಯಿಂದ ಮಹತ್ವದ ಹೆಜ್ಜೆ. ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್ ನವ ಭಾರತವನ್ನು ಸಂಕೇತಿಸುತ್ತದೆ' ಎಂದು ಅವರು ಹೇಳಿದರು.

ನವದೆಹಲಿಯಲ್ಲಿ ಸೋಮವಾರ ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್ 2023ಕ್ಕೆ ಚಾಲನೆ ನೀಡಿದರು –ಪಿಟಿಐ ಚಿತ್ರ

ಹಾಂಗ್‌ಝೌ ಏಷ್ಯನ್ ಪ್ಯಾರಾ ಗೇಮ್ಸ್‌ನಲ್ಲಿ ಭಾರತವು 29 ಚಿನ್ನ ಸೇರಿದಂತೆ 111 ಪದಕಗಳನ್ನು ಗೆದ್ದಿತ್ತು. 2026 ಏಷ್ಯನ್ ಪ್ಯಾರಾ ಗೇಮ್ಸ್ ಜಪಾನ್‌ನ ಐಚಿ–ನಗೋಯಾದಲ್ಲಿ ನಡೆಯಲಿದೆ.

ಡಿಸೆಂಬರ್ 10ರಿಂದ 17 ರವರೆಗೆ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣ, ಜವಾಹರಲಾಲ್ ನೆಹರು ಕ್ರೀಡಾಂಗಣ ಮತ್ತು ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ನಡೆಯಲಿರುವ ಖೇಲೊ ಇಂಡಿಯಾ ಪ್ಯಾರಾ ಗೇಮ್ಸ್‌ನಲ್ಲಿ 32 ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮತ್ತು ಸರ್ವೀಸಸ್ ಸ್ಪೋರ್ಟ್ಸ್ ಬೋರ್ಡ್‌ನಿಂದ 1,400ಕ್ಕೂ ಹೆಚ್ಚು ಪ್ಯಾರಾ (ಅಂಗವಿಕಲ) ಅಥ್ಲೀಟ್‌ಗಳು ಭಾಗವಹಿಸುತ್ತಿದ್ದಾರೆ.

ಅಥ್ಲೆಟಿಕ್ಸ್, ಶೂಟಿಂಗ್, ಬಿಲ್ಲುಗಾರಿಕೆ, ಫುಟ್‌ಬಾಲ್, ಬ್ಯಾಡ್ಮಿಂಟನ್, ಟೇಬಲ್ ಟೆನಿಸ್ ಮತ್ತು ವೇಟ್‌ಲಿಫ್ಟಿಂಗ್ ಸೇರಿದಂತೆ ಏಳು ಪ್ಯಾರಾ ಕ್ರೀಡೆಗಳಲ್ಲಿ ಸ್ಪರ್ಧೆಗಳು ನಡೆಯುತ್ತಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ಕ್ರೀಡಾಪಟುಗಳಿಗೆ ವಿಡಿಯೊ ಮೂಲಕ ವಿಶೇಷ ಸಂದೇಶ ನೀಡಿದರು.

ನಿಕೋಲಸ್ ಪೂರನ್

ಜೇಸನ್ ಹೋಲ್ಡರ್

ಕೈಲ್ ಮೇಯರ್ಸ್

ವೆಸ್ಟ್ ಇಂಡೀಸ್: ಗುತ್ತಿಗೆಯಿಂದ ದೂರವುಳಿದ ಪೂರನ್, ಹೋಲ್ಡರ್

ಕಿಂಗ್‌ಸ್ಟನ್ (ಜಮೈಕಾ), (ಪಿಟಿಐ): ವೆಸ್ಟ್ ಇಂಡೀಸ್‌ನ ಕೇಂದ್ರೀಯ ಗುತ್ತಿಗೆಯಿಂದ ದೂರ ಉಳಿಯುವ ಕ್ರಿಕೆಟಿಗರ ಸಂಖ್ಯೆ ಏರುತ್ತಿದೆ. ಸೀಮಿತ ಓವರುಗಳ ತಂಡದ ಪ್ರಮುಖ ಆಟಗಾರರಾದ ನಿಕೋಲಸ್ ಪೂರನ್, ಜೇಸನ್ ಹೋಲ್ಡರ್ ಮತ್ತು ಕೈಲ್ ಮೇಯರ್ಸ್ 2023–24ನೇ ಸಾಲಿನ ಕೇಂದ್ರೀಯ ಗುತ್ತಿಗೆಯಿಂದ ಹಿಂದೆ ಸರಿದಿದ್ದಾರೆ.

ಆದರೆ ಈ ಮೂವರೂ 2023–24ನೇ ಸಾಲಿನಲ್ಲಿ ರಾಷ್ಟ್ರೀಯ ತಂಡದ ಪರ ಟಿ20 ಟೂರ್ನಿಯಲ್ಲಿ ಆಡಲು ಲಭ್ಯರಿರುದಾಗಿಯೂ ತಿಳಿಸಿದ್ದಾರೆ ಎಂದು ಕ್ರಿಕೆಟ್ ವೆಸ್ಟ್ ಇಂಡೀಸ್ (ಸಿಡಬ್ಲ್ಯುಐ) ಮಾಧ್ಯಮ ಪ್ರಕಟಣೆ ತಿಳಿಸಿದೆ. 14 ಆಟಗಾರರು ಮತ್ತು 15 ಮಂದಿ ಆಟಗಾರ್ತಿಯರು ಇತ್ತೀಚಿನ ಕೇಂದ್ರೀಯ ಗುತ್ತಿಗೆಗೆ ಸಹಿ ಹಾಕಿದ್ದಾರೆ.

ಗುತ್ತಿಗೆಗೆ ಒಳಪಟ್ಟ ಆಟಗಾರರು: ಅಲಿಕ್ ಅಥನೇಝ್, ಕ್ರೇಗ್ ಬ್ರಾಥ್‌ವೇಟ್, ಕೇಸಿ ಕಾರ್ಟಿ, ತೇಜನಾರಾಯಣ್ ಚಂದ್ರಪಾಲ್, ಜೋಶುವ ಡಸಿಲ್ವ, ಶಾಯಿ ಹೋಪ್, ಅಖೀಲ್ ಹೊಸೇನ್, ಅಲ್ಜಾರಿ ಜೋಸೆಫ್, ಬ್ರಾಂಡನ್ ಕಿಂಗ್, ಗುಡ ಕೇಶ್ ಮೋತಿ, ರೋವ್ಮನ್ ಪೋವೆಲ್, ಕೇಮಾರ್ ರೋಚ್, ಜೇಡನ್ ಸೀಲ್ಸ್, ರೊಮಾರಿಯೊ ಷೆಫರ್ಡ್.